# ಅಸಾಧಾರಣವಾಗಿ

ಜೀವಿಸಲಿಕ್ಕಿರುವ

# ನಂಬಿಕೆ

*ಡಾ. ಎ.ಎಲ್. ಗಿಲ್ ಮತ್ತು ಜಾಯ್ಸ್ ಗಿಲ್*

# ಅಸಾಧಾರಣವಾಗಿ

**ಜೀವಿಸಲಿಕ್ಕಿರುವ**

# ನಂಬಿಕೆ

***ಡಾ. ಎ.ಎಲ್. ಗಿಲ್ ಮತ್ತು ಜಾಯ್ಸ್ ಗಿಲ್***

*ಜಾಯ್ಸ್ ಮತ್ತು ಎ.ಎಲ್. ಗಿಲ್ ರವರು ಈ ಕೈಪಿಡಿಯನ್ನು ಡೌನ್‌ಲೋಡ್*
*ಮಾಡಲು ಮತ್ತು ನಕಲು ಮಾಡಲು ನಿಮಗೆ ಅನುಮತಿ ಕೊಟ್ಟಿದ್ದಾರೆ*

**www.gillministries.com**

## ಲೇಖಕರ ಬಗ್ಗೆ

ಎ.ಎಲ್. ಮತ್ತು ಜಾಯ್ಸ್ ಗಿಲ್ ರವರು ಅಂತರರಾಷ್ಟ್ರೀಯ ಭಾಷಣಕಾರರು, ಲೇಖಕರು ಮತ್ತು ಸತ್ಯವೇದ ಬೋಧಕರು. ಎ.ಎಲ್ ರವರ ಅಪೊಸ್ತೊಲಿಕ ಸೇವೆಯ ಪ್ರಯಾಣಗಳು ಅವರನ್ನು ವಿಶ್ವದ ಐವತ್ತಕ್ಕೂ ಹೆಚ್ಚು ರಾಷ್ಟ್ರಗಳಿಗೆ ಕರೆದೊಯ್ದಿವೆ, ಒಂದು ಲಕ್ಷಕ್ಕಿಂತ ಹೆಚ್ಚಿನ ಜನಸಮೂಹಕ್ಕೆ ನೇರವಾಗಿ ಮತ್ತು ಅನೇಕ ಲಕ್ಷ ಜನರಿಗೆ ರೇಡಿಯೊ ಮತ್ತು ದೂರದರ್ಶನದ ಮೂಲಕ ಬೋಧಿಸುತ್ತಿದ್ದಾರೆ.

ಎ.ಎಲ್. ಮತ್ತು ಜಾಯ್ಸ್ ಗಿಲ್ ರವರ ಅತಿ ಹೆಚ್ಚು ಮಾರಾಟವಾಗುತ್ತಿರುವ ಪುಸ್ತಕಗಳು ಮತ್ತು ಕೈಪಿಡಿಗಳು ಇಪ್ಪತ್ತು ಲಕ್ಷಕ್ಕೂ ಹೆಚ್ಚು ಪ್ರತಿಗಳು ಯುನೈಟೆಡ್ ಸ್ಟೇಟ್ಸ್‌ನಲ್ಲಿ ಮಾರಾಟವಾಗಿವೆ. ಅವರ ಬರಹಗಳನ್ನು ಅನೇಕ ಭಾಷೆಗಳಿಗೆ ಅನುವಾದಿಸಲಾಗಿದೆ, ವಿಶ್ವದಾದ್ಯಂತ ಸತ್ಯವೇದ ಅಧ್ಯಯನದ ಶಾಲೆಗಳಲ್ಲಿ ಮತ್ತು ಸೆಮಿನಾರ್‌ಗಳಲ್ಲಿ ಅವುಗಳನ್ನು ಬಳಸಲಾಗುತ್ತಿದೆ.

ಜೀವನವನ್ನು ಬದಲಾಯಿಸುವ ಶಕ್ತಿಯುತವಾದ ದೇವರ ವಾಕ್ಯದ ಸತ್ಯಗಳು ಅವರ ಕ್ರಿಯಾಶಕ್ತವಾದ ಉಪದೇಶ, ಬೋಧನೆ, ದೂರದರ್ಶನದ ಪ್ರಸರಣ, ಬರವಣಿಗೆ, ವಿಡಿಯೋ ಮತ್ತು ಆಡಿಯೊ ಸುರುಳಿಗಳ ಸೇವೆಯ ಮೂಲಕ ಇತರರ ಜೀವನದಲ್ಲಿ ಒಳವ್ಯಾಪಿಸಿವೆ.

ದೇವರ ಪ್ರಸನ್ನತೆಯ ಅದ್ಭುತ ಮಹಿಮೆಯನ್ನು ಅವರ ಉಜ್ಜೀವನದಲ್ಲಿ, ಸ್ತುತಿ ಆರಾಧನೆಯಲ್ಲಿ ಮತ್ತು ಸೆಮಿನಾರ್‌ಗಳಲ್ಲಿ ಅನುಭವಿಸಿದ್ದಾರೆ, ವಿಶ್ವಾಸಿಗಳಾಗಿ ದೇವರ ನಿಜವಾದ ಮತ್ತು ನಿಕಟವಾದ ಆರಾಧಕರಾಗುವುದು ಹೇಗೆ ಎಂದು ಕಂಡುಕೊಂಡಿದ್ದಾರೆ. ವಿಶ್ವಾಸಿಗಳ ಅಧಿಕಾರ ಎಂಬ ಅವರ ಬೋಧನೆಗಳ ಮೂಲಕ ಜಯ ಮತ್ತು ಧೈರ್ಯದ ಕುರಿತಾದ ಹೊಸ ಮತ್ತು ಉತ್ತೇಜಕ ಆಯಾಮವನ್ನು ಅನೇಕರು ಕಂಡುಕೊಂಡಿದ್ದಾರೆ.

ದೇವರ ಗುಣಪಡಿಸುವ ಶಕ್ತಿಯು ಅವರ ಕೈಯಿಂದ ಹರಿಯುವಂತಹ ದೇವರು ಕೊಟ್ಟ ಅಸಾಧಾರಣವಾದ ಸೇವೆಗೆ ಕಾಲಿಡಲು ಗಿಲ್ಸ್ ರವರು ಅನೇಕ ವಿಶ್ವಾಸಿಗಳಿಗೆ ತರಬೇತಿ ನೀಡಿದ್ದಾರೆ. ಅನೇಕರು ತಮ್ಮ ದೈನಂದಿನ ಜೀವನದಲ್ಲಿ ಮತ್ತು ಸೇವೆಗಳಲ್ಲಿ ಪವಿತ್ರಾತ್ಮನ ಎಲ್ಲಾ ಒಂಬತ್ತು ವರಗಳಲ್ಲಿ ಕಾರ್ಯನಿರ್ವಹಿಸಲು ಮುಕ್ತರಾಗುವುದರಿಂದ ಅಸಾಧಾರಣವಾಗಿ ಸ್ವಾಭಾವಿಕರಾಗಿರಲು ಕಲಿತಿದ್ದಾರೆ.

ಎ.ಎಲ್. ಮತ್ತು ಜಾಯ್ಸ್ ಇಬ್ಬರೂ ಮಾಸ್ಟರ್ ಆಫ್ ಥಿಯೊಲಾಜಿಕಲ್ ಅಧ್ಯಯನಗಳಲ್ಲಿ ಪದವಿಗಳನ್ನು ಹೊಂದಿದ್ದಾರೆ. ಎ.ಎಲ್. ವಿಷನ್ ಕ್ರಿಶ್ಚಿಯನ್ ವಿಶ್ವವಿದ್ಯಾಲಯದಿಂದ ಥಿಯೊಲಾಜಿ ಪದವಿಯಲ್ಲಿ ಡಾಕ್ಟರ್ ಆಫ್ ಫಿಲಾಸಫಿ ಪದವಿಯನ್ನು ಗಳಿಸಿದ್ದಾರೆ. ಅವರ ಸೇವೆಯು ದೇವರ ವಾಕ್ಯದಲ್ಲಿ ದೃಢವಾಗಿ ಆಧರಿಸಿದೆ, ಯೇಸುವಿನ ಮೇಲೆ ಕೇಂದ್ರೀಕೃತವಾಗಿದೆ, ಪವಿತ್ರಾತ್ಮನ ಶಕ್ತಿಯ ಕುರಿತಾದ ನಂಬಿಕೆಯಲ್ಲಿ ಮತ್ತು ಪವಿತ್ರಾತ್ಮನಲ್ಲಿದ್ದುಕೊಂಡು ಕಲಿಸುವುದರಲ್ಲಿ ಬಲವಾಗಿದೆ.

ಅವರ ಸೇವೆಯು ತಂದೆಯ ಪ್ರೀತಿಯ ಹೃದಯದ ಪ್ರದರ್ಶನವಾಗಿದೆ. ದೇವರ ಶಕ್ತಿಯ ಅಡಿಯಲ್ಲಿ ಶಕ್ತಿಯುತ ಅಭಿಷೇಕ, ಸೂಚಕಕಾರ್ಯಗಳು, ಅದ್ಭುತಗಳು ಮತ್ತು ಗುಣಪಡಿಸುವ ಅದ್ಭುತಗಳು ಅವರ ಉಪದೇಶ ಮತ್ತು ಬೋಧನೆಯೊಂದಿಗೆ ಉಂಟಾಗುತ್ತವೆ. ಕರ್ತನ ಮುಂದೆ ಅಳುವುದು ಮತ್ತು ದೇವರ ಮಹಿಮೆ ಮತ್ತು ಶಕ್ತಿಯ ಅದ್ಭುತಕರವಾದ ಪ್ರದರ್ಶನಗಳು ಸೇರಿದಂತೆ ಉಜ್ಜೀವನದ ಗುರುತುಗಳು ಅವರ ಸಭೆಗಳಲ್ಲಿ ಪಾಲ್ಗೊಳ್ಳುವ ಅನೇಕರು ಅನುಭವಿಸುತ್ತಿದ್ದಾರೆ.

ಡಾ. ಎ.ಎಲ್. ಮತ್ತು ಜಾಯ್ಸ್ ಗಿಲ್ ರವರು ಯೇಸುವಿನ ಕ್ರಿಯೆಗಳನ್ನು ಮಾಡಲು ವಿಶ್ವಾಸಿಗಳನ್ನು ಸಜ್ಜುಗೊಳಿಸುವುದಕ್ಕಾಗಿ ಪ್ರಾಯೋಗಿಕ ಸಾಧನಗಳನ್ನು ತಯಾರಿಸಲು ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೆ.

ಕ್ರಿಸ್ತೀಯ ಪರಿಪಕ್ವತೆಯ ಒಂದೊಂದು ಹಂತಗಳಲ್ಲಿರುವ ಪ್ರತಿಯೊಬ್ಬ ವಿಶ್ವಾಸಿಯು ಜಯಶಾಲಿಯಾದ, ಅಸಾಧಾರಣವಾದ ಜೀವನವನ್ನು ನಡಿಸುವಂತೆ ಅವರನ್ನು ಉತ್ತೇಜಿಸುವುದು ಅವರ ಆಸೆಯಾಗಿದೆ.

## ಪರಿವಿಡಿ


ಪಾಠ ಒಂದು 5

**ಕರ್ತನೇ, ನಾನು ನಂಬುತ್ತೇನೆ**

ನಂಬಿಕೆ ಎಂದರೇನು

ನಂಬಿಕೆ ಎಂದರೆ ಯಾವುದಲ್ಲ

ಪಾಠ ಎರಡು 23

**ದೇವರ ಶ್ರೇಷ್ಠ ಮಾದರಿಗಳು**

ಅಬ್ರಹಾಮ –ನಂಬಿಕೆಯ ಪಿತ

ಮೋಶೆ – ನಂಬಿಕೆಯ ಮಹಾ ಸೇನಾನಿ

ನಂಬಿಕೆಯ ಪಟ್ಟಿ-ನಂಬಿಕೆಗೆ ಕರೆಯುವಿಕೆ

ಪಾಠ ಮೂರು 40

**ನಂಬಿಕೆಯ ಅಸ್ತಿವಾರಗಳು**

ಕ್ರಿಸ್ತನಲ್ಲಿ ನಾವು ಯಾರಾಗಿದ್ದೇವೆ

ಆತನ ಸ್ವಾರೂಪ್ಯವುಳ್ಳವರಾಗಿದ್ದೇವೆ

ಕಾರ್ಯ ಪ್ರವೃತ್ತರಾಗಬೇಕು

ನಮ್ಮ ನಾಯಕರನ್ನು ಹಿಂಬಾಲಿಸಬೇಕು

ಪಾಠ ನಾಲ್ಕು 56

**ನಂಬಿಕೆಯ ಆರು ಮೂಲಭೂತ ಅಂಶಗಳು**

ನಮ್ಮಗೆ ಸೇರಿದವುಗಳನ್ನು ತಿಳಿದುಕೊಳ್ಳಿರಿ

ಬೇಡಿಕೊಳ್ಳಿರಿ!

ನಂಬಿರಿ ಹೊಂದಿಕೊಳ್ಳಿರಿ

ನಂಬಿಕೆಯ ಅರಿಕೆಗಳು

ನಮ್ಮ ನಂಬಿಕೆಗೆ ತಕ್ಕಂತೆ ಕಾರ್ಯಮಾಡಿರಿ

ನಂಬಿಕೆಯ ವಿಷಯದಲ್ಲಿ ತಾಳ್ಮೆಯಿರಬೇಕು

ಪಾಠ ಐದು 71

**ಸತತವಾಗಿ ಬೆಳೆಯು ನಂಬಿಕೆ**

ವಿಶ್ವಾಸ ಪರಿಮಾಣ

ನಿಮ್ಮ ನಂಬಿಕೆ ಎಲ್ಲಿ?

ನಮ್ಮ ಮನಸ್ಸಿನಲ್ಲಿನ ಯುದ್ಧ

ಪಾಠ ಆರು 88

**ನಮ್ಮ ನಂಬಿಕೆಯನ್ನು ಬಲಪಡಿಸಿಕೊಳ್ಳುವುದು**

ನಂಬಿಕೆಯು ದುರ್ಬಲವಾಗಿದೆಯೆಂದು ಅನ್ನಿಸುವಾಗ

ನಂಬಿಕೆಯಲ್ಲಿ ಬಲಹೊಂದುವುದು

ನಂಬಿಕೆಯಿಂದ ತುಂಬಿರುವ ಜೀವನದ ಗುಣಲಕ್ಷಣಗಳು

ಪಾಠ ಏಳು 103

**ನಂಬಿಕೆಯ ಶತ್ರುಗಳು**

ಭಾವನೆಗಳನ್ನು ದೇವರ ವಾಕ್ಯದ ಅಧೀನಕ್ಕೊಳಪಡಿಸಬೇಕು

ಕ್ರಿಯೆಗಳನ್ನು ದೇವರ ವಾಕ್ಯದ ಅಧೀನಪಡಿಸಿಕೊಳ್ಳಪಡಿಸಬೇಕು

ನಮ್ಮ ವೈಯುಕ್ತಿಕ ಶತ್ರುಗಳನ್ನು ಸೋಲಿಸುವುದು

ಪಾಠ ಎಂಟು 122

**ಬಾ ನೀರಿನ ಮೇಲೆ ನಡೆ**

ನೀರಿನ ಮೇಲೆ ನಡೆಯುವುದು

ಧೈರ್ಯವಾಗಿರುವುದು, ದೇವರ ರೀತಿಯ ನಂಬಿಕೆಯಾಗಿದೆ

ದೇವರ-ರೀತಿಯ ನಂಬಿಕೆಯ ಕುರಿತಾಗಿರುವ ಉದಾಹರಣೆಗಳು

ನಂಬಿಕೆಯನ್ನು ತೆರೆದು ಬಿಡುವುದು

## ಪಾಠ ಒಂದು

# ಕರ್ತನೇ, ನಾನು ನಂಬುತ್ತೇನೆ

ಎಲ್ಲಾ ನಂಬಿಕೆಯು ದೇವರಿಂದ ಬರುವಂಥದ್ದಾಗಿದೆ. ದೇವರು ನಮ್ಮಲ್ಲಿ ಪ್ರತಿಯೊಬ್ಬರಿಗೂ ನಂಬಿಕೆಯ ಪರಿಮಾಣವನ್ನು ಕೊಡುತ್ತಾನೆ ಎಂದು ಅಪೊಸ್ತಲನಾದ ಪೌಲನು ಬರೆದಿದ್ದಾನೆ. ಆದರೆ, ನಮಗೆ ಕೊಡಲಾಗಿರುವ ನಂಬಿಕೆಯೊಂದಿಗೆ ನಾವು ಏನು ಮಾಡುತ್ತೇವೆ ಎಂಬುದು ನಮಗೆ ಬಿಟ್ಟದ್ದು. ನಮ್ಮ ನಂಬಿಕೆಯನ್ನು ಬೆಳೆಸಿಕೊಳ್ಳಲು ನಮಗೆ ಅನೇಕ ಅವಕಾಶಗಳನ್ನು ಕೊಡಲಾಗಿದೆ. ದೇವರನ್ನು ಮೆಚ್ಚಿಸುವಂಥ ನಂಬಿಕೆಯ ಕುರಿತು ನಾವು ಕಲಿಯುವಾಗ, ಅದು ಹೊಸದಾದ, ಸದಾ ಬೆಳೆಯುತ್ತಿರುವ ನಂಬಿಕೆಯಾಗುತ್ತದೆ.

ಬಿತ್ತುವ ಮತ್ತು ಕೊಯ್ಯುವ ನಿಯಮವು ದೇವರು ಸ್ಥಾಪಿಸಿರುವ ನಿಯಮಗಳ ಪೈಕಿ ಒಂದಾಗಿದೆ. ನಾವು ಏನನ್ನು ಬಿತ್ತುತ್ತೇವೋ ಅದನ್ನೇ ಕೊಯ್ಯುತ್ತೇವೆ. ನಾವು ಒಟ್ಟಾಗಿ ನಂಬಿಕೆಯ ಕುರಿತು ಅಧ್ಯಯನ ಮಾಡುವಾಗ ನಮ್ಮ ನಂಬಿಕೆ ಬೆಳೆಯುತ್ತದೆ ಎಂದು ನಾವು ಭರವಸೆಯುಳ್ಳವರಾಗಿರಬಹುದು. ನಮ್ಮ ನಂಬಿಕೆಯು ಬದಲಾಗುವುದು, ಮತ್ತು ನಾವು ನಂಬಿಕೆಯನ್ನು ಕೊಯ್ಯುತ್ತೇವೆ.

ನಮ್ಮ ನಂಬಿಕೆಯ ನಡಿಗೆಯಲ್ಲಿ ನಾವು ಎಲ್ಲೇ ಇದ್ದರೂ, ಹೆಚ್ಚಿನ ನಂಬಿಕೆಯನ್ನು ಹೊಂದಬೇಕೆಂಬ ಸವಾಲು ನಮಗೆ ಉಂಟಾಗಬಹುದು. ವೈಯಕ್ತಿಕ ಸಂಬಂಧಗಳು, ಭಾವನೆಗಳು, ಹಣಕಾಸು ಅಥವಾ ಆರೋಗ್ಯದ ಕ್ಷೇತ್ರದಲ್ಲಿ ನಮಗೆ ಸವಾಲು ಉಂಟಾಗಬಹುದು. ಆದರೆ ಪ್ರತಿದಿನ, ನಮ್ಮಲ್ಲಿ ಪ್ರತಿಯೊಬ್ಬರು ಹೆಚ್ಚಿನ ನಂಬಿಕೆಯನ್ನು ಹೊಂದಿಕೊಳ್ಳಬೇಕು.

**''ನನ್ನ ನಂಬಿಕೆ ಕಡಿಮೆಯಾಗಿದ್ದರೂ ಸಹಾಯ ಮಾಡು!''**

ದೆವ್ವ ಹಿಡಿದ್ದ ಒಬ್ಬ ಹುಡುಗನಿದ್ದನು ಮತ್ತು ಅವನ ತಂದೆಯು ಅವನನ್ನು ಯೇಸುವಿನ ಬಳಿಗೆ ಕರೆತಂದನು.

**ಯೇಸು ಅವನಿಗೆ ನಿನ್ನ ಕೈಲಿ ಆಗುವ ಹಾಗಿದ್ದರೆ ಅನ್ನುತ್ತೀಯೋ? ನಂಬುವವನಿಗೆ ಎಲ್ಲಾ ಆಗುವದು ಎಂದು ಹೇಳಿದನು (ಮಾರ್ಕ 9:23).**

ಈ ತಂದೆಯು ತನ್ನ ಮಗನು ಗುಣವಾಗಬೇಕೆಂದು ಎಷ್ಟು ಹೆಚ್ಚಾಗಿ ಬಯಸಿದ್ದಾನೆಂಬುದನ್ನು ನಾವು ಊಹಿಸಿಕೊಳ್ಳಬಹುದು. ಮಗನ

ಗುಣಪಡಿಸುವಿಕೆಯು ತನ್ನ ನಂಬಿಕೆಯ ಮೇಲೆ ಅವಲಂಬಿತವಾಗಿದೆ ಎಂದು ತಂದೆಯು ಅರಿತುಕೊಂಡಾಗ ಅದು ಅವನನ್ನು ಎಷ್ಟು ದಿಗಿಲುಪಡಿಸಿರಬಹುದು.

**ಕೂಡಲೆ ಆ ಹುಡುಗನ ತಂದೆಯು ನಂಬುತ್ತೇನೆ, ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯಮಾಡು ಎಂದು ಕೂಗಿ ಹೇಳಿದನು (ಮಾರ್ಕ 9:24)**

ಈ ತಂದೆಯು ಸರಿಯಾದ ಕೆಲಸವನ್ನು ಮಾಡಿದನು. ಅವನು, "ನಾನು ನಂಬುತ್ತೇನೆ, ಆದರೂ ನನಗೆ ಇನ್ನೂ ಹೆಚ್ಚು ಬೇಕು" ಎಂದು ಮೊರೆಯಿಟ್ಟನು ಮತ್ತು ಯೇಸು ಅವನ ಮಗನನ್ನು ಗುಣಪಡಿಸಿದನು. ನಮ್ಮ ಮೊರೆಯು ಸಹ ಅದೇ ರೀತಿಯಾಗಿರಬೇಕು, "ಓ, ತಂದೆಯೇ, ಹೆಚ್ಚು ನಂಬಿಕೆಯನ್ನು ಹೊಂದಿಕೊಳ್ಳಲು ನನಗೆ ಸಹಾಯ ಮಾಡು!"

ತಂದೆಯು ನಂಬಬೇಕಾಗಿ ಬಂತು, ಅದರಂತೆಯೇ ನಂಬಿಕೆ ಎಂಬುದು ನಮ್ಮ ಭಾಗದಿಂದ ಇರುವಂಥದ್ದಾಗಿದೆ. ದೇವರ ವಾಗ್ದಾನಗಳನ್ನು ಪಡೆದುಕೊಳ್ಳಲು ನಮಗೆ ನಂಬಿಕೆ ಇರಬೇಕು. ಈ ನಂಬಿಕೆಯೇ ಅಸಾಧಾರಣವಾದ/ಅಲೌಕಿಕ ಮಂಡಲವನ್ನು ನೈಸರ್ಗಿಕ ಮಂಡಲಕ್ಕೆ ತರುವಂಥದ್ದಾಗಿದೆ. ರಕ್ಷಣೆಯ ಸಮಯದಿಂದ ಹಿಡಿದು ಇದುವರೆಗೂ ಎಲ್ಲವನ್ನು ನಾವು ದೇವರಿಂದ ನಂಬಿಕೆಯ ಮೂಲಕ ಪಡೆದುಕೊಳ್ಳುತ್ತೇವೆ.

**ನಂಬಿಕೆ ಎಂದರೇನು?**

---

ನಾವು ಕುರ್ಚಿಯ ಮೇಲೆ ಕುಳಿತುಕೊಳ್ಳುವಾಗ, ಕುರ್ಚಿಯು ಬೀಳದಂತೆ ನಮ್ಮನ್ನು ಹಿಡಿದಿಡುತ್ತದೆ ಎಂದು ನಾವು ನಂಬುತ್ತೇವೆ. ಅದು ಸಹಜ ನಂಬಿಕೆ.

ಈ ಅಧ್ಯಯನವು ಸ್ವಾಭಾವಿಕ ನಂಬಿಕೆಯ ಕುರಿತಾಗಿರುವಂಥದ್ದಲ್ಲ. ಆತ್ಮ ಮಂಡದಲ್ಲಿರುವಂತಹ, ದೇವರ ರೀತಿಯ ನಂಬಿಕೆಯ ಕುರಿತದ್ದಾಗಿರುವಂಥದ್ದು ಆಗಿದೆ. ಇದು ನಮ್ಮ ಮತ್ತು ದೇವರ ನಡುವೆ ಇರುವಂಥ ನಂಬಿಕೆ - ದೇವರೊಂದಿಗೆ ಮಾತನಾಡುವ ಮತ್ತು ದೇವರಿಂದ ಪಡೆದುಕೊಳ್ಳುವ ನಂಬಿಕೆ - ದೇವರ ಅಸಾಧಾರಣವಾದ ಶಕ್ತಿಯಲ್ಲಿ ಆತ್ಮ ಮಂಡಲದಲ್ಲಿ ಕಾರ್ಯಮಾಡುವ ನಂಬಿಕೆ.

**ವ್ಯಾಖ್ಯೆ**

ಇಬ್ರಿಯ ಪುಸ್ತಕದ ಲೇಖಕನು ನಂಬಿಕೆಯ ವ್ಯಾಖ್ಯೆಯನ್ನು ನಮಗೆ ಕೊಟ್ಟಿದ್ದಾನೆ.

**ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳಿದುಕೊಳ್ಳುವದೂ ಆಗಿದೆ (ಇಬ್ರಿಯ 11:1).**

ಸ್ಟ್ರಾಂಗ್ಸ್ ಕಾನ್ಕಾರ್ಡನ್ಸ್ ಪ್ರಕಾರ, "ಭರವಸೆ/ಆಧಾರ" ಎಂಬ ಪದದ ಅರ್ಥವೇನಂದರೆ, "ಅಸ್ತಿವಾರವುಳ್ಳಂಥದ್ದು, ದೃಢವಾಗಿರುವಂಥದ್ದು - ನಿಜವಾಗಿ ಅಸ್ತಿತ್ವವುಳ್ಳಂಥದ್ದು - ವಾಸ್ತವವಾದದ್ದು, ನಿಜವಾದ ಜೀವಿ."

ಆಂಫ್ಲಿಪೈಡ್ ಬೈಬಲ್ ವರ್ಷನ್ ಹೀಗೆ ಹೇಳುತ್ತದೆ,

ನಂಬಿಕೆಯೋ ನಾವು ನಿರೀಕ್ಷಿಸುವ ವಿಷಯಗಳ… ಭರವಸೆಯಾಗಿದೆ… ನಂಬಿಕೆಯು ಇಂದ್ರಿಯಗಳಿಗೆ ಗೋಚರವಾಗದ ವಿಷಯಗಳನ್ನು ನಿಜವಾದ ವಿಷಯವೆಂದು ತಿಳಿದುಕೊಳ್ಳುತ್ತದೆ.

*ಮೊಫಾಟ್‌ನ ಭಾಷಾಂತರ* ಹೀಗೆ ಹೇಳುತ್ತದೆ,

ನಂಬಿಕೆ ಎಂದರೆ ನಾವು ನಿರೀಕ್ಷಿಸುವಂಥದ್ದರ ಬಗ್ಗೆ ನಾವು ಭರವಸೆಯುಳ್ಳವರಾಗಿರುವುದು, ನಾವು ಕಾಣದಿರುವಂಥದ್ದರ ಬಗ್ಗೆ ಮನವರಿಕೆ ಉಳ್ಳವರಾಗಿರುವುದು.

ವೆಬ್‌ಸ್ಟರ್ ನಿಘಂಟು ನಂಬಿಕೆಯನ್ನು "ದೇವರಲ್ಲಿ ಇಟ್ಟಿರುವ ಪ್ರಶ್ನಾತೀತವಾದ ನಂಬಿಕೆ… ಸಂಪೂರ್ಣವಾದ ನಂಬಿಕೆ, ವಿಶ್ವಾಸ ಅಥವಾ ಭರವಸೆ; ಸಾಮಾನ್ಯವಾಗಿ ಮಕ್ಕಳು ತಮ್ಮ ತಂದೆತಾಯಿಗಳ ಮೇಲೆ ನಂಬಿಕೆಯುಳ್ಳವರಾಗಿರುತ್ತಾರೆ."

ನಂಬಿಕೆ ಎಂದರೆ ದೇವರು ಎಂಥವನಾಗಿದ್ದಾನೆ ಎಂಬುದರಲ್ಲಿ, ಆತನು ಮಾಡುವಂಥದ್ದರಲ್ಲಿ, ಮತ್ತು ಆತನು ಹೇಳುವಂಥದ್ದರಲ್ಲಿ ಪ್ರಶ್ನಾತೀತವಾದ ವಿಶ್ವಾಸವನ್ನಿಡುವುದು ಆಗಿದೆ. ನಂಬಿಕೆಯು ದೇವರ ವಾಕ್ಯವನ್ನು ಪ್ರಶ್ನಿಸದೆ ಅಥವಾ ಅರ್ಥಮಾಡಿಕೊಳ್ಳಲು ಪ್ರಯತ್ನಿಸದೆ ನಂಬುವುದು ಮತ್ತು ಕಾರ್ಯಮಾಡುವುದು ಆಗಿದೆ.

ನಾವು ಕೀರ್ತನೆಗಳಲ್ಲಿ ಹೀಗೆ ಓದುತ್ತೇವೆ,

**ಯೆಹೋವನೇ, ನಿನ್ನ ವಾಕ್ಯವು ಪರಲೋಕದಲ್ಲಿ ಶಾಶ್ವತವಾಗಿ ಸ್ಥಾಪಿಸಲ್ಪಟ್ಟಿದೆ (ಕೀರ್ತನೆಗಳು 119: 89).**

## ನಂಬಿಕೆಯ ಮೂಲ

✱ *ದೇವರಿಂದ ದೊರಕುವ ವರ*

ರಕ್ಷಣೆಗೋಸ್ಕರವಾಗಿರುವ ನಂಬಿಕೆಯು ದೇವರ ವರವಾಗಿದೆ.

**ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, ಅದು ದೇವರ ವರವೇ (ಎಫೆಸ 2:8).**

**ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿ ಇಟ್ಟು (ಇಬ್ರಿಯ 12:2 ಎ)**

❋ *ವಾಕ್ಯವನ್ನು ಕೇಳುವದರಿಂದ ನಂಬಿಕೆ ಬರುತ್ತದೆ*

**ಆದಕಾರಣ ಸಾರಿದ ಸುವಾರ್ತೆಯು ನಂಬಿಕೆಗೆ ಆಧಾರ. ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ (ರೋಮಾಪುರ 10:17).**

ದೇವರ ಆತ್ಮವು ನಾವು ಓದುತ್ತಿರುವ, ಧ್ಯಾನ ಮಾಡುತ್ತಿರುವ ಅಥವಾ ಕೇಳುತ್ತಿರುವ ದೇವರ ವಾಕ್ಯವನ್ನು ಹಿಡಿದುಕೊಂಡಾಗ ನಂಬಿಕೆಯು ಅತ್ಯಲ್ಪಾವಧಿಯಲ್ಲಿಯೇ – ಕ್ಷಣಾರ್ಧದಲ್ಲಿ ಬರುತ್ತದೆ - ಮತ್ತು ಅದನ್ನು ನಮ್ಮ ಆತ್ಮಗಳಲ್ಲಿ ಬೆಂಕಿಯಂತೆ ಹೊತ್ತಿ ಉರಿಯುವಂತೆ ಮಾಡುತ್ತಾನೆ. ದೇವರ ವಾಕ್ಯವು ನಮಗೆ ಸತ್ಯವಾಗಿ ಪರಿಣಮಿಸಿದಾಗ ನಂಬಿಕೆಯು ಉಂಟಾಗುತ್ತದೆ.

‘‘ನಿಮಗೆ ಕ್ಯಾನ್ಸರ್ ಇದೆ’’ ಎಂದು ವೈದ್ಯರು ಹೇಳಬಹುದು. ಆದರೆ ದೇವರ ವಾಕ್ಯವು ‘‘ಯೇಸುವಿನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು’’ ಎಂದು ಹೇಳುತ್ತದೆ. ನಂಬಿಕೆಯುಳ್ಳ ಸಮಯದಲ್ಲಿ, ದೇವರ ವಾಕ್ಯವು ಇಬ್ಬಾಯಿ ಕತ್ತಿಗಿಂತ ಚೂಪಾಗುತ್ತದೆ ಪ್ರಾಣ (ಮನಸ್ಸು, ಭಾವನೆಗಳು) ಮತ್ತು ಆತ್ಮವನ್ನು ಇಬ್ಭಾಗಿಸುತ್ತದೆ. ‘‘ನಿಮಗೆ ಕ್ಯಾನ್ಸರ್ ಇದೆ’’ ಎಂಬ ವೈದ್ಯರ ಮಾತುಗಳನ್ನು ನಮ್ಮ ಮನಸ್ಸು ಒಪ್ಪಿಕೊಳ್ಳುತ್ತಿರಬಹುದು, ಆದರೆ ನಂಬಿಕೆಯುಳ್ಳ ಸಮಯದಲ್ಲಿ, ನಮ್ಮ ಆತ್ಮವು ನಿಯಂತ್ರಣವನ್ನು ತೆಗೆದುಕೊಳ್ಳುತ್ತದೆ, ನಾವು ನಮ್ಮ ನಂಬಿಕೆಯನ್ನು ಚಾಚಿ ದೇವರ ಗುಣಪಡಿಸುವ ಶಕ್ತಿಯ ತೋರ್ಪಡಿಸುವಿಕೆಯನ್ನು ಪಡೆದುಕೊಳ್ಳುತ್ತೇವೆ.

## ನಂಬಿಕೆಯ ಅಸ್ತಿವಾರಗಳು

❋ *ದೇವರನ್ನು ತಿಳಿದುಕೊಳ್ಳುವುದರ ಮೇಲೆ ಆಧಾರಿತವಾಗಿದೆ*

ನಿಜವಾದ ನಂಬಿಕೆಯು ಯಾವಾಗಲೂ ದೇವರನ್ನು ತಿಳಿದುಕೊಳ್ಳುವುದರ ಮೇಲೆ ಆಧಾರಿತವಾಗಿರುತ್ತದೆ.

ಯಾವುದೇ ವಾಗ್ದಾನದ ಬೆಲೆಯು ಆ ವಾಗ್ದಾನವನ್ನು ಮಾಡುವ ವ್ಯಕ್ತಿಯ ಪ್ರಾಮಾಣಿಕತೆಯಷ್ಟೇ ಉತ್ತಮವಾಗಿರುತ್ತದೆ. ಒಬ್ಬ ವ್ಯಕ್ತಿಯು ಈ ಹಿಂದೆ ನಮಗೆ ಸುಳ್ಳು ಹೇಳಿದ್ದರೆ, ಅವರು ಈಗ ಸತ್ಯವನ್ನು ಹೇಳುತ್ತಿದ್ದಾರೆ ಎಂಬ ಭರವಸೆ ನಮಗೆ ಉಂಟಾಗುವುದಿಲ್ಲ.

ಆದರೆ ದೇವರು ಎಂದಿಗೂ ಸುಳ್ಳು ಹೇಳುವುದಿಲ್ಲ. ಆತನ ವಾಗ್ದಾನಗಳು ಯಾವಾಗಲೂ ಸತ್ಯವಾಗಿರುತ್ತವೆ. ಆತನ ವಾಕ್ಯವು ಆತನ ಪರಿಶುದ್ಧತೆಯ ಮೇಲೆ ಆಧಾರಿತವಾಗಿದೆ, ಮತ್ತು ಅದಕ್ಕಿಂತ ಉನ್ನತ ಮಾನದಂಡ ಯಾವುದು ಇಲ್ಲ! ನಾವು ಇದನ್ನು ಹೆಚ್ಚೆಚ್ಚಾಗಿ ಅರ್ಥಮಾಡಿಕೊಂಡಷ್ಟು, ನಾವು ಆತನನ್ನು ಹೆಚ್ಚೆಚ್ಚು ವೈಯಕ್ತಿಕವಾಗಿ ತಿಳಿದುಕೊಳ್ಳುತ್ತೇವೆ.

ದಾನಿಯೇಲನು ಹೀಗೆ ಬರೆದಿದ್ದಾನೆ,

**ತಮ್ಮ ದೇವರನ್ನು ಅರಿತವರೋ ದೃಢಚಿತ್ತರಾಗಿ ಕೃತಾರ್ಥರಾಗುವರು (ದಾನಿಯೇಲ 11: 32 ಬಿ).**

ದೇವರನ್ನು ಮೆಚ್ಚಿಸುವ ನಂಬಿಕೆಯನ್ನು - ನಮ್ಮನ್ನು ದೃಢಚಿತ್ತರನ್ನಾಗಿ ಮತ್ತು ವೀರಕೃತ್ಯಗಳನ್ನು ಮಾಡುವವರನ್ನಾಗಿ ಮಾಡುವಂಥ ನಂಬಿಕೆಯನ್ನು ಹೊಂದಿಕೊಳ್ಳಲು ನಾವು ಬಯಸುವುದಾದರೆ, ನಾವು ಆತನನ್ನು ಆರಾಧಿಸುತ್ತಾ ಆತನ ಸನ್ನಿಧಿಯಲ್ಲಿ ಸಮಯವನ್ನು ಕಳೆಯಬೇಕು.

ನಾವು, ಅಬ್ರಹಾಮನಂತೆ “ದೇವರ ಸ್ನೇಹಿತರು” ಆಗುವಾಗ ಮತ್ತು ಆತನ ಸ್ವಭಾವವನ್ನು ತಿಳಿದುಕೊಳ್ಳುವಾಗ, ನಾವು ಆತನ ವಾಕ್ಯದ ವಿಶ್ವಾಸಾರ್ಹತೆಯನ್ನು ತಿಳಿದುಕೊಳ್ಳಬಹುದು.

ಆತನ ಅತಿಶಯವಾದ ಪ್ರಸನ್ನತೆಯಲ್ಲಿ ಆರಾಧಕರಾಗಿ ಸಮಯವನ್ನು ಕಳೆಯುವುದರ ಮೂಲಕ ಬರುವಂಥ ದೇವರೊಂದಿಗಿನ ಆಪ್ತ ಸಂಬಂಧವಿಲ್ಲದೆ ನಿಜವಾದ ನಂಬಿಕೆಯು ಇರಲು ಸಾಧ್ಯವಿಲ್ಲ.

❋ *ವಾಕ್ಯದ ಪ್ರಾಮಾಣಿಕತೆಯ ಮೇಲೆ ಆಧಾರಿತವಾಗಿದೆ*

ಸತ್ಯವೇದದಷ್ಟು ಮುಖ್ಯವಾದ ಬೇರೊಂದು ಪುಸ್ತಕವಿಲ್ಲ. ಸತ್ಯವೇದದಲ್ಲಿ ದೇವರ ನಿಜವಾದ ವಾಕ್ಯಗಳಿವೆ. ಪ್ರತಿಯೊಂದು ಸಂದರ್ಭದಲ್ಲೂ ಇದು ನಮ್ಮ ಮಾರ್ಗಸೂಚಿಯಾಗಿದೆ. ದೇವರ ವಾಕ್ಯಗಳು ಆತ್ಮವು ಮತ್ತು ಅವು ಜೀವವು ಆಗಿವೆ. ನಾವು ದೇವರ ವಾಕ್ಯವನ್ನು ಅಧ್ಯಯನ ಮಾಡಲು ಪ್ರಾರಂಭಿಸಿದಾಗ, ಇವುಗಳು ನಮಗಾಗಿ ಬರೆಯಲ್ಪಟ್ಟಿರುವ ವಾಕ್ಯಗಳಾಗಿವೆ ಎಂದು ಅರಿತುಕೊಂಡರೆ, ನಮ್ಮ ನಂಬಿಕೆಯು ಬೆಳೆಯುತ್ತದೆ.

2 ತಿಮೊಥೆಯನಲ್ಲಿ ನಾವು ಹೀಗೆ ಓದುತ್ತೇವೆ,

**ದೈವ ಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ.**

**ಅದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲಸತ್ಕಾರ್ಯಕ್ಕೆ ಸನ್ನದ್ಧನಾಗುವನು (2 ತಿಮೊಥೆ 3:16,17).**

ಆಂಪ್ಲಿಫೈಡ್ ಬೈಬಲ್ ವರ್ಷನ್ ಅದನ್ನು ಇನ್ನಷ್ಟು ಸ್ಪಷ್ಟಗೊಳಿಸುತ್ತದೆ.

**ದೇವರು ಉಸಿರಿದ-ಆತನ ಪ್ರೇರಣೆಯಿಂದ ಉಂಟಾದ-ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೆ, ಪಾಪ ಪ್ರಜ್ಞೆಯನ್ನುಂಟು ಮಾಡುವುದಕ್ಕೆ ಮತ್ತು ಗದರಿಸುವುದಕ್ಕೆ ಮತ್ತು ತಪ್ಪನ್ನು ತಿದ್ದುವುದಕ್ಕೆ ಹಾಗೂ ವಿಧೇಯತೆಯಲ್ಲಿ ಶಿಸ್ತುಗೊಳಿಸುವುದಕ್ಕೆ ಮತ್ತು ನೀತಿಯಲ್ಲಿ ತರಬೇತಿ ಕೊಡುವುದಕ್ಕೆ (ಅಂದರೆ, ದೇವರ ಚಿತ್ತಕ್ಕೆ ಅನುಗುಣವಾಗಿ ಯೋಚನೆಯಲ್ಲಿ, ಉದ್ದೇಶದಲ್ಲಿ ಮತ್ತು ಕ್ರಿಯೆಯಲ್ಲಿ ಪರಿಶುದ್ಧ ಜೀವನ ನಡೆಸುವುದರಲ್ಲಿ) ಉಪಯುಕ್ತವಾಗಿದೆ, ಆದ್ದರಿಂದ ದೇವರ ಮನುಷ್ಯನು ಸಂಪೂರ್ಣನು ಮತ್ತು ಪ್ರವೀಣನು, ಯೋಗ್ಯನು ಆಗಿರಬಹುದು ಮತ್ತು ಪ್ರತಿಯೊಂದು ಒಳ್ಳೆಯ ಕಾರ್ಯಕ್ಕೂ ಸಂಪೂರ್ಣವಾಗಿ ಸನ್ನದ್ಧನಾಗಿರಬಹುದು.**

ಇತರರಿಗಾಗಿ ಕಾರ್ಯಮಾಡಿದ ದೇವರ ಅದ್ಭುತಕರವಾದ ಶಕ್ತಿಯ ಬಗ್ಗೆ ನಾವು ಕೇಳಿದಾಗ, ನಿರೀಕ್ಷೆ ಬರುತ್ತದೆ. ಇದು ಆದಾಗ, ನಮ್ಮ ನಿರೀಕ್ಷೆಯು ಒಬ್ಬ ವ್ಯಕ್ತಿ ನಮಗೆ ಹೇಳಿರುವಂಥದ್ದರ ಮೇಲೆ ಆಧಾರಿತವಾಗಿರಬಹುದು. ಆದರೆ ನಾವು ಅದನ್ನು ಆತನ ವಾಕ್ಯದಲ್ಲಿ ನೋಡಿಕೊಳ್ಳುವಾಗ ಮತ್ತು ಅದು ಹೇಗೆ ದೇವರ ಸ್ವಭಾವಕ್ಕೆ ಯುಕ್ತವಾಗಿದೆ ಎಂಬುದನ್ನು ನಾವು ನೋಡಿಕೊಳ್ಳುವಾಗ, ಆ ನಿರೀಕ್ಷೆಯು ನಂಬಿಕೆಯಾಗಿ ಮಾರ್ಪಡುತ್ತದೆ.

ನಿಜವಾದ ನಂಬಿಕೆ ಯಾವಾಗಲೂ ದೇವರ ವಾಕ್ಯದ ಮೇಲೆ ಆಧಾರಿತವಾಗಿರುತ್ತದೆ.

ಪ್ರವಾದಿಯಾದ ಯೆಶಾಯನು ಹೀಗೆ ಬರೆದಿದ್ದಾನೆ,

**ಸುಮ್ಮನೆ ಹಿಂದಿರುಗುವದಿಲ್ಲವೋ ಹಾಗೆಯೇ ನನ್ನ ಬಾಯಿಂದ ಹೊರಟ ಮಾತು ನನ್ನ ಇಷ್ಟಾರ್ಥವನ್ನು ನೆರವೇರಿಸಿ ನಾನು ಉದ್ದೇಶಿಸಿದ್ದನ್ನು ಕೈಗೂಡಿಸಿದ ಹೊರತು ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವದಿಲ್ಲ (ಯೆಶಾಯ 55:11).**

## ನಂಬಿಕೆಯ ಗುಣಲಕ್ಷಣಗಳು

❋ *ನಂಬಿಕೆಯು ದೇವರನ್ನು ಮೆಚ್ಚಿಸುತ್ತದೆ*

ನಾವು ಇಬ್ರಿಯ ಪುಸ್ತಕದಲ್ಲಿ ಹೀಗೆ ಓದುತ್ತೇವೆ,

**ನಂಬಿಕೆಯಿಲ್ಲದೆ ಆತನನ್ನು ಮೆಚ್ಚಿಸುವುದು ಅಸಾಧ್ಯ (ಇಬ್ರಿಯ 11:6).**

ಈ ನಂಬಿಕೆಯು ತನ್ನ ಕೈಚಾಚಿ ರಕ್ಷಣೆಯನ್ನು ಹೊಂದಿಕೊಳ್ಳುತ್ತದೆ. ಈ ನಂಬಿಕೆಯು ದೇವರ ಗುಣಪಡಿಸುವ ಶಕ್ತಿಯನ್ನು - ಸಂರಕ್ಷಣೆಯನ್ನು - ಮಾರ್ಗದರ್ಶನವನ್ನು - ಆತನ ಅಸಾಧಾರಣವಾದ ಒದಗಿಸುವಿಕೆಯನ್ನು ಹೊಂದಿಕೊಳ್ಳುತ್ತದೆ. ನಾವು ದೇವರನ್ನು ಮೆಚ್ಚಿಸಲು ಬಯಸುವುದಾದರೆ ನಾವು ನಂಬಿಕೆಯಲ್ಲಿ ಜೀವಿಸಬೇಕು, ನಂಬಿಕೆಯಲ್ಲಿ ನಡೆಯಬೇಕು, ನಂಬಿಕೆಯಲ್ಲಿ ಕಾರ್ಯ ಮಾಡಬೇಕು, ನಾವು ಮಾಡುವ ಎಲ್ಲವನ್ನೂ ನಂಬಿಕೆಯಲ್ಲಿ ಮಾಡಬೇಕು.

ನಾವು ಭಯಭೀತರಾಗಿದ್ದರೆ, ಸಂದೇಹವು ನಮ್ಮಲ್ಲಿ ವಾಸಿಸಲು ನಾವು ಅನುಮತಿ ಕೊಟ್ಟರೆ, ನಮಗೆ ದೇವರನ್ನು ಮೆಚ್ಚಿಸಲು ಆಗುವುದಿಲ್ಲ. ಎಲ್ಲವೂ ಕತ್ತಲೆಯಾಗಿರುವಾಗ, ನಿರೀಕ್ಷೆ ಇಲ್ಲ ಎಂದು ತೋರುವಾಗ, ನಾವು ಯೋಬನೊಂದಿಗೆ ಸೇರಿ ಈ ಕೆಳಗಿನಂತೆ ಹೇಳಬಹುದಾದ ಸ್ಥಿತಿಗೆ ಬರಬೇಕು

**ಆಹಾ, ಆತನು ನನ್ನನ್ನು ಕೊಲ್ಲುವನು, ಅದಕ್ಕಾಗಿ ಕಾದಿರುತ್ತೇನೆ … ನಾನು ರಕ್ಷಣೆಯನ್ನು ಹೊಂದುವೆನೆಂಬದಕ್ಕೆ ಆಧಾರವಾಗಿದೆ (ಯೋಬ 13:15, 16).**

ಯೋಬನು ಎಲ್ಲವನ್ನೂ - ಅವನ ಕುಟುಂಬವನ್ನು - ಅವನ ಸ್ನೇಹಿತರನ್ನು - ಅವನ ಸಂಪತ್ತನ್ನು ಕಳೆದುಕೊಂಡಿದ್ದನು, ಆದರೆ ಅವನು ಇನ್ನೂ ದೇವರನ್ನು ತಿಳಿದುಕೊಂಡಿದ್ದನು. ಅವನಿಗೆ ಇನ್ನೂ ದೇವರಲ್ಲಿ ನಂಬಿಕೆ ಇತ್ತು.

ನಿಜವಾದ ನಂಬಿಕೆಯು ದೇವರನ್ನು ಮೆಚ್ಚಿಸುತ್ತದೆ. ಅದ್ಭುತಕರವಾದ ಮಂಡಲದಲ್ಲಿ ಜೀವಿಸಲು ನಂಬಿಕೆ ಬೇಕು. ದೇವರು ತನ್ನ ಅದ್ಭುತಕರವಾದ ವಿಮೋಚನೆಯಲ್ಲಿ ನಮಗೆ ಒದಗಿಸಿರುವ ಎಲ್ಲವನ್ನು ಕೈಚಾಚಿ ಹೊಂದಿಕೊಳ್ಳಲು ನಂಬಿಕೆ ಬೇಕು.

✱ *ನಂಬಿಕೆಯು ಆಯ್ಕೆಯಾಗಿದೆ*

ನಂಬಿಕೆ ಉಳ್ಳವರಾಗಿರುವಂಥದ್ದು ಆಯ್ಕೆಯಾಗಿದೆ. ನಂಬಿಕೆ ಎಂದರೆ ಅದನ್ನು ತೆಗೆದುಕೊಳ್ಳುವುದು ಅಥವಾ ಅದನ್ನು ಹಿಡಿದುಕೊಳ್ಳುವುದು. ಯೇಸುವನ್ನು ನಂಬುವುದು ಎಂದರೆ ಆತನು ಏನೆಲ್ಲಾ ಆಗಿದ್ದಾನೆ ಎಂದು ಸತ್ಯವೇದದ ವಚನಗಳು ಹೇಳುತ್ತವೆಯೋ ಅದೆಲ್ಲದಕ್ಕಾಗಿ ಆತನನ್ನು ಅಂಗೀಕರಿಸಬೇಕು. ಆತನು ನಮ್ಮ ರಕ್ಷಕನೆಂದು ನಾವು ನಂಬಬಹುದು, ಮತ್ತು ಆತನು ರಕ್ಷಕನೇ ಆಗಿದ್ದಾನೆ. ಆತನು ನಮ್ಮ ವೈದ್ಯನೆಂದು ನಾವು ನಂಬಬಹುದು, ಮತ್ತು ಆತನು ವೈದ್ಯನೇ ಆಗಿದ್ದಾನೆ. ಆತನು ನಮ್ಮನ್ನು ಬಿಡಿಸುವವನೆಂದು ನಾವು ನಂಬಬಹುದು… ಈ ಪಟ್ಟಿಯು ಹೀಗೆ ಮುಂದುವರಿಯುತ್ತದೆ. ನಾವು

ಏನನ್ನೆಲ್ಲಾ ನಂಬುವೆವು ಅವನ್ನೆಲ್ಲಾ ನಾವು ಹೊಂದಿಕೊಳ್ಳಬಹುದು ಎಂದು ನಮಗೆ ತಿಳಿದಿದೆ. ಇದು ನಮ್ಮ ಆಯ್ಕೆಯಾಗಿದೆ. ಉದಾಹರಣೆಗೆ, ಒಬ್ಬ ವ್ಯಕ್ತಿಯು ಗುಣಪಡಿಸುವಿಕೆಯು ಈಹೊತ್ತು ನಡೆಯುತ್ತದೆ ಎಂದು ತಾನು ನಂಬುವುದಿಲ್ಲ ಎಂದು ಹೇಳಬಹುದು ಮತ್ತು ಅವರಿಗೆ ಗುಣವಾಗುವುದಿಲ್ಲ.

ನಮಗೊಂದು ಆಯ್ಕೆ ಇದೆ. ಯೆಶಾಯ 53:1 ನೇ ವಚನವು ಪ್ರಶ್ನೆಯೊಂದಿಗೆ ಪ್ರಾರಂಭವಾಗುತ್ತದೆ.

"ನಾವು ಕೇಳಿದ ಸಂಗತಿಯನ್ನು ಯಾರು ನಂಬಿದ್ದರು?"

ಯೆಹೋಶುವನು ಇಸ್ರಾಯೇಲ್ ಜನರಿಗೆ ಹೀಗೆ ಹೇಳಿದನು,

ಈ ಹೊತ್ತೇ ಆರಿಸಿಕೊಳ್ಳಿರಿ (ಯೆಹೋಶುವ 24:15).

ಮತ್ತು ಪ್ರಕಟನೆಯಲ್ಲಿ ನಾವು ಹೀಗೆ ಓದುತ್ತೇವೆ,

ಬಾಯಾರಿದವನು ಬರಲಿ. ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ (ಪ್ರಕಟನೆ 22: 17 ಬಿ).

❋ *ನಂಬಿಕೆಯು ಕ್ರಿಯೆಯಾಗಿದೆ*

ನಂಬಿಕೆಯು ಯಾವಾಗಲೂ ಕ್ರಿಯೆರೂಪದಲ್ಲಿರುತ್ತದೆ ಎಂದು ಯಾಕೋಬನು ಹೇಳುತ್ತಾನೆ. ಆತ್ಮವಿಲ್ಲದ ದೇಹವು ಸತ್ತದ್ದಾಗಿರುವ ಪ್ರಕಾರವೇ ಕ್ರಿಯೆಗಳಿಲ್ಲದ ನಂಬಿಕೆಯೂ ಸತ್ತದ್ದೇ ಎಂದು ಅವನು ಬರೆದಿದ್ದಾನೆ (ಯಾಕೋಬ 2:26).

ಈ ವಚನದಿಂದ ನಾವು ಏನನ್ನು ಕಲಿಯುತ್ತೇವೆ?

- ತಕ್ಕದಾದ ಕ್ರಿಯೆಗಳಿಲ್ಲದ ನಂಬಿಕೆಯು ನಿಷ್ಕ್ರಿಯವಾಗಿದೆ.
- ನಂಬಿಕೆಯು ಕ್ರಿಯಾಪದವಾಗಿದೆ.
- ನಂಬಿಕೆಯು ಬಂದಾಗ, ಅದು ನಮ್ಮನ್ನು ವಿಧೇಯತೆಯ ಕ್ರಿಯೆಯತ್ತ ಸಾಗಿಸುತ್ತದೆ.

ಗುಣಪಡಿಸುವಿಕೆಯ ಅಗತ್ಯವಿರುವ ಜನರೊಂದಿಗೆ ಯೇಸು ಮಾತನಾಡಿದಾಗ, ಆತನು ಅವರಿಗೆ ಮಾಡುವುದಕ್ಕಾಗಿ ಒಂದು ಕ್ರಿಯೆಯನ್ನು ಹೇಳಿಕೊಟ್ಟನು. "ನಿನ್ನ ಕೈಯನ್ನು ಚಾಚು." “ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ.”

**ನಂಬಿಕೆಯು - ಜೀವನದ ದಾರಿ**

ನಂಬಿಕೆಯು ಜೀವನದ ದಾರಿಯಾಗಿದೆ. ಇದು “ತ್ವರಿತವಾಗಿ ಸಹಾಯ ಪಡೆಯುವ” ಯೋಜನೆಯಲ್ಲ.

ನಂಬಿಕೆಯು ನಾವು ಬಯಸಿದ್ದನ್ನು ಕೊಡುವಂತೆ ದೇವರನ್ನು ಬಲವಂತ ಮಾಡಿರುವುದಕ್ಕಿರುವ "ಸಾಧನ" ಅಲ್ಲ. ಸಾಧನ ಎನ್ನುವುದು ನಾವು ಮಾಡಲು ಉದ್ದೇಶಿಸಿದ್ದನ್ನು ಮಾಡುವುದಕ್ಕಾಗಿ ನಾವು ತೆಗೆದುಕೊಂಡು ಬಳಸುವಂಥ ವಸ್ತುವಾಗಿದೆ. ನಾವು ಸಾಧನವನ್ನು ನಿಯಂತ್ರಿಸುತ್ತೇವೆ. ನಂಬಿಕೆಯು ನಮ್ಮ ಜೀವನದ ಕುರಿತಾಗಿರುವ ಆತನ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ದೇವರು ಕೊಟ್ಟಿರುವ ವರವಾಗಿದೆ.

ನಂಬಿಕೆಯು ದೇವರಿಗೆ ಮೆಚ್ಚಿಕೆಯಾದ ಜೀವನವನ್ನು ನಡೆಸುವ ಏಕೈಕ ಮಾರ್ಗವಾಗಿದೆ. ನಮ್ಮ ಉದ್ದೇಶಗಳಿಗಾಗಿ "ನಮ್ಮ ನಂಬಿಕೆಯನ್ನು ಬಳಸಿಕೊಳ್ಳುವ" ಬದಲು, ಅದು ನಮ್ಮ ಜೀವನವನ್ನು ಆಳುವಂಥದ್ದಾಗಿರಬೇಕು. ನಮ್ಮ ಜೀವನದಲ್ಲಿನ ಆತನ ಉದ್ದೇಶಗಳನ್ನು ನೆರವೇರಿಸಲು ದೇವರು ನಮಗೆ ಕೊಟ್ಟಿರುವ ನಂಬಿಕೆಯಿಂದ ನಾವು ನಡೆಯಬೇಕು.

ಗಲಾತ್ಯ ಪತ್ರಿಕೆಯಲ್ಲಿ ಅಪೊಸ್ತಲನಾದ ಪೌಲನು ಹೀಗೆ ಬರೆದಿದ್ದಾನೆ,

**ಇದಲ್ಲದೆ ಕರ್ಮಮಾರ್ಗದಿಂದ ಯಾವನೂ ದೇವರ ಸನ್ನಿಧಿಯಲ್ಲಿ ನೀತಿವಂತನಾಗುವದಿಲ್ಲವೆಂಬದು ಸ್ಪಷ್ಟವಾಗಿದೆ. ಯಾಕಂದರೆ ನೀತಿವಂತನು ನಂಬಿಕೆಯಿಂದಲೇ ಬದುಕುವವೆಂದು ಬರೆದದೆ (ಗಲಾತ್ಯ 3:11).**

ಧರ್ಮಶಾಸ್ತ್ರವು ರಕ್ಷಣೆಯನ್ನು ಉಂಟುಮಾಡಲು ಸಾಧ್ಯವಿಲ್ಲ ಎಂದು ಪೌಲನು ಸ್ಪಷ್ಟಪಡಿಸಿದ್ದಾನೆ. ಅದನ್ನು ನಂಬಿಕೆಯಿಂದ ಮಾತ್ರವೇ ಪಡೆದುಕೊಳ್ಳಬಹುದು. ಅವನು 2 ಕೊರಿಂಥ 5:7 ರಲ್ಲಿ ನಾವು ನೋಡುವವರಾಗಿ ನಡೆಯದೇ ನಂಬುವವರಾಗಿಯೇ ನಡೆಯುತ್ತೇವೆ ಎಂದು ನಮಗೆ ಪ್ರಬೋಧಿಸಿದ್ದಾನೆ.

ಇಬ್ರಿಯ ಪುಸ್ತಕದ ಲೇಖಕನು ಹೀಗೆ ಬರೆದಿದ್ದಾನೆ,

ಆದರೆ ನನ್ನವನಾಗಿರುವ ನೀತಿವಂತನು ನಂಬಿಕೆಯಿಂದಲೇ ಬದುಕುವನು… (ಇಬ್ರಿಯ 10:38 ಎ).

### ಆತ್ಮ ಮಂಡಲದಲ್ಲಿ

ರಕ್ಷಣೆಯನ್ನು ಹೊಂದುವ ಕ್ಷಣದವರೆಗೂ, ನಮ್ಮೊಳಗಿನ ಅಂತರ್ಯ-ಮನುಷ್ಯನು ಸತ್ತವನಾಗಿರುತ್ತಾನೆ (ಅಥವಾ ಜಡವಾಗಿರುತ್ತಾನೆ). ಆದರೆ ರಕ್ಷಣೆ ಹೊಂದುವ ಸಮಯದಲ್ಲಿ, ನಮ್ಮ ಆತ್ಮಗಳು ಜೀವಿಸುವವುಗಳಾಗುತ್ತವೆ. ನಾವು ಹೊಸ ಸ್ವರೂಪವನ್ನು ಅಂದರೆ ಅಂತರ್ಯ-ಮನುಷ್ಯನನ್ನು ಹೊಂದಿಕೊಳ್ಳುತ್ತೇವೆ.

ನಮ್ಮ ಸ್ವಾಭಾವಿಕ ಇಂದ್ರಿಯಗಳು ಆತ್ಮಕ್ಕೆ ಸಂಬಂಧಪಟ್ಟ ವಿಷಯಗಳ ವಿರುದ್ಧ ಹೋರಾಡುತ್ತವೆ. ಆತ್ಮ ಮಂಡಲದಲ್ಲಿನ ವಿಷಯಗಳನ್ನು ಸ್ವಾಭಾವಿಕ ಮನಸ್ಸಿನಿಂದ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಅವುಗಳನ್ನು ಮನುಷ್ಯನ ಕೈಗಳಿಂದ ಮುಟ್ಟಲಾಗುವುದಿಲ್ಲ.

ನಾವು ನಮ್ಮ ಸ್ವಾಭಾವಿಕ ಮನಸ್ಸಿನಿಂದ ದೇವರ ವಾಕ್ಯವನ್ನು ಧ್ಯಾನಿಸುವಾಗ, ನಮ್ಮ ಅಂತರ್ಯ-ಮನುಷ್ಯನು ನಂಬಿಕೆಯಿಂದ ಕೈಚಾಚಿ ಅದನ್ನು ಪಡೆದುಕೊಳ್ಳುತ್ತಾನೆ. ನಮ್ಮ ಅಂತರ್ಯ-ಮನುಷ್ಯನಿಗೆ ಅಸಾಧಾರಣತೆಯ ಬಗ್ಗೆ ತಿಳಿದಿದೆ, ಮತ್ತು ಅದು ದೇವರ ವಾಕ್ಯವನ್ನು ವಿಭಿನ್ನ ರೀತಿಯಲ್ಲಿ ಅರ್ಥಮಾಡಿಕೊಳ್ಳುತ್ತದೆ - ಆತ್ಮದಿಂದ ಆತ್ಮವು ಅರ್ಥಮಾಡಿಕೊಳ್ಳುತ್ತದೆ.

ನಂಬಿಕೆಯು ಆತ್ಮದ ಮಂಡಲದಲ್ಲಿದೆ. ಅದು ಮನಸ್ಸಿನ ಉತ್ಪನ್ನವಲ್ಲ. ದೇವರು ಮನುಷ್ಯರನ್ನು ತ್ರಿತಯ ಜೀವಿಯಾಗಿ ಸೃಷ್ಟಿಸಿದನು. ಅಪೊಸ್ತಲನಾದ ಪೌಲನು ಹೀಗೆ ಬರೆದಿದ್ದಾನೆ,

**ಶಾಂತಿದಾಯಕವಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರಮಾಡಲಿ. ಕರ್ತನಾದ ಯೇಸು ಕ್ರಿಸ್ತವು ಪ್ರತ್ಯಕ್ಷನಾದಾಗ ನಿಮ್ಮ ಆತ್ಮ ಪ್ರಾಣ ಶರೀರಗಳು ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ (1 ಥೆಸಲೋನಿಕ 5:23).**

ನಾವು ಆತ್ಮ (ಹೃದಯ), ಪ್ರಾಣ (ಮನಸ್ಸು) ಮತ್ತು ದೇಹ (ಮಾಂಸ) ಉಳ್ಳವರಾಗಿದ್ದೇವೆ. ಈ ಪದಗಳನ್ನು ಅದಲು ಬದಲು ಮಾಡಿ ಉಪಯೋಗಿಸಬಹುದು - ಆತ್ಮ ಮತ್ತು ಹೃದಯ - ಪ್ರಾಣ ಮತ್ತು ಮನಸ್ಸು - ದೇಹ ಮತ್ತು ಮಾಂಸ. ಸತ್ಯವೇದದಲ್ಲಿ, ಅವುಗಳ ಅರ್ಥವು ಅದೇ ರೀತಿಯಲ್ಲಿಯೇ ಇರುತ್ತದೆ. ಪೌಲನು ಬಳಸಿರುವ ಕ್ರಮವನ್ನು ಗಮನಿಸಿರಿ - ಮೊದಲು ಆತ್ಮ, ಅನಂತರ ಪ್ರಾಣ, ತದನಂತರ ದೇಹ. ಆತ್ಮವು ಹೇಳುವಂಥದ್ದನ್ನು ಮನಸ್ಸು ಕೇಳಿಸಿಕೊಳ್ಳಬೇಕು, ಅನಂತರ ದೇಹವು ಮನಸ್ಸು ಹೇಳುವಂಥದ್ದನ್ನು ಮಾಡಬೇಕು.

ಶಕ್ತಿಯುತ ವಿಶ್ವಾಸಿಗಳಾಗಿರಲು, ನಮ್ಮ ಆತ್ಮಗಳು ಮನಸ್ಸು ಮತ್ತು ದೇಹವನ್ನು ಅಧೀನದಲ್ಲಿಟ್ಟುಕೊಳ್ಳಬೇಕು.

ದೇವರು ಆತ್ಮಸ್ವರೂಪನು ಮತ್ತು ನಾವು ನೋಡುವವರಾಗಿ ನಡೆಯದೇ ನಂಬಿಕೆಯಿಂದ ನಡೆಯುವುದನ್ನು ಕಲಿತುಕೊಳ್ಳಬೇಕು. ನಾವು ನೈಸರ್ಗಿಕ ಮಂಡಲದಿಂದ ಆತ್ಮ ಮಂಡಲಕ್ಕೆ ಸಾಗಬೇಕು. ಅಪೊಸ್ತಲನಾದ ಪೌಲನು ಈ ಸತ್ಯವನ್ನು ಪದೇ ಪದೇ ಬರೆದಿದ್ದಾನೆ. ರೋಮಾಪುರದ ಪ್ರತಿಕೆಯಲ್ಲಿ ಅವನು ಹೀಗೆ ಬರೆದಿದ್ದಾನೆ,

**ನೀವಾದರೂ ನಿಮ್ಮಲ್ಲಿ ದೇವರ ಆತ್ಮನು ವಾಸವಾಗಿರುವದಾದರೆ ಶರೀರಭಾವಾದೀನರಲ್ಲ. ದೇವರಾತ್ಮನಿಗೆ ಅಧೀನರಾಗಿದ್ದೀರಿ. (ರೋಮಾಪುರ 8:9).**

ಮತ್ತು ಕೊರಿಂಥದವರಲ್ಲಿ ಅವನು ಹೀಗೆ ಬರೆದಿದ್ದಾನೆ

**ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳುಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು (1 ಕೊರಿಂಥ 2:12).**

## ನಂಬಿಕೆ ಎಂದರೆ ಯಾವುದಲ್ಲ

ಕೆಲವೊಮ್ಮೆ ಒಂದು ವಿಷಯವು ಏನಲ್ಲ ಎಂಬುದನ್ನು ನೋಡಿಕೊಳ್ಳುವಂಥದ್ದು ಅದು ಏನಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿರುತ್ತದೆ. ನಂಬಿಕೆಯ ಎಂದರೆ ದೇವರು ನಮ್ಮ ಪರವಾಗಿ ಕಾರ್ಯಮಾಡುವವರೆಗೂ ನಮ್ಮ ಸ್ವಂತ ಪ್ರಯತ್ನಗಳ ಮೇಲೆ ಅವಲಂಬಿತರಾಗಿರುವುದಲ್ಲ. ನಂಬಿಕೆ ಎಂದರೆ ದೇವರನ್ನು ಹಾಗೂ ನಮ್ಮ ಜೀವನದ ಕುರಿತಾಗಿರುವ ಆತನ ಚಿತ್ತವನ್ನು ತಿಳಿದುಕೊಳ್ಳುವುದು, ಮತ್ತು ಆತನು ಹೇಳಿದ್ದನ್ನು ಆತನು ಮಾಡುತ್ತಾನೆಂದು ತಿಳಿದುಕೊಳ್ಳುವುದರ ಮೂಲಕ ಉಂಟಾಗುವ ಸಂತೋಷಭರಿತವಾದ ನಿರೀಕ್ಷೆಯು ಆಗಿದೆ.

ನಂಬಿಕೆಯು ನಾವು ನಮ್ಮ ವೈಯಕ್ತಿಕ ಆಸೆಗಳನ್ನು ದೇವರಿಂದ ಪಡೆದುಕೊಳ್ಳುವುದಕ್ಕಿರುವ ಮಂತ್ರವಲ್ಲ. ಅದಕ್ಕೆ ಬದಲಾಗಿ, ನಂಬಿಕೆ ಎಂದರೆ ದೃಢವಾದ ಆತ್ಮವಿಶ್ವಾಸ, ನಮ್ರತೆ ಮತ್ತು ಅಧೀನತೆಯ ಮೂಲಕ ದೇವರ ಬಳಿಗೆ ಬರುವುದು, ಆತನು ನಮ್ಮ ಕುರಿತಾಗಿಟ್ಟಿರುವ ಉದ್ದೇಶವನ್ನು ನೆರವೇರಿಸಲು - ಆತನು ನಮಗೆ ನಿಯೋಜಿಸಿರುವ ನಿಯೋಗವನ್ನು/ಮಿಷನ್ ಅನ್ನು ನಿರ್ವಹಿಸಲು ಮತ್ತು ನಮ್ಮ ಜೀವನದ ಕುರಿತಾಗಿ ಆತನು ತನ್ನ ವಾಕ್ಯದಲ್ಲಿ ವಾಗ್ದಾನ ಮಾಡಿರುವ ಸಂಪೂರ್ಣತೆಯಲ್ಲಿ ನಡೆಯಲು ಅಗತ್ಯವಾದ ಆಶೀರ್ವಾದವನ್ನು ಬೇಡಿಕೊಳ್ಳುವುದು ಆಗಿದೆ.

## ಬೌದ್ಧಿಕ ನಂಬಿಕೆ

ನಂಬಿಕೆ ಮತ್ತು ನಂಬುವುದು ಎರಡು ಒಂದೇ ಅಲ್ಲ. ಒಬ್ಬ ವ್ಯಕ್ತಿಯು ಯೇಸು ದೇವರ ಮಗನೆಂದು ತಮ್ಮ ಮನಸ್ಸಿನಿಂದ ನಂಬಬಹುದು, ಆದರೆ ಅವರು ತಮ್ಮ ಹೃದಯದಿಂದ ಎಂದಿಗೂ ನಂಬುವುದಿಲ್ಲ ಮತ್ತು ತಮ್ಮ ಜೀವನದಲ್ಲಿ ಆತನು ಬರುವಂತೆ ಆತನನ್ನು ಬೇಡಿಕೊಳ್ಳುವುದಿಲ್ಲ ಮತ್ತು ರಕ್ಷಣೆಯನ್ನು ಹೊಂದಿಕೊಳ್ಳುವುದಿಲ್ಲ.

ನಂಬಿಕೆಯು ಧರ್ಮಶ್ರದ್ಧೆಯ ನಂಬಿಕೆಗಳಿಗಿಂತ ಮೀಗಿಲಾದ ಹೆಜ್ಜೆಯಾಗಿದೆ. ನಂಬಿಕೆಯು ಧರ್ಮಶ್ರದ್ಧೆಯ ನಂಬಿಕೆಗಳನ್ನು ಕಾರ್ಯರೂಪಕ್ಕೆ ತರುತ್ತದೆ.

ಬುದ್ಧಿಯಿಂದ ದೇವರ ವಾಕ್ಯವನ್ನು ತಿಳಿದುಕೊಳ್ಳುವುದು - ದೇವರ ವಾಕ್ಯವನ್ನು ನಂಬುವುದು, ಮತ್ತು ದೇವರ ವಾಕ್ಯದಲ್ಲಿ ನಂಬಿಕೆಯಿಡುವಂಥ ಹಾಗೂ ಆ ನಂಬಿಕೆಯನ್ನು ಕಾರ್ಯರೂಪಕ್ಕೆ ತರುವಂಥ ಸಂಗತಿಯು ಎರಡು ಒಂದೇ ಅಲ್ಲ. ನಂಬಿಕೆಯೋ ನಾವು ನಂಬಿರುವಂಥದ್ದರ ಪ್ರಕಾರ ಕಾರ್ಯಮಾಡುವುದಾಗಿದೆ. ನಂಬಿಕೆಯು ಬೌದ್ಧಿಕತೆಯಿಂದ ಆತ್ಮ ಮಂಡಲಕ್ಕೆ ನಮ್ಮನ್ನು ನಡೆಸುತ್ತದೆ.

ವಾಕ್ಯವನ್ನು ನಂಬುವುದು ಸಾಮಾನ್ಯವಾದ ರೀತಿಯಾಗಿರಬಹುದು, ಆದರೆ ನಂಬಿಕೆಯು ನಿರ್ದಿಷ್ಟವಾಗಿರುವಂಥದ್ದಾಗಿರುತ್ತದೆ.

## ನಿರೀಕ್ಷೆ

ಕೆಲವರು ತಮ್ಮ ಪ್ರಾರ್ಥನೆಗೆ ಉತ್ತರವನ್ನು ಸಿಗದಿದ್ದಾಗ, ಅವರು ದೇವರ ವಾಕ್ಯವು ಸತ್ಯವೋ ಅಲ್ಲವೋ ಎಂದು ಸಂದೇಹಪಡಲು ಪ್ರಾರಂಭಿಸುತ್ತಾರೆ. ಆದರೆ ದೇವರ ವಾಕ್ಯವು ಯಾವಾಗಲೂ ಮತ್ತು ಎಂದೆಂದಿಗೂ ಸತ್ಯವಾಗಿರುತ್ತದೆ. ಇದನ್ನು ಕಾಂಕ್ರೀಟ್‌ಗಿಂತ ಹೆಚ್ಚು ದೃಢವಾದ ವಸ್ತುವಿನಲ್ಲಿ ಬರೆಯಲಾಗಿದೆ. ಇದು ಎಂದಿಗೂ ಬದಲಾಗುವುದಿಲ್ಲ. ಆದ್ದರಿಂದ, ನಮ್ಮ ಪ್ರಾರ್ಥನೆಗೆ ನಮಗೆ ಉತ್ತರ ಸಿಗದೇ ಇರುವುದಾದರೆ, ನಾವು ಬದಲಾಗಬೇಕಾಗಿದೆ. ಪ್ರಾರ್ಥನೆಗಳಿಗೆ ಉತ್ತರ ಸಿಗದಿರುವುದಕ್ಕಿರುವ ಸಾಮಾನ್ಯ ಕಾರಣವೆಂದರೆ ಜನರು ನಿರೀಕ್ಷೆಯಲ್ಲಿ ಕಾರ್ಯಮಾಡುತ್ತಿದ್ದಾರೆ.

ನಂಬಿಕೆ ಮತ್ತು ನಿರೀಕ್ಷೆ ಎರಡು ಒಂದೇ ಅಲ್ಲ. ನಿರೀಕ್ಷೆಯು ಒಳ್ಳೆಯದು. ಇದು ನಂಬಿಕೆಗೆ ಮುಂಚಿತವಾಗಿ ಬರುತ್ತದೆ. ಆದರೆ ಭವಿಷ್ಯದಲ್ಲಿ ಏನಾದರೂ ಆಗಬಹುದೆಂದು ನಿರೀಕ್ಷಿಸುವ ಸ್ಥಳದಲ್ಲಿ ನಾವು ಇನ್ನೂ ಇರುವುದಾದರೆ, ಈಗ ನಾವು ನಮ್ಮ ಅದ್ಭುತವನ್ನು ಪಡೆದುಕೊಳ್ಳದಂತೆ ನಾವೇ ತಡೆಯುತ್ತಿದ್ದೇವೆ. "ನಿರೀಕ್ಷೆಯು ವೇದಿಕೆಯನ್ನು ಸಿದ್ಧಪಡಿಸುತ್ತದೆ, ಮತ್ತು ನಂಬಿಕೆಯು ಫಲಿತಾಂಶವನ್ನು ಉಂಟುಮಾಡುತ್ತದೆ" ಎಂದು ಹೇಳಲಾಗಿದೆ.

ಯೇಸು ಹೇಳಿದ್ದೇನೆಂದರೆ,

**''ಆದಕಾರಣ ನೀವು ಪ್ರಾರ್ಥನೆ ಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ. ಅದು ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ'' (ಮಾರ್ಕ 11:24).**

ಭವಿಷ್ಯದಲ್ಲಿ ಅವುಗಳು ನಿಮಗೆ ಸಿಕ್ಕುವವು ಎಂದು ನಂಬಿರಿ ಎಂದು ಯೇಸು ಹೇಳಲಿಲ್ಲ ಎಂಬುದನ್ನು ಗಮನಿಸಿರಿ. ಆತನು ವರ್ತಮಾನ ಕಾಲದ ರೂಪದಲ್ಲಿ, "ನಿಮಗೆ ಅವುಗಳು ಸಿಕ್ಕುವವು ಎಂದು ನಂಬಿರಿ" ಎಂದು ಹೇಳಿದನು.

ನಿರೀಕ್ಷೆಯು ಭವಿಷ್ಯದ ಮೇಲೆ ಅವಲಂಬಿತವಾಗಿದೆ. ವಾಕ್ಯವು ಏನು ಹೇಳುತ್ತದೆ ಎಂಬುದನ್ನು ತಿಳಿದುಕೊಳ್ಳುವ ಮೂಲಕ ನಿರೀಕ್ಷೆಯು ಬರುತ್ತದೆ. ಮುಂದೆ ಎಂದೋ ಒಂದು ದಿನ ನಮಗೆ "ಸಿಕ್ಕುತ್ತದೆ" ಎಂದು ನಿರೀಕ್ಷೆಯು ನಂಬುತ್ತದೆ.

ಪವಿತ್ರಾತ್ಮನು ದೇವರ ವಾಕ್ಯವನ್ನು ನಮ್ಮ ಆತ್ಮಗಳೊಂದಿಗೆ ವೈಯಕ್ತಿಕವಾಗಿ ಮಾತನಾಡುವ ವಾಕ್ಯವನ್ನಾಗಿ ಮಾಡುವ ಮೂಲಕ ನಂಬಿಕೆ ಬರುವಾಗ, ನಾವು ಅವುಗಳನ್ನು ಪಡೆದುಕೊಳ್ಳುತ್ತೇವೆ ಮತ್ತು ನಾವು ಅವುಗಳನ್ನು ಹೊಂದಿಕೊಳ್ಳುತ್ತೇವೆ ಎಂದು ನಾವು ದಿಢೀರನೇ ನಂಬುತ್ತೇವೆ. ನಾವು ಭವಿಷ್ಯದ ನಿರೀಕ್ಷೆಯಿಂದ ಇಂದಿನ ನಂಬಿಕೆಯತ್ತ ಸಾಗಿದ್ದೇವೆ. ನಾವು ಹೊಂದಿಕೊಳ್ಳುತ್ತೇವೆ ಎಂದು ನಾವು ನಂಬುತ್ತೇವೆ!

ಸತ್ಯವೇದದಲ್ಲಿ ನಂಬಿಕೆಯ ಕುರಿತಾಗಿರುವ ದೊಡ್ಡ ಅಧ್ಯಾಯವು ಇಬ್ರಿಯ ಪುಸ್ತಕದ 11 ನೇ ಅಧ್ಯಾಯವಾಗಿದೆ. ಅನೇಕ ಅನುವಾದಗಳಲ್ಲಿ, ಈ ಅಧ್ಯಾಯವು "ಈಗ ನಂಬಿಕೆಯೋ" ಎಂಬ ಪದಗಳಿಂದ ಪ್ರಾರಂಭವಾಗುತ್ತದೆ. ನಂಬಿಕೆ ಎಂಬುದೋ ಈಗ ಇರುವಂಥಾದ್ದಾಗಿದೆ!

**ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳಿದುಕೊಳ್ಳವದೂ ಆಗಿದೆ (ಇಬ್ರಿಯ 11:1).**

ನಂಬಿಕೆಯು ನಮ್ಮ ಆತ್ಮಗಳಲ್ಲಿ ಚಿಮ್ಮುವಾಗ, ನಾವು ನಿರೀಕ್ಷಿಸುತ್ತಿರುವ ವಿಷಯಗಳು ನಿಜವಾಗಿ ಮಾರ್ಪಾಡುತ್ತವೆ. ಬಹುಶಃ ನಾವು ಆ "ನಿಜವನ್ನು" ನಮ್ಮ ಸ್ವಾಭಾವಿಕ ಕಣ್ಣುಗಳಿಂದ ಕಂಡಿಲ್ಲ, ಆದರೆ ನಾವು ಅದನ್ನು ನಮ್ಮ ಆತ್ಮಿಕ ಕಣ್ಣುಗಳಿಂದ ಕಂಡಿದ್ದೇವೆ.

ರಕ್ತ ಕುಸುಮ ರೋಗದ ಸಮಸ್ಯೆಯಿದ್ದ ಸ್ತ್ರೀಯು ಯೇಸುವಿನ ಮತ್ತು ಆತನ ಗುಣಪಡಿಸುವ ಶಕ್ತಿಯ ಕುರಿತು ಕೇಳಿಸಿಕೊಂಡಳು. ಅವಳು ಯೇಸುವಿನ ಬಗ್ಗೆ ಕೇಳಿದಾಗ, ಅವಳ ಆತ್ಮದಲ್ಲಿ ನಂಬಿಕೆಯು ದೇವರಿಂದ ಬರುವ ವರದ ರೀತಿಯಲ್ಲಿ ಬಂತು. "ಮುಂದೆ ಭವಿಷ್ಯದಲ್ಲಿ ಯಾವುದೋ ಒಂದು ಸಮಯದಲ್ಲಿ..." ಎಂದು ಅವಳು ಹೇಳಲಿಲ್ಲ.

ಅವಳು ಅದಕ್ಕೊಂದು ಸಮಯವನ್ನು ಇಟ್ಟಳು. ಅವಳು ಹೀಗೆ ಹೇಳಿದಳು, "ನಾನು ಆತನ ಉಡುಪನ್ನು ಮುಟ್ಟಿದರೆ ಸಾಕು ನೆಟ್ಟಗಾಗುವೆನು."

ಅವಳನ್ನು ತಡೆಯಲಾಗಲಿಲ್ಲ. ಅವಳು ಜನಸಮೂಹದ ನಡುವೆ ನುಗ್ಗಿ ದಾರಿಮಾಡಿಕೊಂಡು ಹೋದಳು, ಆತನ ಉಡುಪಿನ ತುದಿಯನ್ನು ಮುಟ್ಟಿದಳು, ಮತ್ತು ಅವಳು ಸ್ವಸ್ಥಳಾದ್ದಳು. ಯೇಸು ಹೀಗೆ ಹೇಳಿದನು,

"ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿತು" (ಮತ್ತಾಯ 9:21-22).

**ನಿರೀಕ್ಷೆಯು ಭವಿಷ್ಯದಲ್ಲಿದೆ.**

**~ ನಂಬಿಕೆಯೋ ಈಗ ಇರುವಂಥದ್ದಾಗಿದೆ.**

**"ನಾನು ಅದನ್ನು ಯಾವುದೋ ಒಂದು ಸಮಯದಲ್ಲಿ ಹೊಂದಿಕೊಳ್ಳುತ್ತೇನೆ" ಎಂದು ನಿರೀಕ್ಷೆಯು ಹೇಳುತ್ತದೆ.**

**~ "ನಾನು ಈಗ ಅದನ್ನು ಹೊಂದಿಕೊಂಡಿದ್ದೇನೆ" ಎಂದು ನಂಬಿಕೆ ಹೇಳುತ್ತದೆ,**

**"ಕೆಲವರನ್ನು ಗುಣಪಡಿಸುವುದು ದೇವರ ಚಿತ್ತವಾಗಿದೆ ಎಂದು ನನಗೆ ತಿಳಿದಿದೆ, ಆದ್ದರಿಂದ ಆತನು ನನ್ನನ್ನು ಗುಣಪಡಿಸುತ್ತಾನೆ" ಎಂದು ನಿರೀಕ್ಷೆಯು ಹೇಳುತ್ತದೆ.**

**~ "ನಾನು ಆತನನ್ನು ಮುಟ್ಟಿದ ಕ್ಷಣದಲ್ಲಿಯೇ..." ಎಂದು ನಂಬಿಕೆಯು ಹೇಳುತ್ತದೆ,**

ನಿರೀಕ್ಷೆಯ ಸ್ಥಳದಲ್ಲಿ ಇರುವುದು ನಂಬಿಕೆಗೆ ಬದಲಿಯಾದ ಸಂಗತಿ ಆಗಬಹುದು ಮತ್ತು ನಂಬಿಕೆ ಉಳ್ಳವರಾಗದಂತೆ ಅದು ನಮ್ಮನ್ನು ವಂಚಿಸಬಹುದು.

**ಕಲಿತ ಜ್ಞಾನ**

ಕಲಿತ ಜ್ಞಾನ ಎಂದರೆ ನಾವು ಅಧ್ಯಯನದಿಂದ, ಅನುಭವದಿಂದ ಮತ್ತು ಇತರರಿಂದ ಕಲಿತಂಥ ಜ್ಞಾನವಾಗಿದೆ. ಈ ಜ್ಞಾನವನ್ನು "ಸಂಸ್ಕರಿಸಿದ ಸತ್ಯ" ಎಂದೂ ಕರೆಯಲಾಗುತ್ತದೆ. ಸಂಸ್ಕರಿಸಿದ ಸತ್ಯದ - ಅಥವಾ ಸತ್ಯದ ಕುರಿತಿರುವ ಸ್ವಾರಸ್ಯಕರ ವಿಷಯವೆಂದರೆ ನಾವು ಅದನ್ನು ಗ್ರಹಿಸಿಕೊಳ್ಳುವಾಗ - ನಾವು ಏಕ ಕಾಲದಲ್ಲಿ ಏಕ ವಿಷಯವನ್ನು ಮಾತ್ರ ನಂಬಬಹುದು.

ಉದಾಹರಣೆಗೆ, ನಾವು ಅಸ್ವಸ್ಥರಾಗಿರುವುದು ದೇವರ ಚಿತ್ತವಾಗಿರಬಹುದು ಎಂದು ನಾವು ಭಾವಿಸಿದರೆ, ನಾವು ಸ್ವಸ್ಥರಾಗುವೆವು ಎಂದು ನಾವು ನಂಬಲು ಸಾಧ್ಯವಿಲ್ಲ.

ಅನೇಕ ವರ್ಷಗಳಿಂದ ನಾವೆಲ್ಲರೂ ಅಪಾರ ಪ್ರಮಾಣದ ಕಲಿತ ಜ್ಞಾನವನ್ನು ಗಳಿಸಿಕೊಂಡಿದ್ದೇವೆ ಮತ್ತು ಈ ಜ್ಞಾನವು ಸತ್ಯವಾಗಿರಬಹುದು ಅಥವಾ ಸುಳ್ಳಾಗಿರಬಹುದು. ನಾವು ಕಲಿತುಕೊಳ್ಳುವ ಮನೋಭಾವ ಉಳ್ಳವರಾಗಿರುವುದು ಮತ್ತು ದೇವರ ವಾಕ್ಯದಿಂದ ದೊರಕುವ ಪ್ರಕಟಣೆಯನ್ನು ಸ್ವೀಕರಿಸಲು ತೆರೆದ ಮನುಸ್ಸುಳ್ಳವರಾಗಿರುವುದು ಮುಖ್ಯವಾಗಿದೆ.

ಅನೇಕರು ಸಭೆಗಳಲ್ಲಿ ಬೆಳೆದಿದ್ದಾರೆ, ಅಥವಾ ಪವಿತ್ರಾತ್ಮನ ಕೆಲವು ವರಗಳು ಬೇರೊಂದು ಸಮಯಕ್ಕೆ ಅಥವಾ ಯುಗಕ್ಕೆ ಇರುವಂಥಗಳು ಎಂದು ಕಲಿಸುವ ಸತ್ಯವೇದ ಅಧ್ಯಯನದ ಶಾಲೆಗಳಿಗೆ ಹೋಗಿದ್ದಾರೆ. ಈ ಜನರು ಜೀವನದಲ್ಲಿ ಪರೀಕ್ಷೆಗಳನ್ನು ಎದುರಿಸುವಾಗ, ಪವಿತ್ರಾತ್ಮನ ಅದ್ಭುತಕರವಾದ ವರಗಳ ಮೂಲಕ ದೇವರು ಇಂದು ಅವರೊಂದಿಗೆ ಮಾತನಾಡಲು ಬಯಸುತ್ತಾನೆ ಎಂದು ಅವರು ಅರ್ಥಮಾಡಿಕೊಳ್ಳದಿರಬಹುದು. ಅವರ ರಕ್ಷಣೆಯು ದೇವರೊಂದಿಗಿನ ವೈಯಕ್ತಿಕ, ದೈನಂದಿನ ಸಂಬಂಧವನ್ನು - ಬಿಡುಗಡೆಯನ್ನು - ಗುಣಪಡಿಸುವಿಕೆಯನ್ನು - ಕರ್ತನೊಂದಿಗಿನ ಅವರ ನಡಿಗೆಯಲ್ಲಿ ಅವರಿಗೆ ಅಗತ್ಯವಿರುವ ಎಲ್ಲವನ್ನೂ ಒದಗಿಸುತ್ತದೆ ಎಂದು ಅವರು ತಿಳಿದುಕೊಳ್ಳದಿರಬಹುದು.

ಅವರು ಮಾನಸಿಕ ಜ್ಞಾನವನ್ನು ಹೊಂದಿರಬಹುದು ಮತ್ತು ದೇವರ ವಾಕ್ಯವನ್ನು ಉಲ್ಲೇಖಿಸುವಷ್ಟು ಶಕ್ತರಾಗಿರಬಹುದು, ಆದರೆ ಆ ವಾಕ್ಯದ ಅತ್ಯಮೋಘ ಶಕ್ತಿಯನ್ನು ಅನುಭವಿಸಿಲ್ಲ.

ಅವರು ಎರಡನೇ ತಿಮೊಥೆಯ ಪುಸ್ತಕದಲ್ಲಿ ವಿವರಿಸಿರುವ ಜನರಂತೆ ಇರುವರು -

**ಭಕ್ತಿಯ ವೇಷವಿದ್ದು ಅದರ ಬಲವನ್ನು ಬೇಡವೆನ್ನುವವರೂ ಆಗಿರುವರು ಇಂಥವರ ಸಹವಾಸವನ್ನೂ ಮಾಡದಿರು (2 ತಿಮೊಥೆ 3:5).**

ದೇವರು ಅವರಿಗಾಗಿ ಇಟ್ಟಿರುವ ವೈಯಕ್ತಿಕ ಸಂಬಂಧದ ಕೊರತೆಯು ಅವರಿಗಿದೆ. ಕಲಿತ ಜ್ಞಾನ, ಸಂಸ್ಕರಿಸಿದ ಸತ್ಯದ ಮೂಲಕ, ಅವರ ಕಣ್ಣುಗಳು ದೇವರ ವಾಕ್ಯದ ನಿಜವಾದ ಅರ್ಥವನ್ನು ಕಾಣದಂತೆ ಕುರುಡಾಗಿವೆ.

ಪೌಲನು ಈ ಕೆಳಗಿನ ವಾಕ್ಯದಲ್ಲಿ ಬರೆದಿರುವುದರ ಅರ್ಥವೇನೆಂದು ಅವರು ಅರ್ಥಮಾಡಿಕೊಳ್ಳುವುದಿಲ್ಲ,

**ನಮ್ಮಲ್ಲಿ ಕಾರ್ಯ ಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾದದ್ದನ್ನು (ಎಫೆಸ 3:20).**

ಕಲಿತ ಜ್ಞಾನವು ಇತರರು ಬೋಧಿಸುವಂಥದ್ದರ ಮೂಲಕ ಉಂಟಾಗುವ ಹೆಚ್ಚಿನ ಮನವರಿಕೆಯಿಂದ ನಾವು ಪದೇ ಪದೇ ಮಾಡಬಹುದಾದ ಸಂಗತಿಯಾಗಿರಬಹುದು, ಆದರೆ ನಾವು ಅದನ್ನು ಎಂದಿಗೂ ಅನುಭವಿಸದಿದ್ದರೆ, ಅದು ನಿಜವೆಂದು ನಮಗೆ ತಿಳಿಯುವುದೇ ಇಲ್ಲ.

ಮನುಷ್ಯನ ಜ್ಞಾನವು ದೇವರ ಜ್ಞಾನಕ್ಕೆ ತದ್ವಿರುದ್ಧವಾಗಿರುತ್ತದೆ.

ನಿಜವಾಗಿಯೂ ದೇವರ ವಾಕ್ಯವು ಏನು ಹೇಳುತ್ತದೆ ಎಂಬುದನ್ನು ವಿಶ್ವಾಸಿಗಳು ತಿಳಿದುಕೊಳ್ಳಬೇಕು ಹೊರತು ಒಬ್ಬ ವ್ಯಕ್ತಿಯು ಏನು ಹೇಳುತ್ತಾನೆಂಬುದನ್ನು ತಿಳಿದುಕೊಳ್ಳಬಾರದು. ಆಗ ಪವಿತ್ರಾತ್ಮನು ವಾಕ್ಯವನ್ನು ತೆಗೆದುಕೊಂಡು ಅವರಿಗೆ ಪ್ರಕಟಿಸಿಕೊಡುತ್ತಾನೆ. ಆಗ ಅವರು ತಮ್ಮ ಜ್ಞಾನದಲ್ಲಿ ಅಲ್ಲ, ಆದರೆ ಆತನ ವಾಕ್ಯದಲ್ಲಿ ನಂಬಿಕೆ ಉಳ್ಳವರಾಗಿರುತ್ತಾರೆ. ಪವಿತ್ರಾತ್ಮನು ಬರುವಾಗ, ಆತನು ವಾಕ್ಯವನ್ನು ತೆಗೆದುಕೊಂಡು ದೇವರ ನಿತ್ಯವಾದ ಸತ್ಯಗಳನ್ನು ಅವರಿಗೆ ಪ್ರಕಟಪಡಿಸಿ ಕೊಡುತ್ತಾನೆ.

ದೇವರ ವಾಕ್ಯದ ಕುರಿತು ಒಬ್ಬನಿಗಿರುವ ಜ್ಞಾನವನ್ನು ಮೀರಿ ನಂಬಿಕೆಯು ಕಾರ್ಯಮಾಡುವುದಿಲ್ಲ. ನಿಜವಾದ ನಂಬಿಕೆಯು ಯಾವಾಗಲೂ ಆತನ ವಾಕ್ಯದ ಮೇಲೆ ಆಧಾರಗೊಂಡಿರುತ್ತದೆ. ನಾವು ಎಷ್ಟು ಹೆಚ್ಚಾಗಿ ವಾಕ್ಯವನ್ನು ಅಧ್ಯಯನ ಮಾಡುತ್ತೇವೋ; ಅಷ್ಟು ಹೆಚ್ಚಾಗಿ ಪವಿತ್ರಾತ್ಮನು ಅದನ್ನು ನಮಗೆ ನಿಜವಾಗಿಸಲು ನಾವು ಅವಕಾಶ ಮಾಡಿಕೊಡುತ್ತೇವೆ ಮತ್ತು ನಮ್ಮ ನಂಬಿಕೆಯು ಅಷ್ಟು ಹೆಚ್ಚಾಗಿ ವೃದ್ಧಿಯಾಗುತ್ತದೆ.

ಅಪೊಸ್ತಲನಾದ ಪೌಲನು ಹೀಗೆ ಬರೆದಿದ್ದಾನೆ,

**ನನ್ನ ಪ್ರಾರ್ಥನೆಗಳಲ್ಲಿ ನಿಮಗೋಸ್ಕರ ವಿಜ್ಞಾಪನೆ ಮಾಡಿ – ನಮ್ಮ ಕರ್ತವಾದ ಯೇಸು ಕ್ರಿಸ್ತನ ದೇವರೂ ಪ್ರಭಾವಸ್ವರೂಪನಾದ ತಂದೆಯೂ ಆಗಿರುವಾತನು ತನ್ನ ವಿಷಯವಾಗಿ ತಿಳುವಳಿಕೆಯನ್ನು ಕೊಟ್ಟು ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥಗಳನ್ನು ತಿಳುಕೊಳ್ಳುವ ಜ್ಞಾನವುಳ್ಳ ಆತ್ಮವನ್ನು ನಿಮಗೆ ದಯಪಾಲಿಸಬೇಕೆಂದು**

**ಪ್ರಾರ್ಥಿಸುತ್ತೇನೆ. ಆತನು ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ ಆತನಿಂದ ಕರಿಸಿಕೊಂಡವರು ನಿರೀಕ್ಷಿಸುವ ಪದವಿ ಎಂಥದೆಂಬದನ್ನೂ ದೇವಜನರೆಂಬ ಆತನ ಸ್ವಾಸ್ಥ್ಯದ ಮಹಿಮಾತಿಶಯವು ಎಂಥದೆಂಬದನ್ನೂ ನಂಬುವವರಾದ ನಮ್ಮಲ್ಲಿ (ಎಫೆಸ 1:16-18).**

ನಂಬಿಕೆಯು ಮನುಷ್ಯನ ಬುದ್ಧಿ ಮತ್ತು ಜ್ಞಾನದಿಂದ ಬರುವುದಿಲ್ಲ, ಆದರೆ ನಮ್ಮ ಆತ್ಮದಲ್ಲಿ ಪ್ರಕಟವಾಗುವ ಪವಿತ್ರಾತ್ಮನ ಪ್ರಕಟಣೆಯಿಂದ ಬರುತ್ತದೆ.

**ಬುದ್ಧಿಯ ಫಲ**

ನಂಬಿಕೆಯು ಬುದ್ಧಿಯ ಫಲವಲ್ಲ. ಯೇಸು ಶಿಷ್ಯರಿಗೆ ಹೀಗೆ ಹೇಳಿದನು

**"ಆತನು ಅದನ್ನು ತಿಳಿದು ರೊಟ್ಟಿಯಿಲ್ಲವಲ್ಲಾ ಎಂದು ಮಾತಾಡಿಕೊಳ್ಳುವದೇಕೆ? ನೀವು ಇನ್ನೂ ಗ್ರಹಿಸಲಿಲ್ಲವೋ? ತಿಳುವಳಿಕೆ ಬರಲಿಲ್ಲವೋ?" (ಮಾರ್ಕ 8:17).**

ಬುದ್ಧಿ ಅಥವಾ ವಿವೇಚನೆ ಮೂಲಕ ನಾವು ಗ್ರಹಿಸುವಂಥದ್ದು ನಂಬಿಕೆಯಲ್ಲ.

ಸಾಮಾನ್ಯವಾಗಿ ನಂಬಿಕೆಯು ಬುದ್ಧಿಸಾಮರ್ಥ್ಯಕ್ಕೆ ತದ್ವಿರುದ್ಧವಾಗಿರುತ್ತದೆ. ಸ್ವಾಭಾವಿಕ ಮನುಷ್ಯನು "ನೋಡುವಂಥದ್ದು ನಂಬಿಕೆಯಾಗಿದೆ" ಎಂದು ಹೇಳುತ್ತಾನೆ. ದೇವರ ವಾಕ್ಯವು ಹೀಗೆ ಹೇಳುತ್ತದೆ,

"ನಂಬುವಂಥದ್ದು ನೋಡುವುದಾಗಿದೆ."

ದೇವರ ವಾಕ್ಯವು ಹೇಳುವುದೇನಂದರೆ,

**ಸ್ವಬುದ್ಧಿಯನ್ನೇ ಆಧಾರಮಾಡಿಕೊಳ್ಳದೆ ಪೂರ್ಣಮನಸ್ಸಿನಿಂದ ಯೆಹೋವನಲ್ಲಿ ಭರವಸವಿಡು (ಜ್ಞಾನೋಕ್ತಿ 3:5).**

ಕೈ ಬತ್ತಿಹೋಗಿದ್ದ ಮನುಷ್ಯನಿಗೆ ಕೈಯನ್ನು ಚಾಚುವಂತೆ ಯೇಸು ಆಜ್ಞಾಪಿಸಿದಾಗ, ಬುದ್ಧಿಯು "ನನಗೆ ಸಾಧ್ಯವಿಲ್ಲ" ಎಂದು ಹೇಳುತ್ತದೆ. ನಂಬಿಕೆಯು "ನಾನು ಮಾಡಬಲ್ಲೆ" ಎಂದು ಹೇಳುತ್ತದೆ ಮತ್ತು ಅವನು ಹಾಗೆ ಮಾಡಿದನು.

ಮದುವೆಯಲ್ಲಿ ದ್ರಾಕ್ಷಾರಸವು ಮುಗಿದುಹೋದಾಗ, ಬಾನೆಗಳಲ್ಲಿ ನೀರನ್ನು ತುಂಬಿಸಿ ಒಂದು ಬಟ್ಟಲಲ್ಲಿ ಅದನ್ನು ತೆಗೆದುಕೊಂಡು ಹೋಗಿ ಔತಣದ ಪಾರುಪತ್ಯಗಾರನಿಗೆ ಕೊಡುವಂತೆ ಯೇಸು ಸೇವಕರಿಗೆ ಹೇಳಿದಾಗ, ಬುದ್ಧಿಯು, "ಇಲ್ಲ! ನಾನು ಆ ನೀರನ್ನು ಪಾರುಪತ್ಯಗಾರನ ಬಳಿಗೆ ತೆಗೆದುಕೊಂಡು ಹೋಗುವುದಿಲ್ಲ" ಎಂದು

ಹೇಳುತ್ತದೆ. ನಂಬಿಕೆಯು, "ಹಾಗೆಯೇ ಮಾಡುತ್ತೇನೆ ಸ್ವಾಮಿ!" ಎಂದು ಹೇಳಿತ್ತು ಮತ್ತು ನೀರು ದ್ರಾಕ್ಷಾರಸವಾಯಿತ್ತು.

ನಂಬಿಕೆಯು ಬುದ್ಧಿಯು ಫಲವಲ್ಲ. ನಂಬಿಕೆಯು ದೇವರ ವರವಾಗಿ ಹೊಸದಾಗಿ ಹುಟ್ಟಿದ ಮನುಷ್ಯನ ಆತ್ಮದ ಮೂಲಕ ಬರುತ್ತದೆ. ಅದು ಮನಸ್ಸಿನ ಫಲವಲ್ಲ, ಆದರೆ ಆತ್ಮದ ಫಲವಾಗಿದೆ. ನಂಬಿಕೆಯು ಸ್ಪರ್ಶಗ್ರಾಹ್ಯವಾದ ಶಕ್ತಿಯಾಗಿದೆ. ಇದು ನಮ್ಮ ಪರಿಸ್ಥಿತಿಗಳನ್ನು, ನಮ್ಮ ಆರೋಗ್ಯವನ್ನು, ನಮ್ಮ ಕುಟುಂಬಗಳನ್ನು ಮತ್ತು ರಾಷ್ಟ್ರಗಳನ್ನು ಸಹ ಬದಲಾಯಿಸುತ್ತದೆ.

**ಪರಾಮರ್ಶೆಗಾಗಿರುವ ಪ್ರಶ್ನೆಗಳು**

1. ನಂಬಿಕೆಯ ಕುರಿತಾದ ನಿಮ್ಮ ಸ್ವಂತ ವ್ಯಾಖ್ಯೆಯನ್ನು ಬರೆಯಿರಿ.

2. ನಂಬಿಕೆ ಮತ್ತು ನಿರೀಕ್ಷೆಯ ನಡುವಿನ ವ್ಯತ್ಯಾಸವನ್ನು ವಿವರಿಸಿರಿ.

## ಪಾಠ ಎರಡು

# ದೇವರ ಶ್ರೇಷ್ಠ ಮಾದರಿಗಳು

### ಅಬ್ರಹಾಮನು – ನಂಬಿಕೆಯ ಪಿತ

---

### ನಮ್ಮ ಮಾದರಿ

ಅಬ್ರಹಾಮನನ್ನು ನಮ್ಮ ನಂಬಿಕೆಯ ಪಿತ ಎಂದು ಕರೆಯಲಾಗುತ್ತದೆ. ಅವನ ನಂಬಿಕೆಯ ನಿಮಿತ್ತವಾಗಿ, ದೇಶಗಳು ಸ್ಥಾಪಿಸಲ್ಪಟ್ಟವು ಮತ್ತು ಆಶೀರ್ವದಿಸಲ್ಪಟ್ಟವು, ಮತ್ತು ಈ ಆಶೀರ್ವಾದಗಳು ನಮಗಾಗಿಯೂ ಇವೆ.

ಅಬ್ರಹಾಮನು ಇಂದು ನಮಗೆ ಮಾದರಿಯಾಗಿದ್ದಾನೆ. ಅವನ ಮುಪ್ಪಿನ ಪ್ರಾಯದ ನಿಮಿತ್ತವಾಗಿಯೂ, ನೈಸರ್ಗಿಕವಾದ ಎಲ್ಲಾ ನಿರೀಕ್ಷೆಯ ವಿರುದ್ಧವಾಗಿದ್ದರೂ, ಮತ್ತು ಅವನು ಬಹು ಜನಾಂಗಗಳಿಗೆ ಪಿತನಾಗುವನು ಎಂಬ ವಾಗ್ದಾನವನ್ನು ಪಡೆದುಕೊಳ್ಳದಿರುವಾಗಲೂ, ನಂಬಿಕೆಯಿಲ್ಲದೆ ತನ್ನ ಸ್ವಂತ ಪ್ರಯತ್ನಗಳ ಮೂಲಕ ದೇವರ ವಾಗ್ದಾನಗಳನ್ನು ನೆರವೇರಿಸಲು ಪ್ರಯತ್ನಿಸಿದನು.

ನಂಬಿಕೆಯಿಲ್ಲದ ಅವಿಧೇಯತೆಯಿಂದಾದ ಮನೋವೇದನೆ ಮತ್ತು ವಿನಾಶಕಾರಿ ಪರಿಣಾಮಗಳನ್ನು ಇತಿಹಾಸವು ತಿಳಿಯಪಡಿಸುತ್ತದೆ.

ನಾವು ಅಬ್ರಹಾಮನಂತೆ, ನಮ್ಮ ಹಿಂದಿನ ಕಾಲದ ಕಾರ್ಯಗಳಿಂದ ಉಂಟಾದ ವಿನಾಶಕಾರಿ ಪರಿಣಾಮಗಳಿಂದ ಕಲಿತುಕೊಳ್ಳಬೇಕು - ಆ ಕಾರ್ಯಗಳು ಅನುಮಾನ, ಅಪನಂಬಿಕೆ ಮತ್ತು ಸ್ವ-ಪ್ರಯತ್ನಗಳ ಪರಿಣಾಮಗಳಾಗಿವೆ. ನಾವು ಅಬ್ರಹಾಮನಂತೆ ಇರಬೇಕು ಮತ್ತು ನಂಬಿಕೆಯ ಮಾರ್ಗವನ್ನು, ನಂಬಿಕೆಯ ಪಿತನಾಗುವಂತೆ ಪರಿಣಮಿಸಿದ ಆತ್ಮನ ಮಾರ್ಗವನ್ನು ನಾವು ಕಲಿತುಕೊಳ್ಳಬೇಕು.

ಆತನ ಮೂಲಕ ಲೋಕದ ಎಲ್ಲಾ ದೇಶಗಳು ಆಶೀರ್ವದಿಸಲ್ಪಟ್ಟವು.

ನಾವು ಅವನ ವಂಶಸ್ಥರು, ಅವನ ಆತ್ಮಿಕ ಸಂತತಿಯಾಗಲು (ಬೀಜ) ಕಸಿಮಾಡಲ್ಪಟ್ಟವರು ಆಗಿದ್ದೇವೆ. ಅವನು ನಮ್ಮ ತಂದೆ ಮತ್ತು ನಮಗೆ ನಂಬಿಕೆಯ ಮಾದರಿ ಆಗಿದ್ದಾನೆ.

ದೇವರು ಅಬ್ರಹಾಮನನ್ನು ಸನ್ಮಾನಿಸಿದನು, ಇಬ್ರಿಯ ಪತ್ರಿಕೆಯಲ್ಲಿ ಅವನ ಜೀವನವನ್ನು ಸಂಕ್ಷಿಪ್ತಗೊಳಿಸುವ ಹನ್ನೆರಡು ವಚನಗಳಿವೆ ಮತ್ತು ರೋಮಾಪುರದ ಪತ್ರಿಕೆಯಲ್ಲಿ ಅವನ ಜೀವನವನ್ನು ಸಂಕ್ಷಿಪ್ತಗೊಳಿಸುವ ಆರು ವಚನಗಳಿವೆ. ಈ ಎಲ್ಲಾ ವಚನಗಳಲ್ಲಿ ನಾವು

ಅವನ ನಂಬಿಕೆಯ ಬಗ್ಗೆ ಓದುತ್ತೇವೆ. ನಂಬಿಕೆಯಲ್ಲಿ ಅವನ ಮಕ್ಕಳಾದ ನಾವು ಈ ವಚನಗಳನ್ನು ಓದಿ, "ಅವನು ನನ್ನ ತಂದೆ. ನಾನು ಅಬ್ರಹಾಮನಂತೆ ಆಗಬಹುದು!" ಎಂದು ಹೇಳಬಹುದು.

ರೋಮಾಪುರ 4:18 ರಲ್ಲಿ, ನಮಗಾಗಿರುವ ಒಂದು ವಾಗ್ದಾನವನ್ನು ನಾವು ಕಾಣುತ್ತೇವೆ. ಅಪೊಸ್ತಲನಾದ ಪೌಲನು ಹೀಗೆ ಬರೆದಿದ್ದಾನೆ,

ನಿನ್ನ ಸಂತತಿಯವರು ಹಾಗೇ ಆಗುವರು.

ಅದು ದೇವರ ವಾಗ್ದಾನವಾಗಿದೆ. ನಾವು ಅಬ್ರಹಾಮನಂತೆಯೇ ಅದೇ ರೀತಿಯ ನಂಬಿಕೆಯಲ್ಲಿ ಕಾರ್ಯಮಾಡಬಹುದು.

ರೋಮಾಪುರದ ಪತ್ರಿಕೆಯಲ್ಲಿ ಅಬ್ರಹಾಮನ ಬಗ್ಗೆ ಕಂಡುಬರುವ ವಾಕ್ಯಭಾಗವನ್ನು ಸಂಪೂರ್ಣ ಓದಲು ಸಮಯ ತೆಗೆದುಕೊಳ್ಳೋಣ.

**ಆದಕಾರಣ ಆ ಬಾಧ್ಯತೆಯು ಕೃಪೆಯಿಂದಲೇ ದೊರೆಯುವಂಥದಾಗಿರುವಂತೆ ಅದು ನಂಬಿಕೆಯ ಮೂಲಕ ಸಿಕ್ಕುತ್ತದೆ, ಹೀಗೆ ಆ ವಾಗ್ದಾನವು ಅಬ್ರಹಾಮನ ಸಂತತಿಯವರೆಲ್ಲರಿಗೂ ಅಂದರೆ ಧರ್ಮಶಾಸ್ತ್ರವನ್ನು ಆಧಾರಮಾಡಿಕೊಂಡವರಿಗೆ ಮಾತ್ರವಲ್ಲದೆ ಅಬ್ರಹಾಮನಲ್ಲಿದ್ದಂಥ ನಂಬಿಕೆಯುಳ್ಳವರಿಗೆ ಸಹ ಸ್ಥಿರವಾಗಿ ನಿಲ್ಲುವದು.**

**ನಾನು ನಿನ್ನನ್ನು ಅನೇಕ ಜನಾಂಗಗಳಿಗೆ ಮೂಲ ಪಿತೃವಾಗಿ ನೇಮಿಸಿದ್ದೇನೆಂದು ಶಾಸ್ತ್ರದಲ್ಲಿ ಬರೆದಿರುವ ಪ್ರಕಾರ ಅಬ್ರಹಾಮನು ನಮ್ಮೆಲ್ಲರಿಗೂ ದೇವರ ಸನ್ನಿಧಿಯಲ್ಲಿ ಮೂಲಪಿತೃವಾಗಿದ್ದಾನೆ. ದೇವರು ಸತ್ತವರನ್ನು ಬದುಕಿಸುವವನಾಗಿಯೂ ಇಲ್ಲದ್ದನ್ನು ಇರುವದಾಗಿ ಕರೆಯುವವನಾಗಿಯೂ ಇದ್ದಾನೆಂದು ಅಬ್ರಹಾಮನು ನಂಬಿದನು. ನಿನ್ನ ಸಂತಾನವು ನಕ್ಷತ್ರಗಳಷ್ಟಾಗುವದು ಎಂಬದಾಗಿ ತನಗೆ ಹೇಳಲ್ಪಟ್ಟ ಮಾತು ನೆರವೇರುವದಕ್ಕೆ ಮಾರ್ಗ ತೋರದೆ ಇರುವದರಿಂದ ಅಬ್ರಹಾಮನು ತಾನು ಅನೇಕ ಜನಾಂಗಗಳಿಗೆ ಮೂಲಪಿತೃವಾಗುವನೆಂಬ ನಿರೀಕ್ಷೆಗೆ ಆಸ್ಪದವಿಲ್ಲದಿರುವಾಗಲೂ ನಿರೀಕ್ಷಿಸಿ ನಂಬಿದನು.**

**ಅವನು ಹೆಚ್ಚು ಕಡಿಮೆ ನೂರು ವರುಷದವನಾಗಿದ್ದು ತನ್ನ ದೇಹವು ಆಗಲೇ ಮೃತಪ್ರಾಯವಾಯಿತೆಂದೂ ಸಾರಳಿಗೆ ಗರ್ಭಕಾಲ ಕಳೆದು ಹೋಯಿತೆಂದು ಯೋಚಿಸಿದ್ದಾಗ್ಯೂ ಅವನ ನಂಬಿಕೆಯು ಕುಂದಲಿಲ್ಲ. ದೇವರು ಮಾಡಿದ ವಾಗ್ದಾನದ ವಿಷಯದಲ್ಲಿ ಅವನು ಅಪನಂಬಿಕೆಯಿಂದ ಚಂಚಲಚಿತ್ತನಾಗಲಿಲ್ಲ. ದೇವರನ್ನು ಘನಪಡಿಸುವವನಾಗಿ ಆತನು ತನ್ನ ವಾಗ್ದಾನವನ್ನು**

**ನೆರವೇರಿಸುವದಕ್ಕೆ ಸಮರ್ಥನೆಂದು ಪೂರಾ ಭರವಸವಿಟ್ಟು ದೃಢನಂಬಿಕೆಯುಳ್ಳವನಾದನು. (ರೋಮಾಪುರ 4:16-21).**

**ನಂಬಿಕೆಯತ್ತ ನಾಲ್ಕು ಹೆಜ್ಜೆಗಳು**

ಈ ವಾಕ್ಯಭಾಗದಲ್ಲಿ, ಅಬ್ರಹಾಮನ ನಂಬಿಕೆಯತ್ತ ಸಾಗುವ ನಾಲ್ಕು ಹೆಜ್ಜೆಗಳನ್ನು ನಾವು ನೋಡುತ್ತೇವೆ. ಇದೇ ಹೆಜ್ಜೆಗಳು ಇಂದು ನಮಗಾಗಿಯೂ ಪರಿಣಾಮಕಾರಿಯಾಗಿ ಪರಿಣಮಿಸುತ್ತವೆ.

* **ಅಬ್ರಹಾಮನು ದೇವರ ಸ್ವರವನ್ನು ಕೇಳಿದನು -**

  "ನಾನು ನಿಮ್ಮನ್ನು ಬಹು ಜನಾಂಗಗಳಿಗೆ ಮೂಲಪಿತೃ ಮಾಡುತ್ತೇನೆ."

  ನಮ್ಮ ನಂಬಿಕೆಯು ಸಹ ದೇವರ ಸ್ವರವನ್ನು ಕೇಳುವಂಥದ್ದರ ಮೇಲೆ ಆಧರಿತವಾಗಿರಬೇಕು.

* **ಅಬ್ರಹಾಮನು ಈ ಮಾತು ನೆರವೇರುತ್ತದೆ ಎಂದು ನಂಬಿದನು, ಅವನು ಒಂದೊಂದು ವರ್ಷವು ನಂಬುವುದನ್ನು ಮುಂದುವರಿಸಿದನು.**

  ನಮಗೆ ಹೇಳಿರುವ ಆತನ ಮಾತು ನೆರವೇರುತ್ತದೆ ಎಂದು ನಾವು ನಂಬಬೇಕು.

* **ಅವರು ನೈಸರ್ಗಿಕ ಸನ್ನಿವೇಶಗಳ ಮೇಲೆ ದೃಷ್ಟಿಯಿಡಲು ನಿರಾಕರಿಸಿದನು.**

  ನಮ್ಮ ಜೀವನದಲ್ಲಿ ನಮ್ಮ ಸುತ್ತವಿರುವ ನೈಸರ್ಗಿಕ ಸಂಗತಿಗಳನ್ನು ನಾವು ನೋಡಬಾರದು.

* **ಉತ್ತರವು ನಿಜವಾಗುವುದಕ್ಕೆ ಮೊದಲೇ ಅವನು ದೇವರನ್ನು ಸ್ತುತಿಸಲು ಪ್ರಾರಂಭಿಸಿದನು.**

“ದೇವರಿಗೆ ಮಹಿಮೆ ಸಲ್ಲಿಸುವ” ಮೂಲಕ ನಾವು ನಮ್ಮ ನಂಬಿಕೆಯಲ್ಲಿ ಬಲಗೊಳ್ಳಬೇಕು. ದೇವರು ತನ್ನ ವಾಕ್ಯವನ್ನು ನಮಗೆ ಕೊಟ್ಟಾಗಲೇ ನಾವು ಆತನನ್ನು ಸ್ತುತಿಸುವುದಕ್ಕೆ ಪ್ರಾರಂಭಿಸಬೇಕು ಹೊರತು ಆ ವಾಕ್ಯವು ನೆರವೇರುವವರೆಗೂ ಕಾಯಬಾರದು.

**ನಂಬಿಕೆ ಹೇಗೆ ಬಂತು**

ಅಬ್ರಹಾಮನ ನಂಬಿಕೆಯು ಎಲ್ಲಿಂದ ಬಂತು? ಆದಿಕಾಂಡ 12 ರಿಂದ 25 ಅಧ್ಯಾಯಗಳಲ್ಲಿ ಬರೆಯಲಾಗಿರುವ ಅವನ ಜೀವನವನ್ನು ವಿವರವಾಗಿ ಕಲಿಯುವುದರ ಮೂಲಕ ಮಾತ್ರವೇ ನಾವು ಇದನ್ನು

ತಿಳಿದುಕೊಳ್ಳಬಹುದು. ಈ ಅಧ್ಯಾಯಗಳನ್ನು ಓದಬೇಕೆಂಬ ಸಲಹೆಯನ್ನು ನಾವು ನಿಮಗೆ ಕೊಡುತ್ತೇವೆ.

ಅಬ್ರಹಾಮನಿಗೆ ಪ್ರಚಂಡ ಜಯದ ಸಮಯಗಳಿತ್ತು ಮತ್ತು ಅವನನ್ನು ನಿರುತ್ಸಾಹಗೊಳಿಸುವ ಸೋಲಿನ ಸಮಯಗಳು ಸಹ ಇತ್ತು. ದೇವರು ಸೋಲಗಳನ್ನು ಮತ್ತು ಜಯದ ಸಮಯಗಳನ್ನು ಬರೆಯುವಂತೆ ಮಾಡಿರುವ ಅಂಶವು ಅಬ್ರಹಾಮನು ಪರಿಪೂರ್ಣನಲ್ಲ ಎಂಬುದನ್ನು ನಮಗೆ ತೋರಿಸುತ್ತದೆ. ಅವನು ನಿಮ್ಮಂತೆ ನನ್ನಂತೆ ಮನುಷ್ಯನಾಗಿದ್ದನು, ಆದರೂ, ಅವನ ನಂಬಿಕೆಯು ಅವನು ನಂಬಿಕೆಯ ಪಿತೃವಾಗುವಷ್ಟರ ಮಟ್ಟಿಗೆ ಹೆಚ್ಚಾಯಿತು.

ಇದು ನಮ್ಮ ಆತ್ಮಿಕ ಕುರುಡುತನವನ್ನು ನಾವು ತೆಗೆದುಹಾಕಬೇಕಾದ ಮತ್ತು ದೇವರು ತನ್ನ ಉದ್ದೇಶಗಳನ್ನು ನೆರವೇರಿಸಲು ಅಪರಿಪೂರ್ಣರಾದ ಮನುಷ್ಯರನ್ನು ಮೊದಲಿನಿಂದಲೂ ಈವರೆಗೂ ಉಪಯೋಗಿಸುತ್ತಿದ್ದಾನೆ ಎಂಬುದನ್ನು ಅರಿತುಕೊಳ್ಳಬೇಕಾದ ಸಮಯವಾಗಿದೆ. ಹಾಗಾದರೆ ಅದರರ್ಥ ನಾವು ಅರ್ಹರಾಗಿದ್ದೇವೆ; ಆತನು ನಮ್ಮನ್ನು ಉಪಯೋಗಿಸುವನು.

ಅಬ್ರಹಾಮನು, ಎಲೀಯನಂತೆ ಮತ್ತು ಹಳೆಯ ಒಡಂಬಡಿಕೆಯಲ್ಲಿನ ನಂಬಿಕೆಯುಳ್ಳ ಎಲ್ಲ ಶ್ರೇಷ್ಠರಾದ ಸ್ತ್ರೀಪುರುಷರಂತೆ ದೃಷ್ಟಿಯಿಂದ ಅಲ್ಲ ನಂಬಿಕೆಯಿಂದ ನಡೆಯುವುದನ್ನು ಕಲಿತುಕೊಳ್ಳಬೇಕಾಗಿತ್ತು.

ಈ ಪುರುಷರು ನಮ್ಮಂತೆಯೇ ಮನುಷ್ಯರಾಗಿದ್ದರು ಎಂಬುದನ್ನು ನಾವು ತಿಳಿದುಕೊಳ್ಳಬೇಕೆಂದು ಯಾಕೋಬನು ಬಯಸಿದನು. ಅವನು ಹೀಗೆ ಬರೆದಿದ್ದಾನೆ,

**ಎಲೀಯನು ನಮ್ಮಂಥ ಸ್ವಭಾವವುಳ್ಳವನಾಗಿದ್ದನು... (ಯಾಕೋಬ 5:17).**

* *ಅಬ್ರಹಾಮನು ದೇವರಿಗೆ ವಿಧೇಯನಾದನು*

ಮೊದಲನೆಯ ವಚನವು ಅಬ್ರಾಮನ ಬಗ್ಗೆ ಹೇಳುತ್ತದೆ, ಅವನ ಹೆಸರನ್ನು ಅಬ್ರಹಾಮನು ಎಂದು ಬದಲಾಯಿಸಿತು, ದೇವರು ಅವನಿಗೆ ಮಾಡುವುದಕ್ಕಾಗಿ ಒಂದು ಕಾರ್ಯವನ್ನು ಹೇಳಿದನು ಮತ್ತು ಅವನ ಭವಿಷ್ಯ ಕುರಿತಾದ ವಾಗ್ದಾನ ಮಾಡಿದನು. ಅಬ್ರಹಾಮನು ಅದನ್ನು ಕೇಳಿ ಅದಕ್ಕೆ ವಿಧೇಯನಾದನು. ಅವನು ಅದರ ಬಗ್ಗೆ ಪ್ರಶ್ನಿಸಲಿಲ್ಲ. ಅವನು ಗೊಣಗಲಿಲ್ಲ. ಅವನು ತನ್ನ ಜನರನ್ನು ಕರೆದುಕೊಂಡು ಮತ್ತು ತನ್ನ ವಸ್ತುಗಳನ್ನು ತೆಗೆದುಕೊಂಡು ಹೊರಟುಹೋದನು.

**ಯೆಹೋವನು ಅಬ್ರಾಮನಿಗೆ ನೀನು ಸ್ವದೇಶವನ್ನೂ ಬಂಧು ಬಳಗವನ್ನೂ ತಂದೆಯ ಮನೆಯನ್ನೂ ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟು ಹೋಗು. ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡಿ ಆಶೀರ್ವದಿಸಿ ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು. ನೀನು ಆಶೀರ್ವಾದನಿಧಿಯಾಗುವಿ.**

**ಯೆಹೋವನು ಹೇಳಿದ ಮೇರೆಗೆ ಅಬ್ರಾಮನು ಹೊರಟುಹೋದನು; (ಆದಿಕಾಂಡ 12: 1,2,4).**

❋ *ಅಬ್ರಹಾಮನಿಗೆ ದೇವರ ಬಗ್ಗೆ ತಿಳಿದಿತ್ತು*

ಅಬ್ರಹಾಮನಿಗೆ ದೇವರ ಬಗ್ಗೆ ತಿಳಿದುಕೊಂಡಿದ್ದನು. ಸತ್ಯವೇದದಲ್ಲಿ ಅವನನ್ನು ಮಾತ್ರವೇ ದೇವರ ಸ್ನೇಹಿತ ಎಂದು ಕರೆಯಲಾಗಿದೆ.

ಕೆಳಗಿರುವಂಥ ಪವಿತ್ರಗ್ರಂಥದ ವಚನವು ನೆರವೇರಿತು,

**ಅಬ್ರಹಾಮನು ದೇವರನ್ನು ನಂಬಿದನು ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು. ಎಂಬ ಶಾಸ್ತ್ರದ ಮಾತು ಹೀಗೆ ನೆರವೇರಿತು. ಮತ್ತು ದೇವರ ಸ್ನೇಹಿತನೆಂಬ ಹೆಸರು ಅವನಿಗೆ ಉಂಟಾಯಿತು (ಯಾಕೋಬ 2:23).**

ಅಬ್ರಹಾಮನು ದೇವರನ್ನು ತಿಳಿದುಕೊಂಡಂತೆ ದೇವರನ್ನು ತಿಳಿದುಕೊಳ್ಳುವವರು, ಅಬ್ರಹಾಮನಲ್ಲಿದ್ದ ನಂಬಿಕೆಯಂಥ ನಂಬಿಕೆ ಉಳ್ಳವರಾಗಿರಬಹುದು.

❋ ಅವನು ಆರಾಧಿಸಿದನು, ಯಜ್ಞವೇದಿಗಳನ್ನು ಕಟ್ಟಿದನು, ಯಜ್ಞಗಳನ್ನು ಅರ್ಪಿಸಿದನು, ದಶಮ ಭಾಗವನ್ನು ಕೊಟ್ಟನು

**ಮೊದಲ ಯಜ್ಞವೇದಿಯನ್ನು ಕಟ್ಟಿಸಿದನು** -

ಅಲ್ಲಿ ಯೆಹೋವನು ಅಬ್ರಾಮನಿಗೆ ದರ್ಶನಕೊಟ್ಟು ನಾನು ಈ ದೇಶವನ್ನು ನಿನ್ನ ಸಂತಾನಕ್ಕೆ ಕೊಡುವೆನು ಅಂದನು. ತನಗೆ ದರ್ಶನಕೊಟ್ಟ ಯೆಹೋವನಿಗೆ ಅಬ್ರಾಮನು ಯಜ್ಞವೇದಿಯನ್ನು ಕಟ್ಟಿಸಿದನು (ಆದಿಕಾಂಡ 12:7).

**ಮೆಲ್ಕೀಚೆದೇಕನಿಗೆ ದಶಮ ಭಾಗವನ್ನು ಕೊಟ್ಟನು**

ಸಾಲೇಮಿನ ಅರಸನಾದ ಮೆಲ್ಕೀಚೆದೆಕನು ಸಹ ಬಂದು ರೊಟ್ಟಿಯನ್ನೂ ದ್ರಾಕ್ಷಾರಸವನ್ನೂ ಕೊಟ್ಟನು. ಇವನು ಪರಾತ್ಪರನಾದ ದೇವರ ಯಾಜಕನಾಗಿದ್ದು ಅಬ್ರಾಮನನ್ನು ಆಶೀರ್ವದಿಸಿ ಭೂಮ್ಯಾಕಾಶವನ್ನು ನಿರ್ಮಾಣಮಾಡಿರುವ ಪರಾತ್ಪರನಾದ ದೇವರ ಆಶೀವಾದವು ಅಬ್ರಾಮನಿಗೆ ಆಗಲಿ; ಪರಾತ್ಪರನಾದ ದೇವರು ನಿನ್ನ

ಶತ್ರುಗಳನ್ನು ನಿನ್ನ ಕೈಗೆ ಒಪ್ಪಿಸಿದ್ದಕ್ಕಾಗಿ ಆತನಿಗೆ ಸ್ತೋತ್ರ ಎಂದು ಹೇಳಿದನು ಅಬ್ರಾಮನು ತಾನು ಗೆದ್ದು ತಂದಿದ್ದ ಎಲ್ಲಾ ವಸ್ತುಗಳಲ್ಲಿ ಹತ್ತನೆಯ ಒಂದು ಭಾಗವನ್ನು ಅವನಿಗೆ ಕೊಟ್ಟನು. (ಆದಿಕಾಂಡ 14:18-20).

**ಯಜ್ಞಗಳನ್ನು ಅರ್ಪಿಸಿದನು -**

ಕರ್ತನಾದ ಯೆಹೋವನೇ; ನಾನು ಇದನ್ನು ಬಾಧ್ಯವಾಗಿ ಹೊಂದುವೆನೆಂದು ತಿಳಿದುಕೊಳ್ಳುವುದು ಹೇಗೆ ಎಂದು ಕೇಳಿದನು.

ಅದಕ್ಕೆ ಆತನು ನೀನು ಮೂರು ಮೂರು ವರುಷಗಳ ಮಣಕ, ಆಡು, ಟಗರು ಇವುಗಳನ್ನೂ ಬೆಳವಕ್ಕಿಯನ್ನೂ ಪಾರಿವಾಳದ ಮರಿಯನ್ನೂ ತೆಗೆದುಕೊಂಡು ಬಾ ಅಂದನು. (ಆದಿಕಾಂಡ 15:8,9) .

**ಸೊದೋಮ್ ಮತ್ತು ಗೋಮೋರಗಳಿಗೆ ಮಧ್ಯಸ್ಥಿಕೆ ಪ್ರಾರ್ಥನೆ ಮಾಡಿದನು - ಆದಿಕಾಂಡ 18**

**ಇಸಾಕನನ್ನು ಬಲಿಯಾಗಿ ಅರ್ಪಿಸಲು ಸಿದ್ಧನಿದ್ದನು - ಆದಿಕಾಂಡ 22**

ಅಬ್ರಹಾಮನು ದೇವರನ್ನು ನಂಬಿ ವಾಗ್ದಾನದ ಮಗನಾದ ಇಸಾಕನನ್ನು ಪಡೆದುಕೊಂಡನು. ದೇವರು ಅವನ ಸಂಗಡ ಮಾತನಾಡಿ ನಿನ್ನ ಮಗನನ್ನು ಯಜ್ಞವಾಗಿ ಅರ್ಪಿಸು ಎಂದು ಹೇಳಿದಾಗಲೂ ಅವನು ಅದಕ್ಕೆ ವಿಧೇಯನಾದನು. ದೇವರು ನಮ್ಮ ಕನಸುಗಳನ್ನೆಲ್ಲಾ ಈಡೇರಿಸಿ, ಅನಂತರ "ಇದನ್ನೆಲ್ಲಾ ನನ್ನ ಪಾದಕ್ಕೆ ಅರ್ಪಿಸಿಬಿಡು" ಎಂದು ಹೇಳಿದರೆ ನಮಗೆ ಏನಾಗುತ್ತದೆ?

ಒಂದರ ನಂತರ ಇನ್ನೊಂದು ಕಷ್ಟದ ಪರಿಸ್ಥಿತಿ ಬಂದಾಗ್ಯೂ ಅದರಲ್ಲಿಯೂ ಅಬ್ರಹಾಮನು ಪ್ರತಿದಿನವು ನಂಬಿಕೆಯಿಂದ ಜೀವಿಸಿದನು, ಮತ್ತು ಅವನು ಹಾಗೆ ಜೀವಿಸುವಾಗ ಅವನ ನಂಬಿಕೆಯೂ ಹೆಚ್ಚಾಯಿತು. ನಾವು ಸ್ವಾಧಾರಣತೆಯನ್ನು ತ್ಯಜಿಸಿ, ಅಸಾಧಾರಣತೆಯ ಕಡೆಗೆ - ಆತನ ಆತ್ಮನ ಕಡೆಗೆ ಸಾಗುವಾಗ ನಮ್ಮ ನಂಬಿಕೆಯು ಪ್ರತಿದಿನವು ಹೆಚ್ಚಾಗುತ್ತದೆ.

**ಅಬ್ರಹಾಮನೋ ಅಥವಾ ತೋಮನೋ**

ಹೋಲಿಕೆ ಮಾಡಿ ನೋಡೋಣ, ಅದಕ್ಕಾಗಿ ಯೇಸುವಿನ ಶಿಷ್ಯನಾದ ತೋಮನನ್ನು ನೋಡಿಕೊಳ್ಳೋಣ. ತೋಮನು ನಂಬುವುದಿಲ್ಲವೆಂದು ತೀರ್ಮಾನಿಸಿದನು.

**ಆದದರಿಂದ ಉಳಿದ ಶಿಷ್ಯರು ನಾವು ಸ್ವಾಮಿಯನ್ನು ನೋಡಿದ್ದೇವೆ ಎಂದು ಅವನಿಗೆ ಹೇಳಿದರು. ಅದಕ್ಕೆ ಅವನು ನಾನು ಆತನ ಕೈಗಳಲ್ಲಿ**

**ಮೊಳೆಗಳಿಂದಾದ ಗಾಯವನ್ನು ನೋಡಿ ಆ ಮೊಳೆಯ ಗಾಯದಲ್ಲಿ ನನ್ನ ಬೆರಳನ್ನು ಇಟ್ಟು ಆತನ ಪಕ್ಕೆಯಲ್ಲಿ ನನ್ನ ಕೈಯನ್ನು ಹಾಕಿದರೆ ಹೊರತು ನಿಮ್ಮ ಮಾತನ್ನು ನಂಬುವದೇ ಇಲ್ಲ ಅಂದನು.**

**ಎಂಟು ದಿವಸಗಳಾದ ಮೇಲೆ ಆತನ ಶಿಷ್ಯರು ತಿರುಗಿ ಒಳಗಿದ್ದಾಗ ತೋಮನೂ ಅವರ ಸಂಗಡ ಇದ್ದನು. ಬಾಗಲುಗಳು ಮುಚ್ಚಿದ್ದವು ಆಗ ಯೇಸು ಬಂದು ನಡುವೆ ನಿಂತು ನಿಮಗೆ ಸಮಾಧಾನವಾಗಲಿ ಅಂದನು. ಆ ಮೇಲೆ ತೋಮನಿಗೆ – ನಿನ್ನ ಬೆರಳನ್ನು ಈ ಕಡೆ ಚಾಚಿ ನನ್ನ ಕೈಗಳನ್ನು ಮುಟ್ಟಿ ನೋಡು. ನಿನ್ನ ಕೈ ಚಾಚಿ ನನ್ನ ಪಕ್ಕೆಯಲ್ಲಿ ಹಾಕು. ನಂಬದವನಾಗಿರಬೇಡ ನಂಬುವವನಾಗು ಎಂದು ಹೇಳಿದನು (ಯೋಹಾನ 20:25-27).**

ನಾವು ಅನುಸರಿಸಬಹುದಾದ ಎರಡು ರೀತಿಯ ನಂಬಿಕೆಗಳಿವೆ -ಅವು ಅಬ್ರಹಾಮನ-ನಂಬಿಕೆ ಅಥವಾ ತೋಮನ-ನಂಬಿಕೆ.

ಅಬ್ರಹಾಮನು ಹೇಳಿದ್ದೇನಂದರೆ, “ನಾನು ವರ್ಷಗಳು ಕಳೆದರೂ ನಾನು ನಂಬುತ್ತೇನೆ, ದೇವರು ಹೇಳಿರುವಂಥದ್ದು ನನಗೆ ಗೊತ್ತಿದೆ ಆದ್ದರಿಂದ ನಾನು ಆ ನಂಬಿಕೆಯ ಪ್ರಕಾರ ಕಾರ್ಯಮಾಡುತ್ತೇನೆ.

> ತೋಮನು, "ನಾನು ಯಾವಾಗ ಅದನ್ನು ನೋಡುತ್ತೇನೋ ಅವಾಗ ನಾನು ಅದನ್ನು ನಂಬುತ್ತೇನೆ" ಎಂದು ಹೇಳಿದನು.

ಅಬ್ರಹಾಮನ-ನಂಬಿಕೆಯು ದೇವರಿಂದ ಕೇಳಿಸಿಕೊಂಡಂಥ ಮಾತುಗಳ ಮೇಲೆ ಆಧಾರಗೊಂಡಿದೆ.

> ತೋಮನ-ನಂಬಿಕೆಯು ಪಂಚೇಂದ್ರಿಯಗಳ ಮೇಲೆ ಆಧಾರಗೊಂಡಿದೆ.

ಅಬ್ರಹಾಮನ-ನಂಬಿಕೆಯು ದೇವರ ವಾಗ್ದಾನಗಳ ಮೇಲೆ ಆಧಾರಗೊಂಡಿದೆ.

> ತೋಮನ-ನಂಬಿಕೆಯು ಭೌತಿಕ ಸಾಕ್ಷ್ಯಾಧಾರಗಳ ಮೇಲೆ ಆಧಾರಗೊಂಡಿದೆ.

ನಮ್ಮಲ್ಲಿ ಅಂತರ್ಯ ಮನುಷ್ಯನು ಮತ್ತು ಬಾಹ್ಯ ಮನುಷ್ಯನು ಇದ್ದಾನೆ. ಅಂತರ್ಯ ಮನುಷ್ಯನು ನಮ್ಮ ಆತ್ಮವಾಗಿದೆ. ಬಾಹ್ಯ ಮನುಷ್ಯನು ಮನಸ್ಸು ಮತ್ತು ದೇಹವಾಗಿದೆ. ಭೌತಿಕ ಸಾಕ್ಷ್ಯಾಧಾರಗಳ ಮೇಲೆ ಒಬ್ಬನ ನಂಬಿಕೆಯು ಆಧಾರವಾಗಿರುವುದು ಎಂದರೆ ಸ್ವಾಭಾವಿಕವಾದ, ಮನುಷ್ಯನ ದೃಷ್ಟಿಕೋನದಿಂದ ಮಾತ್ರ ನಂಬುವುದು, ಬಾಹ್ಯ ಮನುಷ್ಯನಿಂದ ನಂಬುವುದು ಎಂದಾಗಿದೆ.

ಹೃದಯದಿಂದ ನಂಬುವುದು ಎಂದರೆ ನಮ್ಮ ಆತ್ಮದಿಂದ - ನಮ್ಮ ಆಂತರ್ಯ ಮನುಷ್ಯನಿಂದ ನಂಬುವುದು.

ಯೋಹಾನನು ನಮಗೆ ಹೀಗೆ ಹೇಳುತ್ತಾನೆ

**ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು ಎಂದು ಕೂಗಿ ಹೇಳಿದನು (ಯೋಹಾನ 7:38).**

ನಮ್ಮ ಒಳಗಿನಿಂದ ಹರಿಯುವ ನಂಬಿಕೆಯು ನಮಗೆ ಮತ್ತು ನಮ್ಮ ಸುತ್ತಮುತ್ತಲಿರುವವರಿಗೆ ಇರುವಂಥ ಹರಿಯುವ ಜೀವಕರವಾದ ನೀರು ಆಗಿದೆ.

**ಮೋಶೆ – ನಂಬಿಕೆಯ ಮಹಾ ಸೇನಾನಿ**

---

**ಮೋಶೆಯ ತಂದೆತಾಯಿಗಳು**

ಇಬ್ರಿಯ 11:23-29 ರಲ್ಲಿ ನಂಬಿಕೆಯ ಬಗ್ಗೆ ಮತ್ತೊಂದು ಅಮೋಘವಾದ ಮಾದರಿಯನ್ನು ನಾವು ಕಾಣುತ್ತೇವೆ. ಇದರಲ್ಲಿಯೇ ಇಡೀ ಮೋಶೆಯ ಜೀವನವನ್ನೇ ಅಧ್ಯಯನ ಮಾಡಬಹುದು.

ಫರೋಹನು ಏನು ಮಾಡುವನೋ ಎಂಬುದಾಗಿ ಮೋಶೆಯ ತಂದೆತಾಯಿಗಳು ಭಯಪಡಲಿಲ್ಲ. ಇಬ್ರಿಯ ಪತ್ರಿಕೆಯಲ್ಲಿ ನಾವು ಇದರ ಬಗ್ಗೆ ಕಲಿಯುತ್ತೇವೆ

**ಮೋಶೆ ಹುಟ್ಟಿದಾಗ ಅವನ ತಂದೆತಾಯಿಗಳು ಕೂಸು ಸುಂದರವಾಗಿದೆ ಎಂದು ನೋಡಿ ಅರಸನ ಅಪ್ಪಣೆಗೆ ಭಯಪಡದೇ ನಂಬಿಕೆಯಿಂದಲೇ ಅವನನ್ನು ಮೂರು ತಿಂಗಳು ಬಚ್ಚಿಟ್ಟರು (ವಚನ 23).**

**ಮೋಶೆಯ ನಂಬಿಕೆ**

ಪದಗಳಿಗೆ ಈ ಮನುಷ್ಯನ ನಂಬಿಕೆಯನ್ನು ವಿವರಿಸಲು ಸಾಧ್ಯವಿಲ್ಲ. ನಲವತ್ತು ವರ್ಷಗಳು ಅರಣ್ಯದಲ್ಲಿ ಕಾಲ ಕಳೆದ ನಂತರ, ದೇವರು ಅವನೊಂದಿಗೆ ಮಾತನಾಡಿದಾಗ, ಅವನು ಫರೋಹನನ್ನು ಎದುರಿಸಲು ಭಯಪಡುವವನಾಗಿರಲಿಲ್ಲ. ಅವನು ತನ್ನ ಜನರಿಗೆ ಸ್ವಾತಂತ್ರ್ಯವನ್ನು ಕೊಡಬೇಕೆಂದು ಒತ್ತಾಯಿಸಿದನು. ಅವನು ರಾಜನ ಆಸ್ಥಾನದಲ್ಲಿ ನಿಂತುಕೊಂಡನು, ಅಲ್ಲಿ ಅವನನ್ನು ಹಿಂದೊಮ್ಮೆ ದೇವರ ರಾಯಭಾರಿಯ ರೀತಿಯಲ್ಲಿ ಮಗನಾಗಿ ಸ್ವೀಕರಿಸಿಕೊಳ್ಳಲಾಗಿತ್ತು.

ಅವನು ತನ್ನ ಜನರನ್ನು ನಲವತ್ತು ವರ್ಷಗಳ ಕಾಲ ಮುನ್ನಡೆಸಿದನು, ಆ ಕಾಲಗಳಲ್ಲಿ ಅವರಿಗೆ ಬೇಕಾದ ಆಹಾರ, ನೀರು, ಸಂರಕ್ಷಣೆಗಾಗಿ

ಮತ್ತು ಅವರ ನಿಯಮಗಳಿಗಾಗಿ ದೇವರಲ್ಲಿ ನಂಬಿಕೆಯಿಟ್ಟಿದ್ದನು. ಉರಿಯುವ ಪೊದೆಯ ಮೂಲಕ ದೇವರು ಅವನೊಂದಿಗೆ ಮಾತನಾಡಿದ ಸಮಯದಿಂದ, ಅವನು ದೇವರೊಂದಿಗೆ ನಂಬಿಕೆಯಿಂದ ನಡೆದುಕೊಂಡನು.

**ಮೋಶೆಯು ದೊಡ್ಡವನಾದ ಮೇಲೆ ಫರೋಹನ ಕುಮಾರ್ತೆಯ ಮಗನೆನಿಸಿಕೊಳ್ಳುವದು ಬೇಡವೆಂದದ್ದು ನಂಬಿಕೆಯಿಂದಲೇ ಸ್ವಲ್ಪ ಕಾಲ ಪಾಪ ಭೋಗಗಳನ್ನು ಅನುಭವಿಸುವದಕ್ಕಿಂತ ದೇವಜನರೊಂದಿಗೆ ಕಷ್ಟವನ್ನನುಭವಿಸುವದೇ ಒಳ್ಳೆಯದೆಂದು ತಿರ್ಮಾನಿಸಿಕೊಂಡನು.**

**ಐಗುಪ್ತದೇಶದ ಸರ್ವೈಶ್ವರ್ಯಕ್ಕಿಂತಲೂ ಕ್ರಿಸ್ತನ ನಿಮಿತ್ತವಾಗಿ ಉಂಟಾಗುವ ನಿಂದೆಯೇ ಶ್ರೇಷ್ಟ ಭಾಗ್ಯವೆಂದೆಣಿಸಿಕೊಂಡನು. ಯಾಕಂದರೆ ಅವನು ಬರುವ ಪ್ರತಿಫಲದ ಮೇಲೆ ಕಣ್ಣಿಟ್ಟಿದ್ದನು (ವಚನಗಳು 24-26).**

❋ *ಐಗುಪ್ತವನ್ನು ಬಿಟ್ಟುಬಂದನು*

**ಅವನು ಅರಸನ ರೌದ್ರಕ್ಕೆ ಭಯಪಡದೇ ಐಗುಪ್ತದೇಶವನ್ನು ಬಿಟ್ಟುಹೋದದ್ದು ನಂಬಿಕೆಯಿಂದಲೇ ಅವನು ಅದೃಶ್ಯನಾಗಿರುವಾನನ್ನು ದೃಷ್ಟಿಸುವವನೋ ಎಂಬಂತೆ ದೃಢಚಿತ್ತನಾಗಿದ್ದನು (ವಚನ 27).**

❋ *ಪಸ್ಕಹಬ್ಬವನ್ನು ಆಚರಿಸಿದನು*

**ಚೊಚ್ಚಲ ಮಕ್ಕಳನ್ನು ಸಂಹರಿಸುವವನು ಇಸ್ರಾಯೆಲರನ್ನು ಮುಟ್ಟದಂತೆ ಅವನು ಪಸ್ಕವೆಂಬ ಊಟವನ್ನೂ ರಕ್ತಪ್ರೋಕ್ಷಣಾಚಾರವನ್ನೂ ನೇಮಿಸಿದ್ದು ನಂಬಿಕೆಯಿಂದಲೇ (ವಚನ 28).**

❋ *ಕೆಂಪು ಸಮುದ್ರವನ್ನು ಹಾದುಹೋದನು*

**ನಂಬಿಕೆಯಿಂದಲೇ ಇಸ್ರಾಯೇಲ್ಯರು ಕೆಂಪು ಸಮುದ್ರವನ್ನು ಒಣ ಭೂಮಿಯನ್ನು ದಾಟುವಂತೆ ದಾಟಿಸಿದರು. ಐಗುಪ್ತದೇಶದವರು ಅದನ್ನು ದಾಟುವದಕ್ಕೆ ಪ್ರಯತ್ನಿಸಿ ಮುಳುಗಿ ಹೋದರು (ವಚನ 29).**

**ಮೋಶೆಯು ದೇವರನ್ನು ತಿಳಿದುಕೊಂಡಿದ್ದನು**

ಮೋಶೆಯು ಭೂಮಿಯ ಮೇಲಿರುವ ಅತ್ಯಂತ ಸ್ವಾತಿಕನಾದ ವ್ಯಕ್ತಿ ಎಂದು ದೇವರು ಹೇಳಿದನು ಮತ್ತು ಆತನು ಅವನೊಂದಿಗೆ ಮುಖಾಮುಖಿಯಾಗಿ ಮಾತಾಡಿದನು.

**ಆ ಮೋಶೆ ಭೂಮಿಯ ಮೇಲಿರುವ ಎಲ್ಲಾ ಮನುಷ್ಯರಿಗಿಂತಲೂ ಬಹು ಸಾತ್ವಿಕನು. ನನ್ನ ಮಾತನ್ನು ಕೇಳಿರಿ. ನಿಮ್ಮಲ್ಲಿ ಪ್ರವಾದಿಯಿದ್ದರೆ ನಾನು ಅವನಿಗೆ ಜ್ಞಾನದೃಷ್ಟಿಯಲ್ಲಿ ಕಾಣಿಸಿಕೊಳ್ಳುವೆನು, ಇಲ್ಲವೆ ಸ್ವಪ್ನದಲ್ಲಿ ಅವನ ಸಂಗಡ ಮಾತಾಡುವೆನು. ನನ್ನ ಸೇವಕನಾದ ಮೋಶೆ ಅಂಥವನಲ್ಲ; ಅವನು ನನ್ನ ಮನೆಯಲ್ಲೆಲ್ಲಾ ನಂಬಿಗಸ್ತನು. ಅವನ ಸಂಗಡ ನಾನು ಗೂಢವಾಗಿ ಅಲ್ಲ, ಪ್ರತ್ಯಕ್ಷದಲ್ಲಿ ಸ್ಪಷ್ಟವಾಗಿಯೇ ಮಾತಾಡುವೆನು. ಅವನು ಯೆಹೋವನ ಸ್ವರೂಪವನ್ನೇ ದೃಷ್ಟಿಸುವನು. ಹೀಗಿರಲು ನೀವು ನನ್ನ ಸೇವಕನಾದ ಮೋಶೆಗೆ ವಿರೋಧವಾಗಿ ಮಾತಾಡುವದಕ್ಕೆ ಭಯಪಡಬೇಕಾಗಿತ್ತು ಎಂದು ಹೇಳಿ ಕೋಪಗೊಂಡು ಹೋದನು (ಅರಣ್ಯಕಾಂಡ 12:3,6-8).**

## ಸಹಿಸಿಕೊಳ್ಳುವಂಥ ನಂಬಿಕೆ

---

ಅಪೊಸ್ತಲನಾದ ಪೇತ್ರನು ಸಹಿಸಿಕೊಳ್ಳುವಂಥ ನಂಬಿಕೆಯ ಕುರಿತು ಬರೆದಿದ್ದಾನೆ.

**ನೀವು ಸದ್ಯಕ್ಕೆ ಸ್ವಲ್ಪ ಕಾಲ ದೇವರ ಚಿತ್ತಾನುಸಾರ ನಾನಾ ಕಷ್ಟಗಳಲ್ಲಿದ್ದು ದುಃಖಿಸುವವರಾಗಿದ್ದರೂ ಆ ಪದವಿಯನ್ನು ಆಲೋಚಿಸಿ ಹರ್ಷಿಸುವವರಾಗಿದ್ದೀರಿ. ಬಂಗಾರವು ನಾಶವಾಗುವಂಥದ್ದಾಗಿದ್ದರೂ ಅದನ್ನು ಬೆಂಕಿಯಲ್ಲಿ ಪುಟಾಹಾಕಿ ಶೋಧಿಸುವದುಂಟಷ್ಟೆ. ಬಂಗಾರಕ್ಕಿಂತಲೂ ಅಮೂಲ್ಯವಾಗಿರುವ ನಿಮ್ಮ ನಂಬಿಕೆಯು ಈ ಕಷ್ಟಗಳಿಂದ ಶೋಧಿತವಾಗಿ ಯೇಸು ಕ್ರಿಸ್ತನು ಪ್ರತ್ಯಕ್ಷವಾಗುವಾಗ ನಿಮಗೆ ಕೀರ್ತಿ ಪ್ರಭಾವ ಮಾನಗಳನ್ನು ಉಂಟುಮಾಡುವದು.**

**ನೀವು ಆತನನ್ನು ಕಣ್ಣಾರೆ ನೋಡಲಿಲ್ಲವಾದರೂ ಆತನನ್ನು ಪ್ರೀತಿಸುತ್ತೀರಿ. ನೀವು ಈಗ ಆತನನ್ನು ಕಾಣದಿದ್ದರೂ ಆತನಲ್ಲಿ ನಂಬಿಕೆಯಿಟ್ಟು ನಿಮ್ಮ ನಂಬಿಕೆಯ ಅಂತ್ಯಫಲವಾಗಿರುವ ಆತ್ಮರಕ್ಷಣೆಯನ್ನು ಹೊಂದುವವರಾಗಿ ಹೇಳಲಶಕ್ಯವಾದ ಪ್ರಭಾವವುಳ್ಳ ಸಂತೋಷದಿಂದ ಹರ್ಷಿಸುತ್ತೀರಿ (1 ಪೇತ್ರ 1:6-9).**

## ಯೋಬನ ಮಾದರಿ

ಯೋಬನು ತನ್ನ ಪರೀಕ್ಷೆಯ ಸಮಯದಲ್ಲಿ ಮಾಡಿದ ಘೋಷಣೆಗಳು ಯಾವಾಗಲೂ ನಂಬಿಕೆಯ ಸ್ಮಾರಕವಾಗಿರುತ್ತವೆ. ತನಗೆ ಏನಾಗುತ್ತಿದೆ ಎಂಬುದು ಯೋಬನಿಗೆ ಅರ್ಥವಾಗಲಿಲ್ಲ. ಖಂಡಿತವಾಗಿಯೂ ಅವನ ಸ್ನೇಹಿತರಿಗೂ ಅದು ಅರ್ಥವಾಗಲಿಲ್ಲ.

ಯೋಬ 13 ನೇ ಅಧ್ಯಾಯದ 15 ನೇ ವಚನದಲ್ಲಿ ನಾವು ಹೀಗೆ ಓದುತ್ತೇವೆ,

**ಆಹಾ, ಆತನು ನನ್ನನ್ನು ಕೊಲ್ಲುವನು, ಅದಕ್ಕಾಗಿ ಕಾದಿರುತ್ತೇನೆ.**

ಯೋಬ 19:23-27 ರಲ್ಲಿ ನಾವು ಅದ್ಭುತಕರವಾದ ನಂಬಿಕೆಯ ಘೋಷಣೆಯನ್ನು ಕಾಣುತ್ತೇವೆ.

**ಆಹಾ, ನನ್ನ ಮಾತುಗಳನ್ನು ಬರೆದಿಟ್ಟರೆ ಎಷ್ಟೋ ಲೇಸು! ಪುಸ್ತಕದಲ್ಲಿ ಲೇಖಿಸಿದರೆ ಎಷ್ಟೋ ಮೇಲು! ಕಬ್ಬಿಣದ ಕಂಠದಿಂದ ಬಂಡೆಯ ಮೇಲೆ ಕೆತ್ತಿ ಸೀಸ ಎರೆದು ಶಾಶ್ವತ ಶಾಸನವಾಗಿ ಮಾಡಿದರೆ ನನಗೆ ಎಷ್ಟೋ ಉಪಕಾರ! ನಾನಂತು ನನ್ನ ನ್ಯಾಯಸ್ಥಾಪಕನು ಜೀವಸ್ವರೂಪನೆಂದು ಬಲ್ಲೆನು; ಆತನು ಕಡೆಗೆ ದೂಳಿನ ಮೇಲೆ (ಸಾಕ್ಷಿಯಾಗಿ) ನಿಂತುಕೊಳ್ಳುವನು; ನನ್ನ ಚರ್ಮವು ಹೀಗೆ ಬಿರಿದು ಹಾಳಾದ ಬಳಿಕ ನಿರ್ದೇಹನಾಗಿ ದೇವರನ್ನು ನೋಡುವೆನು; ಕಣ್ಣಾರೆ ಕಾಣುವೆನು, ನಾನೇ ನಾನಾಗಿ ನೋಡುವೆನು, ಮತ್ತೊಬ್ಬನಾಗಿ ಅಲ್ಲ. ನನ್ನ ಹೃದಯವು (ಹಂಬಲಿಕೆಯಿಂದ) ನನ್ನಲ್ಲಿ ಕುಂದಿದೆ.**

ಯೋಬ 23: 8-12 ರಲ್ಲಿರುವ ಯೋಬನ ಮಾತುಗಳನ್ನು ಗಮನಿಸಿರಿ

**ಅಯ್ಯೋ, ನಾನು ಮುಂದೆ ಹೋದರೂ ಆತನು ಸಿಕ್ಕುವದಿಲ್ಲ, ಹಿಂದೆ ಹೋದರೂ ಆತನನ್ನು ಕಾಣಲಾರೆನು. ಎಡಗಡೆಯಲ್ಲಿ ಹುಡುಕಿದರೂ ನೋಡಲಾರೆನು, ಬಲಗಡೆಗೆ ತಿರುಗಿಕೊಂಡರೂ ಆತನು ಕಾಣಿಸುವದಿಲ್ಲ. ಆತನಾದರೋ ನನ್ನ ದಾರಿಯನ್ನು ಬಲ್ಲನು, ಆತನೇ ನನ್ನನ್ನು ಶೋಧಿಸಿ ನೋಡಿದರೆ ಚೊಕ್ಕ ಬಂಗಾರವಾಗಿ ಕಾಣಿಸುವೆನು. ಆತನ ಹೆಜ್ಜೆಯ ಜಾಡಿನಲ್ಲೇ ಕಾಲಿಟ್ಟಿದ್ದೇನೆ, ಓರೆಯಾಗದೆ ಆತನ ದಾರಿಯನ್ನೇ ಹಿಡಿದಿದ್ದೇನೆ. ಆತನ ತುಟಿಗಳಿಂದ ಹೊರಟ ನಿಯಮಗಳಿಗೆ ನಾನು ಹಿಂದೆಗೆಯಲಿಲ್ಲ, ಆತನ ಬಾಯಿಂದ ಬಂದ ಮಾತುಗಳನ್ನು ಎದೆಯಲ್ಲಿ ನಿಧಿಯನ್ನಾಗಿ ಬಚ್ಚಿಟ್ಟುಕೊಂಡಿದ್ದೇನೆ.**

ಯೋಬನು ತನ್ನ ಸ್ಥಿತಿಗತಿಗಳು ಏನೇ ಆಗಿದ್ದರೂ ಅದನ್ನು ಗಮನಿಸದೆ ದೇವರನ್ನು ನಂಬಿದ್ದನು.

## ನಂಬಿಕೆಯ ಪಟ್ಟಿ

ಇಬ್ರಿಯ 11 ನೇ ಅಧ್ಯಾಯದ ಬಗ್ಗೆ ಅನೇಕ ಪುಸ್ತಕಗಳನ್ನು ಬರೆಯಲಾಗಿದೆ ಮತ್ತು ಈ ಅಮೋಘವಾದ ಅಧ್ಯಾಯವನ್ನು

ಅವಲೋಕಿಸದೆ ನಂಬಿಕೆಯ ಕುರಿತಾದ ಯಾವ ಅಧ್ಯಯನವು ಪೂರ್ಣವಾಗುವುದಿಲ್ಲ. ಈ ನಲವತ್ತು ವಚನಗಳಲ್ಲಿ "ನಂಬಿಕೆಯಿಂದ" ಎಂಬ ಪದಗಳನ್ನು ಹದಿನೆಂಟು ಬಾರಿ ಬಳಸಲಾಗಿದೆ.

ಬೇರೆ ಅನುವಾದವನ್ನು ಬಳಸುವುದರಿಂದ ಪವಿತ್ರಗ್ರಂಥದ ವಚನಗಳಲ್ಲಿ ಹೊಸ ಅರ್ಥಗಳನ್ನು ಕಂಡುಕೊಳ್ಳಲು ನಮಗೆ ಸಾಧ್ಯವಾಗುತ್ತದೆ, ಈ ವಾಕ್ಯಭಾಗಕ್ಕಾಗಿ ನಾವು ನ್ಯೂ ಲಿವಿಂಗ್ ಬೈಬಲ್ ಅನ್ನು ಬಳಸಲಿದ್ದೇವೆ.

ನಂಬಿಕೆ ಎಂದರೇನು? ನಂಬಿಕೆಯು ನಾವು ಏನನ್ನೂ ನಿರೀಕ್ಷಿಸುತ್ತಿದ್ದೇವು ಅದು ನಡೆಯುತ್ತದೆ ಎಂಬ ದೃಢವಾದ ಭರವಸೆಯಾಗಿದೆ. ಇದು ನಾವು ಕಣ್ಣಿನಿಂದ ಕಾಣಲಾಗದ ವಿಷಯಗಳ ಕುರಿತಾದ ಸಾಕ್ಷ್ಯವಾಗಿದೆ.

ಅವರ ನಂಬಿಕೆಯ ನಿಮಿತ್ತವಾಗಿ ಹಿಂದಿನ ಕಾಲಗಳ ಜನರು ದೈವಸಮ್ಮತಿಯನ್ನು ಪಡೆದುಕೊಂಡರು.

**ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳಿದುಕೊಳ್ಳವದೂ ಆಗಿದೆ. ನಮ್ಮ ಪೂರ್ವಿಕರು ನಂಬಿಕೆಯುಳ್ಳವರಾಗಿದ್ದದರಿಂದಲೇ ಒಳ್ಳೇ ಹೆಸರನ್ನು ಹೊಂದಿದರು ಲೋಕಗಳು ದೇವರ ಮಾತಿನಿಂದ ನಿರ್ಮಿತವಾದವೆಂದು ನಂಬಿಕೆಯಿಂದಲೆ ನಾವು ತಿಳಿದುಕೊಂಡು ಕಾಣಿಸುವ ಈ ಜಗತ್ತು ದೃಶ್ಯವಸ್ತುಗಳಿಂದ ಉಂಟಾಗಲಿಲ್ಲವೆಂದು ಗ್ರಹಿಸುತ್ತೇನೆ (ಇಬ್ರಿಯ 11:1-3).**

ನಂಬಿಕೆಯು ನಾವು ಏನನ್ನೂ ನಿರೀಕ್ಷಿಸುತ್ತಿದ್ದೇವು ಅದು ನಡೆಯುತ್ತದೆ ಎಂಬ ದೃಢವಾದ ಭರವಸೆಯಾಗಿದೆ. ನಿರೀಕ್ಷೆಯು ದೃಢವಾದ ಭರವಸೆಯಾಗಿ ಮಾರ್ಪಟ್ಟಿದೆ. ನಂಬಿಕೆಯು ಕಣ್ಣಿಗೆ ಕಾಣಲಾರದ ಸಂಗತಿಗಳನ್ನು ಸ್ವಾಭಾವಿಕ ಮಂಡಲದಲ್ಲಿ ಹೊಂದಿಕೊಳ್ಳುತ್ತದೆ. ವಿಶ್ವವು ಸಹ ಆಜ್ಞೆಯಿಂದ – ನಂಬಿಕೆಯಿಂದ ಸೃಷ್ಟಿಸಲ್ಪಟ್ಟಿತು ಎಂದು ದೇವರು ನಮಗೆ ಹೇಳುತ್ತಾನೆ. ದೃಶ್ಯವಾಗಿರುವಂಥ ಸಂಗತಿಗಳು ಅದೃಶ್ಯವಾಗಿರುವಂಥ ಸಂಗತಿಗಳಿಂದ ಸೃಷ್ಟಿಸಲ್ಪಟ್ಟಿತು.

**ಹೇಬೇಲ**

ಕಾಯಿನನು ಮತ್ತು ಹೇಬೇಲನು ಎರಡು ರೀತಿಯ ಯಜ್ಞಗಳನ್ನು ಅರ್ಪಿಸಿದರು, ಆದರೆ ಹೆಬೇಲನು ನಂಬಿಕೆಯಿಂದ ಯಜ್ಞವನ್ನು

ಅರ್ಪಿಸಿದನು. ಅದನ್ನು ನಂಬಿಕೆಯಿಂದ ಮಾಡಿದ ಕಾರಣ, ಅದು ಅಂಗೀಕರಿಸಲ್ಪಟ್ಟಿತು.

ನಂಬಿಕೆಯಿಂದಲೆ ಹೇಬೇಲನು ಕಾಯಿನನ ಯಜ್ಞಕ್ಕಿಂತ ಶ್ರೇಷ್ಠ ಯಜ್ಞವನ್ನು ದೇವರಿಗೆ ಸಮರ್ಪಿಸಿದನು. ಅದರ ಮೂಲಕ ತಾನು ನೀತಿವಂತನೆಂದು ಸಾಕ್ಷಿ ಹೋಂದಿದನು. ದೇವರು ಅವನ ಕಾಣಿಕೆಗಳನ್ನು ಅಂಗೀಕಾರಮಾಡಿದ್ದೇ ಆ ಸಾಕ್ಷಿ ಅವನು ಸತ್ತಿದ್ದರೂ ಅವನ ನಂಬಿಕೆಯ ಮೂಲಕ ಇನ್ನು ಮಾತಾಡುತ್ತಾನೆ (ವಚನ **4).**

ಹನೋಕ

ಹನೋಕನು ಮರಣವನ್ನು ಅನುಭವಿಸದೇ ಒಯ್ಯಲ್ಪಟ್ಟದ್ದು. ನಂಬಿಕೆಯಿಂದಲೇ ಅವನನ್ನು ದೇವರು ತೆಗೆದುಕೊಂಡು ಹೋದದ್ದರಿಂದ ಅವನು ಯಾರಿಗೂ ಸಿಕ್ಕಲಿಲ್ಲ. ಅವನು ಒಯ್ಯಲ್ಪಡುವದಕ್ಕಿಂತ ಮೊದಲು ದೇವರಿಗೆ ಮೆಚ್ಚಿಕೆಯಾದವನಾಗಿದ್ದನೆಂದು ಸಾಕ್ಷಿ ಉಂಟು.

ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ. ದೇವರ ಬಳಿಗೆ ಬರುವವನು ದೇವರು ಇದ್ದಾನೆ ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ (ವಚನ **5,6).**

ನೋಹ

ನಂಬಿಕೆಯಿಂದಲೇ ನೋಹನು ಅದುವರೆಗೆ ಕಾಣದಿದ್ದ ಸಂಗತಿಗಳ ವಿಷಯವಾಗಿ ದೈವೋಕ್ತಿಯನ್ನು ಹೊಂದಿ ಭಯಭಕ್ತಿಯುಳ್ಳವನಾಗಿ ತನ್ನ ಮನೆಯವರ ಸಂರಕ್ಷಣೆಗೋಸ್ಕರ ನಾವೆಯನ್ನು ಕಟ್ಟಿ ಸಿದ್ಧಮಾಡಿದನು. ಆದುದರಿಂದ ಅವನು ಲೋಕದವರನ್ನು ದಂಡನೆಗೆ ಪಾತ್ರರೆಂದು ನಿರ್ಣಯಿಸಿಕೊಂಡು ನಂಬಿಕೆಯ ಫಲವಾದ ನೀತಿಗೆ ಭಾಧ್ಯನಾದನು (ವಚನ. **7).**

ಅಬ್ರಹಾಮ

ನಂಬಿಕೆಯಿಂದಲೇ ಅವನು ವಾಗ್ದಾತ್ತ ದೇಶಕ್ಕೆ ಬಂದಾಗ ಅಲ್ಲಿ ಅನ್ಯ ದೇಶದಲ್ಲಿ ಇದ್ದವನಂತೆ ಡೇರೆಗಳಲ್ಲಿ ಇದ್ದಿಕೊಂಡು ಪ್ರವಾಸಿಯಾಗಿ ಬದುಕಿದನು. ಅದೇ ವಾಗ್ದಾನಕ್ಕೆ ಸಹಭಾಧ್ಯರಾಗಿದ್ದ ಇಸಾಕನೂ ಯಾಕೋಬನೂ ಅವನಂತೆಯೇ ಡೇರೆಗಳಲ್ಲಿ ವಾಸಿಸಿದರು. ಯಾಕಂದರೆ ಅವನು ಶಾಶ್ವತವಾದ ಅಸ್ತಿವಾರಗಳುಳ್ಳ ಪಟ್ಟಣವನ್ನು ಅಂದರೆ ದೇವರು ಸ್ಕಲ್ಪಿಸಿ ನಿರ್ಮಿಸಿದ ಪಟ್ಟಣವನ್ನು ಎದುರುನೋಡುತ್ತಿದ್ದನು (ವಚನಗಳು **9-10).**

ಸಾರ

ಇದಲ್ಲದೆ ಸಾರಳು ವಾಗ್ದಾನ ಮಾಡಿದಾತನನ್ನು ನಂಬತಕ್ಕವನೆಂದೆಣಿಸಿ ತಾನು ಪ್ರಾಯ ಮೀರಿದವಳಾಗಿದ್ದರೂ ನಂಬಿಕೆಯಿಂದಲೇ ಗರ್ಭವತಿಯಾಗುವದಕ್ಕೆ ಶಕ್ತಿಯನ್ನು ಹೊಂದಿದಳು ಆದುದರಿಂದ ಮೃತಪ್ರಾಯನಾಗಿದ್ದ ಒಬ್ಬನಿಂದ ಆಕಾಶದ ನಕ್ಷತ್ರಗಳಂತೆಯೂ ಸಮುದ್ರ ತೀರದಲ್ಲಿರುವ ಉಸುಬಿನಂತೆಯೂ ಅಸಂಖ್ಯವಾಗಿ ಮಕ್ಕಳು ಹುಟ್ಟಿದರು. (ವಚನ **11-12).**

ಕಡೆಯವರೆಗೂ ನಂಬಿಗಸ್ತರಾಗಿದ್ದವರು

ಇವರೆಲ್ಲರು ವಾಗ್ದಾನದ ಫಲಗಳನ್ನು ಹೊಂದದೆ ಅವುಗಳನ್ನು ದೂರದಿಂದ ನೋಡಿ ಉಲ್ಲಾಸದೊಡನೆ ವಂದಿಸಿ ನಂಬಿಕೆಯುಳ್ಳವರಾಗಿ ಮೃತರಾದರು. ತಾವು ಭೂಮಿಯ ಮೇಲೆ ಪರದೇಶದವರೂ ಪ್ರವಾಸಿಗಳು ಆಗಿದ್ದೆವೆಂದು ಒಪ್ಪಿಕೊಂಡರು. ಇಂಥ ಮಾತುಗಳನ್ನಾಡುವವರು ತಾವು ಸ್ವದೇಶವನ್ನು ಹುಡುಕುವವರೆಂಬರ್ಥವನ್ನು ವ್ಯಕ್ತಪಡಿಸುತ್ತಾರೆ. ತಾವು ಹೊರಟು ಬಂದಿದ್ದ ದೇಶದ ಮೇಲೆ ಮನಸ್ಸಿಟ್ಟವರಾಗಿದ್ದರೆ ತಿರಿಗಿ ಅಲ್ಲಿಗೆ ಹೋಗುವದಕ್ಕೆ ಅವರಿಗೆ ಯಾವಾಗಲೂ ಅವುಕಾಶವಿತ್ತು ಆದರೆ ಅವರು ಪರಲೋಕವೆಂಬ ಉತ್ತಮ ದೇಶವನ್ನು ಹಾರೈಸುವವರು ಅದರಿಂದ ದೇವರು ಅವರ ದೇವರೇ ಎನ್ನಿಸಿಕೊಳ್ಳುವದಕ್ಕೆ ನಾಚಿಕೆಗೊಳ್ಳದೇ ಅವರಿಗೋಸ್ಕರ ಪಟ್ಟಣವನ್ನು ಸಿದ್ಧಮಾಡಿದ್ದಾನೆ. (ವಚನ **13-16)**

ಅಬ್ರಹಾಮನು ಇಸಾಕನನ್ನು ಅರ್ಪಿಸಿದನು

ಅಬ್ರಹಾಮನು ಪರಿಶೋಧಿತನಾಗಿ ನಂಬಿಕೆಯಿಂದಲೇ ಇಸಾಕನನ್ನು ಸಮರ್ಪಿಸಿದನು ಇಸಾಕನು ಅವನ ಏಕಪುತ್ರನಾಗಿದ್ದರೂ ಮತ್ತು ಇಸಾಕನಿಂದ ಹುಟ್ಟುವವರೇ ನಿನ್ನ ಸಂತತಿ ಅನ್ನಿಸಿಕೊಳ್ಳುವರೆಂದು ದೇವರು ಅವನಿಗೆ ಹೇಳಿದ್ದರೂ ಆ ವಾಗ್ದಾನಗಳನ್ನು ಹೊಂದಿದ ಅವನು ಆ ಒಬ್ಬನೇ ಮಗನನ್ನು ಸಮರ್ಪಿಸುವದಕ್ಕಿದ್ದನು. ನನ್ನ ಮಗನು ಸತ್ತರೂ ದೇವರು ಅವನನ್ನು ಬದುಕಿಸ ಸಮರ್ಥನಾಗಿದ್ದಾನೆಂದು ತಿಳಿದುಕೊಂಡನು. ಮತ್ತು ಸತ್ತವರೊಳಗಿಂದಲೇ ಜೀವಿತನಾಗಿ ಬಂದವನಂತೆ ಅವನನ್ನು ಹೊಂದಿದನು. (ವಚನ **17-19).**

**ಇಸಾಕನು ಯಾಕೋಬ ಮತ್ತು ಏಸಾವರನ್ನು ಆಶೀರ್ವದಿಸಿದನು**

**ನಂಬಿಕೆಯಿಂದಲೇ ಇಸಾಕನು ಯಾಕೋಬನು ಏಸಾವನನ್ನು ಆಶೀರ್ವದಿಸಿದಾಗ ಮುಂದೆ ಸಂಭವಿಸಬೇಕಾದ ಸಂಗತಿಗಳನ್ನು ಸೂಚಿಸಿದನು (ವಚನ 20).**

**ಯಾಕೋಬನು ಯೋಸೇಫನ ಮಕ್ಕಳನ್ನು ಆಶೀರ್ವದಿಸಿದನು**

**ಯಾಕೋಬನು ತಾನು ಸಾಯುತ್ತಿರುವಾಗ ನಂಬಿಕೆಯಿಂದಲೇ ಯೋಸೆಫನ ಮಕ್ಕಳಿಬ್ಬರನ್ನು ಆಶೀರ್ವದಿಸಿದನು ತನ್ನ ಕೋಲಿನ ಮೇಲೆ ಬಾಗಿಕೊಂಡು ದೇವರಿಗೆ ನಮಸ್ಕಾರ ಮಾಡಿದನು (ವಚನ 21).**

**ಯೋಸೇಫ**

ಯೋಸೇಫನು ಸಾಯುವ ಸಮಯದಲ್ಲಿಯೂ ಇಸ್ರಾಯೇಲ್ ಜನರು ವಾಗ್ದತ್ತ ದೇಶಕ್ಕೆ ಹಿಂದಿರುಗಿ ಹೋಗುವರು ಎಂದು ನಂಬಿದ್ದನು.

**ಯೋಸೆಫನು ತೀರಿಹೋಗುವಾಗ ಇಸ್ರಾಯೇಲ್ಯರು ಐಗುಪ್ತದೇಶದಿಂದ ಹೊರಡುವದನ್ನು ಕುರಿತು ನಂಬಿಕೆಯಿಂದಲೇ ಮಾತಾಡಿ ತನ್ನ ಶವವನ್ನು ತಕ್ಕೊಂಡು ಹೋಗುವ ವಿಷಯದಲ್ಲಿ ಅಪ್ಪಣೆ ಕೊಟ್ಟನು (ವಚನ 22).**

**ಗೋಡೆಗಳು ಬಿದ್ದವು**

ಯೆಹೋಶುವನು ದೇವರನ್ನು ನಂಬಿದನು, ಅವನು ಆತನ ಆಜ್ಞೆಗಳಿಗೆ ವಿಧೇಯನಾಗಿದ್ದನು, ಇಸ್ರಾಯೇಲ್ ಜನರನ್ನು ವಾಗ್ದತ್ತ ದೇಶದಲ್ಲಿ ಅಸಾಧಾರಣವಾಗಿರುವ ಮೊದಲ ಜಯವನ್ನು ಹೊಂದಿಕೊಳ್ಳುವಂತೆ ಅವರನ್ನು ಮುನ್ನಡೆಸಿದನು.

**ನಂಬಿಕೆಯಿಂದಲೇ ಅವರು ಏಳು ದಿವಸಗಳ ತನಕ ಎರಿಕೋ ಪಟ್ಟಣದ ಗೋಡೆಗಳನ್ನು ಸುತ್ತಿದ ಮೇಲೆ ಅವು ಬಿದ್ದವು (ವಚನ 30).**

**ರಾಹಾಬಳು**

ಯೆರಿಕೋ ಪಟ್ಟಣದಲ್ಲಿ ವೇಶ್ಯೆಯಾಗಿದ್ದ ರಾಹಾಬಳು ನಂಬಿಕೆಯಿಂದ ಕಾರ್ಯಮಾಡಿದಳು, ಅವಳು ಗೂಢಚಾರರನ್ನು ಸ್ವೀಕರಿಸಿಕೊಂಡಳು ಮತ್ತು ಅವಳು ಅವರ ದೇವರ ಶಕ್ತಿಯನ್ನು ನಂಬಿದ್ದರಿಂದ ಅವರಿಗಾಗಿ ತನ್ನ ಪ್ರಾಣವನ್ನು ಅಪಾಯಕ್ಕೆ ಈಡುಮಾಡಿಕೊಂಡಳು.

**ನಂಬಿಕೆಯಿಂದಲೇ ರಾಹಾಬಳೆಂಬ ಸೂಳೆಯು ಗೂಢಾಚಾರರನ್ನು ಸಮಾಧಾನವಾಗಿ ಸೇರಿಸಿಕೊಂಡು ನಂಬದವರೊಂದಿಗೆ ನಾಶವಾಗಲಿಲ್ಲ. (ವಚನ 31).**

ಗಿದ್ಯೋನ, ಬಾರಾಕ, ಸಂಸೋನ, ಯೆಪ್ತಾಹ, ದಾವೀದ,
ಸಮುವೇಲ ಮತ್ತು ಪ್ರವಾದಿಗಳು

ಇನ್ನೂ ಏನು ಹೇಳಬೇಕು? ಗಿದ್ಯೋನ ಬಾರಾಕ ಸಂಸೋನ ಯೆಪ್ತಾಹ ದಾವೀದ ಸಮುವೇಲ ಎಂಬವರ ವೃಂತಾಂತವನ್ನು ಪ್ರವಾದಿಗಳ ವೃತ್ತಾಂತವನ್ನು ವಿವರವಾಗಿ ಹೇಳಬೇಕಾದರೆ ನನಗೆ ಸಮಯ ಸಾಲದು.

ನಂಬಿಕೆಯ ಮೂಲಕ ಅವರು ರಾಜ್ಯದಲ್ಲಿ ಸ್ವಾಧೀನ ಮಾಡಿಕೊಂಡರು ನೀತಿಯನ್ನು ನಡಿಸಿದರು. ವಾಗ್ದಾನಗಳನ್ನು ಪಡಕೊಂಡರು. ಸಿಂಹಗಳ ಬಾಯಿ ಕಟ್ಟಿದರು. ಬೆಂಕಿಯ ಬಲವನ್ನು ಆರಿಸಿದರು. ಕತ್ತಿಯ ಬಾಯಿಗೆ ತಪ್ಪಿಸಿಕೊಂಡರು. ನಿರ್ಬಲರಾಗಿದ್ದು ಬಲಿಷ್ಠರಾದರು. ಯುದ್ಧದಲ್ಲಿ ಪರಾಕ್ರಮಶಾಲಿಗಳಾದರು. ಪರರ ದಂಡುಗಳನ್ನು ಓಡಿಸಿಬಿಟ್ಟರು.

ಆದಿ ಸಭೆ

ಸ್ತ್ರೀಯರು ಸತ್ತುಹೋಗಿದ್ದ ತಮ್ಮವರನ್ನು ಪುನರುತ್ಥಾನದಿಂದ ತಿರಿಗಿ ಹೊಂದಿದರು. ಕೆಲವರು ತಾವು ಯಾತನೆಯ ಯಂತ್ರಕ್ಕೆ ಕಟ್ಟಲ್ಪಟ್ಟಾಗ ಶ್ರೇಷ್ಠ ಪುನರುತ್ಥಾನವನ್ನು ಹೊಂದುವದಕ್ಕೋಸ್ಕರ ಬಿಡುಗಡೆ ಬೇಡವೆಂದು ಹೇಳಿ ಮುರಿಸಿ ಕೊಂಡು ಸತ್ತರು

ಬೇರೆ ಕೆಲವರು ಅಪಹಾಸ್ಯ ಕೊರಡೆಯ ಪೆಟ್ಟು ಬೇಡಿ ಸೆರೆಮನೆ ಇವುಗಳನ್ನು ಅನುಭವಿಸಿದರು ಕೆಲವರನ್ನು ಜನರು ಕಲ್ಲೆಸೆದು ಕೊಂದರು.

ಕೆಲವರನ್ನು ಗರಗಸದಿಂದ ಕೊಯ್ದು ಕೊಂದರು. ದೇಹ ದ್ರೋಹಿಗಳಾಗಿ ಪ್ರಾಣವನ್ನು ಉಳಿಸಿಕೊಳ್ಳಿರೆಂದು ಕೆಲವರನ್ನು ಪ್ರೇರೆಪಿಸಿದರು. ಕೆಲವರನ್ನು ಕತ್ತಿಯಿಂದ ಕೊಂದರು. ಕೆಲವರು ಕೊರತೆ ಹಿಂಸೆ ಬಾಧೆ ಇವುಗಳನ್ನು ಅನುಭವಿಸುವವರಾಗಿದ್ದು ಕುರಿ ಮೇಕೆಗಳ ಚರ್ಮವನ್ನು ತೊಟ್ಟುಕೊಂಡವರಾಗಿ ತಿರುಗಾಡಿದರು.

ಇಂಥವರಿಗೆ ಈ ಲೋಕವು ಯೋಗ್ಯಸ್ಥಳವಾಗಿರಲಿಲ್ಲ. ಅವರು ತಮ್ಮ ದೇಶದ ಕಾಡು ಬೆಟ್ಟ ಗವಿ ಕುಣಿಗಳಲ್ಲಿ ಅಲೆಯುವವರಾಗಿದ್ದರು.

ನಾವು ಓಟವನ್ನು ಓಡಿ ಮುಗಿಸಬೇಕು

ಇವರೆಲ್ಲರು ನಂಬಿಕೆಯ ಮೂಲಕ ಒಳ್ಳೆ ಹೆಸರನ್ನು ಸಂಪಾದಿಸಿಕೊಂಡಿದ್ದರೂ ವಾಗ್ದಾನದ ಫಲವನ್ನು ಹೊಂದಲಿಲ್ಲ. ದೇವರು ನಮಗೋಸ್ಕರ ಶ್ರೇಷ್ಟವಾದ ಭಾಗ್ಯವನ್ನು ಏರ್ಪಡಿಸಿ ನಾವಿಲ್ಲದೆ ಅವರು ಸಿದ್ಧಿಗೆ ಬರಬಾರದೆಂದು ಸಂಕಲ್ಪಿಸಿದನು (ವಚನ **32-40**).

ಅವರು ವಾಗ್ದಾನವನ್ನು ಕಾಣದಿದ್ದರೂ - ಅವರು ಮೆಸ್ಸೀಯನ - ವಿಮೋಚಕನ ಬರೋಣನ್ನು ನೋಡದಿದ್ದರೂ, ಅವರು ಮರಣದ ವರೆಗೂ ನಂಬಿಕೆಯಿಂದ ಸಾಗಿದರು.

**ಗಂಭೀರವಾದ ಎಚ್ಚರಿಕೆ**

ಹಳೆಯ ಒಡಂಬಡಿಕೆಯಲ್ಲಿ ನಂಬಿಕೆಯಿಂದ ಬದುಕಿ ಸತ್ತವರ ಪಟ್ಟಿಯನ್ನು ಇಬ್ರಿಯ ಪುಸ್ತಕದ ಬರಹಗಾರ ಬರೆಯುವ ಮುನ್ನ, ಅವನು ನಮಗೆ ಒಂದು ಎಚ್ಚರಿಕೆ ಕೊಟ್ಟಿದ್ದಾನೆ.

**ಆದರೆ ನನ್ನವನಾಗಿರುವ ನೀತಿವಂತನು ನಂಬಿಕೆಯಿಂದಲೇ ಬದುಕುವನು ಅವನು ಹಿಂದೆಗೆದರೆ ಅವನಲ್ಲಿ ನನಗೆ ಸಂತೋಷವಿರುವದಿಲ್ಲ ಎಂದು ಬರೆದದೆ (ಇಬ್ರಿಯ 10:38).**

ಈ ಜನರ ಬಗ್ಗೆ ದೇವರು ನಾಚಿಕೆಪಡಲಿಲ್ಲ ಎಂದು ಇಬ್ರಿಯ ಪತ್ರಿಕೆಯಲ್ಲಿ ನಮಗೆ ಹೇಳಲಾಗಿದೆ.

**ಆದರೆ ಅವರು ಪರಲೋಕವೆಂಬ ಉತ್ತಮ ದೇಶವನ್ನು ಹಾರೈಸುವವರು ಅದರಿಂದ ದೇವರು ಅವರ ದೇವರೇ ಎನ್ನಿಸಿಕೊಳ್ಳುವದಕ್ಕೆ ನಾಚಿಕೆಗೊಳ್ಳದೇ ಅವರಿಗೋಸ್ಕರ ಪಟ್ಟಣವನ್ನು ಸಿದ್ಧಮಾಡಿದ್ದಾನೆ (ಇಬ್ರಿಯ 11:16).**

**ಪರಾಮರ್ಶೆಗಾಗಿರುವ ಪ್ರಶ್ನೆಗಳು**

---

1. ಅಬ್ರಹಾಮನ ನಂಬಿಕೆಯ ನಾಲ್ಕು ಹೆಜ್ಜೆಗಳು ಯಾವುವು?

2. ಅರಣ್ಯಕಾಂಡ ಪುಸ್ತಕದಲ್ಲಿ ದೇವರು ಮೋಶೆಯನ್ನು ಬಗ್ಗೆ ಏನೆಂದು ವಿವರಿಸಿದ್ದಾನೆ? ಇದು ಏಕೆ ಮುಖ್ಯವಾಗಿದೆ?

## ಪಾಠ ಮೂರು

# ನಂಬಿಕೆಯ ಅಸ್ತಿವಾರಗಳು

ನಾವು ಯಾರಾಗಿದ್ದೇವೆ ಎಂಬುದರ ಆಧಾರದ ಮೇಲೆ ಭೂಮಿಯನ್ನು ಬದಲಾಯಿಸುವಂತಹ ಅಸಾಧಾರಣವಾದ ನಂಬಿಕೆಯು ಬರುತ್ತದೆ. ನಾವು ಯೇಸು ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾಗಿದ್ದೇವೆ. ನಾವು ನಂಬಿಕೆ ಅಂದರೆ ದೇವರ ರೀತಿಯ ನಂಬಿಕೆ ಉಳ್ಳವರಾಗಿರಬಹುದು, ಏಕೆಂದರೆ ನಾವು ಆತನಲ್ಲಿ ನೆಲೆಗೊಂಡಿದ್ದೇವೆ. ನಾವು ಆತನ ಎಲುಬಿನಿಂದ ಬಂದಿರುವ ಎಲುಬು, ಆತನ ಮಾಂಸದಿಂದ ಬಂದಿರುವ ಮಾಂಸವು ಆಗಿದ್ದೇವೆ, ಮತ್ತು ನಾವು ಆತನ ಸ್ವರವನ್ನು ಕೇಳುವವರಾಗಿದ್ದೇವೆ.

ಯಾವ ದೇಹಕ್ಕೆ ನಾವು ಅಂಗಗಳಾಗಿದ್ದೇವೋ ಸಭೆಯೆಂಬ ಆ ದೇಹವನ್ನು ಕ್ರಿಸ್ತನು ಹಾಗೆಯೇ ಪೋಷಿಸಿ ಸಂರಕ್ಷಿಸುತ್ತಾನಲ್ಲಾ (ಎಫೆಸ 5:30).

ಕ್ರಿಸ್ತನಲ್ಲಿ ನಮಗೆ ಎರಡು ಸ್ಥಾನಗಳಿವೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಮೊದಲನೆಯದು ಸ್ಥಾನಕ್ಕೆ ಸಂಬಂಧಿಸಿದ್ದು, ಎರಡನೆಯದು ಅನುಭವಕ್ಕೆ ಸಂಬಂಧಪಟ್ಟಿದ್ದು ಆಗಿದೆ.

### ಕ್ರಿಸ್ತನಲ್ಲಿ ನಾವು ಯಾರಾಗಿದ್ದೇವೆ

#### ನೂತನ ಜನನ

ರಕ್ಷಣೆಯ ಸಮಯದಲ್ಲಿ ಅದ್ಭುತವು ನಡೆಯುತ್ತದೆ. ಪವಿತ್ರಾತ್ಮನು ಯೇಸು ಕ್ರಿಸ್ತನ ದೇಹದೊಳಕ್ಕೆ ಸೇರಿಸುವಂತೆ ನಾವು ಪವಿತ್ರಾತನಲ್ಲಿ ದೀಕ್ಷಾಸ್ನಾನಮಾಡಿಸಿಕೊಂಡೆವು.

ಹಾಗೆಯೇ ಕ್ರಿಸ್ತನು ಯೆಹೂದ್ಯರಾಗಲಿ ದಾಸರಾಗಲಿ ಸ್ವತಂತ್ರರಾಗಲಿ ನಾವೆಲ್ಲರೂ ಒಂದೇ ದೇಹವಾಗುವದಕ್ಕಾಗಿ ಒಂದೇ ಆತ್ಮದಲ್ಲಿ ದೀಕ್ಷಾಸ್ನಾನಮಾಡಿಸಿಕೊಂಡೆವು. ಒಂದೇ ಆತ್ಮ ನಮ್ಮೆಲ್ಲರಿಗೆ ಪಾನವಾಗಿ ಕೊಡಲ್ಪಟ್ಟಿತು (1 ಕೊರಿಂಥ 12:13).

ಆತನಲ್ಲಿ ನಾವು ಹೊಸ ಸ್ಥಾನವನ್ನು ಹೊಂದಿದ್ದೇವೆ. ನಾವು ಹೊಸದಾಗಿ ಹುಟ್ಟಿದ್ದೇವೆ. ನಾವು ಆತನಲ್ಲಿ ನೂತನ ಸೃಷ್ಟಿಗಳಾಗಿದ್ದೇವೆ.

ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು (2 ಕೊರಿಂಥ 5:17).

ನಾವು ಈ ಹಿಂದೆ “ಹಳೆ ವ್ಯಕ್ತಿಗಳು” ಆಗಿದ್ದೆವು ಆದರೆ ಇನ್ನು ಮೇಲೆ ನಾವು ಹಳೆ ವ್ಯಕ್ತಿಗಳಾಗಿರುವುದಿಲ್ಲ. ಆ ವ್ಯಕ್ತಿಯು "ಸತ್ತುಹೋಗಿದ್ದಾನೆ." ಎಲ್ಲವು ನೂತನವಾಗಿದೆ.

“ನೂತನ ಸೃಷ್ಟಿಗಳಾಗಿರುವ” ನಾವು ಕ್ರಿಸ್ತನಲ್ಲಿ ಒಂದಾಗಿದ್ದೇವೆ. ಆತನು ಏನೇನಾಗಿದ್ದಾನೋ ನಾವು ಸಹ ಹಾಗೆಯೇ ಆಗಿದ್ದೇವೆ. ಆತನ ಬಳಿಯಿರುವಂಥದೆಲ್ಲವು ಈಗ ನಮ್ಮದಾಗಿದೆ. ನಾವು ಆತ್ಮಿಕವಾಗಿ ಸತ್ತುಹೋಗಿದ್ದವು. ಆದರೆ ಈಗ ನಾವು ಸಂಪೂರ್ಣವಾಗಿ ಹೊಸದಾದ ಗುರುತು ಉಳ್ಳಂಥ ಜೀವಿಸುವ ಆತ್ಮವಾಗಿದ್ದೇವೆ.

ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು (1 ಕೊರಿಂಥ 15:22).

**ದೇವರ ನೀತಿ**

ಕೆಲವರು ಅಪರಾಧದ, ಖಂಡನೆಯ ಭಾವನೆಗಳನ್ನು ಅನುಭವಿಸುತ್ತಿದ್ದಾರೆ, ಅದು ಅವರು ದೇವರು ವಾಗ್ದಾನ ಮಾಡಿರುವಂಥದ್ದೆಲ್ಲವನ್ನು ನಂಬಿ ಅವುಗಳನ್ನು ಪಡೆದುಕೊಳ್ಳದಂತೆ ಅವರ ನಂಬಿಕೆಯನ್ನು ತಡೆಯುತ್ತಿದೆ. ನೂತನ ಸೃಷ್ಟಿಯ ಕುರಿತಾದ ಪ್ರಕಟಣೆಯು ನೀತಿಯ ಕುರಿತಾದ ಪ್ರಕಟಣೆಯಾಗಿದೆ. ನಾವು ಇನ್ನೂ “ಕೃಪೆಯಿಂದ ರಕ್ಷಿಸಲ್ಪಟ್ಟ ಪಾಪಿಗಳಾಗಿ ಉಳಿದಿಲ್ಲ.” ನೂತನ ಸೃಷ್ಟಿಗಳಾಗಿರುವ ನಾವು ಇನ್ನೂ “ಪಾಪಿಗಳಾಗಿ” ಇರುವುದಿಲ್ಲ. ಕ್ರಿಸ್ತನ ನೀತಿಯೆಲ್ಲವೂ ನಮ್ಮ ನೀತಿಯಾಗಿ ಮಾರ್ಪಟ್ಟಿದೆ. ಹೊಸದಾಗಿ ಹುಟ್ಟಿರುವ ಆತ್ಮಿಕ ಜೀವಿಗಳಾಗಿರುವ ನಾವು ಕ್ರಿಸ್ತ ಯೇಸುವಿನಲ್ಲಿ ದೇವರ ನೀತಿಯಾಗಿ ಮಾರ್ಪಟ್ಟಿದ್ದೇವೆ. ನಾವು ರಕ್ಷಣೆ ಹೊಂದಿದ ಸಮಯದಲ್ಲಿ ಎಷ್ಟು ನೀತಿವಂತರಾಗಿರುವುದ್ದೇವೋ ಅದಕ್ಕಿಂತ ಹೆಚ್ಚಾಗಿ ನೀತಿವಂತರೇನೂ ಆಗುವುದಿಲ್ಲ.

ದೇವರನ್ನು ಮೆಚ್ಚಿಸಲು ನಂಬಿಕೆಯಿಂದ ನಾವು ಜೀವಿಸಬೇಕಾದರೆ ಮೊದಲು ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ ಎಂದು ನಾವು ತಿಳಿದುಕೊಳ್ಳಬೇಕು. ನೂತನ ಸೃಷ್ಟಿಯ ಕುರಿತಾದ ಪ್ರಕಟಣೆಯ ಮೂಲಕವೇ ಮಾತ್ರವೇ ಆತನ ವಾಕ್ಯವು ಪ್ರಕಟಪಡಿಸುವಂಥ ಎಲ್ಲವನ್ನೂ ನಾವು ಪಡೆದುಕೊಳ್ಳಬಹುದೂ ಮಾಡಬಹುದೂ ಎಂದು ನಾವು ನಂಬಲು ಸಾಧ್ಯ.

ಈ ಸಮಯದಲ್ಲಿ ಕ್ರಿಸ್ತನಲ್ಲಿ ನಮಗೆ ಅದ್ಭುತಕರವಾದ ಸ್ಥಾನವಿದೆ. ನಾವು ದೇವರ ಒಬ್ಬನೇ ಮಗನಾದ ಯೇಸುವನ್ನು ನಮ್ಮ

ಕರ್ತನಾಗಿಯೂ ರಕ್ಷಕನಾಗಿಯೂ ಅಂಗೀಕರಿಸಿದಾಗ, ನಾವು ಆತನಲ್ಲಿ ನೆಲೆಗೊಂಡಿದ್ದೇವೆ ಮತ್ತು ಅನೇಕ ಅದ್ಭುತಕರವಾದ ಪ್ರಯೋಜನಗಳನ್ನು ಪಡೆದುಕೊಂಡಿದ್ದೇವೆ.

## ನಮ್ಮ ಪ್ರಯೋಜನಗಳು

* *ದೈವ ಸ್ವಭಾವದಲ್ಲಿ ಪಾಲುದಾರರು*

**...ದೈವ ಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶದಿಂದ ದೇವರು ತನ್ನ ಪ್ರಭಾವಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ. (2 ಪೇತ್ರ 1:4)**

* *ನಿತ್ಯಜೀವದಲ್ಲಿ ಪಾಲುದಾರರು*

**ಆ ಸಾಕ್ಷಿ ಯಾವದೆಂದರೆ ದೇವರು ನಮಗೆ ನಿತ್ಯಜೀವವನ್ನು ಅನುಗ್ರಹಿಸಿದನು. ಆ ಜೀವವು ಆತನ ಮಗನಲ್ಲಿ ಅದೆ ಎಂಬದೇ ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವ ಉಂಟು ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ. ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಟ್ಟಿರುವವರಾದ ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ ಈ ಮಾತುಗಳನ್ನು ಬರೆದಿದ್ದೇನೆ. (1 ಯೋಹಾನ 5:11- 13).**

* *ಆತನ ನೀತಿಯಲ್ಲಿ ಪಾಲುದಾರರು*

**ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗ ಮಾಡಿದನು (2 ಕೊರಿಂಥ 5:21).**

* *ಆತನ ಪುತ್ರತ್ವದಲ್ಲಿ ಪಾಲುದಾರರು*

**ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನ್ನು ಯೇಸು ಕ್ರಿಸ್ತನ ಮೂಲಕ ತನ್ನ ಪುತ್ರರನ್ನಾಗಿ ಸ್ವೀಕರಿಸುವದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೊದಲೇ ಸಂಕಲ್ಪಮಾಡಿದ್ದನು (ಎಫೆಸ 1:5).**

* *ನಾವು ಆತನ ದೈವಸಂಕಲ್ಪದಲ್ಲಿ ಪಾಲುದಾರರು*

**ಇದಲ್ಲದೆ ತನ್ನ ಚಿತ್ತದ ಉದ್ದೇಶಕ್ಕನುಸಾರವಾಗಿ ಎಲ್ಲಾ ಕಾರ್ಯಗಳನ್ನು ನಡೆಸುವಾತನು ತನ್ನ ಸಂಕಲ್ಪದ ಪ್ರಕಾರ ಮೊದಲೇ**

**ನೇಮಿಸಲ್ಪಟ್ಟವರಾದ ನಮ್ಮನ್ನು ಕ್ರಿಸ್ತನಲ್ಲಿ ತನ್ನ ಸ್ವಕೀಯ ಜನರನ್ನಾಗಿ ಅರಿಸಿಕೊಂಡನು (ಎಫೆಸ 1:11).**

* *ನಾವು ಆತನ ರಾಜತ್ವದಲ್ಲಿಯೂ ಯಾಜಕತ್ವದಲ್ಲಿಯೂ ಪಾಲುದಾರರು*

**ನಮ್ಮನ್ನು ರಾಜ್ಯವನ್ನಾಗಿಯೂ ತನ್ನ ತಂದೆಯಾದ ದೇವರಿಗೆ ಯಾಜಕರನ್ನಾಗಿಯೂ ಮಾಡಿದವನೂ ಆಗಿರುವಾತನಿಗೆ ಯುಗಯುಗಾಂತರಗಳಲ್ಲಿಯೂ ಘನಮಹತ್ವಗಳಿರಲಿ. ಆಮೆನ್ (ಪ್ರಕಟನೆ 1:6).**

### ಆತನ ಸ್ವಾರೂಪ್ಯವುಳ್ಳವರಾಗಿದ್ದೇವೆ

---

ನೂತನ ಸೃಷ್ಟಿಗಳಾಗಿರುವ ನಮ್ಮ ಆತ್ಮಗಳು ಹೊಸದಾಗಿ ಹುಟ್ಟಿದವುಗಳಾಗಿವೆ, ಕ್ರಿಸ್ತನಲ್ಲಿ ನಮಗೆ ಸಂಪೂರ್ಣವಾಗಿಯೂ ಹೊಸದಾದ ಗುರುತೂ ಸ್ಥಾನವೂ ಇದೆ, ಆದರೆ ನಮಗೆ ಇನ್ನೂ ದೇಹಗಳೂ ಪ್ರಾಣಗಳೂ ಇವೆ, ಅವು ಅನುಭವದ ಮೂಲಕವಾಗಿ ಕ್ರಿಸ್ತನ ಸ್ವಾರೂಪ್ಯವುಳ್ಳವುಗಳಾಗಿ ಮಾರ್ಪಡಬೇಕು. ನಮ್ಮ ದೇಹಗಳಿಗೆ ಗುಣಪಡಿಸುವಿಕೆಯ ಅಗತ್ಯವಿರಬಹುದು ಮತ್ತು ನಮ್ಮ ಆತ್ಮಗಳಿಗೆ ಪುನಶ್ಚೇತನದ ಅಗತ್ಯವಿರಬಹುದು.

### ಬಿಡುಗಡೆ ಮಾಡಲಾಗಿದೆ

ಸತ್ಯದ ಕುರಿತಾದ ಜ್ಞಾನವು ನಮ್ಮ ದೇಹ ಪ್ರಾಣಗಳಲ್ಲಿ ಬಿಡುಗಡೆಯನ್ನು ಕೊಡುತ್ತದೆ.

ಯೋಹಾನನು ಹೀಗೆ ಬರೆದಿದ್ದಾನೆ,

**"ಇದಲ್ಲದೆ ನೀವು ಸತ್ಯವನ್ನು ತಿಳಿದುಕೊಳ್ಳುವಿರಿ ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು" (ಯೋಹಾನ 8:32).**

ಕ್ರಿಸ್ತ ಯೇಸುವಿನಲ್ಲಿ ನೂತನ ಸೃಷ್ಟಿಗಳಾಗಿರುವ ನಮಗೆ ದೇವರು ಒದಗಿಸಿರುವ ಎಲ್ಲವನ್ನೂ ನಂಬಲೂ, ಮಾತನಾಡಲೂ, ಪಡೆದುಕೊಳ್ಳಲೂ ದೇವರ ವಾಕ್ಯದ ಕುರಿತಾದ ಸತ್ಯ ಜ್ಞಾನವು ನಮ್ಮ ನಂಬಿಕೆಯನ್ನು ಬಿಡಿಸುತ್ತದೆ.

### ನಮ್ಮ ಮನಸ್ಸನ್ನು ನೂತನಗೊಳಿಸಲಾಗಿದೆ

ನಾವು ದೇವರ ವಾಕ್ಯವನ್ನು ಓದಿ ಧ್ಯಾನಿಸುವಾಗ ಪವಿತ್ರಾತ್ಮನು ನಮ್ಮ ಪ್ರಾಣಗಳನ್ನು ಪುನಶ್ಚೇತನಗೊಳಿಸುತ್ತಾನೆ. ನಂಬಿಕೆಯಿಂದ ನಡೆಯುವಂತೆ ನಮ್ಮ ಮನಸ್ಸುಗಳು ನೂತನವಾಗುತ್ತವೆ.

ಆದದರಿಂದ ಸಹೋದರರೇ ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನಂದರೆ ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಕೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ. ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು. ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರದದ್ದು ಅಂದರೆ ಉತ್ತಮವಾದದ್ದೂ ದೋಷವಿಲ್ಲದ್ದೂ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ. (ರೋಮಾ. 12: 1,2).

ನಮ್ಮ ಭಾವನೆಗಳನ್ನು ಪುನಶ್ಚೇತನಗೊಳಿಸಲಾಗುತ್ತಿದೆ

ನಮ್ಮ ಮನುಸ್ಸುಗಳ ಭಾವನೆಗಳನ್ನು ಉಜ್ಜೀವಿಸಗೊಳ್ಳುವಂತೆ ಮಾಡಲಾಗುತ್ತಿದೆ.

ಆತನು ಹಸುರುಗಾವಲುಗಳಲ್ಲಿ ನನ್ನನ್ನು ತಂಗಿಸುತ್ತಾನೆ; ವಿಶ್ರಾಂತಿಕರವಾದ ನೀರುಗಳ ಬಳಿಗೆ ಬರಮಾಡುತ್ತಾನೆ. ನನ್ನ ಪ್ರಾಣವನ್ನು ಉಜ್ಜೀವಿಸಮಾಡಿ (ಕೀರ್ತನೆಗಳು 23:2,3a).

ನಮ್ಮ ಪ್ರಾಣಗಳೂ ನಮ್ಮ ದೇಹಗಳೂ ಕ್ರಿಸ್ತನಲ್ಲಿ ನಮಗಿರುವ ಪ್ರಯೋಜನಗಳೆಲ್ಲವನ್ನು ಪಡೆದುಕೊಳ್ಳುತ್ತವೆ.

ನನ್ನ ಮನವೇ, ಯೆಹೋವನನ್ನು ಕೊಂಡಾಡು; ನನ್ನ ಸರ್ವೇಂದ್ರಿಯಗಳೇ, ಆತನ ಪವಿತ್ರನಾಮವನ್ನು ಕೀರ್ತಿಸಿರಿ.

ನನ್ನ ಮನವೇ, ಯೆಹೋವನನ್ನು ಕೊಂಡಾಡು; ಆತನ ಉಪಕಾರಗಳಲ್ಲಿ ಒಂದನ್ನೂ ಮರೆಯಬೇಡ. ಆತನು ನಿನ್ನ ಎಲ್ಲಾ ಅಪರಾಧಗಳನ್ನು ಕ್ಷಮಿಸುವವನೂ ಸಮಸ್ತ ರೋಗಗಳನ್ನು ವಾಸಿಮಾಡುವವನೂ, ನಿನ್ನ ಜೀವವನ್ನು ನಾಶದಿಂದ ತಪ್ಪಿಸುವವನೂ, ಪ್ರೀತಿಕೃಪೆಗಳೆಂಬ ಕಿರೀಟದಿಂದ ನಿನ್ನನ್ನು ಶೃಂಗರಿಸವವನೂ ಆಗಿದ್ದಾನೆ. ಶ್ರೇಷ್ಠವರಗಳಿಂದ ನಿನ್ನ ಆಶೆಯನ್ನು ಪೂರ್ತಿಗೊಳಿಸುತ್ತಾನೆ; ಹದ್ದಿಗೆ ಬರುವಂತೆಯೇ ನಿನಗೆ ಯೌವನವನ್ನು ತಿರಿಗಿ ಬರಮಾಡುತ್ತಾನೆ. (ಕೀರ್ತನೆಗಳು 103:1-5).

ನಾವು ಅನುಭವಿಸುವಂಥ ಪ್ರಯೋಜನಗಳು

- *ಸಮಾಧಾನ*

ದೇವರು ನಮಗೆ ಪರಿಪೂರ್ಣವಾದ ಸಮಾಧಾನದವನ್ನು ದಯಪಾಲಿಸಿದ್ದಾನೆ.

ಸ್ಥಿರಚಿತ್ತನನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ; ಅವನಿಗೆ ನಿನ್ನಲ್ಲಿ ಭರವಸವಿದೆ (ಯೆಶಾಯ 26:3).

✱ *ಸಂತೋಷ*

ಆಂತರಿಕ ಸಂತೋಷ ಅಥವಾ ಹರ್ಷವನ್ನು ದಯಪಾಲಿಸಿದ್ದಾನೆ

ನೀನು ನನಗೆ ಜೀವಮಾರ್ಗವನ್ನು ತಿಳಿಯಪಡಿಸುವಿ; ನಿನ್ನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ; ನಿನ್ನ ಬಲಗೈಯಲ್ಲಿ ಶಾಶ್ವತಭಾಗ್ಯವಿದೆ (ಕೀರ್ತನೆಗಳು 16:11).

✱ *ಬಲ*

ಯೆಹೋವನನ್ನು ನಿರೀಕ್ಷಿಸುವವರೋ ಹೊಸ ಬಲವನ್ನು ಹೊಂದುವರು; ಹದ್ದುಗಳಂತೆ ರೆಕ್ಕೆಗಳನ್ನು ಚಾಚಿಕೊಂಡು ಏರುವರು; ಓಡಿ ದಣಿಯರು, ನಡೆದು ಬಳಲರು (ಯೆಶಾಯ 40:31).

✱ *ಭದ್ರತೆ*

ಯೆಹೋವನ ನಾಮವು ಬಲವಾದ ಬುರುಜು; ಶಿಷ್ಟನು ಅದರೊಳಕ್ಕೆ ಓಡಿಹೋಗಿ ಭದ್ರವಾಗಿರುವನು (ಜ್ಞಾನೋಕ್ತಿ 18:10).

✱ *ಶಕ್ತಿ*

ಆದರೆ ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ (ಅ.ಕೃ. 1:8).

✱ *ಪ್ರಭಾವದ ಸ್ಥಳ!*

ಯಾಕಂದರೆ ದೇವರಿಂದ ಹುಟ್ಟಿರುವಂಥದೆಲ್ಲವು ಲೋಕವನ್ನು ಜಯಿಸುತ್ತವೆ. ಲೋಕವನ್ನು ಜಯಿಸುವಂಥದ್ದು ನಮ್ಮ ನಂಬಿಕೆಯೇ. ಯೇಸುವು ದೇವರ ಮಗನೆಂದು ನಂಬಿದವರೇ ಲೋಕವನ್ನು ಜಯಿಸುವವರು ಇನ್ನಾರಿದ್ದಾರೆ? (1 ಯೋಹಾನ 5:4,5)

ಪರಿಸ್ಥಿತಿಗಳು ಎಷ್ಟೇ ಕಷ್ಟಕರವಾಗಿದ್ದರೂ, ಎಷ್ಟೇ ಒತ್ತಡಗಳೂ, ಪ್ರತಿಕೂಲಗಳೂ ಅಥವಾ ಜೀವನದ ಸಮಸ್ಯೆಗಳೂ ಇದ್ದರೂ ಅದ್ಯಾವುದು ಬಾಧಕವಾಗಿರುವುದಿಲ್ಲ. ನಮಗೆ ಪರಿಪೂರ್ಣವಾದ ಸಮಾಧಾನವಿರುತ್ತದೆ. ಫಿಲಿಪ್ಪಿಯರಿಗೆ ಬರೆದ ಪತ್ರಿಕೆಯಲ್ಲಿ ನಾವು ಹೀಗೆ ಓದುತ್ತೇವೆ,

ಯಾವ ಸಂಬಂಧವಾಗಿಯೂ ಚಿಂತೆಮಾಡದೆ ಸರ್ವವಿಷಯದಲ್ಲಿ ದೇವರ ಮುಂದೆ ಕೃತಜ್ಞತಾಸ್ತುತಿಯನ್ನೂ ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು

ತಿಳಿಯಪಡಿಸಿರಿ. ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಯುವದು (ಫಿಲಿಪ್ಪಿ 4:6-7).

ನಾವು ಕೃತಜ್ಞತಾಸ್ತುತಿಯೊಡನೆ ಪ್ರಾರ್ಥನೆ ವಿಜ್ಞಾಪನೆಗಳನ್ನು ಮಾಡಬೇಕು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿರಿ.

**ಕಾರ್ಯಪ್ರವೃತ್ತರಾಗಬೇಕು**

---

**ಮನಸ್ಸು ಅಥವಾ ಹೃದಯ?**

ನಾವು ನಮ್ಮ ಮನಸ್ಸಿನಿಂದ ನಂಬುವಂಥದ್ದಕ್ಕೂ ನಾವು ನಮ್ಮ ಹೃದಯದಿಂದ ನಂಬುವಂಥದ್ದಕ್ಕೂ ಮಧ್ಯೆ ಒಂದು ಪ್ರಮುಖ ವ್ಯತ್ಯಾಸವಿದೆ. ನಮ್ಮ ಮನಸ್ಸಿನಿಂದ ನಾವು ಅನೇಕ ವಿಷಯಗಳನ್ನು ನಂಬುತ್ತೇವೆ ಮತ್ತು ನಾವು ಸತ್ಯವೇದದಿಂದ ಏನನ್ನು ಕಲಿತಿದ್ದೇವೋ ಅದನ್ನು ನಾವು ಹೆಚ್ಚಾಗಿ ನಂಬುತ್ತೇವೆ.

ನಂಬುವಂಥದ್ದು ಒಳ್ಳೆಯ ಕಾರ್ಯ. ಸತ್ಯವೇದವು ದೈವ ಪ್ರೇರಿತವಾದ ವಾಕ್ಯವೆಂದು ನಾವು ನಂಬುತ್ತೇವೆ. ಯೇಸು ದೇವರ ಮಗನೆಂದು ನಾವು ನಂಬುತ್ತೇವೆ. ಆತನು ಲೋಕಗಳನ್ನು ಸೃಷ್ಟಿಮಾಡಿದ್ದಾನೆಂದು ನಾವು ನಂಬುತ್ತೇವೆ. ಆತನು ಆದಾಮ ಹವ್ವರನ್ನು ಸೃಷ್ಟಿಮಾಡಿದನೆಂದೂ ಭೂಮಿಯ ಮೇಲೆ ದೊರೆತನ ಮಾಡಲು ಆತನು ಅವರಿಗೆ ಹೇಳಿದ್ದಾನೆಂದೂ ನಾವು ನಂಬುತ್ತೇವೆ. ಯೇಸು ರೋಗಿಗಳನ್ನು ಗುಣಪಡಿಸಿದನೆಂದು ನಾವು ನಂಬುತ್ತೇವೆ. ಯೇಸು ತಾನು ಮಾಡಿದ ಕಾರ್ಯಗಳು ಶಿಷ್ಯರು ಸಹ ಮಾಡಬಹುದೆಂದು ಅವರಿಗೆ ಹೇಳಿದನೆಂದು ನಾವು ನಂಬುತ್ತೇವೆ.

ನಾವು ದೇವರ ವಾಕ್ಯವನ್ನು ಕಲಿಯುವ ವಿದ್ಯಾರ್ಥಿಗಳಾಗಿದ್ದೇವೆ ಆದ್ದರಿಂದ ನಾವು ಅನೇಕಾನೇಕ ವಿಷಯಗಳನ್ನು ನಂಬುತ್ತೇವೆ.

**ಇದು ನಂಬಿಕೆನಾ?**

ಆದರೆ ನಂಬಿಕೆ ಎಂಬುದು ನಾವು ನಮ್ಮ ಮನಸ್ಸಿನಿಂದ ನಂಬುವಂಥ ವಿಷಯಗಳನ್ನು ಮೀರುವಂಥದ್ದಾಗಿದೆ. ಪವಿತ್ರಾತ್ಮನು ಕೊಡುವ ಪ್ರಕಟಣೆಯ ಮೂಲಕ ನಂಬಿಕೆಯು ಬರುತ್ತದೆ. ಹೀಗೆ ವೈಯಕ್ತಿಕವಾಗಿ ಮಾತನಾಡುವ ದೇವರ ವಾಕ್ಯದ ಪ್ರಕಟಣೆಯಿಂದ ನಮ್ಮ ಆತ್ಮಗಳಲ್ಲಿ ನಂಬಿಕೆಯು ಉಕ್ಕುತ್ತದೆ. ಅನಂತರ ನಾವು ನಮ್ಮ ಹೃದಯದಿಂದ ನಂಬುತ್ತೇವೆ.

ದೇವರ ವಾಕ್ಯವು ನಿನ್ನ ಸಮೀಪದಲ್ಲಿಯೇ ಇದೆ. ಅದು ನಿನ್ನ ಬಾಯಲ್ಲಿಯೂ ಹೃದಯದಲ್ಲಿಯೂ ಇದೆ ಅನ್ನುತ್ತದೆ. ಆ ವಾಕ್ಯವು ನಾವು ಸಾರುವ ನಂಬಿಕೆಯ ವಿಷಯವಾದ ವಾಕ್ಯವೇ (ರೋಮಾ. 10:8).

ಪ್ರಕಟಣೆಯ ಮೂಲಕ ದೇವರ ವಾಕ್ಯವು ನಮ್ಮ ಹೃದಯದೊಳಕ್ಕೆ ಬರುತ್ತದೆ.

ಅದೇನಂದರೆ ನೀನು ಯೇಸುವನ್ನು ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದೆ. ಹೃದಯದಿಂದ ನಂಬುವದರ ಮೂಲಕ ನೀತಿಯು ದೊರಕುತ್ತದೆ. ಬಾಯಿಂದ ಅರಿಕೆ ಮಾಡುವದರ ಮೂಲಕ ರಕ್ಷಣೆಯಾಗುತ್ತದೆ (ರೋಮಾ 10:9,10).

ನಂಬಿಕೆ ಎಂದರೆ ಕೇವಲ ನಮ್ಮ ಮನಸ್ಸಿನಿಂದ ನಂಬುವಂಥದ್ದಲ್ಲ, ಆದರೆ ನಮ್ಮ ಹೃದಯದಿಂದ ನಂಬುವಂಥದ್ದಾಗಿದೆ.

ನಂಬಿಕೆ ಎಂದರೆ ನಾವು ಏನನ್ನು ನಂಬುತ್ತೇವೋ ಅದನ್ನು ಕಾರ್ಯರೂಪಕ್ಕೆ ಮಾಡುವುದನ್ನು ಸೂಚಿಸುತ್ತದೆ. ವಿಧೇಯತೆಯಿಂದ ಕಾರ್ಯಮಾಡುವುದು ನಂಬಿಕೆಗಿರುವ ಗುರುತಾಗಿದೆ. ಅಪೊಸ್ತಲನಾದ ಯಾಕೋಬನು ಹೀಗೆ ಬರೆದಿದ್ದಾನೆ,

ನನ್ನ ಸಹೋದರರೇ, ಒಬ್ಬನು ತನಗೆ ನಂಬಿಕೆಯುಂಟೆಂದು ಹೇಳಿಕೊಂಡು ತಕ್ಕ ಕ್ರಿಯೆಗಳಿಲ್ಲದವನಾಗಿದ್ದರೆ ಪ್ರಯೋಜವೇನು? ಅಂಥ ನಂಬಿಕೆಯು ಇವನನ್ನು ರಕ್ಷಿಸುವದೋ? (ಯಾಕೋಬ 2:14)

## ತಕ್ಕದಾಗಿರುವ ಕ್ರಿಯೆ

ನಂಬಿಕೆಯೊಂದಿಗೆ ಯಾವಾಗಲೂ ಅದಕ್ಕೆ ತಕ್ಕದಾಗಿರುವ ಕ್ರಿಯೆಗಳು ಇರುತ್ತವೆ. ಯಾಕೋಬನು ಅದನ್ನು ಕ್ರಿಯೆಗಳೆಂದು ಕರೆಯುತ್ತಾನೆ. "ಕ್ರಿಯೆಗಳು" ಎಂಬ ಪದವನ್ನು ಸೂಚಿಸುವಂತಹ ಕೆಳಗೆ ಕೊಟ್ಟಿರುವ ವಾಕ್ಯಭಾಗವನ್ನು ನೀವು ಓದಿನೋಡಿರಿ.

ಹಾಗೆಯೇ ಕ್ರಿಯೆಗಳಿಲ್ಲದ ನಂಬಿಕೆಯು ತನ್ನಲ್ಲಿ ಜೀವವಿಲ್ಲದ್ದು. ಹೀಗಲ್ಲವಾದರೆ ಒಬ್ಬ ಮನುಷ್ಯನು - ನಿನಗೆ ನಂಬಿಕೆಯುಂಟು ನನಗೆ ಕ್ರಿಯೆಗಳುಂಟು ನಾನು ನನ್ನ ಕ್ರಿಯೆಗಳ ಮುಖಾಂತರ ನನ್ನ ನಂಬಿಕೆಯನ್ನು ತೋರಿಸುತ್ತೇನೆ. ನೀನು ಕ್ರಿಯೆಗಳಿಲ್ಲದೆ ನಿನ್ನ ನಂಬಿಕೆಯನ್ನು ನನಗೆ ತೋರಿಸು. ನೋಡೋಣ ಎಂದು ಹೇಳುವನಲ್ಲವೇ.

ದೇವರು ಒಬ್ಬನೇ ಎಂದು ನೀನು ನಂಬುತ್ತಿ. ಹಾಗೆ ನಂಬುವದು ಒಳ್ಳೆಯದು ದೆವ್ವಗಳು ಕೂಡ ಹಾಗೆಯೇ ನಂಬಿ ಹೆದರಿ ನಡುಗುತ್ತವೆ. ಅಪ್ರಯೋಜಕನೇ ಕ್ರಿಯೆಗಳಿಲ್ಲದ ನಂಬಿಕೆಯು ವ್ಯರ್ಥವಾಗಿದೆ ಎಂಬುದಕ್ಕೆ ದೃಷ್ಟಾಂತ ಬೇಕೋ?

ನಮ್ಮ ಪಿತೃವಾದ ಅಬ್ರಹಾಮನು ಇಸಾಕವೆಂಬ ತನ್ನ ಮಗನನ್ನು ಯಜ್ಞವೇದಿಯ ಮೇಲೆ ಅರ್ಪಿಸಿದಾಗ ನೀತಿವಂತನೆಂಬ ನಿರ್ಣಯವನ್ನು ಹೊಂದಿದ್ದು ಕ್ರಿಯೆಗಳಿಂದಲ್ಲವೇ?

ಅವನ ನಂಬಿಕೆಯು ಕ್ರಿಯೆಗಳೊಂದಿಗೆ ಪ್ರವರ್ತಿಸಿ ಆ ಕ್ರಿಯೆಗಳಿಂದಲೇ ಸಿದ್ಧಿಗೆ ಬಂತೆಂಬದು ಕಾಣಬರುತ್ತದಲ್ಲಾ.

ಅಬ್ರಹಾಮನು ದೇವರನ್ನು ನಂಬಿದನು ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು. ಎಂಬ ಶಾಸ್ತ್ರದ ಮಾತು ಹೀಗೆ ನೆರವೇರಿತು. ಮತ್ತು ದೇವರ ಸ್ನೇಹಿತನೆಂಬ ಹೆಸರು ಅವನಿಗೆ ಉಂಟಾಯಿತು.

ಮನುಷ್ಯನು ಕ್ರಿಯೆಗಳಿಂದ ನೀತಿವಂತನೆಂದು ನಿರ್ಣಯಿಸಲ್ಪಡುತ್ತಾನೇ ಹೊರತು ಬರೀ ನಂಬಿಕೆಯಿಂದಲ್ಲವೆಂದು ನೋಡುತ್ತೀರಿ.

ಅದೇ ರೀತಿಯಾಗಿ ಸೂಳೆಯಾದ ರಾಹಾಬಳು ಗೂಢಚಾರರನ್ನು ತನ್ನ ಮನೆಯಲ್ಲಿ ಸೇರಿಸಿಕೊಂಡು ಬೇರೆ ದಾರಿಯಿಂದ ಅವರನ್ನು ಕಳುಹಿಸಿದ್ದರಲ್ಲಿ ಕ್ರಿಯೆಗಳಿಂದಲೇ ನೀತಿವಂತಳೆಂಬ ನಿರ್ಣಯವನ್ನು ಹೊಂದಿದಳಲ್ಲವೇ.

ಆತ್ಮವಿಲ್ಲದ ದೇಹವು ಸತ್ತದ್ದಾಗಿರುವ ಪ್ರಕಾರವೇ ಕ್ರಿಯೆಗಳಿಲ್ಲದ ನಂಬಿಕೆಯೂ ಸತ್ತದ್ದೇ. (ಯಾಕೋಬ 2:17-26).

ನಿಜವಾದ ಪರೀಕ್ಷೆ

ನಾವು ನಂಬುತ್ತೇವೆ ಎಂದು ನಾವು ಹೇಳಿಕೊಳ್ಳುವಂಥ ವಿಷಯಗಳಿಗೆ ತಕ್ಕಂಥ ಕ್ರಿಯೆಗಳು ನಮ್ಮಲ್ಲಿ ಇಲ್ಲದಿದ್ದರೆ, ನಮ್ಮಲ್ಲಿ ಇರುವಂಥದ್ದು ತಲೆಯಲ್ಲಿರುವ ಜ್ಞಾನವಾಗಿದೆ ಎಂದು ನಾವು ತಿಳಿದುಕೊಳ್ಳಬಹುದು. ನಂಬಿಕೆಯು ಪ್ರಕಟಣೆಯ ಮೂಲಕ ನಮ್ಮ ಆತ್ಮಗಳಲ್ಲಿ ಬರುತ್ತದೆ, ಮತ್ತು ನಾವು ನಮ್ಮ ಹೃದಯದಿಂದ ನಂಬುತ್ತೇವೆ, ನಾವು ಪಡೆದುಕೊಂಡಿರುವ ಆ ನಂಬಿಕೆಯನ್ನು ಸಾಬೀತುಪಡಿಸುವುದಕ್ಕಾಗಿ ನಂಬಿಕೆಯ ಕ್ರಿಯೆಯು ಯಾವಾಗಲೂ ಅದರೊಂದಿಗೆ ಇರುತ್ತದೆ.

**ಯೇಸು**

ಸತ್ಯವೇದವು ನಂಬಿಕೆಯಿಂದ ಕಾರ್ಯಮಾಡಿದ ಅನೇಕ ಅದರ್ಶಪ್ರಾಯರಾದ ವ್ಯಕ್ತಿಗಳಿಂದ ತುಂಬಿದೆ, ಆದರೆ ನಾವು ಮೊದಲು ನಮ್ಮ ಅತ್ಯುತ್ತಮ ಅದರ್ಶವಾಗಿರುವ ಯೇಸುವಿನೊಂದಿಗೆ ಪ್ರಾರಂಭಿಸೋಣ.

❋ *ಆತನು ಏನು ಹೇಳುವನೋ ಅದನ್ನು ಮಾಡಿರಿ!*

ಯೋಹಾನನ ಪುಸ್ತಕದ 2ನೇ ಅಧ್ಯಾಯದಲ್ಲಿ, ಯೇಸು ಮಾಡಿದ ಮೊದಲ ಅದ್ಭುತಕಾರ್ಯದ ಕುರಿತು ನಾವು ಓದುತ್ತೇವೆ. ಕಾನಾ ಊರಿನಲ್ಲಿ ನಡೆದ ಮದುವೆಯ ಔತಣದಲ್ಲಿ ನೀರನ್ನು ದ್ರಾಕ್ಷಾರಸವನ್ನಾಗಿ ಮಾರ್ಪಡಿಸಿದ್ದೇ ಆ ಅದ್ಭುತಕಾರ್ಯವಾಗಿದೆ.

*ಮರಿಯಳು ಸೇವಕರಿಗೆ ಏನು ಹೇಳಿದಳು?*

"ಆತನು ನಿಮಗೆ ಏನು ಹೇಳುವನೋ ಅದನ್ನು ಮಾಡಿರಿ."

ಯೇಸು ಅವರಿಗೆ ಹೇಳಿದ್ದೇನಂದರೆ,

"ಆ ಬಾನೆಗಳಲ್ಲಿ ನೀರು ತುಂಬಿರಿ." "ಈಗ ಅದನ್ನು ತೋಡಿಕೊಂಡು ಹೋಗಿ ಔತಣದ ಪಾರುಪತ್ಯಗಾರನಿಗೆ ಕೊಡಿರಿ."

ಆ ನೀರು ಯಾವಾಗ ದ್ರಾಕ್ಷಾರಸವಾಗಿ ಮಾರ್ಪಟ್ಟಿತ್ತು ಎಂದು ಯೋಚಿಸಿದರೆ ನನಗೆ ಆಶ್ಚರ್ಯವೇ ಆಗುತ್ತದೆ. ಅವರು ನೀರಿನ ಬಾನೆಗಳನ್ನು ತುಂಬುವಾಗ ಅದು ಮಾರ್ಪಟ್ಟಿತೋ ಅಥವಾ ಅವರು ಅದನ್ನು ತೋಡಿಕೊಂಡು ಔತಣದ ಪಾರುಪತ್ಯಗಾರನಿಗೆ ಕೊಡುವಾಗ ಅದು ಮಾರ್ಪಟ್ಟಿತೋ?

ಯೇಸು ಮಾಡಲು ಹೇಳಿದಂಥ ಕಾರ್ಯಗಳು ನೈಸರ್ಗಿಕ ರೀತಿಯಲ್ಲಿ ಮೂರ್ಖತನವಾಗಿ ತೋರುತ್ತದೆಯಾದರೂ, ಅವರು ಯೇಸುವಿಗೆ ವಿಧೇಯರಾಗಿ ಆತನು ಹೇಳಿದಂತೆ ಮಾಡಿದರು, ಆಗ ಅದ್ಭುತವು ನಡೆಯಿತು.

❋ ನಿನ್ನ ಕೈಯನ್ನು ಚಾಚು

ಯೇಸು ಕೈ ಬತ್ತಿಹೋದ ಆ ವ್ಯಕ್ತಿಯನ್ನು ನೋಡಿದಾಗ, ಆತನು ಅವನಿಗೆ ಮಾಡಲು ಹೇಳಿದ ವಿಷಯಗಳು ತುಂಬಾ ಸುಲಭವಾಗಿದ್ದವು. ಸ್ವಾಭಾವಿಕವಾದ ರೀತಿಯಲ್ಲಿ ಅದು ಅಸಾಧ್ಯವಾಗಿತ್ತು, ಆದರೆ ನಂಬಿಕೆಯ ಮೂಲಕ ತುಂಬಾ ಸುಲಭವಾಗಿತ್ತು.

ಆಗ ಅಲ್ಲಿ ಕೈಬತ್ತಿದವನೊಬ್ಬನಿದ್ದನು.

ಆಗ ಆತನು ಆ ಮನುಷ್ಯನಿಗೆ,

"ನಿನ್ನ ಕೈ ಚಾಚು ಎಂದು ಹೇಳಿದನು. ಅವನು ಚಾಚಿದನು, ಅದು ಸಂಪೂರ್ಣ ವಾಸಿಯಾಗಿ ಮತ್ತೊಂದರ ಹಾಗಾಯಿತು (ಮತ್ತಾಯ 12:10ಎ, 13).

✱ *ನಿನ್ನ ಹಾಸಿಗೆಯನ್ನು ಎತ್ತಿಕೋ*

ಕೆಲವು ಮಂದಿ ಸ್ನೇಹಿತರು ಪಾರ್ಶ್ವವಾಯು ರೋಗವಿದ್ದ ತಮ್ಮ ಒಬ್ಬ ಸ್ನೇಹಿತನನ್ನು ಗುಣಪಡಿಸಬೇಕೆಂದು ಯೇಸುವಿನ ಬಳಿಗೆ ಕರೆತರುವುದಕ್ಕೆ ಬಹಳ ಒದಾಡಿದರು. ಆದರೆ ಅವರು ಯೇಸುವಿನ ಗುಣಪಡಿಸುವ ಶಕ್ತಿಯ ಕುರಿತು ಕೇಳಿದ್ದರು. ಅವರು ಆ ಶಕ್ತಿಯನ್ನು ಎಷ್ಟರ ಮಟ್ಟಿಗೆ ನಂಬಿದ್ದರು ಎಂದರೆ ಅವರು ಮಳಿಗೆಯ ಮೇಲಕ್ಕೆ ಹೋಗಿ ಅಂಚುಗಳನ್ನು ತೆಗೆದು ತಮ್ಮ ಸ್ನೇಹಿತನನ್ನು ಯೇಸುವಿನ ಬಳಿಗೆ ಇಳಿಸಿದರು. ಆಗ ಯೇಸು ಏನು ಮಾಡಿದನು?

ಆತನು ಅವರ ನಂಬಿಕೆಯನ್ನು ನೋಡಿ, "ಅಪ್ಪಾ, ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ" ಅಂದನು. … "ಎದ್ದು ನಿನ್ನ ಹಾಸಿಗೆಯನ್ನು ಎತ್ತಿಕೊಂಡು ಮನೆಗೆ ಹೋಗೆಂದು ನಿನಗೆ ಹೇಳುತ್ತೇನೆ ಅಂದನು."

ಅಂದ ಕೂಡಲೆ ಅವನು ಅವರ ಮುಂದೆ ಎದ್ದು ತಾನು ಮಲಗಿದ್ದ ಹಾಸಿಗೆಯನ್ನು ಎತ್ತಿಕೊಂಡು ದೇವರನ್ನು ಕೊಂಡಾಡುತ್ತಾ ಮನೆಗೆ ಹೋದನು (ಲೂಕ 5:20, 24ಬಿ, 25).

ಯೇಸು ಅವರ ನಂಬಿಕೆಯನ್ನು ಹೇಗೆ ನೋಡಿದನು?

ಆತನು ಅವರ ಕ್ರಿಯೆಗಳನ್ನು ನೋಡಿದನು, ಆ ಕ್ರಿಯೆಗಳೇ ನಂಬಿಕೆಯಾಗಿತ್ತು.

**ಶಿಷ್ಯರು**

✱ *ಆದರೆ ನಿನ್ನ ಮಾತಿನ ಮೇಲೆ*

ಲೂಕ 5:4-7 ಅನ್ನು ನೋಡಿಕೊಳ್ಳೋಣ

ಯೇಸು ಮಾತಾಡುವದನ್ನು ಮುಗಿಸಿದ ಮೇಲೆ ಸೀಮೋನನಿಗೆ, ಆಳವಾದ ಸ್ಥಳಕ್ಕೆ ದೋಣಿಯನ್ನು ನಡಿಸಿ ಮೀನುಬೇಟೆಗಾಗಿ ನಿಮ್ಮ ಬಲೆಗಳನ್ನು ಹಾಕಿರಿ ಎಂದು ಹೇಳಿದನು.

ಅದಕ್ಕೆ ಸೀಮೋನನು ಗುರುವೇ, ನಾವು ರಾತ್ರಿಯೆಲ್ಲಾ ಪ್ರಯಾಸಪಟ್ಟರೂ ಏನೂ ಸಿಕ್ಕಲಿಲ್ಲ; ಆದರೆ ನಿನ್ನ ಮಾತಿನ ಮೇಲೆ ಬಲೆಗಳನ್ನು ಹಾಕುತ್ತೇನೆ ಅಂದನು.

ಹಾಕಿದ ಮೇಲೆ ಮೀನುಗಳನ್ನು ರಾಶಿರಾಶಿಯಾಗಿ ಸಿಕ್ಕಿಕೊಂಡು ಅವರ ಬಲೆಗಳು ಹರಿದುಹೋಗುತ್ತಿದ್ದವು. ಆಗ ಅವರು ಮತ್ತೊಂದು ದೋಣಿಯಲ್ಲಿದ್ದ ತಮ್ಮ ಪಾಲುಗಾರರಿಗೆ, ನೀವು ಬಂದು ನಮಗೆ ನೆರವಾಗಬೇಕೆಂದ ಸನ್ನೆಮಾಡಿದರು. ಅವರು ಬಂದು ಆ ಎರಡು ದೋಣಿಗಳಲ್ಲಿ ಮೀನುಗಳನ್ನು ತುಂಬಿಸಲು ಅವು ಮುಳುಗುವ ಹಾಗಾದವು.

ಸೀಮೋನನು ಬೆಸ್ತನಾಗಿದ್ದನು. ಯೇಸು ಬಡಗಿಯಾಗಿದ್ದನು. ಸೀಮೋನನು ಸ್ವಾಭಾವಿಕವಾದ ವಿಷಯಗಳಿಗೆ ಗಮನಕೊಟ್ಟು ಬಲೆಯನ್ನು ಹಾಕದೇ ಇರಬಹುದಿತ್ತು. ಮೀನು ಹಿಡಿಯುವ ವಿಷಯದಲ್ಲಿ ಅವನಿಗಿದ್ದ ಅರಿವು ಖಂಡಿತವಾಗಿಯೂ ಯೇಸುವಿನ ಅರಿವಿಗಿಂತ ಹೆಚ್ಚಾಗಿತ್ತು. ಆದರೆ ಅವನು ಯೇಸುವಿನ ಮಾತುಗಳನ್ನು ಕೇಳಿ ಅದಕ್ಕೆ ವಿಧೇಯನಾಗಿ ಬಲೆಯನ್ನು ಹಾಕಿದನು.

ನಂಬಿಕೆ ಎಂದರೆ ಯೇಸುವಿನ ಮಾತುಗಳನ್ನು ಕೇಳುವುದು ಅದರಂತೆ ಮಾಡುವುದಾಗಿದೆ.

ದೇವರು ಇಂದು ನಮ್ಮೊಂದಿಗೆ ಮಾತನಾಡುತ್ತಿರುವನು. ಸಮೃದ್ಧಿಯನ್ನೂ ಆರೋಗ್ಯವನ್ನೂ ತರುವ ಮಾರ್ಗಗಳನ್ನು ಆತನು ನಮಗೆ ತಿಳಿಸುತ್ತಿರುವನು.

ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿರುವ ಮೊದಲನೆಯ ಸ್ವಸ್ಥತೆಯ ಕಾರ್ಯದಲ್ಲಿ, ಶಿಷ್ಯರು ನಂಬಿಕೆಯಿಂದ ಕಾರ್ಯ ಮಾಡುತ್ತಿರುವುದರ ಕುರಿತು ನಾವು ಓದುತ್ತೇವೆ. ಅವರು ಯೇಸು ತೋರಿಸಿದ ಮಾದರಿಯನ್ನು ಅನುಸರಿಸುವುದನ್ನು ನಾವು ಕಾಣುತ್ತೇವೆ.

ಆಗ ಪೇತ್ರನು,

"ಬೆಳ್ಳಿ ಬಂಗಾರವಂತೂ ನನ್ನಲ್ಲಿಲ್ಲ, ನನ್ನಲ್ಲಿರುವದನ್ನು ನಿನಗೆ ಕೊಡುತ್ತೇನೆ. ನಜರೇತಿನ ಯೇಸುಕ್ರಿಸ್ತನ ಹೆಸರಿನಲ್ಲೇ ಎದ್ದು ನಡೆದಾಡು ಎಂದು ಹೇಳಿ ಅವನನ್ನು ಬಲಗೈಹಿಡಿದು ಎತ್ತಿದನು.

ಆ ಕ್ಷಣವೇ ಅವನ ಕಾಲುಗಳಿಗೂ ಹರಡುಗಳಿಗೂ ಬಲಬಂತು; ಅವನು ಹಾರಿನಿಂತು ನಡೆದಾಡಿದನು; ನಡೆಯುತ್ತಾ ಹಾರುತ್ತಾ ದೇವರನ್ನು ಕೊಂಡಾಡುತ್ತಾ ಅವರ ಜೊತೆಯಲ್ಲಿ ದೇವಾಲಯದೊಳಗೆ ಹೋದನು. (ಅ.ಕೃ. 3:6-8).

### ಯೆರಿಕೋವಿನ ಗೋಡೆಗಳು

ಇಸ್ರಾಯೇಲ್ ಜನರು ಆಗತಾನೇ ವಾಗ್ದಾನ ದೇಶಕ್ಕೆ ಬಂದಿದ್ದರು, ಯೆರಿಕೋವಿನ ಕೋಟೆಯು ಅವರ ಮುಂದೆ ಅಡ್ಡವಾಗಿ ನಿಂತಿತು. ದೇವರು ಯೆಹೋಶುವನಿಗೆ ಏನೆಂದು ಹೇಳಿದನು?

ಯೆಹೋವನು ಯೆಹೋಶುವನಿಗೆ -

"ನೋಡು, ನಾನು ಯೆರಿಕೋವನ್ನೂ ಅದರ ಅರಸನನ್ನೂ ಯುದ್ಧವೀರರನ್ನೂ ನಿನ್ನ ಕೈಗೆ ಒಪ್ಪಿಸಿದ್ದೇನೆ" ಅಂದನು (ಯೆಹೋಶುವ 6:2).

ಈಗ ಸ್ವಲ್ಪ ತಾಳಿರಿ. ಅದು ಬಲಿಷ್ಠವಾದ ಕೋಟೆಯಾಗಿತ್ತು. ಸೈನ್ಯವು ಅದರೊಳಗೆ ಇತ್ತು, ಗೋಡೆಗಳು ಬಲವಾಗಿದ್ದವು, ಅವರು ಮುತ್ತಿಗೆ ಹಾಕಲು ಸಿದ್ಧರಾಗಿದ್ದರು. ಆದರೆ ದೇವರು, "ನಾನು ಯೆರಿಕೋ ಪಟ್ಟಣವನ್ನು ನಿಮ್ಮ ಕೈಗೆ ಒಪ್ಪಿಸಿಕೊಟ್ಟಿದ್ದೇನೆ" ಅಂದನು. ಅದು ಭೂತಕಾಲವನ್ನು ಸೂಚಿಸುತ್ತದೆ. ನಾನು ಈಗಾಗಲೇ ಅದನ್ನು ನಿಮಗೆ ಕೊಟ್ಟಿದ್ದೇನೆ…

ಆಗ ದೇವರು ಅವರಿಗೆ ಸ್ವಾಭಾವಿಕವಾದ ರೀತಿಯಲ್ಲಿ ಯಾವುದೇ ಅರ್ಥವಿಲ್ಲದಂಥ ಅಪ್ಪಣೆಗಳನ್ನು ಕೊಡುತ್ತಾನೆ. ಅವರು ಆರು ದಿನಗಳವರೆಗೆ ಆ ಪಟ್ಟಣದ ಸುತ್ತಲೂ ಸುತ್ತುತ್ತಾ, ತುತ್ತೂರಿಯನ್ನು ಊದಬೇಕಿತ್ತು, ಆಮೇಲೆ ಪಾಳೆಯಕ್ಕೆ ತಿರಿಗಿ ಹೋಗಬೇಕಿತ್ತು. ಏಳನೇ ದಿನದಲ್ಲಿ, ಅವರು ಆ ಪಟ್ಟಣದ ಸುತ್ತಲೂ ಏಳು ಬಾರಿ ಸುತ್ತಿ, ತುತ್ತೂರಿಯನ್ನು ಊದಬೇಕಿತ್ತು, ಆಗ ಗೋಡೆಗಳು ಕುಸಿದು ಬೀಳುವವು.

ಆಗ ಯೆಹೋಶುವನು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಿತ್ತು. ಅವನು ದೇವರ ಆಪ್ಪಣೆಯನ್ನು ಅನುಸರಿಸುತ್ತಾನೆಯೇ? ಅವನು ದೇವರ ಮಾತಿನಂತೆ ನಡೆದು ತನ್ನ ಸೈನ್ಯದಲ್ಲಿರುವ ಎಲ್ಲ ಸೈನಿಕರಿಗೆ ಆ ಮಾತಿನಂತೆ ನಡೆಯಬೇಕೆಂದು ಹೇಳುವನೇ?

ಅವನು ದೇವರ ಮಾತಿನಂತೆ ಮಾಡಿದನು, ಆಗ ಗೋಡೆಗಳು ಕುಸಿದು ಬಿದ್ದವು ಎಂದು ನಮಗೆ ಗೊತ್ತು.

ದೇವರು ಅಂತಹ ಮಾತನ್ನು ನಮಗೆ ಕೊಟ್ಟಿದ್ದಾನೆ,

ನನ್ನ ದೇವರು ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು (ಫಿಲಿಪ್ಪಿ 4:19).

ನಿಮಗೆ ಹಣಕಾಸಿನ ತೊಂದರೆಗಳು ಇರುವುದಾದರೆ, ಏನು ಮಾಡಬೇಕೆಂದು ದೇವರ ಆಲೋಚನೆಯನ್ನು ಕೇಳಿರಿ, ಮತ್ತು ಆತನು ಹೇಳಿದಂತೆ ಮಾಡಿರಿ. ಆತನು ನಮ್ಮ ಹೃದಯಗಳೊಂದಿಗೆ ಮಾತನಾಡಿದ್ದಂಥ ನಾವು ನಿಜವಾಗಿಯೂ ನಂಬುವಾಗ, ನಾವು ಅದಕ್ಕೆ ವಿಧೇಯರಾಗಿ ಕಾರ್ಯಮಾಡುವ ಮೂಲಕ ಪ್ರತಿಕ್ರಿಯಿಸುತ್ತೇವೆ.

**ಯೊರ್ದಾನ್ ನದಿಯಲ್ಲಿ ನಾಮಾನನು**

ನಾಮಾನನು ಆರಾಮ್ಯರ ಸೇನಾಧಿಪತಿಯಾಗಿದ್ದನು, ಅವನ ಬಳಿಯಲ್ಲಿ ಇಸ್ರಾಯೇಲ್ಯಳಾದ ಒಬ್ಬ ದಾಸಿಯಾದ ಹುಡುಗಿ ಇದ್ದಳು. ಅವನಿಗೆ ಕುಷ್ಠರೋಗವಿದೆ ಎಂದು ಅವಳು ಕೇಳಿಸಿಕೊಂಡಾಗ, ಇಸ್ರಾಯೇಲಿನಲ್ಲಿರುವ ಪ್ರವಾದಿಯಾದ ಎಲೀಷನ ಕುರಿತಾಗಿಯೂ ಎಲೀಷನು ಅವನನ್ನು ಕುಷ್ಠರೋಗದಿಂದ ಗುಣಪಡಿಸಬಹುದು ಎಂಬುದಾಗಿಯೂ ಅವಳು ಅವನಿಗೆ ಹೇಳಿದಳು. ನಾಮಾನನಲ್ಲಿ ಒಂದು ನಿರೀಕ್ಷೆಯು ಹುಟ್ಟಿಕೊಂಡಿತ್ತು ಆದ್ದರಿಂದ ಅವನು ಇಸ್ರಾಯೇಲಿನಲ್ಲಿರುವ ಪ್ರವಾದಿಯಾದ ಎಲೀಷನ ಬಳಿಗೆ ಹೋದನು. ಅವನು ತನ್ನ ಕುದುರೆಗಳು, ರಥಗಳೊಂದಿಗೆ, ತನ್ನ ಸೇವಕರೊಂದಿಗೆ ಅಲ್ಲಿಗೆ ಬಂದನು, ತನ್ನನ್ನು ಬಹಳ ಗೌರವದಿಂದ ನೋಡಿಕೊಳ್ಳುತ್ತಾರೆಂದು ಅವನು ನಿರೀಕ್ಷಿಸಿದನು. ಆದರೆ ಅಲ್ಲಿ ನಡೆದದ್ದೇನು?

ನಾಮಾನನು ರಥರಥಾಶ್ವಗಳೊಡನೆ ಎಲೀಷನ ಮನೆಗೆ ಹೋಗಿ ಬಾಗಿಲಿನ ಮುಂದೆ ನಿಂತನು. ಎಲೀಷನು ಅವನಿಗೆ ಹೋಗಿ ಯೊರ್ದಾನ ಹೊಳೆಯಲ್ಲಿ ಏಳು ಸಾರಿ ಸ್ನಾನ ಮಾಡು ಆಗ ನಿನ್ನ ದೇಹವು ಮುಂಚಿನಂತಾಗುವದು. ನೀನು ಶುದ್ಧನಾಗುವಿ ಎಂದು ಹೇಳಿ ಕಳುಹಿಸಿದನು.

ನಾಮಾನನು ಅದನ್ನು ಕೇಳಿ ಕೋಪಗೊಂಡು ಇದೇನು ಅವನು ಹೇಗೂ ಹೊರಗೆ ಬಂದು ನಿಂತು ತನ್ನ ದೇವರಾದ ಯೆಹೋವನ ಹೆಸರು ಹೇಳಿ ಕುಷ್ಠದ ಮೇಲೆ ಕೈಯಾಡಿಸಿ ವಾಸಿಮಾಡುವನೆಂದು ನೆನಸಿದೆನು.

ದಮಸ್ಕದ ಆಬಾನಾ ಮತ್ತು ಪರ್ಪರ ಎಂಬ ಹೊಳೆಗಳು ಇಸ್ರಾಯೇಲ್ಯರ ಎಲ್ಲಾ ಹೊಳೆ ಹಳ್ಳಗಳಿಗಿಂತ ಉತ್ತಮವಾಗಿವೆಯಲ್ಲವೋ? ಸ್ನಾನದಿಂದ ವಾಸಿಯಾಗುವ ಹಾಗಿದ್ದರೆ ನಾನು ಅವುಗಳಲ್ಲಿಯೇ ಸ್ನಾನಮಾಡಬಹುದಲ್ಲವೇ ಎಂದು ಹೇಳಿ ಬಲು ಸಿಟ್ಟಿನಿಂದ ಹೊರಟುಹೋದನು.

ಆಗ ಅವನ ಸೇವಕರು ಹತ್ತಿರ ಬಂದು ಅವನಿಗೆ ಅಪ್ಪನವರೇ, ಪ್ರವಾದಿಯು ಒಂದು ಕಠಿಣವಾದ ಕೆಲಸ ಹೇಳಿದ್ದರೆ ಅದನ್ನು ಮಾಡುತ್ತಿದ್ದಿರಲ್ಲಾ ಹಾಗಾದರೆ ಸ್ನಾನಮಾಡಿ ಶುದ್ಧನಾಗು ಎಂದು ಹೇಳಿದರೆ ಯಾಕೆ ಅದರಂತೆ ಮಾಡಬಾರದು ಎಂದು ಹೇಳಿದರು.

ಅವನು ಯೊರ್ದಾನಿಗೆ ಹೋಗಿ ಏಳು ಸಾರಿ ಅದರಲ್ಲಿ ಮುಳುಗಿ ಎದ್ದನು ಕೂಡಲೆ ದೇವರ ಮನುಷ್ಯನ ಮಾತಿಗನುಸಾರವಾಗಿ ಅವನ ದೇಹವು ಕೂಸಿನ ದೇಹದಂತೆ ಶುದ್ಧವಾಯಿತು. (2 ಅರಸುಗಳು 5:9-14).

ನಾಮಾನನು ಒಬ್ಬ ಶ್ರೀಮಂತ ವ್ಯಕ್ತಿಯಾಗಿದ್ದನು, ಅವನು ತನ್ನನ್ನು ತಾನೇ ತಗ್ಗಿಸಿಕೊಂಡು ಯೊರ್ದಾನ ನದಿಯಲ್ಲಿ ಏಳು ಬಾರಿ ಮುಳುಗಿ ಏಳುವುದು ಅಷ್ಟೇನೂ ಸುಲಭದ ಮಾತಾಗಿರಲಿಲ್ಲ. ಏಕೆಂದರೆ ಅದರಲ್ಲಿ ಯಾವುದೇ ಅರ್ಥವಿಲ್ಲ ಎಂದು ಅವನು ನೆನೆಸಿರಬಹುದು. ದೇವರು ಅವನು ನಿರೀಕ್ಷಿಸಿದ ರೀತಿಯಲ್ಲಿ ಉತ್ತರ ಕೊಡಲಿಲ್ಲ ಆದ್ದರಿಂದ ಅವನು ಕೋಪಗೊಂಡು ಮನೆಗೆ ತಿರಿಗಿ ಹೋಗಲು ಬಯಸಿದನು, ಆದರೆ ಸ್ವಲ್ಪ ಸಮಯದ ನಂತರ ... ಅವನು ದೇವರಿಗೆ ವಿಧೇಯನಾಗಿ, ದೇವರು ಹೇಳಿದಂತೆ ಮಾಡಿದನು. ಅವನು ಯೊರ್ದಾನ್ ನದಿಯಲ್ಲಿ ಏಳು ಸಾರಿ ಮುಳುಗಿದನು, ಅವನು ರೋಗವು ವಾಸಿಯಾಯಿತು.

**ನಂಬಿಕೆಯ ಒಳ್ಳೆಯ ಹೋರಾಟವನ್ನು ಮಾಡು**

ಸತ್ಯವೇದವು ಆದಿಕಾಂಡದಿಂದ ಹಿಡಿದು ಪ್ರಕಟನೆಯವರೆಗೂ ತಮ್ಮ ನಂಬಿಕೆಯನ್ನು ಕಾರ್ಯರೂಪದಲ್ಲಿ ತೋರಿಸಿದ ಸ್ತ್ರೀಪುರುಷರ ಕುರಿತಾಗಿ ತಿಳಿಸುತ್ತದೆ. ಅವು ಬೇರೊಬ್ಬರು ತಮ್ಮಗೋಸ್ಕರವಾಗಿ ನಂಬಿಕೆಯಿಟ್ಟು ಕಾರ್ಯಮಾಡಲಿ ಎಂದು ಕಾದು ಕುಳಿತ್ತಿದ್ದ ಜನರ ಕಥೆಗಳಲ್ಲ.

"ಓ, ದೇವರು ಏನನ್ನು ಬಯಸುತ್ತಾನೋ ಹಾಗೆ ಮಾಡಲಿ..." "ಭವಿಷ್ಯದಲ್ಲಿ ಯಾವುದೋ ಒಂದು ಸಮಯದಲ್ಲಿ ನಾನು ವಾಸಿಯಾಗುತ್ತೇನೆಂಬುದು ನನಗೆ ಗೊತ್ತು." "ನಾನು ಏನನ್ನಾದರೂ ಮಾಡಬೇಕೆಂದು ದೇವರು ಬಯಸಿದರೆ, ಆತನು ಅದನ್ನು ನನಗೆ ಹೇಳುತ್ತಾನೆ" ಎಂಬುದಲ್ಲ ನಂಬಿಕೆ.

ನಂಬಿಕೆ ಎಂದರೆ ನಮ್ಮ ಪರಿಸ್ಥಿತಿಯನ್ನು ನಾವು ಕೈಗೆ ಎತ್ತಿಕೊಂಡು - ದೇವರು ಅದಕ್ಕೆ ಉತ್ತರ ಕೊಡುವುದನ್ನು ನಾವು ಕೇಳುವವರೆಗೂ ಅದರ ವಿಷಯವಾಗಿ ಪ್ರಾರ್ಥಿಸುವುದು - ಪವಿತ್ರಾತ್ಮನು ಉತ್ತರವನ್ನು

ನಮಗೆ ತಿಳಿಸುವವರೆಗೂ ದೇವರ ವಾಕ್ಯಗಳನ್ನು ಹುಡುಕಿ ಓದುವುದು ಆಗಿದೆ.

ಯಾಕೋಬನು ಹೇಳಿದ ಮಾತುಗಳನ್ನು ನೆನಪಿನಲ್ಲಿಟ್ಟುಕೊಳ್ಳಿರಿ,

ಹಾಗೆಯೇ ಕ್ರಿಯೆಗಳಿಲ್ಲದ ನಂಬಿಕೆಯು ತನ್ನಲ್ಲಿ ಜೀವವಿಲ್ಲದ್ದು. (ಯಾಕೋಬ 2:17).

ನಂಬಿಕೆಯ ಒಳ್ಳೆಯ ಹೋರಾಟವನ್ನು ಮಾಡು ಎಂದು ತಿಮೊಥೆಯನ ಪುಸ್ತಕವು ನಮಗೆ ಹೇಳುತ್ತದೆ (1 ತಿಮೊಥೆ 6:12ಎ).

ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿ ನಾವು ಹೀಗೆ ಓದುತ್ತೇವೆ, ಆದದರಿಂದ ಕಠಿಣ ಯುದ್ಧವು ನಡೆಯುವ ದಿವಸದಲ್ಲಿ ಆ ವೈರಿಗಳನ್ನು ಎದುರಿಸುವದಕ್ಕೂ ಮಾಡಬೇಕಾದದ್ದೆಲ್ಲವನ್ನು ಮಾಡಿ ಜಯಶಾಲಿಗಳಾಗಿ ನಿಲ್ಲುವದಕ್ಕೂ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ತೆಗೆದುಕೊಳ್ಳಿರಿ.

ಸತ್ಯವೆಂಬ ನಡುಕಟ್ಟನ್ನು ಕಟ್ಟಿಕೊಂಡು ನೀತಿಯೆಂಬ ವಜ್ರಕವಚವನ್ನು ಧರಿಸಿಕೊಂಡು ಸಮಾಧಾನದ ವಿಷಯವಾದ ಸುವಾರ್ತೆಯನ್ನು ತಿಳಿಸುವದರಲ್ಲಿ ಸಿದ್ಧವಾದ ಮನಸ್ಸೆಂಬ ಕೆರಗಳನ್ನು ಮೆಟ್ಟಿಕೊಂಡು ನಿಲ್ಲಿರಿ. ಮತ್ತು ನಂಬಿಕೆಯೆಂಬ ಗುರಾಣಿಯನ್ನು ಹಿಡುಕೊಳ್ಳಿರಿ. ಅದರಿಂದ ನೀವು ಕೆಡುಕನ ಬಾಣಗಳನ್ನೆಲ್ಲಾ ಆರಿಸುವದಕ್ಕೆ ಶಕ್ತರಾಗುವಿರಿ. (ಎಫೆಸ 6:13-16).

ನಮ್ಮ ಆರೋಗ್ಯ, ನಮ್ಮ ಹಣಕಾಸು, ನಮ್ಮ ಕುಟುಂಬಗಳು, ನಮ್ಮ ದೇಶಗಳ ವಿಷಯದಲ್ಲಿ ಪ್ರತಿದಿನವು ನಮಗೆ ಹೋರಾಟವಿದೆ. ವಿಶ್ವಾಸಿಗಳು ದೇವರ ವಾಕ್ಯವನ್ನು ಕೇಳುತ್ತಾ, ದೇವರ ವಾಕ್ಯವನ್ನು ನುಡಿಯುತ್ತಾ, ಆ ವಾಕ್ಯದ ಪ್ರಕಾರ ನಂಬಿಕೆಯಿಂದ ಕಾರ್ಯಮಾಡಬೇಕಾದ ಸಮಯ ಇದಾಗಿದೆ.

**ಪರಾಮರ್ಶೆಗಾಗಿರುವ ಪ್ರಶ್ನೆಗಳು**

1. ನಂಬಿಕೆಯ ಹತ್ತು ಪ್ರಯೋಜನಗಳನ್ನು ಪಟ್ಟಿ ಮಾಡಿ ಬರೆಯಿರಿ.

2. ಸತ್ಯವೇದಲ್ಲಿ ನಂಬಿಕೆಯಿಂದ ಕಾರ್ಯಮಾಡಿದ ವ್ಯಕ್ತಿಗಳ ಉದಾಹರಣೆಯನ್ನು ಕೊಟ್ಟು, ಅದು ನಿಮ್ಮ ಜೀವನದ ಮೇಲೆ ಹೇಗೆ ಪ್ರಭಾವ ಬೀರಿದೆ ಎಂಬುದನ್ನು ತಿಳಿಸಿರಿ.

## ಪಾಠ ನಾಲ್ಕು

# ನಂಬಿಕೆಯ ಆರು ಮೂಲಭೂತ ಅಂಶಗಳು

### ನಂಬಿಕೆಯ ಮೂಲಕ ದೇವರ ವಾಗ್ದಾನವನ್ನು ಪಡೆದುಕೊಳ್ಳುವುದು

ದೇವರ ವಾಕ್ಯವು ವಾಗ್ದಾನಗಳಿಂದ ತುಂಬಿದೆ, ಅವು ಪ್ರತಿಯೊಬ್ಬ ವಿಶ್ವಾಸಿಗೋಸ್ಕರವಾಗಿ ಇರುವಂಥವುಗಳಾಗಿವೆ. ಆದರೆ ಈ ವಾಗ್ದಾನಗಳ ಪ್ರಯೋಜನಗಳನ್ನು ಹೊಂದಿಕೊಳ್ಳಲು, ದೇವರ ವಾಕ್ಯದಲ್ಲಿರುವ ಕೆಲವು ಷರತ್ತುಗಳನ್ನು ನಾವು ನೆರವೇರಿಸಬೇಕು. ಅವು ನಂಬಿಕೆಯ ಕುರಿತಾಗಿರುವ ಆರು ಮೂಲಭೂತ ಅಂಶಗಳಾಗಿವೆ. ದೇವರ ವಾಕ್ಯದ ಪ್ರಕಾರ ಈಗಾಗಲೇ ಸಮೃದ್ಧಿಯನ್ನೂ ದೈವಿಕ ಆರೋಗ್ಯವನ್ನೂ ಪಡೆದು ಆಶೀರ್ವಾದ ಹೊಂದಿರುವ ಅನೇಕರು ಇನ್ನೂ ಬಡತನದಲ್ಲಿಯೂ, ತಮ್ಮ ದೇಹದಲ್ಲಿ ರೋಗ ವ್ಯಾಧಿಗಳಿಂದ ಯಾತನೆಪಡುತ್ತಾ ಜೀವಿಸುತ್ತಿದ್ದಾರೆ ಏಕೆಂದರೆ ನಂಬಿಕೆಯ ಕುರಿತಾಗಿರುವ ಈ ಆರು ಮೂಲಭೂತ ಅಂಶಗಳು ಅವರ ಜೀವನದಲ್ಲಿ ಇಲ್ಲವೇ ಇಲ್ಲ. ನಂಬಿಕೆಯ ಕುರಿತಾಗಿರುವ ಈ ಆರು ಮೂಲಭೂತ ಅಂಶಗಳ ಮೂಲಕ ಪ್ರತಿಯೊಬ್ಬ ವಿಶ್ವಾಸಿಯು ದೇವರ ವಾಕ್ಯದಲ್ಲಿರುವ ವಾಗ್ದಾನಗಳ ಎಲ್ಲಾ ಪ್ರಯೋಜನಗಳನ್ನು ಪಡೆದುಕೊಂಡು ಅನುಭವಿಸಬಹುದು.

ನಂಬಿಕೆಯ ಆರು ಮೂಲಭೂತ ಅಂಶಗಳು:

* ನಮಗೆ ಸೇರಿರುವಂಥವುಗಳ ಕುರಿತು ತಿಳಿದುಕೊಳ್ಳಿರಿ
* ತಂದೆಯನ್ನು ಬೇಡಿಕೊಳ್ಳಿರಿ
* ನಂಬಿ ಹೊಂದಿಕೊಳ್ಳಿರಿ
* ನಂಬಿಕೆಯ ಅರಿಕೆಗಳು
* ನಮ್ಮ ನಂಬಿಕೆಗೆ ತಕ್ಕಂತೆ ಕಾರ್ಯಮಾಡಿರಿ
* ನಂಬಿಕೆಯ ವಿಷಯದಲ್ಲಿ ತಾಳ್ಮೆಯಿರಬೇಕು

### ನಮಗೆ ಸೇರಿರುವಂಥವುಗಳ ಕುರಿತು ತಿಳಿದುಕೊಳ್ಳಿರಿ

ನಂಬಿಕೆ ಉಳ್ಳವರಾಗಿರಲು, ನಾವು ಮೊದಲು ನಮಗೆ ಸೇರಿರುವಂಥಗಳ ಕುರಿತು ದೇವರ ವಾಕ್ಯದ ಮೂಲಕ ತಿಳಿದುಕೊಳ್ಳಬೇಕು. ದೇವರ ವಾಕ್ಯದಲ್ಲಿರುವ ದೇವರ ವಾಗ್ದಾನಗಳನ್ನು ಹುಡುಕಿ ಕಂಡುಕೊಳ್ಳುವುದರ ಕುರಿತಾದ ಮಹತ್ವದ

ಸತ್ಯವೇದದಲ್ಲಿರುವ ನಾಲ್ಕು ಬೇರೆ ಬೇರೆ ವ್ಯಕ್ತಿಗಳ ಮೂಲಕ ನಮಗೆ ತಿಳಿಯಪಡಿಸಲಾಗಿದೆ.

**ಪ್ರವಾದಿಯಾದ ಯೆರೆಮೀಯನು**

ಪ್ರವಾದಿಯಾದ ಯೆರೆಮೀಯನು ತನ್ನ ಜೀವನದಲ್ಲಿ ದೇವರ ವಾಗ್ದಾನಗಳನ್ನು ಹುಡುಕಿ ಕಂಡುಕೊಳ್ಳುವುದು ಎಷ್ಟು ಸಂತೋಷಕರವೂ ಅದ್ಭುತಕರವೂ ಆಗಿತ್ತು ಎಂಬುದನ್ನು ನಮಗೆ ಹೇಳುತ್ತಾನೆ.

ನನಗೆ ದೊರೆತ ನಿನ್ನ ಮಾತುಗಳನ್ನು ಆಹಾರಮಾಡಿಕೊಂಡೆನು, ನಿನ್ನ ನುಡಿಗಳು ನನಗೆ ಹರ್ಷವೂ ಹೃದಯಾನಂದವೂ ಆದವು; ಸೇನಾಧೀಶ್ವರನಾದ ದೇವರೇ, ಯೆಹೋವನೇ, ನಾನು ನಿನ್ನ ಹೆಸರಿನವನಲ್ಲವೇ (ಯೆರೆಮೀಯ 15:16).

**ಅಪೊಸ್ತಲನಾದ ಪೇತ್ರನು**

ನಾವು ದೇವರ ವಾಕ್ಯದಲ್ಲಿರುವ ವಾಗ್ದಾನಗಳನ್ನು ಹುಡುಕಿ ತಿಳಿದುಕೊಳ್ಳಬೇಕು. ಈ ವಾಗ್ದಾನಗಳು ಏನನ್ನು ಹೇಳುತ್ತವೆ ಎಂದು ನಾವು ತಿಳಿದಿರಬೇಕು, ಆ ವಾಗ್ದಾನಗಳು ದೇವರ ವಾಕ್ಯವನ್ನು ನಂಬಿರುವವರಾದ ನಮಗೆ ಸೇರಿದವುಗಳಾಗಿವೆ ಎಂದು ನಾವು ತಿಳಿದಿರಬೇಕು.

ದೇವರ ವಿಷಯವಾಗಿಯೂ ನಮ್ಮ ಕರ್ತನಾದ ಯೇಸುವಿನ ವಿಷಯವಾಗಿಯೂ ಪರಿಜ್ಞಾನವು ನಿಮಗೆ ಉಂಟಾಗುವದರಲ್ಲಿ ಕೃಪೆಯೂ ಶಾಂತಿಯೂ ನಿಮಗೆ ಹೆಚ್ಚೆಚ್ಚಾಗಿ ದೊರೆಯಲಿ ನಮ್ಮನ್ನು ತನ್ನ ಪ್ರಭಾವದಿಂದಲೂ ಗುಣಾತಿಶಯದಿಂದಲೂ ಕರೆದ ದೇವರ ವಿಷಯವಾಗಿ ಯೇಸುವಿನ ದಿವ್ಯ ಶಕ್ತಿಯು ನಮಗೆ ಪರಿಜ್ಞಾನವನ್ನು ಕೊಟ್ಟದ್ದರಲ್ಲಿ ಜೀವಕ್ಕೂ ಭಕ್ತಿಗೂ ಬೇಕಾದದ್ದೆಲ್ಲವೂ ದೊರೆಯಿತೆಂದು ಬಲ್ಲೆವಷ್ಟೆ. ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವ ಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶದಿಂದ ದೇವರು ತನ್ನ ಪ್ರಭಾವ ಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ. (2 ಪೇತ್ರ 1:2-4).

ದೇವರ ವಾಗ್ದಾನಗಳು "ಅತ್ಯಂತ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇವೆ." ನಾವು ದೇವರ ವಾಕ್ಯಗಳನ್ನು ಹುಡುಕಿ ಈ

ವಾಗ್ದಾನಗಳನ್ನು ಕಂಡುಕೊಂಡು, ನಮಗೆ ಸೇರಿರುವಂಥದ್ದು ಏನೆಂದು ತಿಳಿದುಕೊಳ್ಳಬಹುದು.

**ಅಪೊಸ್ತಲನಾದ ಯೋಹಾನನು**

ನಮ್ಮ ನಂಬಿಕೆಯು ನಾವು ಏನನ್ನು ತಿಳಿದುಕೊಂಡಿದ್ದೇವೋ ಅದಕ್ಕಿಂತ ಮೇಲೆ ಏರಲು ಆಗುವುದಿಲ್ಲ.

"ಸತ್ಯವನ್ನು ತಿಳಿದುಕೊಳ್ಳುವಿರಿ ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು." (ಯೋಹಾನ 8:32).

ನಾವು ದೇವರ ವಾಕ್ಯವನ್ನು ಓದಿ ಕಲಿಯುವಾಗ ಪವಿತ್ರಾತ್ಮನು ನಮಗೆ ಪ್ರಕಟಪಡಿಸುವ ದೇವರ ವಾಕ್ಯದಲ್ಲಿರುವ ಸತ್ಯದ ತಿಳಿವಳಿಕೆಯ ಮೂಲಕ ಮಾತ್ರವೇ ನಮಗೆ ಬಿಡುಗಡೆಯಾಗಲು ಸಾಧ್ಯ. ದೇವರ ವಾಕ್ಯದಲ್ಲಿರುವ "ಸತ್ಯವನ್ನು" ನಾವು ತಿಳಿದುಕೊಳ್ಳದ ಹೊರತು ನಮಗೆ ಬಿಡುಗಡೆಯಾಗುವುದಿಲ್ಲ. ನಮಗೆ ಪ್ರಕಟಪಡಿಸುವಂಥ ಸಂಗತಿಯು ನಮ್ಮ ಸ್ವಾಭಾವಿಕ ಮನಸ್ಸಿಗೆ ಹುಚ್ಚುತನವೆಂದು ತೋರಿದರೂ ಕೂಡ, ದೇವರ ವಾಕ್ಯದಲ್ಲಿರುವ ಆ "ಸತ್ಯದ" ತಿಳಿವಳಿಕೆಯೇ ನಮ್ಮನ್ನು ಬಿಡಿಸುತ್ತದೆ.

**ಅಪೊಸ್ತಲನಾದ ಪೌಲನು**

ಪೌಲನು ಕೊರಿಂಥದವರಿಗೆ ಹೀಗೆ ಬರೆದಿದ್ದಾನೆ:

ಆದರೆ ಬರೆದಿರುವ ಪ್ರಕಾರ ದೇವರು ತನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ ಕಿವಿ ಕೇಳಲಿಲ್ಲ. ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ.

ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳಲ್ಲಿ ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ. ಮನುಷ್ಯ ಒಳಗಿನ ಆಲೋಚನೆಗಳು ಅವನಲ್ಲಿರುವ ಜೀವಾತ್ಮಕ್ಕೆ ಹೊರತು ಮತ್ತಾರಿಗೆ ತಿಳಿಯುವದಿಲ್ಲ? ಹಾಗೆಯೇ ದೇವರಾಲೋಚನೆಗಳನ್ನು ದೇವರ ಆತ್ಮನೇ ಹೊತು ಬೇರೆ ಯಾರೂ ಗ್ರಹಿಸುವದಿಲ್ಲ.

ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳುಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು. ಇವುಗಳಿಂದ ಮನುಷ ಜ್ಞಾನವು ಕಲಿಸಿದ ಮಾತುಗಳಿಂದ ಹೇಳದೇ ದೇವರಾತ್ಮವೇ

ಕಲಿಸಿಕೊಟ್ಟ ಮಾತುಗಳಿಂದ ಹೇಳಿ ಆತ್ಮಸಂಬಂಧವಾದವುಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ ವಿವರಿಸುತ್ತೇವೆ.

ಪ್ರಾಕೃತ ಮನುಷನು ದೇವರಾತ್ಮ ವಿಷಯಗಳನ್ನು ಬೇಡವೆನ್ನುತ್ತಾನೆ. ಅವು ಅವನಿಗೆ ಹುಚ್ಚು ಮಾತಾಗಿ ತೋರುತ್ತವೆ. ಅವು ಆತ್ಮವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು. ದೇವರಾತ್ಮನಿಂದ ನಡಿಸಿಕೊಳ್ಳುವವನೋ ಎಲ್ಲವನ್ನೂ ವಿಚಾರಿಸಿ ತಿಳುಕೊಳ್ಳುತ್ತಾನೆ. ಆದರೆ ಇವನನ್ನು ಯಾವನಾದರೂ ವಿಚಾರಿಸಿ ತಿಳುಕೊಳ್ಳುವದಿಲ್ಲ. ಕರ್ತನ ಮನಸ್ಸನ್ನು ತಿಳುಕೊಂಡು ಆತನಿಗೆ ಉಪದೇಶಿಸುವವನಾರು ಎಂದು ಬರೆದಿದೆಯಲ್ಲಾ ನಮಗಾದರೋ ಕ್ರಿಸ್ತನ ಮನಸ್ಸು ದೊರಕಿತು. (1 ಕೊರಿಂಥ 2:9-16).

**ಬೇಡಿಕೊಳ್ಳಿರಿ!**

---

ಈಗಾಗಲೇ ಏನೆಲ್ಲಾ ನಮ್ಮದಾಗಿದೆಯೆಂದು ತಿಳಿದುಕೊಂಡಿದ್ದೇವೋ ಆ ವಿಷಯದಲ್ಲಿ ನಾವು ದೇವರನ್ನು ಬೇಡಿಕೊಳ್ಳಬೇಕು. ಅನೇಕ ಪ್ರಾರ್ಥನೆಗಳಿಗೆ ಉತ್ತರ ಸಿಗುವುದಿಲ್ಲ ಏಕೆಂದರೆ ನಾವು ಆ ಪರಿಸ್ಥಿತಿಯ ಕುರಿತು ಮಾತನಾಡುತ್ತೇವೆಯೇ ಹೊರತು ಅದರ ಕುರಿತು ಪ್ರಾರ್ಥಿಸುವುದಿಲ್ಲ.

ಅಪೊಸ್ತಲನಾದ ಯಾಕೋಬನು ಹೀಗೆ ಬರೆದಿದ್ದಾನೆ,

…ನೀವು ದೇವರನ್ನು ಬೇಡಿಕೊಳ್ಳದ ಕಾರಣ ನಿಮಗೇನೂ ದೊರೆಯಲಿಲ್ಲ (ಯಾಕೋಬ 4:2b).

**ಯೇಸು ಹೀಗೆಂದು ಹೇಳಿದ್ದಾನೆ …**

ಬೇಡಿಕೊಳ್ಳಿರಿ ನಿಮಗೆ ದೊರೆಯುವದು. ಹುಡುಕಿರಿ ನಿಮಗೆ ಸಿಕ್ಕುವದು. ತಟ್ಟಿರಿ ನಿಮಗೆ ತೆರೆಯುವದು. ಯಾಕಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು. ಹುಡುಕುವವನಿಗೆ ಸಿಕ್ಕುವದು. ತಟ್ಟುವವನಿಗೆ ತೆರೆಯುವದು. ನಿಮ್ಮಲ್ಲಿ ಯಾವನಾದರೂ ರೊಟ್ಟಿ ಕೇಳುವ ಮಗನಿಗೆ ಕಲ್ಲನ್ನು ಕೊಡುವನೇ?

ಮೀನು ಕೇಳಿದರೆ ಹಾವನ್ನು ಕೊಡುವನೇ? ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡಬಲ್ಲವರಾದರೆ, ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಒಳ್ಳೆಯ ವರಗಳನ್ನು ಕೊಡುವನಲ್ಲವೇ! (ಮತ್ತಾಯ 7:7-11)

**ಆಶೀರ್ವಾದಗಳು ನಮಗೆ ಸೇರಿದವುಗಳಾಗಿವೆ**

ಈ ಭೂಮಿಯಲ್ಲಿ ನಾವು ಸಮೃದ್ಧಿಕರವಾಗಿ, ಆರೋಗ್ಯಕರವಾಗಿ ಜಯಶಾಲಿಯಾದ ಜೀವನವನ್ನು ನಡೆಸಲು ಬೇಕಾದ ಎಲ್ಲವನ್ನೂ ದೇವರು ಈಗಾಗಲೇ ಕೊಟ್ಟು ನಮ್ಮನ್ನು ಆಶೀರ್ವದಿಸಿದ್ದಾನೆ. ಈ ಪ್ರತಿಯೊಂದು ಆಶೀರ್ವಾದಗಳು ಈಗಾಗಲೇ ನಮಗೆ ಸೇರಿದವುಗಳಾಗಿವೆ. ಅವು ಈಗಾಗಲೇ ಪರಲೋಕದಲ್ಲಿವೆ.

ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮೀಯ ವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ. (ಎಫೆಸ 1:3).

**ನಾವು ಏನೇ ಬೇಡಿಕೊಂಡರೂ**

ಆದರೂ, ಈ ಆಶೀರ್ವಾದಗಳನ್ನು ಪಡೆದುಕೊಳ್ಳುವುದಕ್ಕಾಗಿ, ಅವು ಏನಾಗಿವೆ ಎಂದು ನಾವು ತಿಳಿದುಕೊಂಡರೆ ಸಾಲದು, ನಾವು ಅವುಗಳಿಗಾಗಿ ತಂದೆಯನ್ನು ಬೇಡಿಕೊಳ್ಳಬೇಕು.

...ನಿಮಗೆ ನಿಜನಿಜವಾಗಿ ಹೇಳುತ್ತೇನೆ. ನಿಮ್ಮ ತಂದೆಯನ್ನು ಏನಾದರೂ ಬೇಡಿಕೊಂಡರೆ ಅದನ್ನು ಆತನು ನನ್ನ ಹೆಸರಿನ ಮೇಲೆ ನಿಮಗೆ ಕೊಡುವನು. ನೀವು ಇದುವರೆಗೆ ನನ್ನ ಹೆಸರಿನ ಮೇಲೆ ಯಾವುದೊಂದನ್ನೂ ಬೇಡಿಕೊಂಡಿಲ್ಲ ಬೇಡಿಕೊಳ್ಳಿರಿ ನಿಮಗೆ ಸಿಕ್ಕುವದು. ಆಗ ನಿಮ್ಮ ಆನಂದವು ಪರಿಪೂರ್ಣವಾಗುವದು (ಯೋಹಾನ 16:23b, 24).

ನಾವು ಏನೇ ಬೇಡಿಕೊಂಡರೂ ನಾವು ಅದನ್ನು ಹೊಂದಿಕೊಳ್ಳುತ್ತೇವೆ ಎಂದು ದೇವರು ನಮಗೆ ವಾಗ್ದಾನ ಮಾಡಿದ್ದಾನೆ. ತಂದೆಯು ತನ್ನ ವಾಕ್ಯದಲ್ಲಿ ವಾಗ್ದಾನ ಮಾಡಿರುವುದನ್ನು ಬೇಡಿಕೊಳ್ಳುವಂಥದ್ದು, ದೇವರ ವಾಕ್ಯದಲ್ಲಿರುವ ವಾಗ್ದಾನಗಳನ್ನು ಹೊಂದಿಕೊಳ್ಳುವುದಕ್ಕಾಗಿ ಅವಶ್ಯಕವಾಗಿರುವ ನಂಬಿಕೆಯ ಮತ್ತೊಂದು ಪ್ರಮುಖ ಅಂಶವಾಗಿದೆ.

"ನೀವು ನಂಬಿಕೊಂಡು ಪ್ರಾರ್ಥನೆಯಲ್ಲಿ ಏನೇನು ಬೇಡಿಕೊಳ್ಳುವಿರೋ ಅದನ್ನೆಲ್ಲಾ ಹೊಂದುವಿರಿ" (ಮತ್ತಾಯ 21:22).

**"ಆದರೆ ನಾನು ಹೊಂದಿಕೊಳ್ಳಲಿಲ್ಲ"**

ನಾವು ಬೇಡಿಕೊಂಡರೂ ಹೊಂದಿಕೊಳ್ಳದಿರುವುದಕ್ಕೆ ಎರಡು ಕಾರಣಗಳಿವೆ ಎಂದು ಯಾಕೋಬನು ಹೇಳಿದ್ದಾನೆ. ಮೊದಲನೆಯದು ನಾವು ಆತನ ಚಿತ್ತದ ಪ್ರಕಾರ ಬೇಡಿಕೊಳ್ಳಲಿಲ್ಲ.

ನೀವು ಬೇಡಿದರೂ ಬೇಡಿದ್ದನ್ನು ನಿಮ್ಮ ಭೋಗಗಳಿಗಾಗಿ ಉಪಯೋಗಿಸಬೇಕೆಂಬ ದುರಭಿಪ್ರಾಯಪಟ್ಟು ಬೇಡಿಕೊಳ್ಳುವದರಿಂದ ನಿಮಗೆ ದೊರೆಯುವದಿಲ್ಲ (ಯಾಕೋಬ 4:3).

ಎರಡನೆಯದು ನಾವು ಸಂದೇಹಪಡದೆ ನಂಬಿಕೆಯಿಂದ ಬೇಡಿಕೊಳ್ಳಬೇಕು.

ಸ್ವಲ್ಪವೂ ಸಂದೇಹಪಡದೆ ನಂಬಿಕೆಯಿಟ್ಟು ಕೇಳಿಕೊಳ್ಳಬೇಕು. ಸಂದೇಹಪಡುವವನು ಗಾಳಿಯಿಂದ ಬಡಿಯಲ್ಪಟ್ಟ ಸಮುದ್ರದ ತೆರೆಯಂತೆ ಅಲೆಯುತ್ತಿರುವನು. ಆ ಮನುಷ್ಯನು ತಾನು ಕರ್ತನಿಂದ ಏನಾದರೂ ಹೊಂದುವನೆಂದು ಭಾವಿಸದೆ ಇರಲಿ. ಅವನು ಎರಡು ಮನಸ್ಸುಳ್ಳವನೂ ತನ್ನ ನಡತೆಯಲ್ಲೆಲ್ಲಾ ಚಂಚಲನೂ ಆಗಿದ್ದಾನೆ (ಯಾಕೋಬ 1:6-8).

## ನಂಬಿರಿ ಹೊಂದಿಕೊಳ್ಳಿರಿ

---

ನಾವು ದೇವರ ವಾಗ್ದಾನಗಳನ್ನು ಹೊಂದಿಕೊಳ್ಳುವುದಕ್ಕಾಗಿಯೇ ಅವುಗಳನ್ನು ಪಡೆದುಕೊಂಡಿದ್ದೇವೆ ಎಂದು ನಾವು ನಂಬಬೇಕು.

## ಯೇಸು ನಂಬಿರಿ ಎಂದು ಹೇಳಿದನು

ಆದಕಾರಣ ನೀವು ಪ್ರಾರ್ಥನೆ ಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ. ಅದು ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ (ಮಾರ್ಕ 11:24).

ವಾಗ್ದಾನವನ್ನು ಹೊಂದಿಕೊಳ್ಳುವುದಕ್ಕಾಗಿ, ಆ ವಾಗ್ದಾನವು ಏನು ಹೇಳುತ್ತದೆ ಎಂದು ನಾವು ತಿಳಿದುಕೊಂಡು, ಆ ವಾಗ್ದಾನವನ್ನು ಪಡೆದುಕೊಳ್ಳುವುದಕ್ಕಾಗಿ ದೇವರನ್ನು ಬೇಡಿಕೊಂಡರೆ ಮಾತ್ರ ಸಾಲದು, ಆದರೆ ಆ ವಾಗ್ದಾನದ ಪ್ರಯೋಜನಗಳೆಲ್ಲಾ ನಮ್ಮವೇ ಆಗಿವೆ ಎಂದೂ, ನಾವು ಅದನ್ನು ಬೇಡಿಕೊಂಡ ಕೂಡಲೇ ಅದನ್ನು ಹೊಂದಿದ್ದೇವೆ ಎಂದೂ ನಾವು ನಂಬಬೇಕು. ಆ ವಾಗ್ದಾನದ ಕಾರ್ಯಗಳು ನಮ್ಮ ಜೀವನದಲ್ಲಿ ಈಗಲೇ ಪ್ರಕಟವಾಗಿದ್ದರೂ ಇಲ್ಲದಿದ್ದರೂ, ನಾವು "ನಾವು ನಂಬಿ ಹೊಂದಿಕೊಳ್ಳಬೇಕು." ನಾವು ನಂಬಿಕೆಯಿಂದ ಬೇಡಿಕೊಂಡ ತಕ್ಷಣವೇ ಆ ವಾಗ್ದಾನವನ್ನು ಹೊಂದಿಕೊಂಡಿದ್ದೇವೆ ಎಂದು ನಾವು ನಂಬಬೇಕು. ನಾವು ನೋಡುವಂಥದ್ದನ್ನಾಗಲಿ ಅಥವಾ ಅನುಭವಿಸುವಂಥದ್ದನ್ನಾಗಲಿ ನಾವು ನಂಬುವುದಿಲ್ಲ. ದೇವರ ವಾಕ್ಯವು ಏನನ್ನು ಹೇಳುತ್ತದೋ ಅದನ್ನು ನಾವು ನಂಬುತ್ತೇವೆ.

ಯಾಕಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು... (ಮತ್ತಾಯ 7:8 ಎ).

ಯೇಸು ಆತನಿಗೆ – "ನೀನು ನನ್ನನ್ನು ನೋಡಿದ್ದರಿಂದ ನಂಬಿದ್ದೀ. ನೋಡದೆ ನಂಬಿದವರು ಧನ್ಯರು ಎಂದು ಹೇಳಿದನು" (ಯೋಹಾನ 20:29).

**ಇಬ್ರಿಯ ಪತ್ರಿಕೆಯ ಲೇಖಕ**

ಆಸಕ್ತಿಯಿಂದ ಬೇಡಿಕೊಳ್ಳುವವರಿಗೆ ದೇವರು ಪ್ರತಿಫಲ ಕೊಡುತ್ತಾನೆ ಎಂದು ಇಬ್ರಿಯ ಪತ್ರಿಕೆಯ ಲೇಖಕನು ನಮಗೆ ತಿಳಿಸುತ್ತಾನೆ.

ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ. ದೇವರ ಬಳಿಗೆ ಬರುವವನು ದೇವರು ಇದ್ದಾನೆ ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ (ಇಬ್ರಿಯ 11:6).

**ನಂಬಿಕೆಯ ಆರಿಕೆಗಳು**

---

ದೇವರ ವಾಕ್ಯದಲ್ಲಿ ನಾವು ನಂಬಬೇಕೆಂದು ಹೇಳುವಂಥದ್ದನ್ನು ನಾವು ಕೈಕೊಂಡು ನಡೆಯಬೇಕು. ಆಗ ನಾವು ಏನನ್ನು ಹೇಳುತ್ತೇವೋ ಅದನ್ನು ಹೊಂದಿಕೊಳ್ಳುತ್ತೇವೆ.

**ಯೇಸು ಹೀಗೆಂದು ಹೇಳಿದನು**

"ನಿಮಗೆ ಸತ್ಯವಾಗಿ ಹೇಳುತ್ತೇನೆ. ಯಾವನಾದರೂ ಈ ಬೆಟ್ಟಕ್ಕೆ ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿ ತನ್ನ ಮನಸ್ಸಿನಲ್ಲಿ ಸಂಶಯಪಡದೆ ತಾನು ಹೇಳಿದ್ದು ಆಗುವದೆಂದು ನಂಬಿದರೆ ಅವನು ಹೇಳಿದಂತೆಯೇ ಆಗುವದು" (ಮಾರ್ಕ 11:23).

**ನಂಬಿಕೆಯು ಮಾತನಾಡುತ್ತದೆ**

ಅಪೊಸ್ತಲನಾದ ಪೌಲನು ಹೀಗೆ ಬರೆದಿದ್ದಾನೆ,

ಆದರೆ ನಂಬಿಕೆಯಿಂದುಂಟಾಗುವ ನೀತಿಯು ಏನು ಹೇಳುತ್ತದೆ? ದೇವರ ವಾಕ್ಯವು ನಿನ್ನ ಸಮೀಪದಲ್ಲಿಯೇ ಇದೆ. ಅದು ನಿನ್ನ ಬಾಯಲ್ಲಿಯೂ ಹೃದಯದಲ್ಲಿಯೂ ಇದೆ ಅನ್ನುತ್ತದೆ. ಆ ವಾಕ್ಯವು ನಾವು ಸಾರುವ ನಂಬಿಕೆಯ ವಿಷಯವಾದ ವಾಕ್ಯವೇ ಅದೇನಂದರೆ ನೀನು ಯೇಸುವನ್ನು ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೆ. ಹೃದಯದಿಂದ ನಂಬುವದರ ಮೂಲಕ ನೀತಿಯು ದೊರಕುತ್ತದೆ.

ಬಾಯಿಂದ ಅರಿಕೆ ಮಾಡುವದರ ಮೂಲಕ ರಕ್ಷಣೆಯಾಗುತ್ತದೆ (ರೋಮಾಪುರ 10:6a, 8-10).

ನಾವು ಏನನ್ನು ಹೇಳುತ್ತೇವೆಯೋ ಅದರ ಮೂಲಕ ನಾವು ಏನನ್ನು ನಂಬುತ್ತಿದ್ದೇವೆ ಎಂಬುದನ್ನೂ, ಏನನ್ನು ಹೊಂದಿಕೊಳ್ಳುವುದಕ್ಕಾಗಿ ನಂಬುತ್ತಿದ್ದೇವೆ ಎಂಬುದನ್ನೂ ಅರಿಕೆಮಾಡಿ ಹೇಳುತ್ತಿದ್ದೇವೆ. ನಮ್ಮ ಮಾತುಗಳು ಮುಖ್ಯವಾಗಿವೆ ಏಕೆಂದರೆ ನಾವು ನಿಜವಾಗಿಯೂ ಏನನ್ನ ನಂಬುತ್ತಿದ್ದೇವೆ ಎಂಬುದನ್ನು ಅವು ತೋರಿಸುತ್ತವೆ.

**ಸಮಸ್ಯೆಗಳ ಬಗ್ಗೆ ಮಾತನಾಡಬೇಡಿರಿ**

ನಂಬಿಕೆಯಿಂದ ಮಾತ್ರವೇ ನಾವು ಏನಾದರೂ ಹೊಂದಿಕೊಳ್ಳಲು ಸಾಧ್ಯ. ನಮಗೆ ನಂಬಿಕೆಯಿದ್ದರೆ, ನಾವು ಸಮಸ್ಯೆಯ ಬಗ್ಗೆ ಮಾತನಾಡುವುದಿಲ್ಲ, ಅದಕ್ಕೆ ಬದಲಾಗಿ ನಾವು ವಾಕ್ಯವನ್ನು ಮಾತನಾಡುತ್ತೇವೆ. ನಾವು ನಂಬಿಕೆಯ ಅರಿಕೆಯನ್ನು ಮಾಡುವ ಮೂಲಕ ನಾವು "ನಮ್ಮ ತುಟಿಗಳ ಫಲವನ್ನು" ಸೃಷ್ಟಿಸುತ್ತಿದ್ದೇವೆ.

ಆದುದರಿಂದ ಆತನ ಮೂಲಕವಾಗಿಯೇ ದೇವರಿಗೆ ಸ್ತೋತ್ರ ಯಜ್ಞವನ್ನು ಎಡಬಿಡದೆ ಸಮರ್ಪಿಸೋಣ ಆತನು ಕರ್ತನೆಂದು ಬಾಯಿಂದ ಪ್ರತಿಜ್ಞೆ ಮಾಡುವದೇ ನಾವು ಅರ್ಪಿಸುವ ಯಜ್ಞವಾಗಿದೆ (ಇಬ್ರಿಯ 13:15).

**ನಂಬಿಕೆ ಬಗ್ಗೆ ಮಾತನಾಡಿರಿ**

ನಾವು ನಮ್ಮ ಹೃದಯದಲ್ಲಿ ನಂಬುವಂಥದ್ದನ್ನು ನಮ್ಮ ಬಾಯಿಂದ ಅರಿಕೆಮಾಡಬೇಕು. ನಮ್ಮ ಮನಸ್ಸಿನಿಂದ ನಾವು ಏನನ್ನಾದರೂ ನಂಬುವುದು ಅದು ಬೇರೆ ವಿಷಯ, ಆದರೆ, ದೇವರ "ರೇಮಾ" ವಾಕ್ಯವನ್ನು ಕೇಳುವುದರ ಮೂಲಕ ನಂಬಿಕೆಯು ಬರುವಾಗ, ನಾವು ನಮ್ಮ ಹೃದಯದಲ್ಲಿ ನಂಬಿದ್ದನ್ನು ಮಾತನಾಡುತ್ತೇವೆ.

ಅರಿಕೆ ಎಂದರೆ ನಂಬಿಕೆಯು ಮಾತನಾಡುವಂಥದ್ದಾಗಿದೆ ಎಂದರ್ಥ. ನಾವು ಮಾತನಾಡುವಂಥದ್ದು ದೇವರ ವಾಕ್ಯಕ್ಕೆ ಅನುಗುಣವಾಗಿರಬೇಕೆಯೇ ಹೊರತು, ನಮ್ಮ ಭಾವನೆಗಳಿಗೆ ಅಥವಾ ಸ್ವಭಾವಗಳಿಗೆ ಅನುಗುಣವಾಗಿ ಇರಬಾರದು. ಮೂಲ ಭಾಷೆಯಾದ ಗ್ರೀಕ್‌ನಲ್ಲಿ "ಅರಿಕೆ" ಎಂಬ ಪದಕ್ಕೆ "ಒಪ್ಪಿಕೊಳ್ಳುವುದು" ಅಥವಾ ದೇವರು ಹೇಳಿದಂಥ ಅದೇ ಸಂಗತಿಯನ್ನು ಮಾತನಾಡುವುದು ಎಂದರ್ಥವಿದೆ. ಅರಿಕೆಯು ಅಧಿಕಾರವನ್ನು ಉಂಟುಮಾಡುತ್ತದೆ.

## ನಮ್ಮ ಮಾತುಗಳು ಸೃಷ್ಟಿಸುತ್ತವೆ

ನಾವು ದೇವರ ಸ್ವರೂಪದ ಮೇರೆಗೂ ಹೋಲಿಕೆಯ ಮೇರೆಗೂ ಸೃಷ್ಟಿಸಲ್ಪಟ್ಟಿದ್ದೇವೆ. ದೇವರು ತನ್ನ ಬಾಯಿಂದ ನುಡಿದ ಮಾತುಗಳಿಂದ ಸಮಸ್ತವನ್ನು ಸೃಷ್ಟಿಸಿದನು.

ಲೋಕಗಳು ದೇವರ ಮಾತಿನಿಂದ ನಿರ್ಮಿತವಾದವೆಂದು ನಂಬಿಕೆಯಿಂದಲೆ ನಾವು ತಿಳಿದುಕೊಂಡು ಕಾಣಿಸುವ ಈ ಜಗತ್ತು ದೃಶ್ಯವಸ್ತುಗಳಿಂದ ಉಂಟಾಗಲಿಲ್ಲವೆಂದು ಗ್ರಹಿಸುತ್ತೇವೆ (ಇಬ್ರಿಯ 11:3).

ನಮ್ಮ ಬಾಯಿಂದ ಹೊರ ಬರುವ ಮಾತುಗಳಿಂದ ನಾವು ಕೂಡ "ಸೃಷ್ಟಿಸಬಹುದು". ನಾವು ನಂಬಿಕೆಯಿಂದ ದೇವರ ವಾಕ್ಯವನ್ನು ನಮ್ಮ ಬಾಯಿಯ ಮೂಲಕ ಹೇಳುವಾಗ ಸೃಷ್ಟಿಶೀಲ ಶಕ್ತಿಯು ಬಿಡುಗಡೆಯಾಗುತ್ತದೆ.

## ಅಬ್ರಹಾಮನ ಬಳಿಗೆ ಹೋಗೋಣ

ದೇವರು ಅಬ್ರಹಾಮನಿಗೆ, "ನಾನು ನಿನ್ನನ್ನು ಬಹು ಜನಾಂಗಗಳಿಗೆ ತಂದೆಯನ್ನಾಗಿ ಮಾಡುವೆನು" ಎಂದು ವಾಗ್ದಾನ ಮಾಡಿದನು. ದೇವರು ಅಬ್ರಾಮ್ ಎಂಬುದಾಗಿದ್ದ ಅವನ ಹೆಸರನ್ನು ಅಬ್ರಹಾಮನು ಎಂದು ಬದಲಾಯಿಸಿದನು, ಆ ಹೆಸರಿಗೆ ಬಹು ಜನಾಂಗಗ ತಂದೆ ಎಂದರ್ಥವಿದೆ. ಆದರೂ, ಅಬ್ರಹಾಮನಿಗೆ ಮಕ್ಕಳಿರಲಿಲ್ಲ, ಅವನು ನೂರು ವರ್ಷದವನಾಗಿದ್ದನು. ಸ್ವಾಭಾವಿಕವಾಗಿ ನೋಡುವುದಾದರೆ ಅಬ್ರಹಾಮನಿಗೂ ಸಾರಾಳಿಗೂ ಮಕ್ಕಳಾಗುವ ಸಾಧ್ಯತೆಯೇ ಇರಲಿಲ್ಲ.

ಅಬ್ರಹಾಮನು ಸ್ವಾಭಾವಿಕ ಮಂಡಲದದಲ್ಲಿ ಕಾಣುವಂಥದ್ದನ್ನಾಗಲಿ ಅಥವಾ ಅನುಭವಿಸುವಂಥದ್ದನ್ನಾಗಲಿ ಅರಿಕೆಮಾಡಲಿಲ್ಲ. ಅದಕ್ಕೆ ಬದಲಾಗಿ ಅವನು ದೇವರು ಹೇಳಿದ್ದಂಥದ್ದನ್ನು ಅರಿಕೆ ಮಾಡಿದನು. ದೇವರು "ಇಲ್ಲದ್ದನ್ನು ಇರುವದಾಗಿ ಕರೆಯುವವನಾಗಿಯೂ ಇದ್ದಾನೆಂದು" ಅಬ್ರಹಾಮನು ನಂಬಿದನು ಮತ್ತು ಅರಿಕೆಮಾಡಿದನು. ಸ್ವಾಭಾವಿಕವಾದ ಕಾರ್ಯಗಳು ವಿರುದ್ಧವಾಗಿವೆ ಆದರೆ ಅವನು ಅದಕ್ಕೆ ವಿರುದ್ಧವಾಗಿದ್ದನು, ಅವನು ದೇವರನ್ನು ನಂಬಿದನು, ಆ ನಂಬಿಕೆಯಿಂದ ದೇವರು ಹೇಳಿದ್ದಂಥದ್ದನ್ನು ಹೇಳತೊಡಗಿದನು. ಅವನು ಅಪನಂಬಿಕೆಯಿಂದ ಚಂಚಲಚಿತ್ತನು ಆಗಲಿಲ್ಲ. ದೇವರು ವಾಗ್ದಾನ ಮಾಡಿರುವಂಥದ್ದು ತನ್ನ ಜೀವನದಲ್ಲಿ ಖಂಡಿತವಾಗಿ ನೆರವೇರುತ್ತದೆ ಎಂಬ ಭರವಸೆಯು ಅವನಿಗೆ ಇತ್ತು.

ಕೆಲವರು, "ಸ್ವಸ್ಥತೆಯ ಯಾವ ಲಕ್ಷಣವು ನನ್ನಲ್ಲಿ ಗೋಚರಿಸುತ್ತಿಲ್ಲ, ಆದರೂ ನನಗೆ ವಾಸಿಯಾಗಿದೆ ಎಂದು ನಾನು ಹೇಳುವುದು ಸುಳ್ಳು ಹೇಳಿದಂತಾಗುತ್ತದಲ್ಲವೇ?" ಎಂದು ಕೇಳುತ್ತಾರೆ. “ಇಲ್ಲ” ಎಂಬುದೇ ಅದಕ್ಕಿರುವ ಉತ್ತರವಾಗಿದೆ. ನಾನು ಗುಣವಾಗಿದೆ ಎಂದು ವಾಕ್ಯವು ಹೇಳುವಾಗ ನನಗೆ ರೋಗವಿದೆ ಎಂದು ಹೇಳುವಂಥದ್ದು ಸರಿಯಲ್ಲ.

## ನಮ್ಮ ನಂಬಿಕೆಗೆ ತಕ್ಕಂತೆ ಕಾರ್ಯಮಾಡಿರಿ

ನಾವು ನಮ್ಮ ನಂಬಿಕೆಗೆ ತಕ್ಕಂತೆ ಕಾರ್ಯಮಾಡಬೇಕು.

## ಕ್ರಿಯೆಗಳು ನಂಬಿಕೆಯನ್ನು ಬಿಂಬಿಸುತ್ತವೆ

ನಂಬಿಕೆಯ ಕುರಿತಾಗಿರುವ ಈ ಪ್ರತಿಯೊಂದು ಅಂಶಗಳು ವೃದ್ಧಿಯಾಗುತ್ತಿರುತ್ತವೆ. ದೇವರು ನಮಗೆ ಮಾಡಿರುವಂಥ ವಾಗ್ದಾನವನ್ನು ನಾವು ಹುಡುಕಿ ತಿಳಿದುಕೊಂಡ ಮೇಲೆ, ನಾವು ಆ ವಾಗ್ದಾನವನ್ನು ಬೇಡಿ ಹೊಂದಿದ್ದೇವೆ ಎಂದು ನಂಬುತ್ತೇವೆ, ಈಗ ನಮ್ಮ ನಂಬಿಕೆಯನ್ನು ಅರಿಕೆ ಮಾಡುತ್ತಿದ್ದೇವೆ, ಈಗಲಾದರೋ ನಾವು ನಮ್ಮ ನಂಬಿಕೆಗೆ ತಕ್ಕಂತೆ ಕಾರ್ಯಮಾಡಬೇಕು. ನಮ್ಮ "ಕೃತ್ಯಗಳು" ಅಥವಾ "ವಿಧೇಯತೆಯಿಂದ ಕೂಡಿರುವ ಕ್ರಿಯೆಗಳು" ನಾವು ನಂಬುತ್ತೇವೆ ಎಂದು ಹೇಳುವಂಥ ವಿಷಯಗಳೊಂದಿಗೆ ಹೊಂದುವಂಥದ್ದಾಗಿರಬೇಕು.

ಯಾಕೋಬನು ಹೀಗೆ ಬರೆದಿದ್ದಾನೆ, ನನ್ನ ಸಹೋದರರೇ, ಒಬ್ಬನು ತನಗೆ ನಂಬಿಕೆಯುಂಟೆಂದು ಹೇಳಿಕೊಂಡು ತಕ್ಕ ಕ್ರಿಯೆಗಳಿಲ್ಲದವನಾಗಿದ್ದರೆ ಪ್ರಯೋಜನವೇನು? ಅಂಥ ನಂಬಿಕೆಯು ಇವನನ್ನು ರಕ್ಷಿಸುವದೋ?

...ಕ್ರಿಯೆಗಳಿಲ್ಲದ ನಂಬಿಕೆಯು ತನ್ನಲ್ಲಿ ಜೀವವಿಲ್ಲದ್ದು (ಯಾಕೋಬ 2:14).

## ವಾಕ್ಯದ ಪ್ರಕಾರ ನಡೆಯುವವರಾಗಿರಿ

ನಾವು ವಾಕ್ಯವನ್ನು ಕೇಳುವವರು ಮಾತ್ರವೇ ಆಗಿರದೇ ಅದರ ಪ್ರಕಾರ ನಡೆಯುವವರಾಗಿರಬೇಕು.

ವಾಕ್ಯದ ಪ್ರಕಾರ ನಡೆಯುವವರಾಗಿರಿ. ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ. ಯಾವನಾದರೂ ವಾಕ್ಯವನ್ನು ಕೇಳುವವನಾದರೂ ಅದರ ಪ್ರಕಾರ ನಡೆಯದಿದ್ದರೆ ಅವನು ಕನ್ನಡಿಯಲ್ಲಿ ತನ್ನ ಹುಟ್ಟು ಮುಖವನ್ನು ನೋಡಿದ ಮನುಷ್ಯನಂತಿರುವನು. ಇವನು ತನ್ನನ್ನು ನೋಡಿಕೊಂಡು ಹೋಗಿ ತಾನು ಹೀಗಿದ್ದೆನೆಂಬದನ್ನು ಆ ಕ್ಷಣವೇ ಮರೆತುಬಿಡುವನು.

ಆದರೆ ಬಿಡುಗಡೆಯನ್ನುಂಟು ಮಾಡುವ ಸರ್ವೋತ್ತಮ ಧರ್ಮಪ್ರಮಾಣವನ್ನು ಲಕ್ಷ್ಯಕೊಟ್ಟು ನೋಡಿ ಇನ್ನು ನೋಡುತ್ತಲೆ ಇರುವವನು ವಾಕ್ಯವನ್ನು ಕೇಳಿ ಮರೆತುಹೋಗುವವನಾಗಿರದೆ ಅದರ ಪ್ರಕಾರ ನಡೆಯುವವನಾಗಿದ್ದು ತನ್ನ ನಡತೆಯಿಂದ ಧನ್ಯನಾಗುವನು. (ಯಾಕೋಬ 1:22-25).

**ಅಬ್ರಹಾಮನು – ವಾಕ್ಯದ ಪ್ರಕಾರ ನಡೆಯುವವನಾಗಿದ್ದನು**

ಕೊನೆಗೂ, ಅಬ್ರಹಾಮನು ತನ್ನ ವಾಗ್ದಾನವನ್ನು ಪಡೆದುಕೊಂಡನು. ಬಹಳ ವರ್ಷಗಳ ನಂತರ ಇಸಾಕನು ಹುಟ್ಟಿದನು. ಅಬ್ರಹಾಮನು ನಂಬಿದ್ದಂಥ ಎಲ್ಲವೂ ಅವನ ಮಗನಾದ ಇಸಾಕನಲ್ಲಿ ಆಡಕವಾಗಿತ್ತು, ಅನಂತರ ದೇವರು ಇಸಾಕನನ್ನು ಬಲಿಯಾಗಿ ಅರ್ಪಿಸು ಎಂದು ಹೇಳುವ ಮೂಲಕ ಅಬ್ರಹಾಮನನ್ನು ಪರೀಕ್ಷಿಸಿದಾಗ ಇನ್ನೂ ಹೆಚ್ಚು ನಂಬಿಕೆಯುಳ್ಳವರಾಗಿರಬೇಕೆಂದು ಕರೆಗೊಟ್ಟನು. ಅಬ್ರಹಾಮನಿಗೆ ಅದು ತುಂಬಾ ಕಷ್ಟಕರವಾಗಿತ್ತು, ಆದರೂ ಅವನು ದೇವರಿಗೆ ವಿಧೇಯನಾಗಿ ಇಸಾಕನನ್ನು ಬಲಿಯಾಗಿ ಅರ್ಪಿಸುವುದಕ್ಕಾಗಿ ಅವನನ್ನು ಮೊರೀಯ ಬೆಟ್ಟಕ್ಕೆ ಕರೆದುಕೊಡು ಹೋದನು. ಮೊರೀಯ ಬೆಟ್ಟದ ಬಳಿಗೆ ಬಂದಾಗ, ಅವನು ತನ್ನ ಜೊತೆಯಲ್ಲಿದ್ದ ಇಬ್ಬರು ಸೇವಕರಿಗೆ ಕೆಲವೊಂದು ಸೂಚನೆಗಳನ್ನು ಕೊಟ್ಟನು.

ಅವನು ತನ್ನ ಸೇವಕರಿಗೆ, “ನೀವು ಇಲ್ಲೇ ಕತ್ತೆಯ ಬಳಿಯಲ್ಲಿರಿ; ನಾನೂ ನನ್ನ ಮಗನೂ ಅಲ್ಲಿಗೆ ಹೋಗಿ ದೇವಾರಾಧನೆ ಮಾಡಿಕೊಂಡು ನಿಮ್ಮ ಬಳಿಗೆ ತಿರಿಗಿ ಬರುತ್ತೇವೆ" ಎಂದು ಹೇಳಿದನು. (ಆದಿಕಾಂಡ 22:5).

ಅಬ್ರಹಾಮನು ಮಾಡಿದ ಕ್ರಿಯೆಗಳು ಅವನು ದೇವರಿಗೆ ವಿಧೇಯನಾಗುವ ಬಯಸಿದ್ದನ್ನು ಎಂಬುದನ್ನು ತಿಳಿಯಪಡಿಸುತ್ತದೆ. ಆದರೆ, ದೇವರು ತನ್ನ ವಾಗ್ದಾನವನ್ನು ನೆರವೇರಿಸಲು ಶಕ್ತನು ಎಂದು ಅವನು ದೇವರ ಮೇಲೆ ಸಂಪೂರ್ಣವಾಗಿ ನಂಬಿಕೆಯಿಟ್ಟಿದ್ದನ್ನು ಎಂಬುದು ಅವನ ಮಾತುಗಳಿಂದ ತೋರಿಬರುತ್ತದೆ, ಅವನು "ನಾವು ನಿಮ್ಮ ಬಳಿಗೆ ತಿರಿಗಿ ಬರುತ್ತೇವೆ" ಎಂದು ಹೇಳಿದಾಗ ದೇವರು ಇಸಾಕನನ್ನು ಸತ್ತವರೊಳಗಿಂದ ಎಬ್ಬಿಸುವನು ಎಂದು ಸಹ ನಂಬಿದನು.

ಅಬ್ರಹಾಮನು ತನ್ನ "ಕೃತ್ಯಗಳ" ಅಥವಾ "ಕ್ರಿಯೆಗಳ" ಮೂಲಕ ದೇವರು ತನ್ನ ವಾಗ್ದಾನವನ್ನು ನೆರವೇರಿಸಲು ಶಕ್ತನಾಗಿದ್ದಾನೆ ಎಂದು ದೇವರ ಮೇಲೆ ಸಂಪೂರ್ಣವಾಗಿ ನಂಬಿಕೆಯನ್ನು ಇಟ್ಟಿದ್ದನ್ನು

ಎಂಬುದನ್ನು ತಿಳಿದುಬರುತ್ತದೆ. ಅಬ್ರಹಾಮನು ಸಂಪೂರ್ಣವಾಗಿ ವಿಧೇಯನಾಗಿ ಇಸಾಕನನ್ನು ವಧಿಸಲು ತನ್ನ ಕತ್ತಿಯನ್ನು ತೆಗೆದುಕೊಂಡಾಗ, ದೇವರು ಅವನನ್ನು ತಡೆದು ಅರ್ಪಿಸುವುದಕ್ಕಾಗಿ ಬೇರೆ ಬಲಿವನ್ನು ಒದಗಿಸಿ ಕೊಟ್ಟನು.

ಯೆಹೋವನ ದೂತನು ಆಕಾಶದೊಳಗಿಂದ – "ಅಬ್ರಹಾಮನೇ ಅಬ್ರಹಾಮನೇ" ಎಂದು ಅವನನ್ನು ಕರೆದನು.

ಅದಕ್ಕೆ ಅಬ್ರಹಾಮನು "ಇಗೋ ಇದ್ದೇನೆ" ಅಂದನು.

ಆ ದೂತನು ಅವನಿಗೆ – "ನಿನ್ನ ಹುಡುಗನ ಮೇಲೆ ಕೈಹಾಕಬೇಡ, ಅವನಿಗೆ ಏನೂ ಮಾಡಬೇಡ, ನೀನು ನಿನ್ನ ಒಬ್ಬನೇ ಮಗನನ್ನಾದರೂ ನನಗೆ ಸಮರ್ಪಿಸುವದಕ್ಕೆ ಹಿಂದೆಗೆಯಲಿಲ್ಲವಾದ್ದರಿಂದ ನೀನು ದೇವರಲ್ಲಿ ಭಯಭಕ್ತಿಯುಳ್ಳವನೆಂಬುದು ಈಗ ತೋರಿಬಂತು" ಎಂದು ಹೇಳಿದನು.

ಅಬ್ರಹಾಮನು ಕಣ್ಣೆತ್ತಿ ನೋಡುವಾಗ ತನ್ನ ಹಿಂದುಗಡೆ ಒಂದು ಟಗರು ಪೊದೆಯಲ್ಲಿ ಕೊಂಬುಗಳಿಂದ ಸಿಕ್ಕಿಕೊಂಡಿತ್ತು.

ಅವನು ಹೋಗಿ ಅದನ್ನು ಹಿಡಿದು ತಂದು ತನ್ನ ಮಗನಿಗೆ ಬದಲಾಗಿ ಹೋಮಮಾಡಿದನು. ಆ ಸ್ಥಳಕ್ಕೆ ಯೆಹೋವ ಯೀರೆ ಎಂದು ಹೆಸರಿಟ್ಟನು. ಯೆಹೋವನ ಬೆಟ್ಟದಲ್ಲಿ ಒದಗುವದು ಎಂಬುದಾಗಿ ಇಂದಿನ ವರೆಗೂ ಹೇಳುವದುಂಟಲ್ಲಾ. (ಆದಿಕಾಂಡ 22:11-14).

ಅಬ್ರಹಾಮನ ವಿಧೇಯತೆಯ ಕೃತ್ಯಗಳು ಅಥವಾ ಕ್ರಿಯೆಗಳು ಅವನು ಏನನ್ನೋ ನಂಬಿದ್ದೇನೆ ಎಂದು ಹೇಳುತ್ತಾನೋ ಅದಕ್ಕೆ ಹೊಂದಿಕೆಯಾಗಿದ್ದವು. ಯಾಕೋಬನು ಹೇಳಿದ್ದನ್ನು ನೆನಪಿಸಿಕೊಳ್ಳಿರಿ,

ಕ್ರಿಯೆಗಳಿಲ್ಲದ ನಂಬಿಕೆಯು ಜೀವವಿಲ್ಲದ್ದು.

ನಮಗಿರುವುದು ನಂಬಿಕೆಯಾಗಿದ್ದರೆ, ಅದಕ್ಕೆ ಸಂಪೂರ್ಣವಾದ ವಿಧೇಯತೆಯಿಂದ ಕೂಡಿದ ಕ್ರಿಯೆಗಳು ಅಲ್ಲಿ ಇದ್ದೇ ಇರುತ್ತವೆ.

## ನಂಬಿಕೆಯ ವಿಷಯದಲ್ಲಿ ತಾಳ್ಮೆಯಿರಬೇಕು

ನಂಬಿಕೆಯ ವಿಷಯದಲ್ಲಿರುವ ಸಹನೆಗೆ ಅಬ್ರಹಾಮನು ತುಂಬಾ ಒಳ್ಳೆಯ ಮಾದರಿಯಾಗಿದ್ದಾನೆ. ವರುಷ ವರುಷವು ಅವನು ದೇವರ ವಾಗ್ದಾನವನ್ನು ನಂಬುತ್ತಿದ್ದನು. ಅವನಿಗೆ ಒಬ್ಬ ಮಗನು ಕೂಡ ಇಲ್ಲದಿದ್ದಾಗಲೂ, ಅವನು ತನ್ನನ್ನು ತಾನು ಬಹು ಜನಾಂಗಗಳ ತಂದೆ ಎಂದು ಕರೆದುಕೊಳ್ಳುವಾಗ ಬೇರೆಯವರು ಅವನನ್ನು ಗೇಲಿಮಾಡಿರುವುದನ್ನು ಸಹಿಸಿಕೊಂಡಿದ್ದಿರಬೇಕು.

**ನಂಬಿಕೆಯನ್ನು ದೃಢವಾಗಿ ಹಿಡಿದುಕೊಳ್ಳುವುದು**

ದೇವರು ಮಾಡಿರುವಂಥ ವಾಗ್ದಾನವನ್ನು, ನಾವು ಬೇಡಿಕೊಂಡಿರುವಂಥದ್ದನ್ನು, ನಾವು ನಂಬಿರುವಂಥದ್ದನ್ನು, ಅರಿಕೆಮಾಡಿಕೊಂಡಿರುವಂಥದ್ದನ್ನು, ಕಾರ್ಯ ರೂಪಕ್ಕೆ ತಂದಿರುವಂಥದ್ದನ್ನು ನಾವು "ದೃಢವಾಗಿ ಹಿಡಿದುಕೊಳ್ಳಬೇಕು." ಎಲ್ಲವು ವಿಷಯಗಳು ತಕ್ಷಣವೇ ಉಂಟಾಗುವುದಿಲ್ಲ. ನಂಬಿಕೆಯ ವಿಷಯದಲ್ಲಿ "ಸಹನೆ" ಇರಬೇಕು.

ನಮ್ಮ ನಿರೀಕ್ಷೆಯನ್ನು ಕುರಿತು ನಾವು ಮಾಡಿದ ಪ್ರತಿಜ್ಞೆಯನ್ನು ನಿಶ್ಚಂಚಲವಾಗಿ ಪರಿಗ್ರಹಿಸೋಣ. ವಾಗ್ದಾನ ಮಾಡಿದಾತನು ನಂಬಿಗಸ್ತನು (ಇಬ್ರಿಯ 10:23).

ನಾವು ದೇವರಲ್ಲಿಯೂ ಆತನ ವಾಕ್ಯದಲ್ಲಿಯೂ ಇಟ್ಟಿರುವ ನಮ್ಮ ಸಂಪೂರ್ಣವಾದ ನಂಬಿಕೆಯ ಆಧಾರದ ಮೇಲೆ ತಾಳ್ಮೆಯು ಸಹಿಸಿಕೊಳ್ಳುವ ಸಾಮರ್ಥ್ಯವುಳ್ಳದ್ದಾಗಿರುತ್ತದೆ. ಡ್ವೈಟ್ ಎಲ್. ಮೂಡಿ ರವರು ಹೀಗೆ ಹೇಳಿದಾರೆ, "ನಿಮ್ಮ ನಂಬಿಕೆಯು ಕೊನೆಯಲ್ಲಿ ಸೋತು ಹೋದರೆ, ಆರಂಭದಲ್ಲಿಯೇ ಅದಕ್ಕೆ ಕುಂದುಕೊರತೆ ಇತ್ತು ಎಂದರ್ಥ."

ಯಾಕೋಬನು ಹೀಗೆ ಬರೆದಿದ್ದಾನೆ,

ನನ್ನ ಸಹೋದರರೇ ನಿಮ್ಮ ನಂಬಿಕೆಗೆ ಆಗುವ ಪರಿಶೋಧನೆಯು ತಾಳ್ಮೆಯನ್ನುಂಟು ಮಾಡುತ್ತದೆಂದು ತಿಳಿದು ನೀವು ನಾನಾವಿಧವಾದ ಕಷ್ಟಗಳಲ್ಲಿ ಬಿದ್ದಿರುವಾಗ ಅದನ್ನು ಕೇವಲ ಆನಂದಕರವಾದದ್ದೆಂದು ಎಣಿಸಿರಿ. ಆ ತಾಳ್ಮೆಯು ಸಿದ್ಧಿಗೆ ಬರಲಿ. ಆಗ ನೀವು ಸುಕ್ಷಿತರೂ ಸರ್ವಸುಗುಣವುಳ್ಳವರೂ ಏನೂ ಕಡಿಮೆಯಿಲ್ಲದವರೂ ಆಗಿರುವಿರಿ (ಯಾಕೋಬ 1:2-4).

**ಭರವಸೆಯುಳ್ಳವರಾಗಿರಿ**

ತಮ್ಮ ದೇಹಗಳಲ್ಲಿ ಸ್ವಸ್ಥತೆಯನ್ನು ಹೊಂದಿಕೊಳ್ಳುವುದಕ್ಕಾಗಿ ದೇವರ ವಾಕ್ಯವನ್ನು ನಂಬಿದಂಥವರು ಆ ಸ್ವಸ್ಥತೆಯ ಲಕ್ಷಣವು ಬೇಗನೇ ಗೋಚರವಾಗದಿದ್ದರೆ ಅಂಥವರು ಅನೇಕ ಬಾರಿ ನಿರಾಶೆಗೊಳ್ಳುತ್ತಾರೆ. ಅಂಥವರಲ್ಲಿ ತುಂಬಾ ಜನರು ಏನೂ ಆಗಲಿಲ್ಲವಲ್ಲಾ ಎಂದು ಭಾವಿಸಿ "ತಮ್ಮ ಭರವಸೆಯನ್ನು ಬಿಟ್ಟುಬಿಡುತ್ತಾರೆ".

ನಮ್ಮ ಜೀವನದಲ್ಲಿ ದೇವರ ಗುಣಪಡಿಸುವ ಶಕ್ತಿಯ ಗೋಚರತೆಯನ್ನು ಹೊಂದಿಕೊಳ್ಳುವ ವಿಷಯದಲ್ಲಿ ನೋಡುವುದಾದರೆ, ಆ

ಗೋಚರತೆಯು ಕೆಲವೊಮ್ಮೆ ತಕ್ಷಣವಾಗಿ ನಡೆಯುವ "ಅದ್ಭುತವಾಗಿ" ಬರುವ ಸಂದರ್ಭಗಳಿವೆ. ಕೆಲವೊಮ್ಮೆ ಆ ಸ್ವಸ್ಥತೆಯ ಗೋಚರತೆಯು ಕ್ರಮೇಣವಾಗಿ ಬರುವ "ಸ್ವಸ್ಥತೆ" ಯಂತೆ ತೋರಿಬರುವ ಸಮಯಗಳಿವೆ.

ನಮ್ಮ ದೇಹಗಳಲ್ಲಿ ಸ್ವಸ್ಥತೆಯಾಗಬೇಕೆಂಬ ವಿಷಯದಲ್ಲಿಯಾಗಲಿ, ನಮ್ಮ ಸಂಬಂಧಗಳ ವಿಷಯದಲ್ಲಾಗಲಿ, ನಮ್ಮ ಹಣಕಾಸಿನ ವಿಷಯದಲ್ಲಿಯಾಗಲಿ ಅಥವಾ ನಾವು ದೇವರಿಂದ ಯಾವುದನ್ನು ಹೊಂದಿಕೊಳ್ಳುವುದಕ್ಕಾಗಿ ನಾವು ದೇವರನ್ನು ನಂಬುತ್ತಿದ್ದೇವೋ ಆ ವಿಷಯದಲ್ಲಿಯಾಗಲಿ ಅದೇ ರೀತಿಯಾಗಿ ದೇವರ ಕಾರ್ಯ ತೋರಿಬರುತ್ತದೆ. ನಾವು ತಕ್ಷಣವಾಗಿ ದೇವರ ಕಾರ್ಯವನ್ನು ಕಾಣದಿದ್ದರೂ ನಂಬಿಕೆಯಲ್ಲಿ ನಾವು ತಾಳ್ಮೆಯಿಂದ ಕಾಯಬೇಕು. ನಾವು ನಮ್ಮ ನಂಬಿಕೆಯನ್ನು "ದೃಢವಾಗಿ" ಹಿಡಿದುಕೊಳ್ಳಬೇಕು, ದೇವರ ಕಾರ್ಯವು ತಕ್ಷಣವೇ ತೋರಿಬರದಿದ್ದರೂ "ನಮ್ಮ ಭರವಸೆಯನ್ನು ಬಿಟ್ಟುಬಿಡಬಾರದು".

ಹಾಗಾದರೆ ನಿಮ್ಮ ಧೈರ್ಯವನ್ನು ಬಿಟ್ಟುಬಿಡಬೇಡಿರಿ. ಅದಕ್ಕೆ ಮಹಾ ಪ್ರತಿಫಲವುಂಟು ದೇವರ ಚಿತ್ತವನ್ನು ನೆರವೇರಿಸಿ ವಾಗ್ದಾನದ ಫಲವನ್ನು ಹೊಂದಬೇಕಾದರೆ ನಿಮಗೆ ತಾಳ್ಮೆ ಬೇಕು (ಇಬ್ರಿಯ 10:35-36).

## ಆಸಕ್ತಿಯುಳ್ಳವರಾಗಿರಬೇಕು

ಇಬ್ರಿಯ ಪತ್ರಿಕೆಯ ಲೇಖಕನು ಹೀಗೆ ಹೇಳಿದ್ದಾನೆ,

ನೀವು ಉಪಚಾರ ಮಾಡುವದರಲ್ಲಿ ಯಾವ ಆಸಕ್ತಿಯನ್ನು ತೋರಿಸಿದ್ದೀರೋ ನಿಮ್ಮ ನಿರೀಕ್ಷೆ ದೃಢಮಾಡಿಕೊಂಡು ಕಡೇತನಕ ಹಿಡಿಯುವದರಲ್ಲಿಯೂ ನಿಮ್ಮಲ್ಲಿ ಪ್ರತಿಯೊಬ್ಬರೂ ಅದೇ ಆಸಕ್ತಿಯನ್ನು ತೋರಿಸಬೇಕೆಂದು ಅಪೇಕ್ಷಿಸುತ್ತೇನೆ. ನೀವು ಮಂದಮತಿಗಳಾಗಿರದೇ ಯಾರು ವಾಗ್ದಾನಗಳನ್ನು ನಂಬಿ ಅವುಗಳ ಫಲಕ್ಕೋಸ್ಕರ ಬಹು ದಿನಗಳವರೆಗೂ ಕಾದಿದ್ದು ಆ ಫಲವನ್ನು ಹೊಂದುತ್ತಾರೋ ಅವರನ್ನು ಅನುಸರಿಸುವವರಾಗಬೇಕೆಂದು ಕೋರುತ್ತೇನೆ (ಇಬ್ರಿಯ 6:11,12).

ನಾವು ಏನನ್ನು ಪಡೆದುಕೊಳ್ಳುವುದಕ್ಕಾಗಿ ದೇವರನ್ನು ನಂಬುತ್ತಿದ್ದೇವೋ ಆ ವಿಷಯದಲ್ಲಿ ದೇವರ ಕಾರ್ಯ ಬೇಗನೇ ತೋರಿಬರದಿದ್ದರೂ, ನಾವು ನಂಬಿಕೆಯನ್ನು ದೃಢವಾಗಿ ಹಿಡಿದುಕೊಳ್ಳಬೇಕು, ನಂಬಿಕೆಯುಳ್ಳವರಾಗಿ ತಾಳ್ಮೆಯಿಂದ ಕಾತುರದಿಂದ ಕಾಯಬೇಕು.

ಅಪೊಸ್ತಲನಾದ ಪೌಲನು ಹೀಗೆ ಬರೆದಿದ್ದಾನೆ,

ಆದರೆ ಕಾಣದಿರುವದನ್ನು ನಾವು ಎದುರುನೋಡುವವರಾಗಿದ್ದರೆ ತಾಳ್ಮೆಯಿಂದ ಕಾದುಕೊಂಡಿರುವೆವು (ರೋಮಾಪುರ 8:25).

ದಾವೀದನು ಹೀಗೆ ಹೇಳಿದ್ದಾನೆ,

ಯೆಹೋವನನ್ನು ನಿರೀಕ್ಷಿಸಿಕೊಂಡಿರು; ದೃಢವಾಗಿರು; ನಿನ್ನ ಹೃದಯವು ಧೈರ್ಯದಿಂದಿರಲಿ; ಯೆಹೋವನನ್ನು ನಿರೀಕ್ಷಿಸಿಕೊಂಡೇ ಇರು (ಕೀರ್ತನೆ 27:14).

ಯೆಶಾಯನು ನಾವು ಹದ್ದುಗಳಂತೆ ಇರಬೇಕೆಂದು ಹೇಳಿದ್ದಾನೆ.

ಯೆಹೋವನನ್ನು ನಿರೀಕ್ಷಿಸುವವರೋ ಹೊಸ ಬಲವನ್ನು ಹೊಂದುವರು; ಹದ್ದುಗಳಂತೆ ರೆಕ್ಕೆಗಳನ್ನು ಚಾಚಿಕೊಂಡು ಏರುವರು; ಓಡಿ ದಣಿಯರು, ನಡೆದು ಬಳಲರು (ಯೆಶಾಯ 40:31).

**ಸಮಾಪ್ತಿಯಲ್ಲಿ**

ನಂಬಿಕೆಯ ಕುರಿತಾಗಿರುವ ಈ ಆರು ಅಂಶಗಳು ನಮ್ಮ ದೈನಂದಿನ ಜೀವನದ ಭಾಗವಾಗುವಾಗ, ನಾವು ನಮ್ಮ ಜೀವನದಲ್ಲಿ ನಂಬಿಕೆಯಲ್ಲಿ ಹೆಚ್ಚೆಚ್ಚಾಗಿ ಮುಂದೆ ಸಾಗುತ್ತೇವೆ, ದೇವರ ವಾಗ್ದಾನಗಳು ನಮ್ಮ ಜೀವನದಲ್ಲಿ ನೆರವೇರುತ್ತವೆ.

ಹೇಗಂದರೆ ದೇವರಿಂದ ದೊರಕುವ ನೀತಿಯು ಅದರಲ್ಲಿ ತೋರಿಬರುತ್ತದೆ. ನೀತಿವಂತನು ನಂಬಿಕೆಯಿಂದಲೇ ಬದುಕುವನೆಂಬ ಶಾಸ್ತ್ರೋಕ್ತಿಯ ಪ್ರಕಾರ ಆ ನೀತಿಯು ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು ವೃದ್ಧಿಪಡಿಸುವಂಥದಾಗಿದೆ (ರೋಮಾಪುರ 1:17).

**ಪರಾಮರ್ಶೆಗಾಗಿರುವ ಪ್ರಶ್ನೆಗಳು**

---

1. ನಂಬಿಕೆಯ ಆರು ಮೂಲಭೂತ ಅಂಶಗಳ ಕುರಿತು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬರೆಯಿರಿ.

2. "ನಂಬಿಕೆಯ ವಿಷಯದಲ್ಲಿನ ತಾಳ್ಮೆ" ಎಂದರೇನು?

## ಪಾಠ ಐದು

# ಸತತವಾಗಿ ಬೆಳೆಯುವ ನಂಬಿಕೆ

### ವಿಶ್ವಾಸ ಪರಿಮಾಣ

ಪೌಲನು ಹೀಗೆ ಬರೆದಿದ್ದಾನೆ,

ದೇವರು ಒಬ್ಬೊಬ್ಬನಿಗೆ ಎಂಥೆಂಥ ವಿಶ್ವಾಸ ಬಲವನ್ನು ಕೊಟ್ಟನೋ (ರೋಮಾಪುರ 12:3b).

ನ್ಯೂ ಇಂಟರ್‌ನ್ಯಾಷನಲ್ ವರ್ಷನ್‌ನಲ್ಲಿ ಹೀಗೆ ನಾವು ಓದುತ್ತೇವೆ,

ದೇವರು ನನಗೆ ಕೊಟ್ಟಿರುವ ಕೃಪೆಯ ಪ್ರಕಾರ ನಿಮ್ಮಲ್ಲಿ ಒಬ್ಬೊಬ್ಬನಿಗೆ ಹೇಳುವದೇನಂದರೆ: ನಿಮ್ಮ ಕುರಿತು ನೀವು ಅತಿಯಾಗಿ ಭಾವಿಸಿಕೊಳ್ಳಬೇಡಿರಿ, ಅದಕ್ಕೆ ಬದಲಾಗಿ ದೇವರು ನಿಮಗೆ ಕೊಟ್ಟಿರುವ ವಿಶ್ವಾಸ ಪರಿಮಾಣಕ್ಕೆ ತಕ್ಕ ಹಾಗೆ ನ್ಯಾಯವಾದ ಅಭಿಪ್ರಾಯದಿಂದ ನಿಮ್ಮ ಕುರಿತು ಭಾವಿಸಿಕೊಳ್ಳಿರಿ.

ಯೇಸುವನ್ನು ತಮ್ಮ ಕರ್ತನನ್ನಾಗಿಯೂ ರಕ್ಷಕನನ್ನಾಗಿಯೂ ಅಂಗೀಕರಿಸಿಕೊಳ್ಳಲು ಬೇಕಾದ ನಂಬಿಕೆಯನ್ನು ಆತನು ಕೊಟ್ಟಿದ್ದಾನೆಂದು ನಮಗೆ ತಿಳಿದಿದೆ, ಏಕೆಂದರೆ ಸತ್ಯವೇದ ಹೀಗೆ ಹೇಳುತ್ತದೆ;

ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, ಅದು ದೇವರ ವರವೇ (ಎಫೆಸ 2:8).

### ಸಾಸಿವೆಕಾಳಿನಷ್ಟು ನಂಬಿಕೆ

ಚಿಕ್ಕ ಸಾಸಿವೆಕಾಳಿನಷ್ಟು ನಂಬಿಕೆ ನಮಗೆ ಇದ್ದರೆ ಯಾವುದು ನಮಗೆ ಅಸಾಧ್ಯವಲ್ಲವಾಗಿರುವುದಿಲ್ಲ ಎಂದು ಯೇಸು ಹೇಳಿದ್ದನು. ಸಾಸಿವೆ ಕಾಳು ವಿಶೇಷವಾದುದ್ದಾಗಿದೆ ಏಕೆಂದರೆ ಅದು ಚಿಕ್ಕದಾಗಿ ಬೆಳೆಯಲು ಆರಂಭಿಸಿ ದೊಡ್ಡ ಮರವಾಗಿ ಮಾರ್ಪಡುತ್ತದೆ.

ಯೇಸು ಹೀಗೆಂದು ನಮಗೆ ಹೇಳಿದ್ದನು,

"ಪರಲೋಕರಾಜ್ಯವು ಸಾಸಿವೆ ಕಾಳಿಗೆ ಹೋಲಿಕೆಯಾಗಿದೆ. ಒಬ್ಬ ಮನುಷ್ಯನು ಅದನ್ನು ತೆಗೆದುಕೊಂಡು ಹೋಗಿ ತನ್ನ ಹೊಲದಲ್ಲಿ ಬಿತ್ತಿದನು. ಅದು ಎಲ್ಲ ಬೀಜಗಳಿಗಿಂತಲೂ ಸಣ್ಣದಾಗಿದೆ. ಬೆಳೆದ ಮೇಲೆ ಕಾಯಿಪಲ್ಯದ ಗಿಡಗಳಿಗಿಂತ ದೊಡ್ಡದಾಗಿ ಮರವಾಗುತ್ತದೆ.

ಆಕಾಶದಲ್ಲಿ ಹಾರಾಡುವ ಪಕ್ಷಿಗಳು ಬಂದು ಅದರ ಕೊಂಬೆಗಳಲ್ಲಿ ವಾಸ ಮಾಡುತ್ತವೆ" (ಮತ್ತಾಯ 13:31-32).

ಇಂದು ನಮ್ಮ ನಂಬಿಕೆಯು ಎಷ್ಟು ಸಣ್ಣದಾಗಿದ್ದರೂ, ಅದು ಯಾವಾಗಲೂ ಬೆಳೆಯುತ್ತಾ ಜೀವನದ ಎಲ್ಲಾ ಘಟ್ಟಗಳಲ್ಲಿಯೂ ಮುಂದೆ ಸಾಗಿ ಇತರರಿಗೆ ಬಲವನ್ನು ಕೊಡುವ ಮರದಂತೆ ಆಗುತ್ತದೆ.

ನಾವು ಈ ಪುಟಗಳನ್ನು ಓದಿ ಕಲಿಯುವಾಗ, ನಮ್ಮ ಪ್ರಾರ್ಥನೆಯು ಇದಾಗಿರಲಿ, "ಕರ್ತನೇ, ನಿನ್ನ ಕುರಿತಾದ, ನಿನ್ನ ವಾಕ್ಯದ ಕುರಿತಾದ ತಿಳಿವಳಿಕೆಯು ನನ್ನಲ್ಲಿ ಹೆಚ್ಚೆಚ್ಚಾಗಲಿ. ನನ್ನ ಆತ್ಮವು ನಂಬಿಕೆಯನ್ನು ಹೊಂದಿಕೊಳ್ಳಲಿ, ನನ್ನ ನಂಬಿಕೆಯು ಬಲಿಷ್ಠವಾಗಿ ಬೆಳೆಯಲಿ."

ನಂಬಿಕೆಯು ದೇವರಿಂದ ಬರುತ್ತದೆ. ಆತನು ಒಬ್ಬೊಬ್ಬರಿಗೂ ವಿಶ್ವಾಸದ ಪರಿಮಾಣವನ್ನು ಕೊಟ್ಟಿದ್ದಾನೆ. ಆದರೆ ಸಾಸಿವೆ ಕಾಳಿನಷ್ಟಿರುವ ನಮ್ಮ "ವಿಶ್ವಾಸದ ಪರಿಮಾಣವು" ಸತತವಾಗಿ ಬೆಳೆಯುವ ನಂಬಿಕೆಯಾಗಿ ಮಾರ್ಪಡಬೇಕಾದ್ದದ್ದು ಪ್ರಾಮುಖ್ಯ.

ನಾವು ಜೀವನದ ಒಂದೊಂದು ಕಷ್ಟಗಳ ಮೂಲಕ ಹಾದು ಹೋಗುವಾಗ, ಆ ಒಂದೊಂದು ಕಷ್ಟವನ್ನು ಪ್ರಾರ್ಥನೆಯ ಮೂಲಕ ಕರ್ತನ ಬಳಿಗೆ ತಂದು, ಆತನ ವಾಕ್ಯವನ್ನು ಹುಡುಕುತ್ತಾ, ಕಷ್ಟಗಳನ್ನು ಕಂಡು ದುಃಖಿಸುತ್ತಾ ಪ್ರತಿಕ್ರಿಯಿಸುವ ಬದಲಾಗಿ ನಂಬಿಕೆಯಿಂದ ಪ್ರತಿಕ್ರಿಯಿಸುವಂತೆ, ಆತನು ನಮಗೆ ಅಧಿಕವಾದ ನಂಬಿಕೆಯನ್ನು ಕೊಡುತ್ತಾನೆ. ನಮ್ಮ "ಸಾಸಿವೆ ಕಾಳಿನಷ್ಟು" ನಂಬಿಕೆಯು ಬೇರೆಯವರನ್ನು ಸಂತೈಸುವಷ್ಟರ ಮಟ್ಟಿಗೆ ದೊಡ್ಡ ಮರವಾಗಿ ಬೆಳೆಯುತ್ತದೆ.

ಇಬ್ರಿಯ ಪತ್ರಿಕೆಯಲ್ಲಿ, ನಾವು ಹೀಗೆ ಓದುತ್ತೇವೆ,

ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿ ಇಟ್ಟು… (ಇಬ್ರಿಯ 12:2a).

ನಾವು ಯೇಸುವಿನಿಂದ ಹೊಂದಿಕೊಳ್ಳುವಂಥ ನಂಬಿಕೆಯಲ್ಲದೆ ನಿಜವಾದ ಬೇರೆ ನಂಬಿಕೆಯಿಲ್ಲ. ಯೇಸು ನಮ್ಮ ನಂಬಿಕೆಯನ್ನು ಹುಟ್ಟಿಸುವವನು ಮಾತ್ರವಲ್ಲ, ಆದರೆ ಆತನು ನಮ್ಮ ನಂಬಿಕೆಯನ್ನು ಪೂರೈಸುವವನು ಆಗಿದ್ದಾನೆ.

ನಮ್ಮ ನಂಬಿಕೆಯನ್ನು ಪೂರೈಸುವಂಥ ಪ್ರಕ್ರಿಯೆಯಲ್ಲಿ, ನಾವು ಜೀವನದಲ್ಲಿ ಕಷ್ಟಗಳನ್ನು ಹಾದು ಹೋಗುವಾಗ ಯೇಸು ಹಂತ ಹಂತವಾಗಿ ನಮ್ಮ ಜೀವನದಲ್ಲಿ ಕಾರ್ಯ ಮಾಡುವನು. ಜೀವನದಲ್ಲಿ

ಬರುವಂಥ ಕಷ್ಟಗಳಿಗೆ, ನಾವು ಸಾಮಾನ್ಯವಾಗಿ ಭಯ, ಹತಾಶೆ, ಕೋಪದಿಂದ ಪ್ರತಿಕ್ರಿಯಿಸಬಹುದು, ಅಥವಾ ನಾವು ದೇವರಲ್ಲಿಯೂ ಆತನ ವಾಕ್ಯದಲ್ಲಿರುವ ವಾಗ್ದಾನದಲ್ಲಿಯೂ ಇಟ್ಟಿರುವ ನಂಬಿಕೆಯಿಂದ ಕಾರ್ಯಮಾಡಬಹುದು. ಒಂದೊಂದು ಕಷ್ಟಗಳನ್ನು ಹೊಸದಾದ ನಂಬಿಕೆಯಿಂದ ಜಯಿಸುವಾಗ, ನಮ್ಮ ನಂಬಿಕೆಯ ಮಾಂಸಖಂಡಗಳು ಬಲಿಷ್ಠವಾಗುತ್ತವೆ. ನಮ್ಮ ನಂಬಿಕೆಯು ಇನ್ನೂ ಹೆಚ್ಚೆಚ್ಚು ವೃದ್ಧಿಯಾಗುತ್ತಾ ಸತತವಾಗಿ ಬೆಳೆಯುವ ನಂಬಿಕೆಯತ್ತ ಸಾಗುತ್ತೇವೆ, ಅಂತಹ ನಂಬಿಕೆಯು ದೇವರನ್ನು ಮೆಚ್ಚಿಸುತ್ತದೆ.

**ನಂಬಿಕೆಯನ್ನು ಹೆಚ್ಚಿಸೆಂದು ಯೇಸುವನ್ನು ಬೇಡಿಕೊಳ್ಳಿರಿ**

ಯೇಸು ಕರ್ತನು ಮಾರ್ಕನ ಸುವಾರ್ತೆಯಲ್ಲಿ ಶಿಷ್ಯರಿಗೆ, "ಯಾಕೆ ನಿಮಗೆ ನಂಬಿಕೆ ಇಲ್ಲ?" ಎಂದು ಕೇಳಿದನು. ಆತನು ಲೂಕನ ಸುವಾರ್ತೆಯಲ್ಲಿ, "ನಿಮ್ಮ ನಂಬಿಕೆ ಎಲ್ಲಿ?" ಎಂದು ಕೇಳಿದನು. ಆತನು ಇಂದು ಕೂಡ ಅದೇ ರೀತಿಯಾಗಿ, ತನ್ನ ವಿಶ್ವಾಸಿಗಳಿಂದ ಕೂಡಿರುವ ಸಭೆಯೆಂಬ ದೇಹಕ್ಕೂ, ನಿಮ್ಮ ಬಲಿಷ್ಠವಾದ, ಬೆಟ್ಟಗಳನ್ನು ನೀಗಿಸುವ ನಂಬಿಕೆಯು ಎಲ್ಲಿ? ಎಂದು ಕೇಳುತ್ತಿರುವನು.

ಮಾರ್ಕನ ಸುವಾರ್ತೆಯ 9ನೇ ಅಧ್ಯಾಯದಲ್ಲಿ ಯೇಸು ದೆವ್ವ ಹಿಡಿದ್ದ ಹುಡುಗನನ್ನು ಬಿಡಿಸಿದ ಕಾರ್ಯವನ್ನು ನೋಡಿಕೊಳ್ಳೋಣ.

ಅದಕ್ಕಾತನು ಎಲ್ಲಾ, ನಂಬಿಕೆಯಿಲ್ಲದಂಥ ಸಂತಾನವೇ, ನಾನು ಇನ್ನೆಷ್ಟು ದಿನ ನಿಮ್ಮ ಸಂಗಡ ಇರಲಿ? ಇನ್ನೆಷ್ಟು ದಿನ ನಿಮ್ಮನ್ನು ಸಹಿಸಿಕೊಳ್ಳಲಿ? ಅವನನ್ನು ನನ್ನ ಬಳಿಗೆ ತೆಗೆದುಕೊಂಡು ಬನ್ನಿ ಅನ್ನಲು,

ಅವನನ್ನು ಆತನ ಬಳಿಗೆ ಕರೆದುಕೊಂಡು ಬಂದರು. ಆತನನ್ನು ಕಂಡಕೂಡಲೆ ಆ ದೆವ್ವವು ಅವನನ್ನು ಬಹಳವಾಗಿ ಒದ್ದಾಡಿಸಲು ಅವನು ನೆಲಕ್ಕೆ ಬಿದ್ದು ನೊರೆಸುರಿಸುತ್ತಾ ಹೊರಳಾಡಿದನು.

ಯೇಸು ಅವನ ತಂದೆಯನ್ನು, ಇದು ಇವನಿಗೆ ಬಂದು ಎಷ್ಟು ದಿನವಾಯಿತು ಎಂದು ಕೇಳಿದಾಗ, ಅವನು ಚಿಕ್ಕಂದಿನಲ್ಲಿಯೇ ಬಂದಿದೆ; ಮತ್ತು ಇವನನ್ನು ಕೊಲ್ಲಬೇಕೆಂದು ಆಗಾಗ್ಗೆ ಬೆಂಕಿಯಲ್ಲಿಯೂ ನೀರಿನಲ್ಲಿಯೂ ಕೆಡವಿತು; ನಿನ್ನ ಕೈಲಿ ಏನಾದರೂ ಆಗುವ ಹಾಗಿದ್ದರೆ ನಮ್ಮ ಮೇಲೆ ಕರುಣೆಯಿಟ್ಟು ನಮಗೆ ಸಹಾಯಮಾಡು ಅಂದನು. ಯೇಸು ಅವನಿಗೆ, ನಿನ್ನ ಕೈಲಿ ಆಗುವ ಹಾಗಿದ್ದರೆ ಅನ್ನುತ್ತೀಯೋ? ನಂಬುವವನಿಗೆ ಎಲ್ಲಾ ಆಗುವದು ಎಂದು ಹೇಳಿದನು.

ಕೂಡಲೆ ಆ ಹುಡುಗನ ತಂದೆಯು, ನಂಬುತ್ತೇನೆ, ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯಮಾಡು ಎಂದು ಕೂಗಿ ಹೇಳಿದನು.

ಆಗ ಯೇಸು ಜನರ ಗುಂಪು ಓಡಿಬರುವದನ್ನು ಕಂಡು ಆ ದೆವ್ವವನ್ನು ಗದರಿಸಿ ಎಲೇ, ಕಿವುಡಾದ ಮೂಗ ದೆವ್ವವೇ, ಇವನನ್ನು ಬಿಟ್ಟು ಹೋಗು; ಇನ್ನು ಮುಂದೆ ಹಿಡಿಯ ಬೇಡವೆಂದು ನಾನು ನಿನಗೆ ಅಪ್ಪಣೆಕೊಡುತ್ತೇನೆ ಅಂದನು.

ಆಗ ಅದು ಅಬ್ಬರಿಸಿ ಅವನನ್ನು ಒದ್ದಾಡಿಸಿ ಬಿಟ್ಟುಹೋಯಿತು. ಆ ಹುಡುಗನು ಸತ್ತಹಾಗೆ ಬಿದ್ದಿದ್ದರಿಂದ ಬಹು ಜನರು ಸತ್ತುಹೋದ ಅಂದರು. ಆದರೆ ಯೇಸು ಅವನನ್ನು ಕೈಹಿಡಿದು ಎಬ್ಬಿಸಲು ಅವನು ಎದ್ದು ನಿಂತನು (ಮಾರ್ಕ 9:19-27).

ಆ ಹುಡುಗನ ತಂದೆಯಲ್ಲಿದ್ದ ಪ್ರಾಮಾಣಿಕತೆಯನ್ನು ಗಮನಿಸಿ ನೋಡಿರಿ. ಅವನು ಯೇಸುವಿಗೆ ಮೋಸ ಮಾಡಲು ಪ್ರಯತ್ನಿಸಲಿಲ್ಲ. ಅವನು ತನ್ನ ಮಗನಿಗೆ ಬಿಡುಗಡೆಯಾಗಬೇಕೆಂದು ಬಯಸಿ, "ನಂಬುತ್ತೇನೆ, ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯಮಾಡು" ಎಂದು ಕೂಗಿ ಹೇಳಿದನು.

ಇಂದು ನಮ್ಮ ಪ್ರಾರ್ಥನೆಯೂ ಕೂಡ ಅದೇ ಆಗಿರಬೇಕು. ಕರ್ತನೇ, ನನ್ನ ನಂಬಿಕೆಯನ್ನು ಹೆಚ್ಚಿಸಲು ಸಹಾಯ ಮಾಡು.

**ನಮ್ಮ ನಂಬಿಕೆಯನ್ನು ಹೆಚ್ಚಿಸು**

ಲೂಕನ ಸುವಾರ್ತೆಯಲ್ಲಿ ಅಪೊಸ್ತಲರು, "ಕರ್ತನೇ, ನಮ್ಮ ನಂಬಿಕೆಯನ್ನು ಹೆಚ್ಚಿಸು" ಎಂದು ಪ್ರಾರ್ಥಿಸಿದರು.

ಅಪೊಸ್ತಲರು ಸ್ವಾಮಿಗೆ, ನಮ್ಮ ನಂಬಿಕೆಯನ್ನು ಹೆಚ್ಚಿಸು ಎಂದು ಹೇಳಿದರು (ಲೂಕ 17:5).

ನಾವು ಅಪೊಸ್ತಲರ ಕೃತ್ಯಗಳ ಪುಸ್ತಕವನ್ನೂ ಅವರು ಬರೆದಿರುವ ಪತ್ರಿಕೆಗಳನ್ನೂ ಓದುವಾಗ ನಂಬಿಕೆಯ ಹೆಚ್ಚಿಸಿದಂತಹ ಅನೇಕ ಉದಾಹರಣೆಗಳನ್ನು ನಾವು ಕಾಣುತ್ತೇವೆ. ಕರ್ತನು ಅವರ ನಂಬಿಕೆಯನ್ನು ಹೆಚ್ಚಿಸಿದಾಗ, ಶಿಷ್ಯರು ಆ ನಂಬಿಕೆಯಿಂದ ಮಹತ್ಕಾರ್ಯಗಳನ್ನು ಮಾಡಿದರು.

**ನಿಮ್ಮ ನಂಬಿಕೆ ಎಲ್ಲಿ?**

---

**ಯೇಸು ಬಿರುಗಾಳಿಯನ್ನು ಶಾಂತಗೊಳಿಸಿದನು**

ಸರ್ವಕಾಲಿಕವಾಗಿಯೂ ಶ್ರೇಷ್ಠನಾಗಿದ್ದ ಬೋಧಕನು ಅಂದರೆ ಯೇಸು ಶಿಷ್ಯರಿಗೆ ಬೋಧಿಸಿದನು. ಆದರೂ, ಸಮಸ್ಯೆಗಳು ಬಂದಾಗ, ಅವರು ಭಯಪಟ್ಟು ಯೇಸುವಿನ ಬಳಿಗೆ ಓಡಿ ಬಂದರು.

ಒಂದಾನೊಂದು ದಿನದಲ್ಲಿ ಆತನು ತನ್ನ ಶಿಷ್ಯರ ಸಂಗಡ ಒಂದು ದೋಣಿಯನ್ನು ಹತ್ತಿ ಕೆರೆಯ ಆಚೇ ದಡಕ್ಕೆ ಹೋಗೋಣ ಎಂದು ಅವರಿಗೆ ಹೇಳಲು ಅವರು ದೋಣಿಯನ್ನು ನೀರಿನೊಳಗೆ ನೂಕಿ ಹೊರಟರು.

ಅವರು ಹೋಗುತ್ತಿರುವಾಗ ಆತನಿಗೆ ನಿದ್ರೆಹತ್ತಿತು; ಅಷ್ಟರಲ್ಲಿ ಬಿರುಗಾಳಿ ಕೆರೆಯ ಮೇಲೆ ಬರಲು ದೋಣಿಯೊಳಗೆ ನೀರು ತುಂಬಿಕೊಂಡದರಿಂದ ಅವರು ಅಪಾಯಕ್ಕೆ ಗುರಿಯಾದರು.

ಹೀಗಿರಲಾಗಿ ಅವರು ಆತನ ಹತ್ತರ ಬಂದು ಗುರುವೇ, ಗುರುವೇ, ಸಾಯುತ್ತೇವೆ ಎಂದು ಹೇಳಿ ಆತನನ್ನು ಎಬ್ಬಿಸಿದರು. ಆಗ ಆತನು ಎದ್ದು ಗಾಳಿಯನ್ನೂ ಉಬ್ಬುವ ನೀರನ್ನೂ ಗದರಿಸಿದನು. ಗದರಿಸಲು ಅವು ನಿಂತವು, ಶಾಂತವಾಯಿತು.

ತರುವಾಯ ಆತನು ನಿಮ್ಮ ನಂಬಿಕೆ ಎಲ್ಲಿ? ಎಂದು ಅವರನ್ನು ಕೇಳಿದನು. ಅವರಾದರೋ ಭಯಪಟ್ಟು ಈತನು ಯಾರಿರಬಹುದು? ಗಾಳಿಗೂ ನೀರಿಗೂ ಅಪ್ಪಣೆ ಕೊಡುತ್ತಾನೆ; ಅವು ಕೂಡ ಹೇಳಿದ ಹಾಗೆ ಕೇಳುತ್ತವಲ್ಲಾ ಎಂದು ಒಬ್ಬರಿಗೊಬ್ಬರು ಮಾತಾಡಿಕೊಂಡು ಆಶ್ಚರ್ಯಪಟ್ಟರು. (ಲೂಕ 8:22-25)

ಅವರ ಪ್ರಾಣಗಳು ಉಳಿದವು, ಆದರೂ ಶಿಷ್ಯರು ಭಯಪಡುತ್ತಿದ್ದರು ಏಕೆಂದರೆ ಗಾಳಿಯೂ ನೀರೂ ಕೂಡ ಯೇಸುವಿಗೆ ಮಾತಿಗೆ ವಿಧೇಯವಾಗುತ್ತಿದ್ದವು. ಯೇಸು ಏನೆಂದು ಕೇಳಿದನು? "ನಿಮ್ಮ ನಂಬಿಕೆ ಎಲ್ಲಿ?"

### ನಾವು ಕೂಡ ಅದನ್ನು ಮಾಡಬಹುದು

ಯೇಸುವಿನ ಪ್ರಶ್ನೆಯು ಏನನ್ನು ಸೂಚಿಸುತ್ತದೆ ಎಂದರೆ, "ನಾನು ನಂಬಿಕೆಯಿಂದ ಬಿರುಗಾಳಿಯನ್ನು ಶಾಂತಗೊಳಿಸದೆ. ಆದರೆ ನೀವೇಕೆ ಅದನ್ನು ಮಾಡಲಿಲ್ಲ? "

ಶಿಷ್ಯರು ಭಯ, ಸಂದೇಹ, ಅಪನಂಬಿಕೆಯಿಂದ ಬಿರುಗಾಳಿಗೆ ಪ್ರತಿಕ್ರಿಯಿಸಿದರು. ಆದರೆ ಯೇಸು ನಂಬಿಕೆಯಿಂದ ಕಾರ್ಯ ಮಾಡಿದನು. "ನಿಮ್ಮ ನಂಬಿಕೆ ಎಲ್ಲಿ" ಎಂದು ಯೇಸು ಕೇಳಿದಾಗ, ನೀವು ನಂಬಿಕೆಯಿಂದ ಕಾರ್ಯ ಮಾಡಿದ್ದರೆ ನೀವು ಸಹ

ಬಿರುಗಾಳಿಯನ್ನು ಶಾಂತಗೊಳಿಸಬಹುದಿತ್ತೆಂದು ಆತನು ಅವರಿಗೆ ಹೇಳುತ್ತಿರುವನು.

ಯೇಸು ತನ್ನ ಶಿಷ್ಯರಿಗೆ ಈ ಕೆಳಗಿನ ಮಾತನ್ನು ಹೇಳಿದಾಗ ಈ ಸತ್ಯವನ್ನು ಸ್ಪಷ್ಟವಾಗಿ ತಿಳಿಯಪಡಿಸಿದನು,

ನಿಮಗೆ ನಿಜನಿಜವಾಗಿ ಹೇಳುತ್ತೇನೆ. ನನ್ನನ್ನು ನಂಬುವವನು ನಾನು ನಡಿಸುವ ಕ್ರಿಯೆಗಳನ್ನು ತಾನೂ ನಡಿಸುವನು ಮತ್ತು ಅವುಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡಿಸುವನು. ಯಾಕಂದರೆ ನಾನು ತಂದೆಯ ಬಳಿಗೆ ಹೋಗುತ್ತೇನೆ (ಯೋಹಾನ 14:12).

- *ನಿಜವಾದ ನಂಬಿಕೆ*

ದೇವರನ್ನು ತಿಳಿದುಕೊಳ್ಳುವ ಮೂಲಕವೂ ಕೆಲವೊಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ ಆತನ ಚಿತ್ತವನ್ನು ತಿಳಿದುಕೊಳ್ಳುವ ಮೂಲಕವೂ ನಂಬಿಕೆ ಬರುತ್ತದೆ.

ಈ ಪರಿಸ್ಥಿತಿಯಲ್ಲಿ ದೇವರ ಚಿತ್ತವೇನಾಗಿತ್ತು?

ಯೇಸು, "ನಾವು ಕೆರೆಯ ಆಚೆ ದಡಕ್ಕೆ ಹೋಗೋಣ" ಎಂದು ಹೇಳಿದನು. ಆದರೆ ಅವರು ಯೇಸು ಯಾರೆಂಬುದನ್ನು ಅವರು ಅರ್ಥಮಾಡಿಕೊಳ್ಳಲಿಲ್ಲ. ಅವರು ಅದ್ಭುತಗಳನ್ನು ನೋಡಿದ್ದರು, ಆದರೂ ಆತನಲ್ಲಿದ್ದ ಶಕ್ತಿಯನ್ನು ಅವರು ಅರ್ಥಮಾಡಿಕೊಳ್ಳಲಿಲ್ಲ. ಮನುಷ್ಯಕುಮಾರನು "ಆಚೆಗೆ ಹೋಗೋಣ" ಎಂದು ಹೇಳಿದ್ದನು, ಆದ್ದರಿಂದ ಆ ಮಾತುಗಳಲ್ಲಿ ದೇವರ ಶಕ್ತಿಯಿತ್ತು.

ಅಂದು ಯೆಶು ಶಿಷ್ಯರಿಗ, "ನಿಮ್ಮ ನಂಬಿಕೆ ಎಲ್ಲಿ?" ಎಂದು ಕೇಳಿದನು. ಆತನು ಇಂದು ಸಹ ನಮ್ಮಲ್ಲಿ ಅನೇಕರಿಗೆ ಅದೇ ಪ್ರಶ್ನೆಯನ್ನು ಕೇಳುತ್ತಿರುವನು.

ದೇವರ ಚಿತ್ತವನ್ನು ಅವರಿಗೆ ತಿಳಿಸಲಾಯಿತು, "ಆಚೆ ದಡಕ್ಕೆ ಹೋಗೋಣ", ಆದರೆ ನಂಬಿಕೆಗೆ ಪರೀಕ್ಷೆ ಬಂದಾಗ ಅವರು, "ನಾವು ನಾಶವಾಗುತ್ತಿದ್ದೇವೆ!" ಎಂದು ಕೂಗಿಕೊಂಡರು.

ಇಂದು, ನಮ್ಮ ಬಳಿಯಲ್ಲಿ ಬರೆಯಲ್ಪಟ್ಟಿರುವ ದೇವರ ವಾಕ್ಯವಿದೆ. ದೇವರ ಚಿತ್ತ ಏನೆಂದು ನಮಗೆ ಗೊತ್ತಿದೆ, ಆದರೂ ಇನ್ನೂ ಅನೇಕರು ನಾಶವಾಗುತ್ತಿದ್ದಾರೆ.

ಹೋಶೇಯನು ಹೀಗೆ ಬರೆದಿದ್ದಾನೆ,

ನನ್ನ ಜನರು ಜ್ಞಾನಹೀನರಾಗಿ ಹಾಳಾಗಿದ್ದಾರೆ (ಹೋಶೇಯ 4:6).

ನಾವು ನಮ್ಮ ನಂಬಿಕೆಯನ್ನು ವೃದ್ಧಿಪಡಿಸಿಕೊಳ್ಳಲು, ನಾವು ಮೊದಲು ಆತನ ವಾಕ್ಯದ ಕುರಿತಾದ ತಿಳಿವಳಿಕೆಯನ್ನು ಪಡೆದುಕೊಳ್ಳಬೇಕು. ಅನಂತರ ನಾವು ಆ ವಾಕ್ಯವನ್ನು ನಂಬಬೇಕು, ಧ್ಯಾನಿಸಬೇಕು ಮತ್ತು ಅದರ ಪ್ರಕಾರ ಕಾರ್ಯಮಾಡಬೇಕು.

ನಿಜವಾದ ನಂಬಿಕೆಯು ಯಾವಾಗಲೂ ದೇವರನ್ನೂ ನಮ್ಮ ಪರಿಸ್ಥಿತಿಯಲ್ಲಿ ಆತನ ಚಿತ್ತ ಏನೆಂಬುದನ್ನೂ ತಿಳಿದುಕೊಳ್ಳುವುದರ ಮೂಲಕ ಬರುತ್ತದೆ.

- *ನಮ್ಮ ಬಾಯಿಯಲ್ಲಿದೆ*

ಶಿಷ್ಯರು, "ಗುರುವೇ, ಗುರುವೇ, ನಾವು ನಾಶವಾಗುತ್ತಿದ್ದೇವೆ!" ಎಂದು ಕೂಗಿದರು. ಸ್ವಾಭಾವಿಕವಾಗಿ ನೋಡುವುದಾದರೆ, ಎಲ್ಲರೂ ಅವರು ಮಾಡಿದ್ದು ಸರಿಯೆಂದು ಒಪ್ಪಿಕೊಳ್ಳುತ್ತಾರೆ.

ಆದರೆ ಯೇಸು ಅವರು ಮಾಡಿದ್ದು ಸರಿಯೆಂದು ಒಪ್ಪಿಕೊಳ್ಳಲಿಲ್ಲ ಎಂಬುದನ್ನು ಗಮನಿಸಿರಿ. ಆತನು ಧೈರ್ಯವಾಗಿ ಎದ್ದು ನಿಂತು, ನಂಬಿಕೆಯಿಂದ ಕಾರ್ಯಮಾಡಿ ಗಾಳಿಯನ್ನೂ ಅಲೆಗಳನ್ನೂ ಗದರಿಸಿದನು.

ಶಿಷ್ಯರು ಭಯದಿಂದ ಕೂಗಿಕೊಂಡರು. ಭಯದಲ್ಲಿ ನಂಬಿಕೆ ಇರುವುದಿಲ್ಲ. ಭಯವು ನಂಬಿಕೆಗೆ ತದ್ವಿರುದ್ಧವಾದ್ದುದು ಆಗಿದೆ. ಭಯವು ನಂಬಿಕೆಗೆ ವಿರುದ್ಧವಾದ ದಿಕ್ಕಿನಲ್ಲಿ ಸಾಗುತ್ತಿದೆ. ಭಯವು ಆಳುವ ಕಡೆಯಲ್ಲಿ, ನಂಬಿಕೆ ಕಾರ್ಯಮಾಡಲು ಸಾಧ್ಯವಿಲ್ಲ.

ಯೇಸು ತನ್ನ ಅಧಿಕಾರದಲ್ಲಿ ನಿಂತುಕೊಂಡು ಆತ್ಮ ಮಂಡಲದಲ್ಲಿ ಮಾತನಾಡಿದನು.

ನಮಗೆ ನಂಬಿಕೆಯಿದ್ದರೆ ಆಗ ನಾವು ಮುಂದೆ ಬಂದು ಧೈರ್ಯವಾಗಿ ಮಾತನಾಡುತ್ತೇವೆ. ನಂಬಿಕೆ ನಮ್ಮ ಬಾಯಿಯಲ್ಲಿದೆ. ನಂಬಿಕೆ ನಮ್ಮ ಆತ್ಮಗಳಿಂದ ಬರುತ್ತದೆ, ಆದರೂ ಅದು ನಮ್ಮ ಬಾಯಿಯಲ್ಲಿದೆ.

ದೇವರ ವಾಕ್ಯವು ನಿನ್ನ ಸಮೀಪದಲ್ಲಿಯೇ ಇದೆ. ಅದು ನಿನ್ನ ಬಾಯಲ್ಲಿಯೂ ಹೃದಯದಲ್ಲಿಯೂ ಇದೆ ಅನ್ನುತ್ತದೆ (ರೋಮಾಪುರ 10:8a).

**ನಮ್ಮ ಮನಸ್ಸಿನಲ್ಲಿನ ಯುದ್ಧ**

---

**ದೇವರು ಕೊಟ್ಟಿರುವ ಕಂಪ್ಯೂಟರ್‌ಗಳು**

ದೇವರು ಮನುಷ್ಯರನ್ನು ಸೃಷ್ಟಿಸಿದಾಗ, ಆತನು ಅದ್ಭುತಕರವಾಗಿ, ನಮ್ಮೊಳಗೆ ಕಂಪ್ಯೂಟರ್ ಅನ್ನು ಇಟ್ಟಿದ್ದಾನೆ. ಅದು ನಮ್ಮ

ಮನಸ್ಸಾಗಿದೆ. ಅದು ಜಟಿಲವಾದ, ಅದ್ಭುತಕರವಾದ ಸಾಧನವಾಗಿದೆ. ನಮ್ಮಲ್ಲಿ ಬಹು ಮಂದಿ ಈ ಸಾಧನವನ್ನು ನಿರ್ಲಕ್ಷಿಸಿದ್ದೇವೆ. ನಾವು ಅದನ್ನು ಹಗುರವಾಗಿ ತೆಗೆದುಕೊಂಡಿದ್ದೇವೆ, ಅದು ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಅರ್ಥಮಾಡಿಕೊಂಡಿಲ್ಲ.

ಕಂಪ್ಯೂಟರ್‌ಗಳ ಬಗ್ಗೆ ನಮ್ಮಲ್ಲಿ ಎಲ್ಲರಿಗೂ ಗೊತ್ತಿದೆ, ಅವುಗಳು ಎಲ್ಲ ಕಡೆ ಇವೆ. ಆ ಕಂಪ್ಯೂಟರ್‌ಗಳಲ್ಲಿ ಕೆಲವುಗಳನ್ನು ಅತ್ಯಂತ ಜಟಿಲವಾದ ಗಣಿತದ ಸಮಸ್ಯೆಗಳನ್ನು ಬಗೆಹರಿಸಲು ನಾವು ಬಳಸುತ್ತೇವೆ. ಬೇರೆ ಕೆಲವುಗಳನ್ನು ಚಿತ್ರಗಳನ್ನು, ಗ್ರಾಫಿಕ್ಸ್‌ಗಳನ್ನು, ಕ್ಯಾಟಲಾಗ್‌ಗಳನ್ನು, ಪುಸ್ತಕದ ಕವರ್‌ಗಳನ್ನು ಅಥವಾ ಪೋಸ್ಟರ್‌ಗಳನ್ನು ಮಾಡಲು ಉಪಯೋಗಿಸುತ್ತಾರೆ. ಬೇರೆ ಕೆಲವುಗಳನ್ನು ತುಂಬಾ ಕ್ಲಿಷ್ಟಕರವಾದ ಅನಿಮೇಷನ್ ಮಾಡಲು ಉಪಯೋಗಿಸುತ್ತಾರೆ. ಇನ್ನೂ ಕೆಲವುಗಳನ್ನು ವಾಸ್ತುಶಿಲ್ಪಿಗಳು ಮನೆಗಳ, ಶಾಪಿಂಗ್ ಮಾಲ್‌ಗಳ, ದೊಡ್ಡ ದೊಡ್ಡ ಕಚೇರಿ ಕಟ್ಟಡಗಳ ರಚನಾನಕ್ಷೆಯನ್ನು ತಯಾರಿಸಲು ಉಪಯೋಗಿಸುತ್ತಾರೆ. ಮೂಲಭೂತವಾಗಿ, ಎಲ್ಲಾ ಕಂಪ್ಯೂಟರ್‌ಗಳು ಒಂದೇ ರೀತಿಯಲ್ಲಿ ಕಾರ್ಯನಿರ್ವಹಿಸುತ್ತವೆ. ಆದರೆ ಅವುಗಳಲ್ಲಿ ಇನ್‌ಸ್ಟಾಲ್ ಮಾಡಿರುವ ಪ್ರೋಗ್ರಾಂಗಳು ಬೇರೆ ಬೇರೆ ಕಾರ್ಯಮಾಡುತ್ತವೆ.

- *ಪ್ರವೇಶ್ಯ - ನಿವೇಶ್ಯ*

ನಮ್ಮ ಕಂಪ್ಯೂಟರ್‌ಗಳ ಕುರಿತು ನಾವು ಕಲಿಯುವ ಮೊದಲ ವಿಷಯವೇನಂದರೆ ನಾವು ಅದಕ್ಕೆ ತಪ್ಪಾದ ಮಾಹಿತಿಯನ್ನು ಕೊಟ್ಟರೆ, ಅದು ನಮಗೆ ತಪ್ಪು ಮಾಹಿತಿಯನ್ನು ಕೊಡುತ್ತದೆ.

ಮನಸ್ಸುಗಳೆಂಬ ನಮ್ಮ ಕಂಪ್ಯೂಟರ್‌ಗಳು, ಹುಟ್ಟಿದಂದಿನಿಂದ ನಾವು ನಾವು ಕೇಳುವ, ನೋಡುವ, ಮೂಸಿಸುವ, ಮುಟ್ಟುವ ವಿಷಯಗಳನ್ನು, ಒಳ್ಳೆಯ ವಿಷಯಗಳನ್ನು, ಕೆಟ್ಟ ವಿಷಯಗಳನ್ನು, ಎಲ್ಲವನ್ನು ಸಂಗ್ರಹಿಸಿಟ್ಟುಕೊಳ್ಳುತ್ತವೆ. ನಾವು ನಮ್ಮ ಸುತ್ತಮುತ್ತಲಿನವಂಥ ಸಂಗತಿಗಳಿಂದ, ಪುಸ್ತಕಗಳಿಂದ, ದೂರದರ್ಶನದಿಂದ ಕಲಿಯುತ್ತೇವೆ. ನಮ್ಮ ಸಂಪರ್ಕಕ್ಕೆ ಬರುವಂಥ ಎಲ್ಲವೂ ನಮ್ಮ ಕಂಪ್ಯೂಟರ್‌ನಲ್ಲಿ ಇಟ್ಟುಕೊಳ್ಳುತ್ತೇವೆ.

ಅವರು ಸೋತುಹೋದ ವ್ಯಕ್ತಿಗಳಾಗಿದ್ದಾರೆ ಎಂದು ಅನೇಕ ಮಂದಿಗೆ ನಂಬಿಸಿ ಬಿಟ್ಟಿದಾರೆ, ಅದರ ಪರಿಣಾಮವಾಗಿ ಅವರು ತಮ್ಮ ಅನುಭವಗಳ ಮೂಲಕವಾಗಿಯಾಗಲಿ, ಬೇರೆಯವರ ಮಾತುಗಳ ಮೂಲಕವಾಗಿಯಾಗಲಿ ಯಶಸ್ವಿಯಾಗಲು ಆಗುತ್ತಿಲ್ಲ. ಯಾರಾದರೂ

ಕೋಪದಲ್ಲಿ ಅವರಿಗೆ "ನಿನ್ನಿಂದ ಸರಿಯಾಗಿ ಯಾವುದನ್ನು ಮಾಡುವುದಕ್ಕೆ ಆಗುವುದಿಲ್ಲ!" ಎಂದು ಹೇಳಿರಬಹುದು. ಆದರೆ ವಿಪರ್ಯಾಸಕರವಾದ ಸತ್ಯವೇನಂದರೆ ಒಮ್ಮೆ ಅವರು ಅದನ್ನು ಸತ್ಯವೆಂದು ಒಪ್ಪಿಕೊಂಡರೆ, ಆ ಕ್ಷಣದಿಂದ ಅವರ ಮನಸ್ಸು ಅದನ್ನು ಸತ್ಯವನ್ನಾಗಿಸಲು ಕಾರ್ಯಮಾಡುತ್ತದೆ. ಅವರು ತಮ್ಮನ್ನು ತಾವು ಸೋಲಿನತ್ತ ನೂಕಿಕೊಳ್ಳುತ್ತಾರೆ. ಅವರು ಯಾವತ್ತೂ ಯಶ್ವಸಿ ಆಗುವುದಿಲ್ಲ.

ನೀವು ಬೇರೆಯವರಂತೆ ಜಾಣರಲ್ಲ ಎಂದು ಅನೇಕರಿಗೆ ಕಲಿಸಲಾಗಿದೆ. "ನೀವು ಏಕೆ ಇಷ್ಟು ಮೂರ್ಖರಾಗಿದ್ದೀರಿ!" ಎಂದು ಅವರಿಗೆ ಯಾರೋ ಪದೇ ಪದೇ ಹೇಳಿರುವುದನ್ನು ಅವರು ಕೇಳಿಸಿಕೊಂಡಿತಬಹುದು. ಒಮ್ಮೆ ಈ ಭಾವನೆಯು ಅವರ ಮನಸ್ಸಿನಲ್ಲಿ ಬೇರೂರಿ ಬಿಟ್ಟರೆ, ಅವರು ತಮ್ಮ ಸುತ್ತಲಿರುವವರಂತೆ ಜಾಣರಾಗಲು  ಆಗುವುದಿಲ್ಲ. ಅವರಿಗೆ ಸಾಮರ್ಥ್ಯವಿದೆ, ಆದರೆ ಅವರು ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಅವರು ಬಿಡದೆ ಮನಸ್ಸುಗಳು ನಕಾರಾತ್ಮಕವಾದ ಭಾವನೆಗಳನ್ನು ಮೂಡಿಸುತ್ತವೆ.

ನಮಗೆ ಕಲಿಸಲಾಗಿರುವ ಕೆಟ್ಟ ಭಾವನೆಗಳ ಕುರಿತು ಪಟ್ಟಿ ಮಾಡುವುದಾದರೆ ಅದಕ್ಕೆ ಅಂತ್ಯವಿಲ್ಲ. ನಾವು ತುಂಬಾ ದಪ್ಪವಾಗಿದ್ದೇವೆ. ನಾವು ಕುರೂಪಿಗಳಾಗಿದ್ದೇವೆ. ನಮ್ಮಿಂದ ಸ್ನೇಹಿತರನ್ನು ಮಾಡಿಕೊಳ್ಳಲು ಆಗುವುದಿಲ್ಲ. ನಿಜವಾಗಿಯೂ ಯಾರೂ ನಮ್ಮನ್ನು ಇಷ್ಟಪಡುವುದಿಲ್ಲ. ಈ ರೀತಿಯಾಗಿ ನಾವು ಅನೇಕ ವರ್ಷಗಳಿಂದ ಕೇಳಿರುವಂಥ ಈ ಎಲ್ಲಾ ವಿಷಯಗಳು, ನಕಾರಾತ್ಮಕವಾದ ಸಂಗತಿಗಳು, ನಮ್ಮ ಮನಸ್ಸುಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಲು ಪ್ರಾರಂಭಿಸುವವರೆಗೂ, ದೇವರು ನಮಗೆ ಕೊಟ್ಟಿರುವ ಮನಸ್ಸನ್ನು ನಾವು ಅರ್ಥಮಾಡಿಕೊಳ್ಳಲು ಪ್ರಾರಂಭಿಸುವ ವರೆಗೂ, ನಿಜವಾಗಿಯೂ ಪ್ರಾಮುಖ್ಯವಾಗಿರುತ್ತವೆ.

ನಕಾರಾತ್ಮಕವಾದ ಮಾತುಗಳೂ ಕಾರ್ಯಗಳೂ ನಮ್ಮನ್ನು ಎಂಥ ವ್ಯಕ್ತಿಗಳಾಗಿ ಮಾಡಲು ಬಯಸುತ್ತದೆಯೋ ಅಂಥ ವ್ಯಕ್ತಿಗಳಾಗಿ ನಾವು ಇರಬೇಕಾಗಿಲ್ಲ. ನಾವು ಯಾರಾಗಿರಬೇಕೆಂಬುದನ್ನು ನಿರ್ಧರಿಸಿ ನಿಯಂತ್ರಿಸಲು ದೇವರು ನಮ್ಮ ಪ್ರತಿಯೊಬ್ಬರಿಗೂ ಅಧಿಕಾರವನ್ನು ಕೊಟ್ಟಿದ್ದಾನೆ.

**ನಾವು ಗುರಿಯಿಟ್ಟುಕೊಳ್ಳುವ ರೀತಿಯನ್ನು ಬದಲಾಯಿಸಿಕೊಳ್ಳಬೇಕು**

ಗುರಿಯಿಟ್ಟುಕೊಳ್ಳುವ ರೀತಿಯನ್ನು ದೇವರು ನಮಗೆ ಕೊಟ್ಟಿದ್ದಾನೆ. ನಾವು ಇಟ್ಟುಕೊಂಡಿರುವ ಈ ಗುರಿಗಳು ಸಕಾರಾತ್ಮಕವಾಗಿದ್ದರೂ ನಕಾರಾತ್ಮವಾಗಿದ್ದರೂ, ನಮ್ಮ ಮನಸ್ಸು ಆ ಗುರಿಗಳನ್ನು ಸಾಧಿಸುವುದಕ್ಕೆ ಪ್ರಯತ್ನಿಸುತ್ತದೆ. ಆದರೆ ನಾವು ಮಾಡಬೇಕಾಗಿರುವುದು ಏನೆಂದರೆ ನಮ್ಮನ್ನು ಸೋಲಿನತ್ತ ಕೊಂಡೊಯ್ಯುವ ಗುರಿಗಳನ್ನು ತಿಳಿದುಕೊಂಡು ಅವುಗಳನ್ನು ಬದಲಾಯಿಸಿಕೊಳ್ಳಬೇಕು! ನಾವು ಆತ್ಮನಿಂದ ನಡೆಸಲ್ಪಟ್ಟು ಹೊಸ ಗುರಿಗಳನ್ನು ಇಟ್ಟುಕೊಳ್ಳಬೇಕು.

- *ಧ್ಯಾನ*

ಕೆಲವರು ಧ್ಯಾನದ ವಿಷಯದಲ್ಲಿ ಹೆದರಿಕೊಳ್ಳುತ್ತಾರೆ, ಏಕೆಂದರೆ ಅದು ಬೇರೆ ಧರ್ಮಗಳ ಭಾಗವಾಗಿದೆ ಅಂದುಕೊಳ್ಳುತ್ತಾರೆ. ಆದರೆ ಧ್ಯಾನ ಎಂಬುದು ನಮ್ಮ ಮನಸ್ಸಿನ ಶಕ್ತಿಯುತವಾದ ಸಾಧನಗಳಲ್ಲಿ ಒಂದಾಗಿದೆ. ನಾವು ದೇವರ ವಾಕ್ಯವನ್ನು ಧ್ಯಾನಿಸಬೇಕೆಂದು ನಮಗೆ ಆಜ್ಞಾಪಿಸಲಾಗಿದೆ. ನಾವು ನಮ್ಮ ಗುರಿಗಳನ್ನಲ್ಲ ಅಥವಾ ಕನಸುಗಳನ್ನಲ್ಲ, ಆದಕ್ಕೆ ಬದಲಾಗಿ ದೇವರ ವಾಕ್ಯವನ್ನು ಹಗಲಿರಳು ಧ್ಯಾನಿಸಬೇಕು. ನಾವು ದೇವರ ವಾಕ್ಯವನ್ನು ಧ್ಯಾನಿಸುವಾಗ ಆತನ ಗುರಿಗಳನ್ನು ನಮ್ಮ ಜೀವನದ ಗುರಿಗಳಾಗಿ ನಾವು ಮಾಡಿಕೊಳ್ಳುತ್ತೇವೆ.

ಕೀರ್ತನೆಗಳಲ್ಲಿ ನಾವು ಧನ್ಯನಾದ ವ್ಯಕ್ತಿಯ ಕುರಿತು ಓದುತ್ತೇವೆ

ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು (ಕೀರ್ತನೆಗಳು 1:2).

ಯೆಹೋಶುವನ ಪುಸ್ತಕದಲ್ಲಿ ನಾವು ಹೀಗೆ ಓದುತ್ತೇವೆ,

ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ; ಹಗಲಿರುಳು ಅದನ್ನು ಧ್ಯಾನಿಸುತ್ತಾ ಅದರಲ್ಲಿ ಬರೆದಿರುವದನ್ನೆಲ್ಲಾ ಕೈಕೊಂಡು ನಡೆ. ಆಗ ನಿನ್ನ ಮಾರ್ಗದಲ್ಲೆಲ್ಲಾ ಸಫಲನಾಗುವಿ, ಕೃತಾರ್ಥನಾಗುವಿ (ಯೆಹೋಶುವ 1:8).

ನಾವು ದೇವರ ವಾಕ್ಯವನ್ನು ಧ್ಯಾನಿಸುವಾಗ, ಅದು ನಮ್ಮ ಜೀವನದ ಭಾಗವಾಗಿ ಮಾರ್ಪಡುತ್ತದೆ. ಆಗ ನಾವು ಬರೆದಿರುವಂಥದ್ದನ್ನು "ಕೈಕೊಂಡು ನಡೆಯಲು" ಪ್ರಾರಂಭಿಸುತ್ತೇವೆ.

- ಭಾವನೆ

ಭಾವಿಸಿಕೊಳ್ಳುವುದಕ್ಕೂ ಧ್ಯಾನಿಸುವುದಕ್ಕೂ ನಿಕಟವಾದ ಸಂಬಂಧವಿದೆ. ನಾವು ದೇವರ ವಾಕ್ಯವನ್ನು ಧ್ಯಾನಿಸುವಾಗ, ನಾವು ಅದನ್ನು ಮಾಡುತ್ತಿದ್ದೇವೆ ಎಂದು ನಾವು ಭಾವಿಸಿಕೊಳ್ಳಬೇಕು, ಅಥವಾ ಕಾಣಬೇಕು.

ಆದಿಕಾಂಡ 11 ನೇ ಅಧ್ಯಾಯದಲ್ಲಿ, ಸ್ವೇಚ್ಛಾಪ್ರವೃತ್ತಿಯುಳ್ಳ, ಗರ್ವಿಷ್ಠರಾದ ಜನರ ಕುರಿತು ಮಾತನಾಡುವಾಗ, ದೇವರು ಹೀಗೆ ಹೇಳಿದ್ದಾನೆ

…ಮುಂದೆ ಏನು ಆಲೋಚಿಸಿದರೂ ಇವರಿಗೆ ಅಸಾಧ್ಯವಲ್ಲ. (ಆದಿಕಾಂಡ 11:6b).

ಅವರು ಅದನ್ನು ಮಾಡಲು ಆಲೋಚಿದರೆ, ಅವರು ಅದನ್ನು ಮಾಡಬಹುದು ಎಂದು ದೇವರು ಹೇಳಿದನು. ಈಗ ಸಕರಾತ್ಮಕವಾದ ವಿಷಯವನ್ನು ನೋಡಿಕೊಳ್ಳೋಣ. ಯೇಸು ತಾನು ಮಾಡಿದ ಕಾರ್ಯಗಳನ್ನು, ನಾವು ಕೂಡ ಮಾಡಬಹುದೆಂದು ಹೇಳಿದನು. ಆದ್ದರಿಂದ ನಾವು ಸುವಾರ್ತೆಯ ಪುಸ್ತಕಗಳನ್ನು ಓದಿ, ಯೇಸು ಮಾಡಿದ್ದಂಥ ಕಾರ್ಯವನ್ನು ನಾವು ಕೂಡ ಮಾಡುತ್ತಿದ್ದೇವೆ ಎಂದು ಭಾವಿಸಿಕೊಳ್ಳಬೇಕು. ಯೇಸು ರೋಗಿಗಳನ್ನು ವಾಸಿಮಾಡಿದನು. ಯೇಸು ಸತ್ತವರನ್ನು ಜೀವಿತರಾಗಿ ಎಬ್ಬಿಸಿದನು. ಯೇಸು ಬಿರುಗಾಳಿಯನ್ನು ಶಾಂತಗೊಳಿಸಿದನು. ಯೇಸು ಜನ ಸಮೂಹಕ್ಕೆ ಆಹಾರವನ್ನು ಒದಗಿಸಿ ಪೋಷಿಸಿದನು.

ನಾವು ದೇವರ ವಾಕ್ಯವನ್ನು ಧ್ಯಾನಿಸುವಾಗ, ನಾವು ಅದನ್ನು ಮಾಡುತ್ತಿದ್ದೇವೆ ಎಂದು ಭಾವಿಸುವಾಗ, ಅದು ನಮ್ಮ ಕೈಗಳಿಂದ ನಡೆಯುತ್ತದೆ ಎಂದು ನಾವು ಭಾವಿಸುವಾಗ, ನಮ್ಮ ನಂಬಿಕೆ ಬೆಳೆಯುತ್ತದೆ, ಆಗ ನಾವು ದೇವರು ತನ್ನ ವಿಶ್ವಾಸಿಗಳಿಗಾಗಿ ಇಟ್ಟಿರುವ ಅಸಾಧಾರಣವಾದ, ನಂಬಿಕೆಯ ಮಂಡಲದಲ್ಲಿ ನಡೆಯುತ್ತೇವೆ.

ಸಕಾರಾತ್ಮಕವಾದ ಯೋಚನೆಗಳ ಮತ್ತು ನುಡಿಗಳ ಶಕ್ತಿಯ ಕುರಿತು ಪುಸ್ತಕಗಳನ್ನು ಬರೆಯಲಾಗಿದೆ, ಮತ್ತು ಅವುಗಳಲ್ಲಿರುವ ವಿಷಯಗಳು ನಿಜವೇ ಆಗಿವೆ. ಬೇರೆಯವರು, "ನಾವು ನುಡಿಯುವಂಥದ್ದನ್ನು ನಾವು ಹೊಂದಿದ್ದೇವೆ" ಮತ್ತು ನಾವು ಹಾಗೆಯೇ ಮಾಡುತ್ತೇವೆ ಎಂದು ಹೇಳುತ್ತಾರೆ. ಅವುಗಳು ಸ್ವಾಬಾವಿಕ ಮನಸ್ಸಿನ ಸೂತ್ರಗಳಾಗಿವೆ. ಇದು ನಮ್ಮ ಮನಸ್ಸು ಕಾರ್ಯ ಮಾಡುವ ರೀತಿಯನ್ನು ಸೂಚಿಸುತ್ತದೆ. ಇದು ಸಕಾರಾತ್ಮಕವಾದ ಗುರಿಗಳನ್ನು ಇಟ್ಟುಕೊಳ್ಳಲು ನಮ್ಮ

ಮನಸ್ಸನ್ನು ಬದಲಾಯಿಸಿಕೊಳ್ಳುವ ಪ್ರಕ್ರಿಯೆಯಾಗಿದೆ, ಆದರೆ ಇದಕ್ಕಿಂತ ಮೀಗಿಲಾದ ಕಾರ್ಯವಿದೆ.

**ನಮ್ಮ ಮನಸ್ಸನ್ನು ನೂತನಪಡಿಸಿಕೊಳ್ಳುವುದು**

ದೇವರ ವಾಕ್ಯದ ಶಕ್ತಿಯ ಮೂಲಕ ನಮ್ಮ ಮನಸ್ಸುಗಳನ್ನು ನಾವು ನೂತನಪಡಿಸಿಕೊಳ್ಳಬೇಕು. ಪವಿತ್ರಾತ್ಮನ ನಡೆಸುವಿಕೆಯ ಮೂಲಕ ನಮ್ಮ ಮನಸ್ಸಿನ ಗುರಿಗಳನ್ನು ಬದಲಾಯಿಸಿಕೊಳ್ಳಬಹುದು.

ಅಪೊಸ್ತಲನಾದ ಪೌಲನು ಹೀಗೆ ಬರೆದಿದ್ದಾನೆ,

ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರದದ್ದು ಅಂದರೆ ಉತ್ತಮವಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ (ರೋಮಾಪುರ 12:2).

- *ಸರಿಯಾದ ಕ್ರಮವನ್ನು ನೇಮಿಸುವುದು*

ಮನುಷ್ಯರು ತ್ರಿತಯ ಜೀವಿಗಳಾಗಿದ್ದಾರೆ. ನಾವು ಆತ್ಮವಾಗಿದ್ದೇವೆ (ಹೃದಯ), ನಮಗೆ ಪ್ರಾಣ (ಮನಸ್ಸು) ಮತ್ತು ದೇಹ (ಮಾಂಸ) ಇದೆ. ಮನಸ್ಸು ಮತ್ತು ಭಾವನೆಗಳು ಆತ್ಮವನ್ನು ಆಳಲು ಪ್ರಯತ್ನಿಸುತ್ತವೆ, ಇದು ತುಂಬಾ ಅಪಾಯಕಾರಿಯಾದ ಸಂಗತಿಯಾಗಿದೆ.

ಮಾಹಿತಿಯನ್ನು ಸಂಗ್ರಹಿಸಿಟ್ಟುಕೊಳ್ಳಲು ದೇವರು ಸೃಷ್ಟಿಸಿದ್ದಂಥ ನಮ್ಮ ಮನಸ್ಸು ಅದ್ಭುತಕರವಾದ ಸಾಧನವಾಗಿದೆ. ಮುಂದೆ ಕಂಡುಹಿಡಿಯಲಿಕ್ಕಿರುವ ಯಾವುದೇ ಕಂಪ್ಯೂಟರ್‌ಗಿಂತಲೂ ಮನಸ್ಸು ದೊಡ್ಡ ಕಂಪ್ಯೂಟರ್ ಆಗಿದೆ, ಆದರೆ ನಮ್ಮ ಆತ್ಮವನ್ನು ಆಳುವುದಕ್ಕಾಗಿ ಮನಸ್ಸನ್ನು ಸೃಷ್ಟಿಸಿಲ್ಲ. ಮನಸ್ಸು ಸರಿಯಾದ ಅಥವಾ ತಪ್ಪಾದ ಮಾಹಿತಿಯನ್ನು ಕೊಡಬಹುದು. ನಮ್ಮ ಆತ್ಮವು ಕ್ರಿಸ್ತನೊಂದಿಗೆ ಪರಲೋಕದ ಸ್ಥಳಗಳಲ್ಲಿ ಕುಳ್ಳಿರಿಸಲ್ಪಟ್ಟಿದೆ.

ಅಪರಾಧಗಳ ದೆಸೆಯಿಂದ. ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು. ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದಿರಿ. ಬದುಕಿಸಿದ್ದಲ್ಲದೆ ತಾನು ಕ್ರಿಸ್ತ ಯೇಸುವಿನಲ್ಲಿ ನಮಗೆ ಮಾಡುವ ಉಪಕಾರದ ಮೂಲಕ ತನ್ನ ಅಪಾರವಾದ ಕೃಪಾತಿಶಯವನ್ನು, ಮುಂದಣ ಯುಗಗಳಲ್ಲಿ ತೋರಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಆತನೊಂದಿಗೆ ಕೂಡ್ರಿಸಿದ್ದಾನೆ (ಎಫೆಸ 2:5,6).

ಸ್ವಬುದ್ಧಿಯನ್ನೇ ಆಧಾರಮಾಡಿಕೊಳ್ಳದೆ ಪೂರ್ಣ ಮನಸ್ಸಿನಿಂದ ಯೆಹೋವನಲ್ಲಿ ಭರವಸವಿಡು (ಜ್ಞಾನೋಕ್ತಿ 3:5).

- *ಕೆಲವು ಸತ್ಯಗಳು - ಕೆಲವು ವಂಚನೆಗಳು*

ನಾವು ಆತ್ಮದಲ್ಲಿ ನಡೆಯಲು ಪ್ರಯತ್ನಿಸಿದಾಗ, ನಾವು ಆತ್ಮಿಕ ಯುದ್ಧ ಮಾಡಬೇಕಾಗುತ್ತದೆ. ಏಕೆಂದರೆ ನಮ್ಮಲ್ಲಿ ಅನೇಕರು, ತಮ್ಮನ್ನು ತಾವು ನಿಯಂತ್ರಣದಲ್ಲಿಟ್ಟುಕೊಳ್ಳಲು ತಮ್ಮ ಮನಸ್ಸನ್ನು ಉಪಯೋಗಿಸಿರಬಹುದು. ನಾವು ದೇವರ ವಾಕ್ಯವನ್ನು ಕಲಿಯುವುದಕ್ಕಾಗಿ ನಮ್ಮ ಜೀವಮಾನವನ್ನೇ ಕಳೆದಿರಬಹುದು. ನಾವು ಮಾಡಿದ ಅಧ್ಯಯನಗಳಿಂದಲೂ ನಾವು ತೆಗೆದುಕೊಂಡ ನಿರ್ಣಯಗಳಿಂದಲೂ ತುಂಬಿರುವ ನೋಟ್‌ಬುಕ್ಕುಗಳು ಇರಬಹುದು. ನಂಬಿಕೆಯ ಕುರಿತಾಗಿರುವ ಪೂರ್ವಕಲ್ಪಿತ ಯೋಚನೆಗಳೊಂದಿಗೆ ವಾಕ್ಯವನ್ನು ನಾವು ಕಲಿತಿರಬಹುದು. ನಾವು ಈಗಾಗಲೇ ನಂಬಿದ್ದನ್ನು ಸಾಬೀತುಪಡಿಸಲು ನಾವು ತುಂಬಾ ಸಮಯ ಕಲಿಕೆಯನ್ನು ಮುಂದುವರೆಸಿರಬಹುದು.

ಪವಿತ್ರಾತ್ಮನ ವರಗಳು ನಿಂತುಹೋಗಿವೆ ಎಂದೂ ಅವು ಬೇರೆ ಯುಗಗಳಿಗೆ ಮಾತ್ರ ಸೀಮಿತವಾಗಿದ್ದವು ಎಂದೂ ತುಂಬಾ ವಿದ್ಯಾಭ್ಯಾಸವುಳ್ಳಂಥ ಸ್ತ್ರೀ ಪುರುಷರು ನಮಗೆ ಕಲಿಸಿರಬಹುದು. ದೈವಿಕ ಸ್ವಸ್ಥತೆಯು ನಮ್ಮ ಕಾಲಕ್ಕೆ ಇರುವಂಥದ್ದಲ್ಲ ಎಂದೂ ನಮಗೆ ಕಲಿಸಿರಬಹುದು. ಅನ್ಯಭಾಷೆಯಲ್ಲಿ ಮಾತನಾಡುವ, ಅನ್ಯಭಾಷೆಗಳ ಅರ್ಥವಿವರಣೆ ಹೇಳುವ ವರ, ಪ್ರವಾದನೆ, ವಿದ್ಯಾವಾಕ್ಯಗಳು, ಜ್ಞಾನವಾಕ್ಯಗಳು ಮತ್ತು ಅದ್ಭುತಗಳನ್ನು ಮಾಡುವ ವರಗಳು ಇಂದಿನ ಕಾಲದಲ್ಲಿ ಇಲ್ಲ ಎಂದು ಕಲಿಸಿರಬಹುದು.

ಆದರೆ, ನಾವು ದೇವರೊಂದಿಗೆ ನಿಜವಾಗಿ ಒಡನಾಡುವಾಗ ಆತ್ಮನ ಕಾರ್ಯಗಳು ನಮ್ಮ ಜೀವನದಲ್ಲಿ ನಿಜವಾಗಿ ನಡೆಯುತ್ತವೆ, ಅದಕ್ಕಾಗಿ ನಾವು ನಮ್ಮ ಮನಸ್ಸನ್ನು ನೂತಪಡಿಸಿಕೊಳ್ಳಬೇಕು. ನಾವು ನಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ಬದಿಗಿಟ್ಟು ಪ್ರತಿಯೊಂದು ವಾಕ್ಯಭಾಗವನ್ನು ಓದಬೇಕು. ಆಗ ದೇವರು ತನ್ನ ವಾಕ್ಯವನ್ನು ಸರಿಯಾಗಿ ನಮಗೆ ತಿಳಿಯಪಡಿಸುತ್ತಾನೆ.

ಅನೇಕರು ಮೂಲತತ್ತ್ವ ವಿಚಾರವಾದಕ್ಕೂ, ಮನೋವಿಜ್ಞಾನಕ್ಕೂ ಸಂಬಂಧಪಟ್ಟ ಧರ್ಮಗಳಿಂದ ಬಂದಿದ್ದಾರೆ. ಇತರರು ದೇವರ ವಾಕ್ಯವನ್ನು ಗೇಲಿ ಮಾಡುವ ಮನೆಗಳಿಂದಲೂ, ಉನ್ನತ ಶಿಕ್ಷಣವನ್ನು ಪೂಜಿಸುಷ್ವರ ಮಟ್ಟಿಗೆ ಮೇಲಿಟ್ಟಿರುವ ಸ್ಥಳಗಳಿಂದಲೂ ಬಂದಿದ್ದಾರೆ.

ಪೌಲನ ಜೊತೆ ಸೇರಿ ನಾವೆಲ್ಲರೂ ಸಹ ಹೀಗೆ ಹೇಳುವ ಸ್ಥಿತಿಗೆ ಬರಬೇಕು,

ಅವರಲ್ಲಿ ಕೆಲವರು ನಂಬದೇ ಹೋಗಿದ್ದರೇನು? ಅವರು ನಂಬದೆ ಹೋದದರಿಂದ ದೇವರು ವಚನಕ್ಕೆ ತಪ್ಪುವವನಾದನೋ? ಎಂದಿಗೂ ಇಲ್ಲ. ಎಲ್ಲಾ ಮನುಷ್ಯರು ಸುಳ್ಳುಗಾರರಾದರೂ ದೇವರು ಸತ್ಯವಂತನೇ ಸರಿ (ರೋಮಾಪುರ 3:3-4a).

ದೇವರ ವಾಕ್ಯಕ್ಕೆ ವಿರುದ್ಧವಾದ ನಮಗೆ ಕಲಿಸಿರುವ ಎಲ್ಲ ವಿಷಯಗಳನ್ನು ನಾವು ಕೆಡವಿ ಹಾಕಬೇಕು.

- *ಯೋಚನೆಗಳನ್ನು ಸೆರೆಹಿಡಿಯಬೇಕು*

ನಮ್ಮ ಯೋಚನೆಗಳು ಎಲ್ಲಿಂದ ಬರುತ್ತವೆ? ಅದಕ್ಕೆ ಉತ್ತರ ತುಂಬಾ ಸರಳವಾಗಿದೆ, "ಎಲ್ಲ ಕಡೆಯಿಂದಲೂ ಬರುತ್ತವೆ." ನಮ್ಮ ಪಂಚೇಂದ್ರಿಯಗಳಿಂದ, ಒಡನಾಡಿಗಳಿಂದ, ದೂರದರ್ಶನದಿಂದ ಪುಸ್ತಕಗಳಿಂದ, ಸಿನಿಮಾಗಳಿಂದ, ನಮ್ಮ ಗತಕಾಲದ ಅನುಭವಗಳಿಂದ ಬರುವಂಥ ಯೋಚನೆಗಳು ನಮ್ಮನ್ನು ಸತತವಾಗಿ ಕಾಡುತ್ತವೆ.

ಎರಡು ರೀತಿಯ ಯೋಚನೆಗಳಿವೆ. ದೇವರ ವಾಕ್ಯದಿಂದ, ಒಳ್ಳೆಯ ಬೋಧನೆಯಿಂದ ಅಥವಾ ದೇವರಿಂದಲೇ ಬರುವಂಥ ಯೋಚನೆಗಳಿವೆ, ಮತ್ತು ಸೈತಾನನ ರಾಜ್ಯದಿಂದ ಬರುವಂಥ ಯೋಚನೆಗಳಿವೆ.

ಪೌಲನು ನಾವು ಹೀಗೆ ಮಾಡಬೇಕೆಂದು ಬರೆದಿದ್ದಾನೆ,

ನಾವು ವಿತರ್ಕಗಳನ್ನೂ ದೇವಜ್ಞಾನವನ್ನು ವಿರೋಧಿಸುವದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲಗಳನ್ನು ಕೆಡವಿ ಹಾಕಿ ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೇಯರಾಗುವಂತೆ ಸೆರೆಹಿಡಿದು (2 ಕೊರಿಂಥ 10:5).

ಈ ವಾಕ್ಯವನ್ನು ಪ್ರಾಯೋಗಿಕವಾಗಿ ಮಾಡುವುದಕ್ಕಿಂತಲೂ ಅದನ್ನು ಓದುವುದು ತುಂಬಾ ಸುಲಭವಾಗಿರುತ್ತದೆ. ನಾವು ಪ್ರತಿಯೊಂದು ಯೋಚನೆಯನ್ನು ಕ್ರಿಸ್ತನಿಗೆ ಅಧೀನಪಡಿಸಬೇಕೆಂದು ಪೌಲನು ಹೇಳಿದ್ದಾನೆ. ಅದರರ್ಥವೇನಂದರೆ ಒಂದೊಂದು ಬಾರಿಯೂ ನಾವು ಪವಿತ್ರಾತ್ಮನನ್ನು ನಂದಿಸುವಂಥ ಅನುಭವ ನಮ್ಮಲ್ಲಿ ಉಂಟಾಗುವಾಗ, ನಾವು ಆಗತಾನೇ ಸ್ವೀಕರಿಸಿಕೊಂಡ ಸುಳ್ಳು ಮಾತುಗಳನ್ನು, ಅಥವಾ ಯೋಚನೆಯನ್ನು ತಿರಸ್ಕರಿಸಬೇಕು.

ನಾವು ದೇವರೊಂದಿಗೆ, ಆತನ ವಾಕ್ಯದಲ್ಲಿಯೂ ಪ್ರಾರ್ಥನೆಯಲ್ಲಿಯೂ ಹೆಚ್ಚೆಚ್ಚು ಸಮಯ ಕಳೆಯುವಾಗ, ನಮ್ಮ ಯೋಚನೆಗಳು ಆತನಿಂದ ಹುಟ್ಟಿಕೊಳ್ಳುತ್ತವೆ, ಮತ್ತು ನಾವು ನಮ್ಮ ನಂಬಿಕೆಯಲ್ಲಿ ವೃದ್ಧಿಯಾಗುತ್ತೇವೆ. ನಮ್ಮ ಮನಸ್ಸು ಸಾಧಾರಣವಾದ ಮಂಡಲದಿಂದ ಅಸಾಧಾರಣವಾದ ಮಂಡಲದತ್ತ ಸಾಗುತ್ತದೆ.

ಜ್ಞಾನೋಕ್ತಿಗಳಲ್ಲಿ ನಾವು ಹೀಗೆ ಈದುತ್ತೇವೆ

ಅವನು ತನ್ನ ಒಳಗಿನ ಯೋಚನೆಯಂತೆಯೇ ಇದ್ದಾನೆ (ಜ್ಞಾನೋಕ್ತಿ 23:7a).

- *ಕೆಲವು ಉದಾಹರಣೆಗಳು*

ಹೊಸ ರೀತಿಗಳನ್ನು, ಹೊಸ ಮಾಹಿತಿಯನ್ನು, ಹೊಸ ವಿಷಯಗಳನ್ನು ಕಲಿಯಬೇಕೆಂದು ನಮಗೆ ಸವಾಲು ಹಾಕುವಾಗ, "ನನ್ನನ್ನು ಬಲಪಡಿಸುವ ಕ್ರಿಸ್ತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ" ಎಂದು ಹೇಳಬೇಕು.

ನಮ್ಮಗಾಗಲಿ ಅಥವಾ ಸ್ನೇಹಿತನಿಗಾಗಲಿ ಸ್ವಸ್ಥತೆಯ ಬೇಕಾಗಿರುವಾಗ, ನಾವು ಹೀಗೆ ಹೇಳಬೇಕು, "ಯೇಸು, 'ನಾವು ರೋಗಿಗಳನ್ನು ಗುಣಪಡಿಸಬಹುದು' ಎಂದು ಹೇಳಿದ್ದಾನೆ. ಯೇಸು, 'ರೋಗಿಗಳ ಮೇಲೆ ನಿಮ್ಮ ಕೈಗಳಿಡಿರಿ ಅವರು ಸ್ವಸ್ಥರಾಗುತ್ತಾರೆ' ಎಂದು ಹೇಳಿದ್ದಾನೆ..."
ಸೇವೆಯಲ್ಲಿ ನಮಗೆ ಹೆದರಿಕೆಯುಂಟಾದಾಗ, ನಾವು, "ಕರ್ತನ ಆತ್ಮವು ನನ್ನ ಮೇಲೆ ಅದೆ, ಆತನು ನನ್ನನ್ನು ಬಡವರಿಗೆ ಶುಭವಾರ್ತೆಯನ್ನು ಸಾರುವುದಕ್ಕಾಗಿ ಅಭಿಷೇಕಿಸಿರುವನು. ಸೆರೆಯಲ್ಲಿರುವವರನ್ನು ಬಿಡುಗಡೆ ಮಾಡುವುದಕ್ಕೂ, ಮತ್ತು ಕುರುಡರಿಗೆ ಕಣ್ಣು ಬರುವುದಕ್ಕೂ ಹಿಂಸಿಸಲ್ಪಟ್ಟವರನ್ನು ಬಿಡಿಸಿ ಕಳುಹಿಸುವುದಕ್ಕೂ ಕರ್ತನು ನೇಮಿಸಿರುವ ಶುಭವರ್ಷವನ್ನು ಪ್ರಚಾರಪಡಿಸುವುದಕ್ಕೂ ಆತನು ನನ್ನನ್ನು ಕಳುಹಿಸಿದ್ದಾನೆ" ಎಂದು ಹೇಳಬೇಕು.

ಗತಕಾಲದಲ್ಲಿ ಉಂಟಾದ ಸೋಲಿನ ದೃಶ್ಯಗಳು ನಮ್ಮ ಮನಸ್ಸಿನಲ್ಲಿ ಬರುವಾಗ, ನಾವು, "ಹೌದು, ಅಂದು ನಾನು ಸೋತುಹೋಗಿದೆ, ಆದರೆ ನಾನು ಸೋತ ವ್ಯಕ್ತಿಯಲ್ಲ. ಯೇಸುವಿನಲ್ಲಿ ನಾನು ನೂತನ ಸೃಷ್ಟಿಯಾಗಿದ್ದಾನೆ. ಪವಿತ್ರಾತ್ಮನ ಶಕ್ತಿ ನನ್ನಲ್ಲಿದೆ" ಎಂದು ಹೇಳಬೇಕು.

ದೇವರು ನಮ್ಮನ್ನು ಎಂಥ ವ್ಯಕ್ತಿಯಾಗಿರಬೇಕೆಂಬುದಕ್ಕೆ ಸೃಷ್ಟಿಸಿದ್ದಾನೋ ಅಂಥ ವ್ಯಕ್ತಿಗಳಾಗುವುದಕ್ಕೆ ನಮ್ಮ ಮನಸ್ಸನ್ನು ನಾವು ಪ್ರತಿದಿನವು ನೂತನಪಡಿಸಿಕೊಳ್ಳಬೇಕು. ಹಳೆ ಕಾರ್ಯ ರೀತಿಗಳನ್ನು ತೆಗೆದುಹಾಕಿ, ದೇವರ ವಾಕ್ಯದ ಮತ್ತು ಆತನ ಆತ್ಮನ ಶಕ್ತಿಯ ಮೂಲಕ ನಮ್ಮ ಮನಸ್ಸನ್ನು ನೂತನಪಡಿಸಿಕೊಳ್ಳುವ ಮೂಲಕ, ನಮ್ಮ ಮನಸ್ಸುಗಳು ನಂಬಿಕೆಯ ರೀತಿಗಳತ್ತ ಸಾಗಲು ಸಹಾಯ ಮಾಡುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತದೆ.

## ಸಮಾಪ್ತಿಯಾಗಿ

ನಾವು ರೋಮಾಪುರ ಪತ್ರಿಕೆಯಲ್ಲಿ ಓದುವ ಪ್ರಕಾರ, ನಮ್ಮಲ್ಲಿ ಪ್ರತಿಯೊಬ್ಬರಿಗೂ ವಿಶ್ವಾಸದ ಪರಿಮಾಣವನ್ನು ಕೊಡಲಾಗಿದೆ. ನಾವು ಈ ನಂಬಿಕೆಯನ್ನು ಉಪಯೋಗಿಸುವಾಗ, ನಂಬಿಕೆಯು ಬೆಳೆಯುತ್ತದೆ. ನಾವು ನಮ್ಮ ಸುತ್ತಮುತ್ತಲಿರುವ ವ್ಯಕ್ತಿಗಳನ್ನು ನೋಡಿ ಈ ವ್ಯಕ್ತಿ ಅಥವಾ ಆ ವ್ಯಕ್ತಿಗೆ ನಿಜವಾಗಿಯೂ ನಂಬಿಕೆ ಇದೆ ಎಂದು ಭಾವಿಸುತ್ತೇವೆ. ಆದರೆ ಆ ವಿಶ್ವಾಸದ ಪರಿಮಾಣವನ್ನು ಅಸಾಧಾರಣವಾದ ರೀತಿಯಲ್ಲಿ ಅವರಿಗೆ ಕೊಡಲ್ಪಟ್ಟಿಲ್ಲ. ಅವರು ಜೀವನದಲ್ಲಿ ಬಿರುಗಾಳಿಗಳನ್ನೂ ಕಷ್ಟ ಪರಿಶೋಧನೆಗಳನ್ನೂ ಎದುರಿಸುವಾಗ ಆಸ್ತಕಿಯ ಮೂಲಕವೂ ವೃದ್ಧಿಯಾಗುತ್ತಿರುವ ನಂಬಿಕೆಯ ಮೂಲಕವೂ ಆ ವಿಶ್ವಾಸದ ಪರಿಮಾಣ ಬಂತು.

ನಾವು ಒಲಿಂಪಿಕ್ಸ್ ಅನ್ನು ನೋಡುವಾಗ, ಸ್ತ್ರೀಪುರುಷರ ಓಟ ಪಂಧ್ಯವನ್ನು, ಕೋಲು ನೆಗೆತವನ್ನು, ಸ್ಕೇಟ್, ಅಥವಾ ಅವರು ಮಾಡುವ ಇತರ ಭಯಾನಕವಾದ ಕಾರ್ಯಗಳನ್ನು ನೋಡುವಾಗ, ಅವರು ಮಾಡುವ ಸಾಧನೆಗಳನ್ನು ಕಂಡು ನಾವು ಬೆರಗಾಗುತ್ತವೆ. ಆದರೆ ನಾವು ಅವರ ಗತಕಾಲದ ಬಗ್ಗೆ ತಿಳಿದುಕೊಳ್ಳುವುದಾದರೆ, ಅವರು ತಮ್ಮನ್ನು ತಾವು ಶಿಸ್ತುಪಡಿಸಿಕೊಳ್ಳಲು ಅನೇಕ ಗಂಟೆಗಳ, ದಿನಗಳ, ತಿಂಗಳುಗಳ, ವರ್ಷಗಳ ಕಾಲವನ್ನು, ಅಭ್ಯಾಸ ಮಾಡುವುದರಲ್ಲಿ ವೆಚ್ಚ ಮಾಡಿದ್ದಾರೆ. ಅವರು ಮಕ್ಕಳಾಗಿದ್ದಾಗ, ತಮ್ಮ ಸುತ್ತಮುತ್ತಲಿರುವ ಬೇರೆ ನೂರಾರು ಮಕ್ಕಳಂತೆಯೇ ಆಟವಾಡುತ್ತಾ ಬೆಳೆದು ಬಂದರು. ಆದರೆ ಅವರೊಳಗೆ ಶ್ರೇಷ್ಠವಾದ ಸಾಧನೆ ಮಾಡಬೇಕೆಂಬ ಬಯಕೆಯಿತ್ತು, ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಬೇಕೆಂಬ ಬಯಕೆಯಿತ್ತು. ಆ ಬಯಕೆಯು ಅವರನ್ನು ಇತರರು ಮಾಡಿದ್ದಂಥ ಕಾರ್ಯವನ್ನು ಮೀರಿ ಮುಂದೆ ಸಾಗುವಂತೆ ಮಾಡಿತು.

ಯೇಸು, "ನಾನು ಮಾಡುವ ಕಾರ್ಯಗಳನ್ನು ನೀವೂ ಸಹ ಮಾಡುವಿರಿ" ಎಂದು ಹೇಳಿದ ಮಾತುಗಳು ನಮ್ಮ ಜೀವನದಲ್ಲಿ ನಿಜವಾಗ ತೊಡಗುತ್ತವೆ, ಆಗ ನಾವು ಸುವಾರ್ತೆಯ ಪುಸ್ತಕಗಳನ್ನು ಹೊಸದಾದ ರೀತಿಯಲ್ಲಿ ಓದಲು ಪ್ರಾರಂಭಿಸುತ್ತೇವೆ. ಯೇಸು ಮಾಡಿದ ಅದ್ಭುತಕಾರ್ಯವನ್ನು ನಾವು ಓದುವಾಗಲ್ಲೆಲ್ಲಾ, "ನಾನು ಕೂಡ ಅದನ್ನು ಮಾಡಬಲ್ಲೆನು, ನಾನು ರೋಗಿಗಳನ್ನು ಗುಣಪಡಿಸುವೆನು. ನಾನು ಬಿರುಗಾಳಿಯನ್ನು ಶಾಂತಮಾಡುವೆನು. ನಾನು ಸತ್ತವರನ್ನು ಎಬ್ಬಿಸುವೆನು" ಎಂದು ನಾವು ಹೇಳುತ್ತೇವೆ. ಸ್ವತಃ ನಾವೇ ಈ ಕಾರ್ಯಗಳನ್ನು ಮಾಡುತ್ತಿದ್ದೇವೆ ಎಂದು ನಾವು ಊಹಿಸಿ ನೋಡಲು ಪ್ರಾರಂಭಿಸುತ್ತೇವೆ. ಯೇಸುವಿನ ಮಾತುಗಳು ನಮಗೆ ಸವಾಲಾಗಿ ಪರಿಣಮಿಸುತ್ತವೆ ಮತ್ತು ನಮ್ಮ ನಂಬಿಕೆಯನ್ನು ಕಾರ್ಯ ರೂಪಕ್ಕೆ ತರಲು ನಮ್ಮ ಸುತ್ತಮುತ್ತಲಿರುವ ಅವಕಾಶಗಳನ್ನು ನೋಡುವಂತೆ ದೇವರು ನಮ್ಮನ್ನು ಕಣ್ಣುಗಳನ್ನು ತೆರೆಯುತ್ತಾನೆ. ನಾವು ನಮ್ಮ ನಂಬಿಕೆಯನ್ನು ಕಾರ್ಯ ರೂಪಕ್ಕೆ ತರಲು ಪ್ರಾರಂಭಿಸುತ್ತೇವೆ ಮತ್ತು ನಮ್ಮ ನಂಬಿಕೆಯು ಬೆಳೆಯುತ್ತಾ, ಬೆಳೆಯುತ್ತಾ ಹೋಗುತ್ತದೆ.

## ಪರಾಮರ್ಶೆಗಾಗಿರುವ ಪ್ರಶ್ನೆಗಳು

1. ಯೇಸು ಏಕೆ ನಂಬಿಕೆಯನ್ನು ಸಾಸಿವೆ ಕಾಳಿಗೆ ಹೋಲಿಸಿದ್ದಾನೆ, ಮತ್ತು ಅದು ಇಂದು ನಿಮ್ಮನ್ನು ಹೇಗೆ ಪ್ರೋತ್ಸಾಹಿಸುತ್ತದೆ?

2. ನಮ್ಮ ಮನಸ್ಸನ್ನು ನೂತನಪಡಿಸಿಕೊಳ್ಳುವುದಕ್ಕೂ ನಮ್ಮ ನಂಬಿಕೆಗೂ ಇರುವ ಸಂಬಂಧವೇನು?

## ಪಾಠ ಆರು

# ನಮ್ಮ ನಂಬಿಕೆಯನ್ನು ಬಲಪಡಿಸಿಕೊಳ್ಳುವುದು

### ನಂಬಿಕೆಯು ದುರ್ಬಲವಾಗಿದೆಯೆಂದು ಅನ್ನಿಸುವಾಗ

ನಮ್ಮ ನಂಬಿಕೆಯು ದುರ್ಬಲವಾಗಿದೆ ಎಂದು ಅನ್ನಿಸುವುದಾದರೆ, ಅದಕ್ಕೆ ಒಂದು ಕಾರಣವಿರುತ್ತದೆ. ನಾವು ಹೋಗುವಾಗ ಈ ಕೆಳಗೆ ಕೊಡಲ್ಪಟ್ಟಿರುವ ಪರಿಶೀಲನಾ ಪಟ್ಟಿಯನ್ನು ನೋಡಿಕೊಳ್ಳುವಾಗ ದೇವರೇ ನಮಗೆ ಜ್ಞಾನವನ್ನು ಕೊಡು ಎಂದು ಬೇಡಿಕೊಳ್ಳಬೇಕಾದದ್ದು ತುಂಬಾ ಮುಖ್ಯ. ಸೈತಾನನು ಸಹೋದರರ ಮೇಲೆ ದೂರು ಹೇಳು ಅಪಾದಕನಾಗಿದ್ದಾನೆ. ನಾವು ನಮ್ಮ ಮೇಲೆ ದಂಡನಾತೀರ್ಪನ್ನು ಬರಮಾಡಿಕೊಳ್ಳಬಾರದು.

### ದೇವರೊಂದಿಗಿನ ನಮ್ಮ ಸಂಬಂಧ

ದೇವರೊಂದಿಗಿರುವ ನಮ್ಮ ವೈಯಕ್ತಿಕ ಸಂಬಂಧ ಹೇಗಿದೆ? ಒಳ್ಳೆಯ ಕೆಲಸಗಳನ್ನು ಮಾಡುವುದರಲ್ಲಿಯೂ, ಸೇವೆ ಮಾಡುವುದರಲ್ಲಿಯೂ ನಾವು ಬಿಡುವಿಲ್ಲದೆ ಕಾರ್ಯಮಗ್ನರಾಗಿ, ಆತನೊಂದಿಗಿರುವ ವೈಯಕ್ತಿಕವಾದ ಆಪ್ತ ಸಂಬಂಧವನ್ನು ಕಳೆದುಕೊಂಡಿದ್ದೇವಾ?

"ಬಿಡುವಿಲ್ಲದೆ ತುಂಬಾ ಕಾರ್ಯಮಗ್ನರಾಗಿರುವುದು ನಮ್ಮ ಜೀವಾತ್ಮದಲ್ಲಿ ನೀರಸತೆಯನ್ನು ಉಂಟುಮಾಡುತ್ತದೆ" ಎಂಬ ಮಾತಿದೆ.

ನಾವು ನಮ್ಮ ಆದ್ಯತೆಗಳನ್ನು ಬದಲಾಯಿಸಿಕೊಂಡಿದ್ದೇವಾ? ನಾವು ನಮ್ಮ ದೃಷ್ಟಿಯಲ್ಲಿ ದೊಡ್ಡವರಾಗುವುದಕ್ಕಾಗಿ ದೇವರಿಗೋಸ್ಕರ ಏನು ಮಾಡಬಹುದೆಂದು ಯೋಚಿಸಲು ಆರಂಭಿಸಿದ್ದೇವಾ?

ಅಪೊಸ್ತಲನಾದ ಪೌಲನು ನಿಜವಾಗಿಯೂ ಬಿಡುವಿಲ್ಲದ ಮನುಷ್ಯನಾಗಿದ್ದನು, ಆದರೆ ಅವನು ಹೀಗೆ ಬರೆದಿದ್ದಾನೆ,

ಯಾರು ತನ್ನ ಯೋಗ್ಯತಮೀರಿ ತನ್ನನ್ನು ಭಾವಿಸಿಕೊಳ್ಳದೆ ದೇವರು ಒಬ್ಬೊಬ್ಬನಿಗೆ ಎಂಥೆಂಥ ವಿಶ್ವಾಸ ಬಲವನ್ನು ಕೊಟ್ಟನೋ ಅದಕ್ಕೆ ತಕ್ಕ ಹಾಗೆ ನ್ಯಾಯವಾದ ಅಭಿಪ್ರಾಯದಿಂದ ತನ್ನನ್ನು ಭಾವಿಸಿಕೊಳ್ಳಬೇಕು (ರೋಮಾಪುರ 12:3b).

ದೇವರು ಎಂಥವನಾಗಿದ್ದಾನೆ, ಆತನು ನಮಗಾಗಿ ಏನು ಮಾಡಿದ್ದಾನೆ ಎಂಬುದಕ್ಕೆ ತಕ್ಕಂತೆ ನಾವು ನಮ್ಮನ್ನು ಭಾವಿಸಿಕೊಳ್ಳಬೇಕೆ ಹೊರತು, ನಾವು ಎಂಥವರು ಅಥವಾ ಆತನಿಗೆ ನಾವು ಏನು ಮಾಡಿದ್ದೇವೆ ಎಂಬುದಕ್ಕೆ ತಕ್ಕಂತೆ ನಮ್ಮನ್ನು ಯೋಗ್ಯರಾಗಿ ಭಾವಿಸಿಕೊಳ್ಳಬಾರದು.

**ಕುಟುಂಬದೊಂದಿಗಿನ ಸಂಬಂಧ**

ನಮ್ಮ ಸಂಗಾತಿಯೊಂದಿಗಿನ ಮತ್ತು ಕುಟುಂಬದೊಂದಿಗಿನ ನಮ್ಮ ವೈಯಕ್ತಿಕ ಸಂಬಂಧವನ್ನು ನಾವು ಪರಿಶೀಲಿಸಿಕೊಳ್ಳಬೇಕು. ಮನಸ್ತಾಪಗಳಿಗೆ ನಾವು ಎಡೆಮಾಡಿಕೊಟ್ಟಿದ್ದೇವಾ?

ಎಲ್ಲಾ ದ್ವೇಷ ಕೋಪ ಕ್ರೋಧ ಕಲಹ ದೂಷಣೆ ಇವುಗಳನ್ನೂ ಸಕಲ ವಿಧವಾದ ದುಷ್ಟತನವನ್ನೂ ನಿಮ್ಮಿಂದ ದೂರ ಮಾಡಿರಿ. ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ ಕರುಣೆಯುಳ್ಳವರಾಗಿಯೂ ಕ್ಷಮಿಸುವವರಾಗಿಯೂ ಇರ್ರಿ. ದೇವರು ನಿಮಗೆ ಕ್ರಿಸ್ತನಲ್ಲಿ ಕ್ಷಮಿಸಿದನಲ್ಲಾ (ಎಫೆಸ 4:31,32).

**ಸ್ನೇಹಿತರೊಂದಿಗಿನ ಸಂಬಂಧಗಳು**

ನಂಬಿಕೆಯಲ್ಲಿ ಬಲವಾಗಿರುವ ಜನರು ನಮ್ಮ ಸುತ್ತಮುತ್ತ ಇದ್ದಾರೆಯೇ? ತಾವು ಮಾಡುವಂಥ ಎಲ್ಲ ಕೆಲಸಕಾರ್ಯಗಳಲ್ಲಿ ದೇವರಿಗೆ ಮೊದಲ ಸ್ಥಾನವನ್ನು ಕೊಡುವ ಜನರಿದ್ದಾರೆಯೇ? ಅಥವಾ ನಮ್ಮಲ್ಲಿ ಸಂದೇಹವನ್ನೂ ಅಪನಂಬಿಕೆಯನ್ನೂ ಹುಟ್ಟಿಸುವಂಥವರಿಗೆ ನಾವು ಬೆರೆತಿದ್ದೇವೆಯಾ?

ನಾವು ಎಂಥವರೊಂದಿಗೆ ಸಹವಾಸ ಮಾಡುತ್ತಿದ್ದೇವೆ ಎಂಬುದರ ಕುರಿತು ದಾವೀದನು ಹೀಗೆ ಬರೆದಿದ್ದಾನೆ.

ಯಾವನು ದುಷ್ಟರ ಆಲೋಚನೆಯಂತೆ ನಡೆಯದೆ, ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ, ಧರ್ಮನಿಂದಕರೊಡನೆ ಕೂತುಕೊಳ್ಳದೆ, ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು.

ಅವನು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು. ಅಂಥ ಮರವು ತಕ್ಕ ಕಾಲದಲ್ಲಿ ಫಲಕೊಡುತ್ತದಲ್ಲಾ ಅದರ ಎಲೆ ಬಾಡುವದೇ ಇಲ್ಲ. ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವದು (ಕೀರ್ತನೆಗಳು 1:1-3).

## ಪಾಪಮಯವಾದ ಜೀವನ ಶೈಲಿ

ಪಾಪಮಯವಾದ ಜೀವನ ಶೈಲಿಗಳನ್ನು ಗಮನಿಸದಿರುವ ಕಾಲದಲ್ಲಿ ನಾವು ಜೀವಿಸುತ್ತಿದ್ದೇವೆ. ತಾವು ಯೇಸುವಿನ ಹಿಂಬಾಲಕರಾಗಿದ್ದೇವೆ ಎಂದು ಜನರು ಭಾವಿಸುತ್ತಾರೆ, ಆದರೆ ಅವರು ದೇವರ ವಾಕ್ಯ ಕೊಡುವ ಎಚ್ಚರಿಕೆಯನ್ನು ನಿರ್ಲಕ್ಷಿಸುವವರಾಗಿದ್ದಾರೆ. ನಾವು ಯಾರೊಂದಿಗೆ ಸಹವಾಸ ಮಾಡುತ್ತಿದ್ದೇವೋ ಆ ಜನರು ಪಾಪದ ಕೆಲಸಗಳನ್ನು ಮಾಡುತ್ತಿರುವುದಾದರೆ ನಾವು ಸುಲಭವಾಗಿ ಪಾಪದಲ್ಲಿ ಬೀಳುತ್ತೇವೆ. ದೇವರು ಗಮನಿಸುತ್ತಿಲ್ಲ  ಎಂದು ನಾವು ನಮ್ಮ ಮನಸ್ಸಿನಲ್ಲಿ ಯೋಚಿಸುತ್ತೇವೆ ಮತ್ತು ತುಂಬಾ ನೆಪಗಳನ್ನು ಹೇಳುತ್ತೇವೆ, ಆದರೆ ನಮ್ಮ ಆತ್ಮಗಳು ಅದನ್ನು ಒಪ್ಪಿಕೊಳ್ಳುವುದಿಲ್ಲ. ಜ್ಞಾನೋಕ್ತಿಗಳಲ್ಲಿ ನಾವು ಹೀಗೆ ಓದುತ್ತೇವೆ,

ನರನ ನಡತೆಯು ಸ್ವಂತ ದೃಷ್ಟಿಗೆ ನೆಟ್ಟಗೆ; ಯೆಹೋವನು ಹೃದಯಗಳನ್ನೇ ಪರೀಕ್ಷಿಸುವನು (ಜ್ಞಾನೋಕ್ತಿ 21:2).

ಪಾಪವು ನಮ್ಮ ಜೀವನದಲ್ಲಿ ಇರುವುದಾದರೆ, ದೇವರೊಂದಿಗೆ ಎಲ್ಲವು ಸರಿಯಾಗಿದೆ ಎಂದು ನಾವು ನಮ್ಮ ಮನಸ್ಸಿಗೆ ಮನವರಿಕೆ ಮಾಡಿಕೊಟ್ಟರೂ, ನಮ್ಮ ಆತ್ಮವು ಅದನ್ನು ಒಪ್ಪದ ಕಾರಣ ನಾವು ನಂಬಿಕೆಯುಳ್ಳವರಾಗಿರಲು ಆಗುವುದಿಲ್ಲ.

ಪಾಪದ  ವಿಷಯದಲ್ಲಿ ನಾವು ಮಾತನಾಡುತ್ತಿರುವಾಗ, ನಾವು ಈಗಾಗಲೇ ಕ್ಷಮಿಸಲ್ಪಟ್ಟಿರುವ ಹಿಂದಿನ ಕಾಲದ ಪಾಪಗಳ ಕುರಿತು ಮಾತನಾಡುತ್ತಿಲ್ಲ. ಆದರೆ ಈಗ ನಮ್ಮಲ್ಲಿರುವ ಪಾಪಗಳ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಸೈತಾನನು ನಮ್ಮನ್ನು ಗತ ಕಾಲದ ಪಾಪದ ಕಡೆಗೆ ನೋಡುವಂತೆ ಮಾಡಲು ಪ್ರಯತ್ನಿಸುತ್ತಾನೆ. ಅವನು ಸಹೋದರರ ಮೇಲೆ ದೂರು ಹೇಳುವ ಅಪಾದಕನಾಗಿದ್ದಾನೆ. ದೇವರು ನಮ್ಮನ್ನು ಕ್ಷಮಿಸಿದ್ದಾನೆ ಎಂದು ಹೇಳಿದರೆ, ನಾವು ನಿಜವಾಗಿಯೂ  ಕ್ಷಮಿಸಲ್ಪಟ್ಟಿದ್ದೇವೆ ಎಂದರ್ಥ. ಹಿಂದೆ ನಡೆದಿರುವಂಥ ವಿಷಯಗಳ ಕುರಿತು ಮತ್ತೇ ಮತ್ತೇ ಕ್ಷಮೆ ಕೇಳಬೇಕಾಗಿಲ್ಲ.

ನೀನು ನನಗೋಸ್ಕರ ಹಣಕೊಟ್ಟು ಬಜೆಯನ್ನು ತರಲಿಲ್ಲ, ಯಜ್ಞಪಶುಗಳ ವಪೆಯಿಂದ ನನ್ನನ್ನು ತೃಪ್ತಿಪಡಿಸಲಿಲ್ಲ; ಆದರೆ ನಿನ್ನ ಪಾಪಗಳಿಂದ ನನ್ನನ್ನು ನೀನು ತೊಂದರೆಪಡಿಸಿದ್ದೀ, ನಿನ್ನ ದೋಷಗಳಿಂದ ನನ್ನನ್ನು ಬೇಸರಗೊಳಿಸಿದ್ದೀ. ನಾನಾಗಿ ನಾನೇ ನನಗೋಸ್ಕರ ನಿನ್ನ ದ್ರೋಹಗಳನ್ನು ಅಳಿಸಿ ಬಿಡುತ್ತೇನೆ, ನಿನ್ನ ಪಾಪಗಳನ್ನು ನನ್ನ ನೆನಪಿನಲ್ಲಿಡೆನು (ಯೆಶಾಯ 43:24,25).

ನಾವು ನಮ್ಮ ಹಿಂದಿನ ಕಾಲದ ತಪ್ಪು ಪಾಪಗಳನ್ನು ಮತ್ತೇ ಮತ್ತೇ ಆತನ ಬಳಿಗೆ ತೆಗೆದುಕೊಂಡು ಹೋಗಬೇಕೆಂಬುದು ದೇವರ ಉದ್ದೇಶವಾಗಿಲ್ಲ. ನಿಮ್ಮ ಜೀವನದಲ್ಲಿ ಸಮಸ್ಯೆಯಿದೆ ಎಂದು ನಿಮಗೆ ಗೊತ್ತಿದ್ದರೆ, ನನ್ನ ಜೀವನದಲ್ಲಿ ಪಾಪವಿದೆಯೇ ಎಂದು ನಿಮ್ಮ ಸಂಗಾತಿಯ ಬಳಿಯಲ್ಲಿ ಕೇಳಬೇಡಿರಿ. ಸ್ನೇಹಿತನ ಬಳಿಯಲ್ಲಿ ಕೇಳಬೇಡಿರಿ. ಒಂದು ವೇಳೆ ನೀವು ಸಮರ್ಥಿಸಿಕೊಳ್ಳುತ್ತಿರುವ ಆದರೆ ದೇವರು ನೀವು ತೆಗೆದುಹಾಕಬೇಕೆಂದು ಬಯಸುತ್ತಿರುವ ಪಾಪವು ನಿಮ್ಮ ಜೀವನದಲ್ಲಿ ಇರುವುದಾದರೆ ನಿಮಗೆ ಅದನ್ನು ಸ್ಪಷ್ಟವಾಗಿ ತಿಳಿಸುವಂತೆ ದೇವರನ್ನು ಕೇಳಿಕೊಳ್ಳಿರಿ. ಅನಂತರ ಆತನು ಹೇಳುವಂಥದ್ದನ್ನು ಕೇಳಿಸಿಕೊಳ್ಳಲು ಎದುರುನೋಡಿರಿ.

ಪಾಪ ಇರುವುದಾದರೆ ನಾವೇನು ಮಾಡಬೇಕು?

ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು (1 ಯೋಹಾನ 1:9).

**ಕ್ಷಮಿಸದಿರುವುದು**

ಯೇಸು ಹೀಗೆ ಹೇಳಿದನು,

"ಆದಕಾರಣ ನೀವು ಪ್ರಾರ್ಥನೆ ಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ. ಅದು ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ."

ಅವರು ಹೇಳಿದ ಮುಂದಿನ ವಿಷಯವೆಂದರೆ,

"ಇದಲ್ಲದೆ ನೀವು ನಿಂತುಕೊಂಡು ಪ್ರಾರ್ಥನೆಮಾಡುವಾಗೆಲ್ಲಾ ಯಾರ ಮೇಲೆ ಏನಾದರೂ ವಿರೋಧವಿದ್ದರೆ ಅದನ್ನು ಅವನಿಗೆ ಕ್ಷಮಿಸಿರಿ ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ಸಹ ನಿಮ್ಮ ತಪ್ಪುಗಳನ್ನು ನಿಮಗೆ ಕ್ಷಮಿಸಿ ಬಿಡುವನು ಅಂದನು" (ಮಾರ್ಕ 11:24-26).

ಕ್ಷಮಿಸುವುದು ಎಂದರೆ ಏನೂ ಆಗಿಲ್ಲ ಎಂದು ನಟಿಸುವುದಲ್ಲ. ಕ್ಷಮಿಸುವುದು ಎಂದರೆ, ಆ ಘಟನೆ ನಡೆಯಿತು ಎಂದು ನಾವು ಒಪ್ಪಿಕೊಂಡು ಆ ವ್ಯಕ್ತಿಯನ್ನೂ ಅದಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯವನ್ನೂ ಕ್ಷಮಿಸಲು ಮನಸ್ಸಾರೆ ನಿರ್ಧಾರ ಮಾಡಬೇಕು.

ಪೇತ್ರನು ಯೇಸುವಿನ ಬಳಿಯಲ್ಲಿ ಕ್ಷಮಾಪಣೆಯ ಕುರಿತು ಕೇಳಿದ್ದು ನಿಮಗೆ ನೆನಪಿದೆಯೇ?

ಆಗ ಪೇತ್ರನು ಆತನ ಬಳಿಗೆ ಬಂದು – "ಸ್ವಾಮಿ ನನ್ನ ಸಹೋದರನು ನನಗೆ ತಪ್ಪು ಮಾಡುತ್ತಾ ಬಂದರೆ ನಾನು ಎಷ್ಟು ಸಾರಿ ಅವನಿಗೆ ಕ್ಷಮಿಸಬೇಕು? ಏಳು ಸಾರಿಯೋ" ಎಂದು ಕೇಳಲು,

ಯೇಸು ಅವನಿಗೆ,

"ಏಳು ಸಾರಿ ಎಂದಲ್ಲ ಏಳೆಪ್ಪತ್ತು ಸಾರಿ" ಎಂದು ನಿನಗೆ ಹೇಳುತ್ತೇನೆ (ಮತ್ತಾಯ 18:21-22).

ನಾವು ನಡೆಯುವ ಪ್ರತಿಯೊಂದು ಘಟನೆಯನ್ನು ಬರೆದಿಟ್ಟುಕೊಂಡು ಎಪ್ಪತ್ತು ಸಾರಿ ಎಂದೆಣಿಸಿ ಕ್ಷಮಿಸಬೇಕು ಎಂಬುದರ ಅದರರ್ಥವಲ್ಲ. ನಾವು ಎಪ್ಪತ್ತು ಸಾರಿ ಕ್ಷಮಿಸಿದರೆ ಅದರರ್ಥ ನಾವು ಕ್ಷಮಿಸುವ ಮನೋಭಾವವನ್ನು ಬೆಳೆಸಿಕೊಳ್ಳಬಹುದು ಎಂದು ಆತನಿಗೆ ತಿಳಿದಿತ್ತು.

ನಾವು ಬೇಗನೇ ಕ್ಷಮಿಸುವುದನ್ನು ಕಲಿತುಕೊಳ್ಳಬೇಕು. ವಿಶ್ವಾಸಿಗಳಾಗಿರುವ ನಮ್ಮನ್ನು ಆಗ್ಗಾಗ್ಗೆ ತಿರಸ್ಕರಿಸುತ್ತಾರೆ, ನಮಗೆ ದ್ರೋಹ ಮಾಡುತ್ತಾರೆ, ವೇದನೆಪಡಿಸುತ್ತಾರೆ. ನಮಗೂ ದೇವರಿಗೂ ನಡುವೆಯಿರುವ ನಮ್ಮ ಸಂಬಂಧವು ಮುಕ್ತವಾಗಿರಬೇಕಾದರೆ, ನಾವು ಬೇಗನೇ ಕ್ಷಮಿಸುವವರಾಗಿರಬೇಕು.

## ಗಮನಕೊಡಬೇಕಾದ ಪ್ರಶ್ನೆಗಳು

ನಾವು ಒಂದು ವಿಷಯಕ್ಕಾಗಿ ದೇವರನ್ನು ನಂಬುತ್ತಿರುವಾಗ, ನಮ್ಮ ನಂಬಿಕೆಯು ದುರ್ಬಲವಾಗುತ್ತಿದೆ ಎಂದು ನಮಗೆ ತಿಳಿದರೆ, ನಮ್ಮ ನಂಬಿಕೆಯು ದೇವರ ವಾಕ್ಯದ ಮೇಲೆ ಆಧಾರವಾಗಿದೆಯೋ ಇಲ್ಲವೋ ಎಂಬುದನ್ನು ನಾವು ದೃಢಪಡಿಸಿಕೊಳ್ಳಬೇಕು. ನಮ್ಮನ್ನು ನಾವು ಕೇಳಿಕೊಳ್ಳಬೇಕಾದ ನಾಲ್ಕು ಪ್ರಶ್ನೆಗಳಿವೆ.

- **ನನ್ನ ಪರಿಸ್ಥಿತಿಯ ಕುರಿತು ದೇವರ ವಾಕ್ಯವು ಏನು ಹೇಳುತ್ತದೆ?**

ಅದು ಹುದುವಾಗಿರುವಂಥ ಒಂದು ವಾಕ್ಯವಾಗಿರಬಾರದು. ಅದು ಒಂದು ನಿರ್ದಿಷ್ಟವಾದ ವಾಕ್ಯವಾಗಿರಬೇಕು. ಯಾವ ವಾಕ್ಯದ ಮೇಲೆ ನನ್ನ ನಂಬಿಕೆಯು ಆಧಾರವಾಗಿದೆ? "ಎಲ್ಲೋ ಒಂದು ಕಡೆ ಈ ರೀತಿಯಾಗಿ ವಾಕ್ಯ ಹೇಳುತ್ತದಲ್ಲಾ..." ಎಂಬ ರೀತಿಯಲ್ಲಿ ಆಗಿರಬಾರದು. "ದೇವರ ವಾಕ್ಯವು ಹೀಗೆ ಹೇಳುತ್ತದೆ ..." ಎಂಬುದಾಗಿರಬೇಕು.

- **ಆತನ ಮಾತು ಸತ್ಯವಾಗಿದೆ ಎಂದು ನಾನು ನಿಸ್ಸಂದೇಹವಾಗಿ ನಂಬುತ್ತೇನೆಯೇ?**

ಸ್ವಲ್ಪವೂ ಸಂದೇಹಪಡದೆ ನಂಬಿಕೆಯಿಟ್ಟು ಕೇಳಿಕೊಳ್ಳಬೇಕು. ಸಂದೇಹಪಡುವವನು ಗಾಳಿಯಿಂದ ಬಡಿಯಲ್ಪಟ್ಟ ಸಮುದ್ರದ ತೆರೆಯಂತೆ ಅಲೆಯುತ್ತಿರುವನು. ಆ ಮನುಷ್ಯನು ತಾನು ಕರ್ತನಿಂದ ಏನಾದರೂ ಹೊಂದುವನೆಂದು ಭಾವಿಸದೆ ಇರಲಿ. ಅವನು ಎರಡು ಮನಸ್ಸುಳ್ಳವನೂ ತನ್ನ ನಡತೆಯಲ್ಲೆಲ್ಲಾ ಚಂಚಲನೂ ಆಗಿದ್ದಾನೆ (ಯಾಕೋಬ 1:6-8).

* **ನಾನು ಕಾಣುತ್ತಿರುವಂಥ, ಅನುಭವಿಸುತ್ತಿರುವಂಥ, ಅಥವಾ ಬೇರೆಯವರು ಹೇಳುವಂಥ ವಿಷಯಗಳ ಹೊರತಾಗಿಯೂ ಆತನ ಮಾತು ಸತ್ಯವೆಂದು ನನಗೆ ತಿಳಿದಿದೆಯೇ?**

ಎಲ್ಲಾ ಮನುಷ್ಯರು ಸುಳ್ಳುಗಾರರಾದರೂ ದೇವರು ಸತ್ಯವಂತನೇ ಸರಿ (ರೋಮಾಪುರ 3:4).

* **ದೇವರು ತನ್ನ ವಾಕ್ಯವನ್ನು ನನಗಾಗಿ ನೆರವೇರಿಸುತ್ತಾನೆಂದು ನಾನು ನಂಬುತ್ತೇನೆಯೇ?**

ಯೇಸು ನಮಗೆ ಹೀಗೆಂದು ವಾಗ್ದಾನ ಮಾಡಿದ್ದಾನೆ,

"ನೀವು ನಂಬಿಕೊಂಡು ಪ್ರಾರ್ಥನೆಯಲ್ಲಿ ಏನೇನು ಬೇಡಿಕೊಳ್ಳುವಿರೋ ಅದನ್ನೆಲ್ಲಾ ಹೊಂದುವಿರಿ" (ಮತ್ತಾಯ 21:22).

ಇದರಲ್ಲಿ ನಾವು ಪ್ರತಿಯೊಬ್ಬರು ಸೇರಿದ್ದೇವೆ.

## ನಂಬಿಕೆಯಲ್ಲಿ ಬಲಹೊಂದುವುದು

ಯೋವೇಲನ ಪುಸ್ತಕದಲ್ಲಿ ನಾವು ಹೀಗೆ ಓದುತ್ತೇವೆ,

ದುರ್ಬಲನು ಶೂರನೆಂದುಕೊಳ್ಳಲಿ (ಯೋವೇಲ 3:10b).

ಅಪೊಸ್ತಲನಾದ ಪೌಲನು ಹೀಗೆ ಬರೆದಿದ್ದಾನೆ,

ಆದದರಿಂದ ಕ್ರಿಸ್ತನ ನಿಮಿತ್ತ ನನಗೆ ನಿರ್ಬಲಾವಸ್ಥೆಯೂ ತಿರಸ್ಕಾರವೂ ಕೊರತೆಯೂ ಹಿಂಸೆಯೂ ಇಕ್ಕಟ್ಟೂ ಸಂಭವಿಸಿದಾಗ ಸಂತುಷ್ಟನಾಗಿದ್ದೇನೆ. ನಾನು ಯಾವಾಗ ನಿರ್ಬಲನಾಗಿದ್ದೇನೋ ಆವಾಗಲೇ ಬಲವುಳ್ಳವನಾಗಿದ್ದೇನೆ (2 ಕೊರಿಂಥ 12:10).

ನಾವು ಯೇಸುವಿನ ಮೂಲಕ ದೌರ್ಬಲ್ಯದ ಪ್ರತಿಯೊಂದು ವಿಷಯವನ್ನು ಶಕ್ತಿಯುತ್ತ ವಿಷಯವಾಗಿ ಮಾರ್ಪಡಿಸಬಹುದು.

## ವಾಕ್ಯದೊಂದಿಗೆ ಸಮಯ ಕಳೆಯಿರಿ

ಆತನ ವಾಕ್ಯದೊಂದಿಗೆ, ವಿಶೇಷವಾಗಿ ಆತನ ವಾಗ್ದಾನಗಳಲ್ಲಿ ಸಮಯವನ್ನು ಕಳೆಯುವುದರ ಮೂಲಕ ನಾವು ನಮ್ಮ ನಂಬಿಕೆಯನ್ನು

ವೃದ್ಧಿಪಡಿಸಿಕೊಳ್ಳಬಹುದು. ಆ ವಾಗ್ದಾನಗಳನ್ನು ಓದಿ ಅವುಗಳನ್ನು ನಮ್ಮವುಗಳಾಗಿ ಮಾಡಿಕೊಳ್ಳಬೇಕು.

ದೇವರ ವಾಕ್ಯವನ್ನು ಕೇಳುವುದರ ಮೂಲಕ ನಂಬಿಕೆಯು ಬರುತ್ತದೆ, ಒಂದುವೇಳೆ ನಮ್ಮ ನಂಬಿಕೆಯು ದುರ್ಬಲವಾಗಿದ್ದರೆ, ನಾವು ವಾಕ್ಯಗಳನ್ನು ಕೇಳುತ್ತಾ ಕೇಳುತ್ತಾ ಸಮಯವನ್ನು ಕಳೆಯಬೇಕು.

ಫಿಲಿಪ್ಪಿಯವರಿಗೆ ಬರೆದ ಪತ್ರಿಕೆಯಲ್ಲಿ ನಾವು ಹೀಗೆ ಓದುತ್ತೇವೆ,

ಕಡೇ ಮಾತೇನಂದರೆ, ಸಹೋದರರೇ,

ಯಾವಾವದು ಸತ್ಯವೂ

ಮಾನ್ಯವೂ

ನ್ಯಾಯವೂ

ಶುದ್ಧವೂ

ಪ್ರೀತಿಕರವೂ

ಮನೋಹರವೂ ಆಗಿದೆಯೋ,

ಯಾವದು ಸದ್ಗುಣವಾಗಿದೆಯೋ, ಯಾವದು ಕೀರ್ತಿಗೆ ಯೋಗ್ಯವೋ, ಅವೆಲ್ಲವುಗಳನ್ನೂ ಲಕ್ಷ್ಯಕ್ಕೆ ತಂದುಕೊಳ್ಳಿರಿ.

ನೀವು ಯಾವದನ್ನು ನನ್ನಿಂದ ಕಲಿತು ಹೊಂದಿದಿರೋ, ಮತ್ತು ಯಾವದನ್ನು ನನ್ನಲ್ಲಿ ಕೇಳಿ ಕಂಡಿರೋ ಅದನ್ನೇ ಮಾಡುತ್ತಾ ಬನ್ನಿರಿ, ಹೀಗೆ ಮಾಡಿದರೆ ಶಾಂತಿದಾಯಕನಾದ ದೇವರು ನಿಮ್ಮೊಂದಿಗಿರುವನು (ಫಿಲಿಪ್ಪಿ 4:8-9).

## ಯುದ್ಧವೀರನಾಗು

ಅಸಾಧ್ಯವೆಂಬ ಪರಿಸ್ಥಿತಿಯಲ್ಲಿ ನಾವು ಸಿಲುಕಿದಾಗ, "ಪಲಾಯನ ಮಾಡು" ಅಥವಾ "ಹೋರಾಡು" ಎಂದು ಲೋಕವು ನಿಮಗೆ ಹೇಳುತ್ತದೆ. ಎದುರಿಸಿ ನಿಂತು ಹೋರಾಡುವ ಕಾರ್ಯವು ನಮ್ಮ ನಂಬಿಕೆಯನ್ನು ಹೆಚ್ಚಿಸುತ್ತದೆ. ವಿಶ್ವಾಸಿಗಳು ತಾವು ಒಟ್ಟಾಗಿ ಸೇರಿ ಹೋರಾಡಲು ಪ್ರಾರಂಭಿಸುವ ಸಮಯ ಇದಾಗಿದೆ.

ಪೌಲನು ಎಫೆಸ ಪತ್ರಿಕೆಯ 6:13,14 ರಲ್ಲಿ ಹೀಗೆ ಬರೆದಿದ್ದಾನೆ,

ಆದದರಿಂದ ಕಠಿಣ ಯುದ್ಧವು ನಡೆಯುವ ದಿವಸದಲ್ಲಿ ಆ ವೈರಿಗಳನ್ನು ಎದುರಿಸುವದಕ್ಕೂ ಮಾಡಬೇಕಾದದ್ದೆಲ್ಲವನ್ನು ಮಾಡಿ ಜಯಶಾಲಿಗಳಾಗಿ ನಿಲ್ಲುವದಕ್ಕೂ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ತೆಗೆದುಕೊಳ್ಳಿರಿ. ಸತ್ಯವೆಂಬ

ನಡುಕಟ್ಟನ್ನು ಕಟ್ಟಿಕೊಂಡು ನೀತಿಯೆಂಬ ವಜ್ರಕವಚವನ್ನು ಧರಿಸಿಕೊಂಡು...

ನಮಗೆ ಯಾವುದೇ ಯುದ್ಧವು ಇಲ್ಲದಿದ್ದರೆ ನಮಗೆ ಸರ್ವಾಯುಧಗಳ ಅಗತ್ಯವಿರುತ್ತಿರಲಿಲ್ಲ.

ಮೊದಲ ತಿಮೊಥೆಯಲ್ಲಿ ನಾವು ಹೀಗೆ ಓದುತ್ತೇವೆ,

ಕ್ರಿಸ್ತನಂಬಿಕೆಯಳ್ಳವರು ಮಾಡತಕ್ಕ ಶ್ರೇಷ್ಠ ಹೋರಾಟವನ್ನು ಮಾಡು, ನಿತ್ಯಜೀವವನ್ನು ಹಿಡಿದುಕೋ; ಅದಕ್ಕಾಗಿ ದೇವರು ನಿನ್ನನ್ನು ಕರೆದನು, ಮತ್ತು ನೀನು ಅನೇಕಸಾಕ್ಷಿಕಳ ಮುಂದೆ ಒಳ್ಳೇ ಪ್ರತಿಜ್ಞೆಯನ್ನು ಮಾಡಿದಿಯಲ್ಲಾ (1 ತಿಮೊಥೆ 6:12).

ಅಪೊಸ್ತಲನಾದ ಪೌಲನು "ಒಳ್ಳೆಯ ಹೋರಾಟ" ಮಾಡಿರಿ ಎಂದು ಹೇಳಿದ್ದಾನೆ. ನಾವು ಜಯಿಸಿದಎ ಮಾತ್ರ ಅದು ಒಳ್ಳೆಯ ಹೋರಾಟವಾಗಿರುತ್ತದೆ, ನಂಬಿಕೆಯಿಂದ ಮಾತ್ರವೇ ಈ ಹೋರಾಟವನ್ನು ನಾವು ಜಯಿಸಬಹುದು. ನಾವು ಮನುಷ್ಯರೊಂದಿಗಲ್ಲ ಆದರೆ ಅಂಧಕಾರ ಶಕ್ತಿಗಳೊಂದಿಗೆ ಯುದ್ಧ ಮಾಡುವವರಾಗಿದ್ದೇವೆ.

ಪೌಲನು ನಮಗೆ ಹೀಗೆಂದು ನೆನಪಿಸುತ್ತಾನೆ,

ನಾವು ಹೋರಾಡುವದು ಮನುಷ್ಯಮಾತ್ರದವರ ಸಂಗಡವಲ್ಲ. ರಾಜತ್ವಗಳ ಮೇಲೆಯೂ ಅಧಿಕಾರಿಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶ ಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ (ಎಫೆಸ 6:12).

ಹೀಗಿರಲಾಗಿ ದೇವರಿಗೆ ಒಳಗಾಗಿರಿ ಸೈತಾನನನ್ನು ಎದುರಿಸಿರಿ ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು (ಯಾಕೋಬ 4:7).

ನಾವು ನಮ್ಮ ಆತ್ಮಿಕವಾದ ನಂಬಿಕೆಯ ಆಯುಧಗಳನ್ನು ಉಪಯೋಗಿಸುವುದರ ಮೂಲಕ ಮಾತ್ರವೇ ಜಯಹೊಂದಲು ಸಾಧ್ಯ. ನಂಬಿಕೆಯು ಶತ್ರುಗಳ ಪ್ರತಿಯೊಂದು ಕೋಟೆಕೊತ್ತಲನ್ನು ಜಯಿಸುವಂಥದ್ದಾಗಿದೆ,

ನಾವು ಉಪಯೋಗಿಸುವ ಆಯುಧಗಳು ಲೋಕಸಂಬಂಧವಾದ ಆಯುಧಗಳಲ್ಲ. ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿಹಾಕುವಂಥವುಗಳಾಗಿವೆ (2 ಕೊರಿಂಥ 10:4).

## ಶತ್ರುವನ್ನು ತಿಳಿದುಕೊಳ್ಳಿರಿ

ನಮ್ಮ ನಂಬಿಕೆಗೆ ನಿಜವಾದ ಶತ್ರು ಯಾರು? ನಾವುಗಳೇ - ನಮ್ಮನ್ನು ಹೆದರಿಸಲು ನಾವು ಅವಕಾಶ ಮಾಡಿಕೊಟ್ಟಾಗ - ನಮ್ಮ ಆತ್ಮಗಳಿಗೆ ವಿರುದ್ಧವಾಗಿ ಹೋರಾಡಲು ನಮ್ಮ ಮನಸ್ಸಿಗೆ ನಾವು ಅನುವು ಮಾಡಿಕೊಟ್ಟಾಗ - ನಾವು ನಮ್ಮ ಯೋಚನೆಗಳನ್ನು ದೇವರ ವಾಕ್ಯದ ತಕ್ಕಂತೆ ಇಟ್ಟುಕೊಳ್ಳುವ ಬದಲು ಸ್ವಾಭಾವಿಕವಾದ ಯೋಚನೆಗಳಾಗಿರಲು ಅನುಮತಿಸಿದಾಗ ನಾವೇ ನಮ್ಮ ನಂಬಿಕೆಗೆ ಶತ್ರುಗಳಾಗುತ್ತೇವೆ.

ಪೇತ್ರನು ನೀರಿನ ಮೇಲೆ ನಡೆಯುತ್ತಿರುವಾಗ ಮಾಡಿದಂತೆಯೇ, ನಾವು ನಮ್ಮ ಪರಿಸ್ಥಿತಿಗಳನ್ನು ನಮ್ಮ ಸ್ವಾಭಾವಿಕವಾದ ಕಣ್ಣುಗಳಿಂದ ನೋಡುತ್ತಾ, ಆತ್ಮ ಮಂಡಲದಿಂದ ನಮ್ಮ ದೃಷ್ಟಿಯನ್ನು ಬೇರೆಡೆಗೆ ತಿರುಗಿಸಿದಗ, ನಾವು ನಮ್ಮ ನಂಬಿಕೆಗೆ ಶತ್ರುಗಳಾಗುತ್ತೇವೆ.

ನಾವು 2 ಕೊರಿಂಥ 10:3-5 ನ್ನು ಅಕ್ಷರಶಃವಾಗಿ ತೆಗೆದುಕೊಂಡು ಅನ್ವಯಿಸಿಕೊಂಡ ಸಮಯವಾಗಿದೆ.

ಅಪೊಸ್ತಲನಾದ ಪೌಲನು ಅಲ್ಲಿ ಹೀಗೆ ಬರೆದಿದ್ದಾನೆ,

ನಾವು ಲೋಕದಲ್ಲಿದ್ದರೂ ಲೋಕಾನುಸಾರವಾಗಿ ಯುದ್ಧ ಮಾಡುವವರಲ್ಲ. ನಾವು ಉಪಯೋಗಿಸುವ ಆಯುಧಗಳು ಲೋಕಸಂಬಂಧವಾದ ಆಯುಧಗಳಲ್ಲ. ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿಹಾಕುವಂಥವುಗಳಾಗಿವೆ. ನಾವು ವಿತರ್ಕಗಳನ್ನೂ ದೇವಜ್ಞಾನವನ್ನು ವಿರೋಧಿಸುವದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲಗಳನ್ನು ಕೆಡವಿ ಹಾಕಿ ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೆಯರಾಗುವಂತೆ ಸೆರೆಹಿಡಿದು.

## ದೇವರನ್ನು ಸ್ತುತಿಸಿರಿ

ನಾವು ನಮ್ಮ ಪ್ರಾರ್ಥನೆಗೆ ಉತ್ತರವನ್ನು ಕಾಣುವುದಕ್ಕಿಂತ ಮೊದಲು ನಾವು ದೇವರನ್ನು ಸ್ತುತಿಸಬೇಕು. ಅದುವೇ ನಿಜವಾದ ನಂಬಿಕೆ. ನಾವು ಸಂತೋಷದಿಂದ ಕೂಡಿದದವರಾಗಿ ನಿರೀಕ್ಷೆ ಉಳ್ಳವರಾಗಿರಬೇಕು.

ನಮ್ಮ ಪ್ರಾರ್ಥನೆಗೆ ಉತ್ತರ ಸಿಗುವುದಕ್ಕಿಂತ ಮೊದಲೇ ದೇವರನ್ನು ಸ್ತುತಿಸುವುದರಿಂದ ಉಂಟಾಗುವ ಪ್ರಯೋಜನಗಳ ಕುರಿತು 2ನೇ ಪೂರ್ವಕಾಲವೃತ್ತಾಂತದಲ್ಲಿ ಅದ್ಭುತಕರವಾದ ಕಥೆಯೊಂದನ್ನು ಕಾಣುತ್ತೇವೆ. ಮೂರು ದೇಶಗಳು ಒಟ್ಟಾಗಿ ರಾಜನಾದ

ಯೆಹೋಷಾಫಾಟನಿಗೂ ಇಸ್ರಾಯೇಲ್ ಜನರಿಗೂ ವಿರುದ್ಧವಾಗಿ ಯುದ್ಧಕ್ಕೆ ಬಂದರು ಎಂದು ಅಲ್ಲಿ ನಾವು ಓದುತ್ತೇವೆ,

ಅವನು - ಎಲ್ಲಾ ಯೆಹೂದ್ಯರೇ, ಯೆರೂಸಲೇಮಿನವರೇ, ಅರಸನಾದ ಯೆಹೋಷಾಫಾಟನೇ. ಯೆಹೋವನು ಹೇಳುವದನ್ನು ಕೇಳಿರಿ ಈ ಮಹಾಸಮೂಹದ ನಿಮಿತ್ತವಾಗಿ ಕಳವಳಗೊಳ್ಳಬೇಡಿರಿ, ಹೆದರಬೇಡಿರಿ. ಯುದ್ಧವು ನಿಮ್ಮದಲ್ಲ. ದೇವರದೇ. ನಾಳೆ ಬೆಳಗ್ಗೆ ಅವರಿಗೆ ವಿರೋಧವಾಗಿ ಹೊರಡಿರಿ; ಇಗೋ ಅವರು ಹಚ್ಚೀಚ್ ಗಟ್ಟದ ಮಾರ್ಗವಾಗಿ ಬರುತ್ತಾರೆ. ಯೆರೂವೇಲ್ ಅರಣ್ಯದ ಮುಂದಿರುವ ಕಣಿವೆಯ ತುದಿಯಲ್ಲಿ ಅವರನ್ನು ಸಂಧಿಸುವಿರಿ. ಈ ಸಾರಿ ನೀವು ಯುದ್ಧಮಾಡುವದು ಅವಶ್ಯವಿಲ್ಲ. ಯೆಹೂದ್ಯರೇ, ಯೆರೂಸಲೇಮಿನವರೇ, ಸುಮ್ಮನೆ ನಿಂತುಕೊಂಡು ಯೆಹೋವನು ನಿಮಗೋಸ್ಕರ ನಡಿಸುವ ರಕ್ಷಣಾಕಾರ್ಯವನ್ನು ನೋಡಿರಿ; ಹೆದರಬೇಡಿರಿ, ಕಳವಳಗೊಳ್ಳಬೇಡಿರಿ. ನಾಳೆ ಅವರೆದುರಿಗೆ ಹೊರಡಿರಿ, ಯೆಹೋವನು ನಿಮ್ಮ ಸಂಗಡ ಇರುವನು ಎಂದು ಹೇಳಿದನು.

ಆಗ ಯೆಹೋಷಾಫಾಟನು ನೆಲದ ಮಟ್ಟಿಗೂ ತಲೆಬಾಗಿಸಿದನು. ಎಲ್ಲಾ ಯೆಹೂದ್ಯರೂ ಯೆರೂಸಲೇಮಿನವರೂ ಯೆಹೋವನ ಮುಂದೆ ಅಡ್ಡಬಿದ್ದು ನಮಸ್ಕರಿಸಿದ. ಆ ಮೇಲೆ ಲೇವಿಯರಲ್ಲಿ ಕೆಹಾತ್ಯರೂ ಕೋರಹಿಯರೂ ಎದ್ದು ಇಸ್ರಾಯೇಲ್ ದೇವರಾದ ಯೆಹೋವನನ್ನು ಮಹಾಸ್ವರದಿಂದ ಕೀರ್ತಿಸಿದರು.
ಅವರು ಮರುದಿನ ಬೆಳಿಗ್ಗೆ ಎದ್ದು ತೆಕೋವ ಅರಣ್ಯಕ್ಕೆ ಹೊರಟರು. ಅವರಿಗೆ - ಯೆಹೂದ್ಯರೇ, ಯೆರೂಸಲೇಮಿನವರೇ, ನನ್ನ ಮಾತನ್ನು ಕೇಳಿರಿ, ಯೆಹೋವನಲ್ಲಿ ಭರವಸವಿಡಿರಿ, ಆಗ ಸುಕ್ಷಿತರಾಗಿರುವಿರಿ; ಆತನ ಪ್ರವಾದಿಗಳನ್ನು ನಂಬಿರಿ, ಆಗ ಸಾರ್ಥಕರಾಗುವಿರಿ ಎಂದು ಹೇಳಿದನು.

ಆ ಮೇಲೆ ಅವನು ಜನರ ಸಮ್ಮತಿಯಿಂದ ಯೆಹೋವನಿಗೋಸ್ಕರ ಗಾಯನಮಾಡುವದಕ್ಕಾಗಿ ಕೆಲವರನ್ನು ಆರಿಸಿಕೊಂಡು ಅವರಿಗೆ - ಪರಿಶುದ್ಧತ್ವವೆಂಬ ಭೂಷಣದೊಡನೆ ಭಟರ ಮುಂದೆ ಹೋಗುತ್ತಾ - ಯೆಹೋವನಿಗೆ ಕೃತಜ್ಞತಾಸ್ತುತಿಮಾಡಿರಿ, ಆತನ ಕೃಪೆಯು ಶಾಶ್ವತವಾಗಿದೆ ಎಂದು ಭಜಿಸಿರಿ ಎಂಬದಾಗಿ ಆಜ್ಞಾಪಿಸಿದನು.

ಅವರು ಉತ್ಸಾಹಧ್ವನಿಯಿಂದ ಕೀರ್ತಿಸುವದಕ್ಕೆ ಪ್ರಾರಂಭಿಸಲು ಯೆಹೋವನು ಯೆಹೂದ್ಯರಿಗೆ ವಿರೋಧವಾಗಿ ಬಂದ ಅಮ್ಮೋನಿಯರನ್ನೂ ಮೋವಾಬ್ಯರನ್ನೂ ಸೇಯಿರ್ ಪರ್ವತದವರನ್ನೂ ನಾಶಪಡಿಸುವದಕ್ಕೋಸ್ಕರ ಅವರಲ್ಲಿ ಹೊಂಚುಹಾಕುವವರನ್ನು ಇರಿಸಿದ್ದರಿಂದ ಅಮ್ಮೋನಿಯರೂ ಮೋವಾಬ್ಯರೂ ಸೇಯಿರ್ ಪರ್ವತದವರ ಮೇಲೆ ಬಿದ್ದು ಅವರನ್ನು ಪೂರ್ಣವಾಗಿ ಸಂಹರಿಸಿಬಿಟ್ಟರು; ಅವರನ್ನು ಮುಗಿಸಿಬಿಟ್ಟ ಮೇಲೆ ತಾವೇ ಒಬ್ಬರನ್ನೊಬ್ಬರು ಕೊಲ್ಲುವದಕ್ಕೆ ಪ್ರಾರಂಭಿಸಿದರು. (2 ಪೂರ್ವಕಾಲವೃತ್ತಾಂತ 20:15-22).

ಇಸ್ರಾಯೇಲ್ ಜನರು ತಮ್ಮ ಸಮಸ್ಯೆಗೆ ಉತ್ತರವು ಸಿಗುವುದನ್ನು ಕಣ್ಣಾರೆ ಕಾಣುವುದಕ್ಕಿಂತ ಮೊದಲೇ ಜೋರಾಗಿ ಉತ್ಸಾಹ ಧ್ವನಿಯೆತ್ತಿ, ಸಂತೋಷಿಸಲು ಪ್ರಾರಂಭಿಸಿದರು ಎಂಬುದನ್ನು ಗಮನಿಸಿರಿ. ಅವರು ಸೈತಾನನಿಗೆ ವಿರುದ್ಧವಾಗಿ ದೂಷಿಸಲಿಲ್ಲ. ನಮ್ಮಗೋಸ್ಕರವಾಗಿ ಕಾರ್ಯ ಮಾಡೆಂದು ದೇವರನ್ನು ಬೇಡಿಕೊಳ್ಳುವುದನ್ನು ಮುಂದುವರಿಸಲಿಲ್ಲ. ಅವರು ಆತನನ್ನು ಸ್ತುತಿಸಲು ಪ್ರಾರಂಭಿಸಿದರು, ಆತನು ಅವರಿಗೆ ಜಯವನ್ನು ಕೊಟ್ಟನು. ನೀವು ಆ ಕಥೆಯನ್ನು ಓದುವುದನ್ನು ಮುಂದುವರಿಸಿದರೆ, ಅವರ ಶತ್ರುಗಳು ತಮ್ಮನ್ನು ತಾವು ಕೊಂದು ಸಂಹರಿಸಿಕೊಂಡರು ಎಂದೂ ಇಸ್ರಾಯೇಲರು ಯುದ್ಧ ಮಾಡಬೇಕಾಗಿ ಬರಲಿಲ್ಲ ಎಂದೂ ನಾವು ಕಾಣುತ್ತೇವೆ!

ಯುದ್ಧವು ಆತ್ಮ ಮಂಡಲದಲ್ಲಿ ನಡೆಯುತ್ತಿತ್ತು. ಯುದ್ಧವು ಅವರ ಮನಸ್ಸಿನಲ್ಲಿ ನಡೆಯುತ್ತಿತ್ತು, ಅವರು ದೇವರನ್ನು ಸ್ತುತಿಸಲು ಪ್ರಾರಂಭಿಸಿದಾಗ, ಆತನು ಅವರ ಶತ್ರುಗಳನ್ನು ನಾಶಮಾಡಿದನು.

## ನಂಬಿಕೆಯಿಂದ ತುಂಬಿರುವ ಜೀವನದ ಗುಣಲಕ್ಷಣಗಳು

### ಸಂಪೂರ್ಣವಾದ ಜೀವನ ಶೈಲಿ

ನಂಬಿಕೆಯ ಜೀವನವನ್ನು ನಡೆಸುವುದು ಎಂದರೆ ಸಂಪೂರ್ಣವಾದ ಜೀವನ ಶೈಲಿಯನ್ನೇ ಒಳಗೊಂಡಿರುತ್ತದೆ. ಅದಕ್ಕಾಗಿ ಸರಳವಾದ ಸೂತ್ರ ಯಾವುದು ಇಲ್ಲ. ಯಶಸ್ಸಿಗೆ ಏಳು, ಎಂಟು, ಹತ್ತು ಸೂತ್ರಗಳು ಅಥವಾ ಕ್ರಮಗಳು ಇಲ್ಲ. ದೇವರನ್ನೂ ಆತನ ಮಾತನ್ನೂ ನಂಬುವುದಕ್ಕಾಗಿ ಪ್ರತಿದಿನ ಮಾಡುವ ಸಂಕಲ್ಪವಾಗಿದೆ.

ಅಪೊಸ್ತಲನಾದ ಪೌಲನು ಹೀಗೆ ಹೇಳಿದ್ದಾನೆ,

ನಾವು ಲೋಕದಲ್ಲಿದ್ದರೂ ಲೋಕಾನುಸಾರವಾಗಿ ಯುದ್ದ ಮಾಡುವವರಲ್ಲ. ನಾವು ಉಪಯೋಗಿಸುವ ಆಯುಧಗಳು

ಲೋಕಸಂಬಂಧವಾದ ಆಯುಧಗಳಲ್ಲ. ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿಹಾಕುವಂಥವುಗಳಾಗಿವೆ. ನಾವು ವಿತರ್ಕಗಳನ್ನೂ ದೇವಜ್ಞಾನವನ್ನು ವಿರೋಧಿಸುವದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲಗಳನ್ನು ಕೆಡವಿ ಹಾಕಿ ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೇಯರಾಗುವಂತೆ ಸೆರೆಹಿಡಿದು (2 ಕೊರಿಂಥ 10:3-5).

ನಾವು ಕಲಿಯುತ್ತಿರುವ ನಂಬಿಕೆ ಎಂಬಂಥದ್ದು ನಿತ್ಯವಾದ ನಂಬಿಕೆಯಾಗಿದೆ, ನಿರಂತರವಾಗಿರುವ ಸ್ಥಿರವಾದ ನಂಬಿಕೆಯಾಗಿದೆ, ದೈನಂದಿನವು ಇರಬೇಕಾದಂಥ ನಂಬಿಕೆಯಾಗಿದೆ.

1 ಪೇತ್ರನ ಪತ್ರಿಕೆಯಲ್ಲಿ ನಾವು ಹೀಗೆ ಓದುತ್ತೇವೆ,

ಹೀಗಿರುವದರಿಂದ ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ. ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು. ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ ಆತನು ನಿಮಗೋಸ್ಕರ ಚಿಂತಿಸುತ್ತಾನೆ (1 ಪೇತ್ರ 5:6-7).

ವಿಮೋಚನಕಾಂಡ ಪುಸ್ತಕದಲ್ಲಿ ನಾವು ಹೀಗೆ ಕಾಣುತ್ತೇವೆ,

ಆದರೆ ಮೋಶೆ ಆ ಜನರಿಗೆ "ನೀವು ಅಂಜಬೇಡಿರಿ. ಸುಮ್ಮನೆ ನಿಂತುಕೊಂಡಿದ್ದು ಯೆಹೋವನು ಈ ಹೊತ್ತು ನಿಮ್ಮನ್ನು ರಕ್ಷಿಸುವ ರೀತಿಯನ್ನು ನೋಡಿರಿ ನೀವು ಈ ಹೊತ್ತು ನೋಡುವ ಐಗುಪ್ತ್ಯರನ್ನು ಇನ್ನು ಮುಂದೆ ಎಂದಿಗೂ ನೋಡುವದಿಲ್ಲ. ಯೆಹೋವನೇ ನಿಮಗಾಗಿ ಯುದ್ಧಮಾಡುವನು. ನೀವಂತು ಸುಮ್ಮನೇ ಇರಿ" ಎಂದು ಹೇಳಿದನು. (ವಿಮೋಚನಕಾಂಡ 14:13-14).

**ನಮ್ಮ ಸ್ವಂತ ಕೆಲಸಗಳನ್ನು ನಿಲ್ಲಿಸಬೇಕು**

ಇಬ್ರಿಯ ಪುಸ್ತಕದ ಲೇಖಕನು ನಂಬಿಕೆಯ ಜೀವನದ ಕುರಿತಾಗಿರುವ ಗುಣಲಕ್ಷಣಗಳಲ್ಲಿ ಒಂದನ್ನು ನಮಗೆ ತಿಳಿಸುತ್ತಿದ್ದಾನೆ.

ಹೇಗೆಂದರೆ ದೇವರು ತನ್ನ ಕೆಲಸಗಳನ್ನು ಮುಗಿಸಿ ಹೇಗೆ ವಿಶ್ರಮಿಸಿಕೊಂಡನೋ ಹಾಗೆಯೇ ಆತನ ವಿಶ್ರಾಂತಿಯಲ್ಲಿ ಸೇರಿರುವವನು ಸಹ ತನ್ನ ಕೆಲಸಗಳನ್ನು ಮುಗಿಸಿ ವಿಶ್ರಮಿಸಿಕೊಂಡಿದ್ದಾನೆ (ಇಬ್ರಿಯ 4:10).

ನಾವು ನಂಬಿಕೆಯ ಜೀವನವನ್ನು ನಡೆಸುವಾಗ, ನಾವು ನಮ್ಮ ಸ್ವಂತ ಕೆಲಸಗಳ ಮೇಲೆ ಭರವಸೆಯಿಡುವುದಿಲ್ಲ. ನಾವು ಮನುಷ್ಯನು ರಚಿಸಿರುವ ಕಾರ್ಯಕ್ರಮಗಳನ್ನೂ ಹೊರ ತೋರಿಕೆಯ ಕಪಟತನದ

ಭಾಗವಾಗಿರುವ ಇತರ ವಿಷಯಗಳನ್ನೂ ಬದಿಗಿಡುತ್ತೇವೆ. ನಾವು ದೈಹಿಕವಾಗಿ ಅತಿಯಾದ ಶಕ್ತಿಯನ್ನು ವ್ಯಯಿಸಿ ಶ್ರಮಕ್ಕೊಳಪಟ್ಟು ಕಾರ್ಯಮಾಡುವುದಿಲ್ಲ.

ನಾವು ದೇವರ ಮಾತಿಗೆ ಕಿವಿಗೊಡುತ್ತೇವೆ, ಆತನು ನಾವು ಮಾಡಬೇಕೆಂದು ಬಯಸುವ ಕೆಲಸಗಳನ್ನು ಮಾಡುತ್ತೇವೆ.

ಯೇಸು ಹೀಗೆ ಹೇಳಿದ್ದಾನೆ,

ಅದಕ್ಕೆ ಯೇಸು ಅವರಿಗೆ ನಿಮಗೆ ನಿಜನಿಜವಾಗಿ ಹೇಳುತ್ತೇನೆ ತಂದೆಯು ಮಾಡುವದನ್ನು ಕಂಡು ಮಗನು ಮಾಡುತ್ತಾನೆ. ಹೊರತು ತನ್ನಷ್ಟಕ್ಕೆ ತಾನೇ ಏನೂ ಮಾಡಲಾರನು. ಆತನು ಮಾಡುವದನ್ನೆಲ್ಲಾ ಹಾಗೆಯೇ ಮಗನು ಮಾಡುತ್ತಾನೆ (ಯೋಹಾನ 5:19).

**ಸೇರುವುದಕ್ಕೆ ಪ್ರಯಾಸಪಡಿರಿ**

ನಂಬಿಕೆಯ ಜೀವನವು ಪ್ರಯಾಸಪಡಬೇಕಾದ ಶ್ರಮಶೀಲವಾದ ಜೀವನವಾಗಿದೆ.

ಆದುದರಿಂದ ನಾವು ಆ ವಿಶ್ರಾಂತಿಯಲ್ಲಿ ಸೇರುವದಕ್ಕೆ ಪ್ರಯಾಸಪಡೋಣ. ನಮ್ಮಲ್ಲಿ ಒಬ್ಬರಾದರೂ ಅವರ ಅವಿಧೇಯತ್ವವನ್ನು ಅನುಸರಿಸುವವರಾಗಬಾರದು (ಇಬ್ರಿಯ 4:11).

ಇದು ಏನೂ ಮಾಡದೇ ಸುಮ್ಮನೆ ಕುಳಿತುಕೊಳ್ಳುವ ಜೀವನವಲ್ಲ. ನಮ್ಮ ಗುರಿಯನ್ನು ಸಾಧಿಸಲು ನಾವು ಶ್ರಮಿಸಬೇಕು, ಮನಪೂರ್ವಕವಾಗಿ, ಪೂರ್ತಿಯಾಗಿ ಪ್ರಯತ್ನಿಸಬೇಕು.

ಪೇತ್ರನು ಹೇಳಿದ ಮಾತುಗಳನ್ನು ನೆನಪಿಸಿಕೊಳ್ಳಿರಿ.

ಸ್ವಸ್ಥಚಿತ್ತರಾಗಿರಿ ಎಚ್ಚರವಾಗಿರಿ. ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕಾಡುತ್ತಾ ತಿರುಗುತ್ತಾನೆ. ನೀವು ನಂಬಿಕೆಯಲ್ಲಿ ದೃಢವಾಗಿದ್ದು ಅವನನ್ನು ಎದುರಿಸಿರಿ. ಲೋಕದಲ್ಲಿರುವ ನಿಮ್ಮ ಸಹೋದರರೂ ಅಂಥ ಬಾಧೆಗಳನ್ನೇ ಅನುಭವಿಸುತ್ತಿದ್ದಾರೆಂದು ನಿಮಗೆ ತಿಳಿದದೆಯಲ್ಲಾ?... (1 ಪೇತ್ರ 5:8-9).

**ವಾಕ್ಯವನ್ನು ಅರ್ಥಮಾಡಿಕೊಳ್ಳಿರಿ**

ನಂಬಿಕೆಯ ಜೀವನವು ದೇವರ ವಾಕ್ಯದ ಮೇಲೆ ದೃಢವಾಗಿ ನೆಲೆಗೊಂಡಿರಬೇಕು.

ಯಾಕಂದರೆ ದೇವರ ವಾಕ್ಯವು ಸಜೀವವಾದದ್ದು. ಕಾರ್ಯಸಾಧಕವಾದದ್ದು. ಯವ ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದು. ಪ್ರಾಣ ಆತ್ಮಗಳನ್ನೂ ಕೀಲುಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಗೂ ತೂರಿಹೋಗುವಂತದ್ದು. ಹೃದಯದ ಆಲೋಚನೆಗಳನ್ನು ಉದ್ದೇಶಗಳನ್ನೂ ವಿವೇಕಿಸುವಂಥದ್ದು ಆಗಿದೆ (ಇಬ್ರಿಯ 4:12).

ನಾವು ದೇವರ ವಾಕ್ಯವನ್ನು ತಿಳಿದುಕೊಳ್ಳಬೇಕು ಮತ್ತು ನಮ್ಮ ನಿಜವಾದ ಆಲೋಚನೆಗಳನ್ನು ನಮಗೆ ತಿಳಿಯಪಡಿಸುವಂತೆ ನಾವು ಅದಕ್ಕೆ ಅನುಮತಿಸಬೇಕು. ಈ ವಾಕ್ಯದಲ್ಲಿ ದೇವರ ವಾಕ್ಯದ ಕುರಿತು ನಮಗೆ ಹಲವಾರು ವಿಷಯಗಳನ್ನು ತಿಳಿಸಲಾಗಿದೆ.

* ಅದು ಸಜೀವವಾದುದು.
* ಅದು ಶಕ್ತಿಯುತವಾದುದು.
* ಅದು ಹದವಾಗಿದೆ, ಪ್ರಾಣಕ್ಕೂ ಆತ್ಮಕ್ಕೂ ನಡುವೆಯಿರುವ ವ್ಯತ್ಯಾಸವನ್ನು ನಮಗೆ ತೋರಿಸಿಕೊಡುವಂಥದ್ದು ಆಗಿದೆ.
* ಅದು ನಮ್ಮ ಆಲೋಚನೆಯನ್ನು ಸರಿಯಾಗಿ ತಿಳಿಯಪಡಿಸುತ್ತದೆ.

ದೇವರ ವಾಕ್ಯದ ಸಂಪೂರ್ಣವಾದ ತಿಳಿವಳಿಕೆಯು ನಮ್ಮ ಜೀವನಕ್ಕೆ ಸಮತೋಲನತೆಯನ್ನು ಉಂಟುಮಾಡುತ್ತದೆ.

**ಯೇಸು ನಮ್ಮ ಮಹಾಯಾಜಕನೆಂದು ತಿಳಿದುಕೊಳ್ಳಿರಿ**

ನಾವು ಯಾವನಾತನಿಗೆ ಲೆಕ್ಕ ಒಪ್ಪಿಸಬೇಕಾಗಿದೆಯೋ ಆತನ ದೃಷ್ಟಿಗೆ ಸಮಸ್ತವೂ ಮುಚ್ಚುಮರೆಯಿಲ್ಲದ್ದಾಗಿಯೂ ಬಟ್ಟಬಯಲಾಗಿಯೂ ಇದೆ. ಆತನ ಸನ್ನಿಧಿಯಲ್ಲಿ ಅಗೋಚರವಾಗಿರುವ ದೃಷ್ಟಿಯು ಒಂದೂ ಇಲ್ಲ. ಆಕಾಶಮಂಡಲಗಳನ್ನು ದಾಟಿಹೋದ ದೇವಕುಮಾರನಾದ ಯೇಸುವೆಂಬ ಶ್ರೇಷ್ಠ ಮಹಾಯಾಜಕನು ನಮಗಿರುವದರಿಂದ ನಾವು ಮಾಡಿರುವ ಪ್ರತಿಜ್ಞೆಯನ್ನು ಬಿಡದೇ ಹಿಡಿಯೋಣ. ಯಾಕಂದರೆ ನಮಗಿರುವ ಮಹಾಯಾಜಕನೂ ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ. ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು ಪಾಪ ಮಾತ್ರ ಮಾಡಲಿಲ್ಲ (ಇಬ್ರಿಯ 4:13-15).

ಯೇಸು ನಿಜವಾಗಿಯೂ ನಿಮ್ಮನ್ನೂ ನನ್ನನ್ನೂ ಚೆನ್ನಾಗಿ ತಿಳಿದುಕೊಂಡಿದ್ದಾನೆ. ಆತನಿಗೆ ನಮ್ಮ ವೈಫಲ್ಯಗಳು ತಿಳಿದಿವೆ, ಆತನಿಗೆ ನಮ್ಮ ಜಯಗಳು ತಿಳಿದಿವೆ. ಏಕೆಂದರೆ ಯೇಸು ಈ

ಭೂಮಿಯಲ್ಲಿ ಮನುಷ್ಯನಾಗಿ ಜೀವಿಸಿ, ನಮ್ಮಂತೆಯೇ ಶೋಧನೆಗೆ ಒಳಗಾದನು. ನಮ್ಮ ದೇವರು ನಮ್ಮಿಂದ ದೂರವಾಗಿಲ್ಲ, ನಮ್ಮ ಶೋಧನೆಗಳಿಂದ ಸಂಪೂರ್ಣವಾಗಿ ಪ್ರತ್ಯೇಕವಾಗಿಲ್ಲ. ರೋಮಾಪುರದವರ ಪತ್ರಿಕೆಯಲ್ಲಿ ನಾವು ಹೀಗೆ ಓದುತ್ತೇವೆ,

ಕ್ರಿಸ್ತ ಯೇಸು ಮರಣವನ್ನು ಹೊಂದಿದ್ದಲ್ಲದೆ ಜೀವಿತನಾಗಿ ಎದ್ದು ದೇವರ ಬಲಗಡೆಯಲ್ಲಿದ್ದು ನಮಗೋಸ್ಕರ ಬೇಡುವವನಾಗಿದ್ದಾನೆ.

ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು? ಕಷ್ಟವೋ? ಸಂಕಟವೋ? ಹಿಂಸೆಯೋ ಅನ್ನವಿಲ್ಲದಿರುವದೋ, ವಸ್ತ್ರವಿಲ್ಲದಿರುವದೋ ಗಂಡಾಂತರವೋ ಖಡ್ಗವೋ?

ಹೇಗಂದರೆ ಮರಣವಾಗಲಿ ಜೀವವಾಗಲಿ ದೇವದೂತರಾಗಲಿ ದುರಾತ್ಮಗಳಾಗಲಿ ಈಗಿನ ಸಂಗತಿಗಳಾಗಲಿ ಮುಂದಣ ಸಂಗತಿಗಳಾಗಲಿ, ಮಹತ್ವಗಳಾಗಲಿ, ಮೇಲಣ ಲೋಕವಾಗಲಿ ಕೆಳಗಣ ಲೋಕವಾಗಲಿ ಬೇರೆ ಯಾವ ಸೃಷ್ಟಿಯಾಗಲಿ ನಮ್ಮನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ತೋರಿಬಂದ ದೇವರ ಪ್ರೀತಿಯಿಂದ ಅಗಲಿಸಲಾರವೆಂದು ನನಗೆ ನಿಶ್ಚಯುಂಟು. (ರೋಮಾಪುರ 8: 34b, 35,38.39).

**ಧೈರ್ಯದಿಂದ ಆತನ ಸನ್ನಿಧಿಗೆ ಬನ್ನಿರಿ**

ಆದುದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ (ಇಬ್ರಿಯ 4:16).

ನಾವು ನಂಬಿಕೆಯ ಜೀವನವನ್ನು ನಡೆಸುವಾಗ, ಆತನು ನಮಗೆ ಕೊಡುವಂಥ ದಿವ್ಯ ಸಮಾಧಾನದಲ್ಲಿ ನಾವು ನಡೆಯುವಾಗ, ಆತನ ವಾಕ್ಯವನ್ನು ನಾವು ತಿಳಿದುಕೊಂಡು ಆತನೊಂದಿಗೆ ಸಂಬಂಧ ಉಳ್ಳವರಾಗಿರುವಾಗ, ಸಮಯೋಚಿತವಾದ ಸಹಾಯವು ನಮಗೆ ಸಿಗುವಂತೆ ನಾವು ಆತನ ಸನ್ನಿಧಿಗೆ ಧೈರ್ಯದಿಂದ ಬರಬಹುದು.

**ಪರಾಮರ್ಶೆಗಾಗಿರುವ ಪ್ರಶ್ನೆಗಳು**

---

1. ನಂಬಿಕೆಯಲ್ಲಿ ಬಲಗೊಳ್ಳುವುದಕ್ಕಿರುವ ನಾಲ್ಕು ವಿಷಯಗಳು ಯಾವುವು?

2. ನಂಬಿಕೆಯಿಂದ ತುಂಬಿದ ಜೀವನದ ಗುಣಲಕ್ಷಣಗಳು ಯಾವುವು?

## ಪಾಠ ಏಳು

# ನಂಬಿಕೆಯ ಶತ್ರುಗಳು

### ಪೀಠಿಕೆ

ನಂಬಿಕೆಯ ವಿಷಯಕ್ಕೆ ಬಂದಾಗ, ಅಂತ್ಯವೇ ಇಲ್ಲವೆಂದು ತೋರುವ ಹೋರಾಟದಲ್ಲಿ ತಾವು ಇದ್ದೇವೆಂದು ಅನೇಕರು ತಿಳಿದುಕೊಂಡಿದ್ದಾರೆ. ಅವರು ದೇವರನ್ನು ಮೆಚ್ಚಿಸುವ ನಂಬಿಕೆಯ ಜೀವನವನ್ನು ನಡೆಸಲು ಬಯಸುತ್ತಾರೆ, ಆದರೆ ಅದೇ ಸಮಯದಲ್ಲಿ ಅವರು ನಿರಂತರವಾಗಿ ಸಂದೇಹ ಅಪನಂಬಿಕೆಯೊಂದಿಗೆ ಹೋರಾಡುತ್ತಿದ್ದಾರೆ.

ಕಿವುಡನೂ ಮೂಕನೂ ಆಗಿದ್ದ ಹುಡುಗನ ತಂದೆಯಂತೆ, ಅವರು ಕೂಗಿ ಮೊರೆಯಿಡುತ್ತಿದ್ದಾರೆ

“ದೇವರೇ, ನಂಬುತ್ತೇನೆ, ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯಮಾಡು!" (ಮಾರ್ಕ 9:24b)

ನಂಬಿಕೆಯತ್ತ ಸಾಗುವ ಮಾರ್ಗವು ಶತ್ರುಗಳಿಂದ ತುಂಬಿದೆ, ದೇವರನ್ನು ನಿಜವಾಗಿಯೂ ನಂಬಲು ನಿರಂತರವಾಗಿ ಹೋರಾಟ ಮಾಡಬೇಕಾಗಿದೆ ಎಂದು ಕೆಲವರು ಭಾವಿಸುತ್ತಾರೆ. ಇಬ್ರಿಯ ಪುಸ್ತಕದ ಲೇಖಕನು, "ನಂಬಿಕೆಯ ಒಳ್ಳೆಯ ಹೋರಾಟ ಮಾಡಿರಿ" ಎಂದು ಹೇಳಿರುವುದನ್ನು ನೆನಪಿಸಿಕೊಳ್ಳಿರಿ. ಈ ಶತ್ರುಗಳೊಂದಿಗೆ ಮಾಡುವ ಹೋರಾಟವು "ಒಳ್ಳೆಯ ಹೋರಾಟ" ಆಗಿರಬಹುದು, ಏಕೆಂದರೆ, ನಾವು ಸೋಲೊಪ್ಪುಕೊಳ್ಳದಿದ್ದರೆ, ನಾವು ವಾಕ್ಯವನ್ನು ಧ್ಯಾನಿಸುತ್ತಾ, ನಮ್ಮ ನಂಬಿಕೆಯ "ಮಾಂಸಖಂಡಗಳನ್ನು" ವೃದ್ಧಿಪಡಿಸಿಕೊಂಡರೆ, ನಾವು ನಮ್ಮ ನಂಬಿಕೆಯ ಜೀವನದಲ್ಲಿ ರೋಮಾಂಚಕವಾದ ಜಯವನ್ನು ಹೊಂದುತ್ತೇವೆ.

ನಮ್ಮ ಭಾವನೆಗಳ ಮತ್ತು ನಮ್ಮ ಕೃತ್ಯಗಳ ಮಂಡಲದಲ್ಲಿ ಅನೇಕ ನಂಬಿಕೆಯ ಶತ್ರುಗಳಿದ್ದಾರೆ. ಈ ಶತ್ರುಗಳನ್ನು ತಿಳಿದುಕೊಳ್ಳುವುದು ಮತ್ತು ಅವರನ್ನು ಹೇಗೆ ಸೋಲಿಸುವುದು ಎಂಬುದನ್ನು ಅರಿತುಕೊಳ್ಳುವುದು ಜಯದಲ್ಲಿ ಜೀವಿಸುವುದಕ್ಕಿರುವ ಪ್ರಾಮುಖ್ಯವಾದ ಅಂಶವಾಗಿದೆ.

ನಮ್ಮ ನಂಬಿಕೆಯ ಶತ್ರುಗಳು ಅನೇಕ ರೀತಿಗಳ ಮೂಲಕ ಬರುತ್ತಾರೆ. ಪವಿತ್ರಾತ್ಮನು ನಮ್ಮ ಜೀವನದಲ್ಲಿ ಈ ಕೆಲವು ಮಂಡಲಗಳನ್ನು

ತಿಳಿಯಪಡಿಸಿದಾಗ, ನಾವು ನಮ್ಮ ಪಾಪಗಳನ್ನು ಒಪ್ಪಿಕೊಂಡು ಕ್ಷಮಾಪಣೆಯನ್ನು ಹೊಂದಿಕೊಳ್ಳಬೇಕು.

ನಮಗೆ ದೊರಕಿರುವ ವಾಕ್ಯಗಳ ಪ್ರಕಟಣೆಯ ಮೂಲಕ ಈ ಸಮಸ್ಯೆಯಿರುವ ಮಂಡಲಗಳ ವಿರುದ್ಧವಾಗಿ ನಮ್ಮ ಮನಸ್ಸಿನಲ್ಲಿ ಭದ್ರಕೋಟೆಗಳನ್ನು ಕಟ್ಟಿಕೊಳ್ಳಬೇಕು.

ನಾವು ಚರ್ಚಿಸುತ್ತಿರುವ ನಂಬಿಕೆಯ ಮೊದಲ ಶತ್ರುಗಳು ಭಾವನಾತ್ಮಕವಾದ ಮಂಡಲಕ್ಕೆ ಸಂಬಂಧಪಟ್ಟವುಗಳಾಗಿವೆ. ನಾವು ನಮ್ಮ ಭಾವನೆಗಳನ್ನು ದೇವರ ವಾಕ್ಯದ ಅಧೀನಕ್ಕೆ ಒಳಪಡಿಸಬೇಕು.

## ಭಾವನೆಗಳನ್ನು ದೇವರ ವಾಕ್ಯದ ಅಧೀನಕ್ಕೊಳಪಡಿಸಬೇಕು

### ಭಯ

ನಮ್ಮಲ್ಲಿ ಭಯ ಇರುವುದಕ್ಕೆ ನಾವು ಅನುಮತಿಸಿದರೆ, ದೇವರ ಚಿತ್ತವನ್ನು ಮಾಡದಂತೆ ಅದು ನಮ್ಮನ್ನು ತಡೆಯುತ್ತದೆ. ದೇವರ ಚಿತ್ತವನ್ನು ಮಾಡಲು ಬೇಕಾದ ನಂಬಿಕೆಯನ್ನು ಹೊಂದದಂತೆ ಅದು ನಮಗೆ ಅಡ್ಡಿಪಡಿಸುತ್ತದೆ. ಭಯಕ್ಕೆ ಗ್ರೀಕ್ ಭಾಷೆಯಲ್ಲಿ ಬಳಸಿರುವ ಪದದ ಅರ್ಥವೇನಂದರೆ "ಶತ್ರುಗಳ ನಿಮಿತ್ತವಾಗಿ ಹೆದರುವುದು, ದಿಗಿಲುಪಡುವುದು, ಭಯಭೀತರಾಗಿ ಓಡಿಹೋಗುವುದು."

ನಾವು ಒಂದೇ ಸಮಯದಲ್ಲಿ ನಂಬಿಕೆಯಲ್ಲಿಯೂ ಭಯದಲ್ಲಿಯೂ ನಡೆಯಲು ಆಗುವುದಿಲ್ಲ.

ನಮಗೆ ದೊರಕುವ ಮಾಹಿತಿಯ ಆಧಾರದ ಮೇಲೆ ನಂಬಿಕೆ ಮತ್ತು ಭಯ ಇವೆರಡೂ ಉಂಟಾಗುತ್ತವೆ. ದೇವರ ವಾಕ್ಯದ ಕುರಿತಾದ ತಿಳಿವಳಿಕೆಯ ಆಧಾರದ ಮೇಲೆ ನಂಬಿಕೆಯು ಉಂಟಾಗುತ್ತದೆ. ನಮ್ಮ ಪಂಚೇದ್ರಿಯಗಳಿಂದ, ಕೆಟ್ಟ ಸುದ್ದಿಗಳಿಂದ ಮತ್ತು ಶತ್ರುಗಳಿಂದ ಬರುವ ಹೆದರಿಕೆಗಳಿಂದ ದೊರಕುವ ಮಾಹಿತಿಯ ಮೂಲಕ ಭಯ ಉಂಟಾಗುತ್ತದೆ.

- *ಪರಿಹಾರ*

ದೇವರ ವಾಕ್ಯದಲ್ಲಿ "ಭಯಪಡಬೇಡ" ಎಂಬ ಮಾತನ್ನು ನೂರಕ್ಕೂ ಹೆಚ್ಚು ಬಾರಿ ಬಳಸಿರುವುದನ್ನು ನಾವು ಕಾಣುತ್ತೇವೆ.

ನಮ್ಮೊಳಗೆ ಭಯವು ಬರಲು ಯತ್ನಿಸುವಾಗ, ಅಪೊಸ್ತಲನಾದ ಪೌಲನು ಬರೆದಿರುವ ಮಾತನ್ನು ನಾವು ಒಪ್ಪಿಕೊಳ್ಳಬೇಕು,

ದೇವರು ನಮಗೆ ಕೊಟ್ಟಿರುವ ಆತ್ಮವು ಬಲ ಪ್ರೀತಿ ಶಿಕ್ಷಣಗಳ ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ (2 ತಿಮೊಥೆ 1:7).

ನಾವು ಭಯದ ಆತ್ಮವನ್ನು ಎದುರಿಸಬೇಕು, ಯೇಸುವಿನ ಹೆಸರಿನಲ್ಲಿ ಬಿಟ್ಟು ಹೋಗೆಂದು ನಾವು ಅದಕ್ಕೆ ಆಜ್ಞಾಪಿಸಬೇಕು.

ನಾವು ಧೈರ್ಯವಾಗಿ ನಂಬಿಕೆಯ ಮಾತುಗಳನ್ನು ಹೇಳಬೇಕು.

ಆದದರಿಂದ ಕರ್ತನು ನನ್ನ ಸಹಾಯಕನು ಭಯಪಡೆನು ಮನುಷ್ಯನು ನನಗೆ ಏನು ಮಾಡಾನು? ಎಂದು ನಾವು ಧೈರ್ಯವಾಗಿ ಹೇಳಬಲ್ಲೆವು (ಇಬ್ರಿಯ 13:6).

ಧರ್ಮವೇ ನಿನಗೆ ಆಧಾರ; ನೀನು ಹಿಂಸೆಗೆ ದೂರವಾಗಿರುವಿ, ನಿನಗೆ ಹೆದರಿಕೆ ಇರುವದಿಲ್ಲ, ನಾಶನವು ದೂರವಾಗಿರುವದು, ನಿನ್ನ ಹತ್ತಿರಕ್ಕೆ ಬಾರದು (ಯೆಶಾಯ 54:14).

ದೇವರನ್ನು ನಂಬಿ ನಿರ್ಭಯದಿಂದಿರುವೆನು; ನರಪ್ರಾಣಿಗಳು ನನಗೆ ಮಾಡುವದೇನು? (ಕೀರ್ತನೆಗಳು 56:11)

ನಾವು ಆತನ ಪ್ರೀತಿಯಲ್ಲಿ ನೆಲೆಗೊಂಡಿರಬೇಕು.

ಪ್ರೀತಿಯಲ್ಲಿ ಯಾವುದೇ ಭಯವಿಲ್ಲ; ಆದರೆ ಪರಿಪೂರ್ಣ ಪ್ರೀತಿಯು ಭಯವನ್ನು ಹೊರಹಾಕುತ್ತದೆ (1 ಯೋಹಾನ 4:18a).

**ಅಯೋಗ್ಯರೆಂಬ ಭಾವನೆಗಳು**

ತಪ್ಪಿತಸ್ಥ, ಖಂಡನೀಯ ಮನೋಭಾವನೆ, ಮತ್ತು ಅಯೋಗ್ಯರೆಂಬ ಭಾವನೆಗಳು ನಮ್ಮ ನಂಬಿಕೆಗೆ ಮುಖ್ಯ ಶತ್ರುಗಳಾಗಿವೆ. ಅನೇಕರು ಶತ್ರುಗಳು ನಿರಂತರ ಮಾಡುವ ಆರೋಪಗಳಿಂದ ಬಳಲುತ್ತಿದ್ದಾರೆ.

...ಹಗಲಿರುಳು ನಮ್ಮ ಸಹೋದರರ ಮೇಲೆ ನಮ್ಮ ದೇವರ ಮುಂದೆ ದೂರು ಹೇಳಿದ ದೂರುಗಾರನು ದೊಬ್ಬಲ್ಪಟ್ಟಿದ್ದಾನೆ (ಪ್ರಕಟನೆ 12:10b).

- *ಪರಿಹಾರ*

ಶತ್ರುವು ತಂದುಹಾಕುವ ಆರೋಪಣೆಗಳ ಕುರಿತಾದ ಯೋಚನೆಗಳನ್ನೂ ಕಲ್ಪನೆಗಳನ್ನೂ ತೊಡೆದು ಹಾಕಬೇಕು ಅಥವಾ ತಿರಸ್ಕರಿಸಬೇಕು.

ನಾವು ವಿತರ್ಕಗಳನ್ನೂ ದೇವಜ್ಞಾನವನ್ನು ವಿರೋಧಿಸುವದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲಗಳನ್ನು ಕೆಡವಿ ಹಾಕಿ ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೆಯರಾಗುವಂತೆ ಸೆರೆಹಿಡಿದು (2 ಕೊರಿಂಥ 10:5).

ಕ್ರಿಸ್ತನು ಉಂಟುಮಾಡಿರುವ ನೀತಿಯ ಮೂಲಕ ನಾವು ನೀತಿವಂತರಾಗಿದ್ದೇವೆ.

ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗಮಾಡಿದನು (2 ಕೊರಿಂಥ 5:21).

ಆದದರಿಂದ ಕ್ರಿಸ್ತ ಯೇಸುವಿನಲ್ಲಿರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ. (ರೋಮಾಪುರ 8:1).

ನಾವು ನಂಬಿಕೆಯ ಕುರಿತಾಗಿರುವ ಸಂಪೂರ್ಣವಾದ ಭರವಸೆಯನ್ನು ಅನುಭವಿಸಬೇಕು.

ಆದಕಾರಣ ನಿರಪರಾಧಿಯೆಂದು ನಮ್ಮ ಮನಸ್ಸು ನಮಗೆ ಸಾಕ್ಷಿ ಹೇಳದಂತೆ ನಾವು ಹೃದಯವನ್ನು ಪ್ರೋಕ್ಷಿಸಿಕೊಂಡು ದೇಹವನ್ನು ತಿಳಿ ನೀರಿನಿಂದ ತೊಳೆದುಕೊಂಡು ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ ಯಥಾರ್ಥ ಹೃದಯವುಳ್ಳವರಾಗಿಯೂ ದೇವರ ಮುಂದೆ ಬರೋಣ (ಇಬ್ರಿಯ 10:22).

ನಾವು ದೇವರ ವಾಕ್ಯದಲ್ಲಿ ಸಂಪೂರ್ಣವಾಗಿ ತಲ್ಲೀನರಾಗಿರಬೇಕು, ವಿಶೇಷವಾಗಿ ಮೇಲಿರುವಂಥ ವಾಕ್ಯಗಳಲ್ಲಿ ತಲ್ಲೀನರಾಗಿರಬೇಕು, ಆಗ ಅಯೋಗ್ಯ ಭಾವನೆಯನ್ನು ನಾವು ಗೆಲ್ಲಬಹುದು. ಅಯೋಗ್ಯರೆಂಬ ಭಾವನೆಗಳನ್ನು ನಮ್ಮಲ್ಲಿರಲು ಎಷ್ಟು ಕಾಲ ನಾವು ಅವಕಾಶ ಕೊಡುತ್ತೇವೋ ಅಷ್ಟರವರೆಗೂ, ನಾವು ಬಲವಾದ ನಂಬಿಕೆಯುಳ್ಳವರಾಗಿರಲು ಆಗುವುದಿಲ್ಲ.

## ಕ್ರಿಯೆಗಳನ್ನು ದೇವರ ವಾಕ್ಯದ ಅಧೀನಕ್ಕೊಳಪಡಿಸಬೇಕು

---

### ಕ್ಷಮಿಸುವುದರಲ್ಲಿ ಸೋತುಹೋಗಿರುವುದು

ಮಾರ್ಕನು ಅಂಜೂರದ ಮರದ ಕಥೆಯನ್ನೂ ಬೆಟ್ಟಗಳನ್ನು ನೀಗಿಸುವ ನಂಬಿಕೆಯನ್ನು ಪಡೆದುಕೊಳ್ಳುವುದರ ಕುರಿತು ಯೇಸು ಮಾಡಿದ ಬೋಧನೆಯನ್ನೂ ಬರೆದ ನಂತರ, ಅವನು ಯೇಸು ಹೇಳಿದ ಮತ್ತೊಂದು ವಿಷಯವನ್ನು ಬರೆದಿದ್ದಾನೆ,

ಆದಕಾರಣ ನೀವು ಪ್ರಾರ್ಥನೆ ಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ. ಅದು ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ. ಇದಲ್ಲದೆ ನೀವು ನಿಂತುಕೊಂಡು ಪ್ರಾರ್ಥನೆ ಮಾಡುವಾಗೆಲ್ಲಾ ಯಾರ ಮೇಲೆ ಏನಾದರೂ ವಿರೋಧವಿದ್ದರೆ ಅದನ್ನು ಅವನಿಗೆ ಕ್ಷಮಿಸಿರಿ (ಮಾರ್ಕ 11:24-25).

ನಾವು ನಮ್ಮ ಹೃದಯದಲ್ಲಿ ದ್ವೇಷ, ಕೋಪ, ವ್ಯಥೆ ಮತ್ತು ಕ್ಷಮಿಸದಿರುವ ಗುಣ ಇದ್ದರೆ, ನಮ್ಮಲ್ಲಿ ಯಾವಾಗಲೂ ಸಂದೇಹವೂ

ಅಪನಂಬಿಕೆಯೂ ಇದ್ದೆ ಇರುತ್ತವೆ. ಇತರರನ್ನು ಕ್ಷಮಿಸದೇ ಇರುವುದು ನಮ್ಮನ್ನು ದೇವರಿಂದ ದೂರಮಾಡುತ್ತದೆ ಮತ್ತು ದೇವರನ್ನು ಹೊರತುಪಡಿಸಿ ಯಾವ ನಂಬಿಕೆಯು ಇಲ್ಲ.

- *ಪರಿಹಾರ*

ನೀವು ಜನರ ತಪ್ಪುಗಳನ್ನು ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದಯು ನಿಮ್ಮ ತಪ್ಪುಗಳನ್ನೂ ಕ್ಷಮಿಸುವನು. ಆದರೆ ನೀವು ಜನರ ತಪ್ಪುಗಳನ್ನು ಕ್ಷಮಿಸದೆ ಹೋದರೆ ನಿಮ್ಮ ತಂದೆ ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸುವದಿಲ್ಲ (ಮತ್ತಾಯ 6:14,15).

ಕ್ಷಮಿಸದೇ ಇರುವಂಥ ಯಾವುದಾದರೂ ವಿಷಯಗಳಿದ್ದರೆ ಅದಕ್ಕಿರುವ ಉತ್ತರ ಕ್ಷಮಿಸುವುದೇ ಆಗಿದೆ. ಆ ವ್ಯಕ್ತಿಯು ಕ್ಷಮಿಸಲು ಅರ್ಹನಾಗಿಲ್ಲದಿರಬಹುದು ಅಥವಾ ಕ್ಷಮಿಸಬೇಕೆಂದು ಅವನು ಕೇಳಿಕೊಳ್ಳದಿರಬಹುದು ಆದರೂ ನಾವು ಕ್ಷಮಿಸಬೇಕು ಎಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಿರಿ. ಕ್ಷಮಿಸುವಂಥದ್ದು ನಾವು ಮನಸ್ಸಾರೆ ಮಾಡುವಂಥ ಕಾರ್ಯವಾಗಿರುತ್ತದೆ. ನಾವು ಕ್ಷಮಿಸಲು ನಿರ್ಧರಿಸುವಾಗ ಆ ವಿಧೇಯತೆ ಕಾರ್ಯವು ನಮ್ಮನ್ನು ಬಿಡಿಸುತ್ತದೆ.

ಮತ್ತೊಬ್ಬನ ಮೇಲೆ ತಪ್ಪು ಹೊರಿಸುವದಕ್ಕೆ ಕಾರಣವಿದ್ದರೂ ತಪ್ಪುಹೊರಿಸದೆ ಒಬ್ಬರಿಗೊಬ್ಬರು ಸೈರಿಸಿಕೊಂಡು ಕ್ಷಮಿಸಿರಿ. ಕರ್ತನು ನಿಮ್ಮನ್ನು ಕ್ಷಮಿಸಿದಂತೆಯೇ ನೀವೂ ಕ್ಷಮಿಸಿರಿ (ಕೊಲೊಸ್ಸೆ 3:13).

**ಬೇಸರಗೊಳ್ಳುವುದು**

ಯೇಸು ದೋಣಿಯಲ್ಲಿ ಮಲಗಿದ್ದಾಗ ಆ ದೋಣಿಗೆ ಬಿರುಗಾಳಿ ಅಪ್ಪಳಿಸಿ ಬಡಿದಾಗ, ಶಿಷ್ಯರು ಆತನನ್ನು ಎಬ್ಬಿಸಿ, "ಗುರುವೇ, ನಾವು ಮುಳುಗಿಹೋಗುವದರಲ್ಲಿ ನಿನಗೆ ಚಿಂತೆಯಿಲ್ಲವೇ?" ಎಂದು ಕೇಳಿದರು.

ಬೇರೆ ದೋಣಿಗಳೂ ಆತನ ಸಂಗಡ ಇದ್ದವು. ತರುವಾಯ ದೊಡ್ಡ ಬಿರುಗಾಳಿ ಎದ್ದು ತೆರೆಗಳು ಆ ದೋಣಿಗೆ ಒಡಿದು ಒಳಗೆ ನುಗ್ಗಿದ್ದರಿಂದ ಆ ದೋಣಿ ಆಗಲೇ ತುಂಬುವದಕ್ಕೆ ಬಂದಿತ್ತು. ಆತನು ದೋಣಿಯ ಹಿಂಭಾಗದಲ್ಲಿ ತಲೆಗಿಂಬನ್ನು ಒರಗಿ ನಿದ್ದೆಮಾಡುತ್ತಿದ್ದನು. ಅವರು ಆತನನ್ನು ಎಬ್ಬಿಸಿ ಗುರುವೇ, ನಾವು ಮುಳುಗಿಹೋಗುವದರಲ್ಲಿ ನಿನಗೆ ಚಿಂತೆಯಿಲ್ಲವೇ ಎಂದು ಕೇಳಲು (ಮಾರ್ಕ 4: 37,38)

ಅವರು ಬೇಸರಗೊಂಡು, ನಾವು ನಾಶವಾಗುತ್ತಿದ್ದರೂ ಯೇಸು ನಮ್ಮ ಬಗ್ಗೆ ಚಿಂತಿಸುತ್ತಿಲ್ಲ ಎಂದು ಆರೋಪ ಮಾಡಿದರು.

ಅನೇಕರು ಪ್ರಾರ್ಥಿಸಿದ್ದಾರೆ ಆದರೆ ದೇವರು ತಮ್ಮ ಕುರಿತು ಚಿಂತಿಸುತ್ತಿಲ್ಲ ಎಂದು ಅಂದುಕೊಂಡಿದ್ದಾರೆ. ಆತನು ಪರಿಸ್ಥಿತಿಯನ್ನು ಬದಲಾಯಿಸಿರಬಹುದಿತ್ತು, ಆದರೆ ಆತನು ಹಾಗೆ ಮಾಡಲಿಲ್ಲ ಆದ್ದರಿಂದ ಅವರು ಬೇಸರಗೊಂಡಿದ್ದಾರೆ. ಇವತ್ತೂ ಕೂಡ ಅನೇಕರು ಶಿಷ್ಯರೊಂದಿಗೆ ಸೇರಿ, "ದೇವರೇ, ನಾನು ತೀರಾ ಕೆಟ್ಟ ಪರಿಸ್ಥಿತಿಯಲ್ಲಿದ್ದೇನೆ ನೀನು ನನ್ನ ಬಗ್ಗೆ ಚಿಂತಿಸುವುದಿಲ್ಲವೇ?" ಎಂದು ಕೇಳುವವರಾಗಿದ್ದಾರೆ.

- *ಪರಿಹಾರ*

ಜೀವನದಲ್ಲಿ ಬರುವ ಅಗ್ನಿ ಪರೀಕ್ಷೆಗಳು ನಂಬಿಕೆಯಲ್ಲಿ ಬೆಳೆಯುವುದಕ್ಕಿರುವ ಅವಕಾಶಗಳಾಗಿವೆ.

ಪ್ರಿಯರೇ, ನೀವು ಪರಿಶೋಧನೆಗಾಗಿ ಪುಟಕ್ಕೆ ಹಾಕಲ್ಪಟ್ಟದ್ದಕ್ಕೆ ಆಶ್ಚರ್ಯಪಡಬೇಡಿರಿ. ವಿಪರೀತವಾದ ಸಂಗತಿ ಸಂಭವಿಸಿತೆಂದು ಯೋಚಿಸಬೇಡಿರಿ. ಆದರೆ ನೀವು ಎಷ್ಟರ ಮಟ್ಟಿಗೂ ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರರಾಗಿದ್ದೀರೋ ಅಷ್ಟರ ಮಟ್ಟಿಗೆ ಸಂತೋಷವುಳ್ಳವರಾಗಿರಿ. ಆತನ ಮಹಿಮೆಯ ಪ್ರತ್ಯಕ್ಷತೆಯಲ್ಲಿಯೂ ನೀವು ಸಂತೋಷಪಟ್ಟು ಉಲ್ಲಾಸಗೊಳ್ಳುವಿರಿ (1 ಪೇತ್ರ 4:12,13).

ಯೇಸು ಮಾಡಿದ ಬೋಧನೆಗಳನ್ನು ಕೇಳಿ ಧಾರ್ಮಿಕ ನಾಯಕರು ಬೇಸರಗೊಂಡರು, ಅದಲ್ಲದೆ ಅವರು ಆ ಬೇಸರವನ್ನು ಮನಸ್ಸಿನಲ್ಲಿ ಇಟ್ಟುಕೊಂಡಿದ್ದರಿಂದ, ಯೇಸುವನ್ನು ನಂಬಲು ಅವರಿಂದ ಆಗಲಿಲ್ಲ ಮತ್ತು ಆತನು ಏನೆಲ್ಲಾ ಅವರಿಗೆ ಕೊಡುವುದಕ್ಕಾಗಿ ಬಂದಿದ್ದನ್ನೋ ಅದೆಲ್ಲವನ್ನು ಕಳೆದುಕೊಂಡರು.

ತರುವಾಯ ಆತನು ತನ್ನ ಊರಿಗೆ ಬಂದು ಅಲ್ಲಿರುವ ಸಭಾಮಂದಿರದಲ್ಲಿ ಜನರಿಗೆ ಉಪದೇಶಮಾಡುತ್ತಿದ್ದನು. ಅವರು ಕೇಳಿ ಅತ್ಯಾಶ್ಚರ್ಯ ಪಟ್ಟು ಇವನಿಗೆ ಈ ಜ್ಞಾನವೂ ಈ ಮಹತ್ಕಾರ್ಯಗಳೂ ಎಲ್ಲಿಂದ ಬಂದಿದ್ದಾವು? ಇವನು ಆ ಬಡಗಿಯ ಮಗನಲ್ಲವೇ ? ಇವನ ತಾಯಿ ಮರಿಯಳೆಂಬವಳಲ್ಲವೇ. ಯಾಕೋಬ ಯೋಸೇಫ ಸೀಮೋನ ಯೂದ ಇವರು ಇವನ ತಮ್ಮಂದಿರಲ್ಲವೇ ಇವನ ತಂಗಿಯರೆಲ್ಲರು ನಮ್ಮಲ್ಲಿ ಇದ್ದರಲ್ಲವೇ ಹಾಗಾದರೆ ಇವೆಲ್ಲಾ ಇವನಿಗೆ ಎಲ್ಲಿಂದ ಬಂದಿದ್ದಾವು? ಎಂದು ಮಾತಾಡಿಕೊಂಡು ಆತನ ವಿಷಯವಾಗಿ ಬೇಸರಗೊಂಡರು. ಆದರೆ ಯೇಸು ಅವರಿಗೆ ಪ್ರವಾದಿಯು ಬೇರೆ ಎಲ್ಲಿದ್ದರೂ ಅವನಿಗೆ ಮರ್ಯಾದೆ ಉಂಟು. ಆದರೆ ಸ್ವದೇಶದಲ್ಲಿಯೂ

ಸ್ವಂತ ಮನೆಯಲ್ಲಿಯೂ ಮಾತ್ರ ಮರ್ಯಾದೆ ಇಲ್ಲ ಅಂದನು (ಮತ್ತಾಯ 13:54-57).

ಯಾರಿಗೆ ವಿರುದ್ಧವಾಗಿಯೂ ಬೇಸರವನ್ನು ಮನಸ್ಸಿನಲ್ಲಿಟ್ಟುಕೊಂಡರೆ, ದೇವರ ಆದ್ಭುತಗಳನ್ನು ಹೊಂದಿಕೊಳ್ಳದಂತೆ ಅದು ನಮಗೆ ಅಡ್ಡಿಪಡಿಸುತ್ತದೆ.

ಆ ಸಮಸ್ಯೆಗಿರುವ ಪರಿಹಾರವೇನಂದರೆ ಅವರನ್ನು ಕ್ಷಮಿಸಿ ಯಾವುದೇ ಬೇಸರ ಮನಸ್ಸಿನಲ್ಲಿಟ್ಟುಕೊಳ್ಳಬಾರದು.

**ಹೃದಯದ ಕಾಠಿಣ್ಯತೆ**

ಬೇರೆಯವರಿಂದಾಗಲಿ ಅಥವಾ ದೇವರಿಂದಾಗಲಿ ನಮ್ಮನ್ನು ನಾವು ದೂರಮಾಡಿಕೊಳ್ಳುವುದು, ನಂಬದಿರುವಂಥದ್ದು ಅಥವಾ ಸಂಶಯವು ನಮಗೆ ಕಠಿಣ ಹೃದಯವಿದೆ ಎಂಬುದರ ಲಕ್ಷಣಗಳಾಗಿವೆ. ಕ್ಷಮಿಸದೇ ಇರುವುದರ ಮೂಲಕ ಹೃದಯದ ಕಾಠಿಣ್ಯವು ಉಂಟಾಗುತ್ತದೆ.

ಮಾರ್ಕನ ಸುವಾರ್ತೆಯಲ್ಲಿ, ಯೇಸು ಅವರ ಅಪನಂಬಿಕೆಗಾಗಿ ಅವರನ್ನು ಗದರಿಸಿದನು ಮತ್ತು ಅದನ್ನು ಹೃದಯದ ಕಾಠಿಣ್ಯತೆಗೆ ಜೋಡಿಸಿ ಹೇಳಿದನು.

ತರುವಾಯ ಹನ್ನೊಂದು ಮಂದಿ ಶಿಷ್ಯರು ಊಟಕಕೆ ಕೂತಿದ್ದಾಗ ಆತನು ಅವರಿಗೆ ಕಾಣಿಸಿಕೊಂಡನು. ತಾನು ಜೀವಿತನಾಗಿ ಎದ್ದು ಬಂದ ಮೇಲೆ ತನ್ನನ್ನು ಕಂಡವರ ಮಾತನ್ನು ಅವರು ನಂಬಲಿಲ್ಲವಾದ ಕಾರಣ ಆತನು ಅವರ ಅಪನಂಬಿಕೆಗೂ ಅವರ ಮನಸ್ಸಿನ ಕಾಠಿಣ್ಯಕ್ಕೂ ಅವರನ್ನು ಗದರಿಸಿದನು (ಮಾರ್ಕ 16:14).

ಪ್ರತಿಯೊಬ್ಬ ವ್ಯಕ್ತಿಗೂ ವ್ಯಥೆಯು, ತಿರಸ್ಕಾರವೂ, ಬೇಸರವೂ ಉಂಟಾಗುವುದಕ್ಕೆ ಕಾರಣವಿರುತ್ತದೆ. "ನಾನು ಪ್ರಾರ್ಥಿಸಿದೆ ಆದರೆ ಏನೂ ಆಗಲಿಲ್ಲ" ಎಂದು ಹೇಳುವುದನ್ನು ನಾವು ಅನೇಕ ಸಾರಿ ಕೇಳಿದ್ದೇವೆ. ಈ ವ್ಯಕ್ತಿಯು ಮತ್ತೊಮ್ಮೆ ತಮಗೆ ನೋವು ಉಂಟಾಗದಂತೆ ಕಾಪಾಡಿಕೊಳ್ಳಲು ತಮ್ಮ ಭಾವನೆಗಳ ಸುತ್ತ ಗೋಡೆಗಳನ್ನು ಕಟ್ಟಿಕೊಳ್ಳುತ್ತಾರೆ.

- *ಪರಿಹಾರ*

ಆದರೆ ನಾವು ನಮ್ಮ ಸಂರಕ್ಷಣೆಗಾಗಿ ಕಟ್ಟಿಕೊಳ್ಳುವ ಗೋಡೆಗಳು ಕೂಡ ನಮ್ಮನ್ನು ದೇವರಿಂದಲೂ ಇತರರಿಂದಲೂ ಬೇರ್ಪಡಿಸುವ ಗೋಡೆಗಳಾಗಿ ಮಾರ್ಪಡುತ್ತವೆ. ಅದಕ್ಕಿರುವ ಪರಿಹಾರವೇನಂದರೆ

ಗೋಡೆಗಳನ್ನು ಕೆಡವಿಹಾಕುವುದು ಮತ್ತು ನಮ್ಮ ಹೃದಯಗಳನ್ನು ಮೃದುಗೊಳಿಸುವಂತೆ ದೇವರಿಗೆ ಅನುಮತಿಸುವುದು.

ನೀವು ಮಾಡುತ್ತಾ ಬಂದಿರುವ ಅಪರಾಧಗಳನ್ನೆಲ್ಲಾ ನಿಮ್ಮಿಂದ ತೊಲಗಿಸಿಬಿಟ್ಟು ನಿಮ್ಮ ಹೃದಯವನ್ನೂ ಸ್ವಭಾವವನ್ನೂ ನೂತನಮಾಡಿಕೊಳ್ಳಿರಿ; ಇಸ್ರಾಯೇಲ್ ವಂಶದವರೇ, ನೀವು ಸಾಯಲೇಕೆ? (ಯೆಹೆಜ್ಕೇಲ 18:31).

ದೇವರೇ, ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು; ನನಗೆ ಸ್ಥಿರಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನಪಡಿಸು (ಕೀರ್ತನೆಗಳು 51:10).

**ಅವಿಧೇಯತೆ**

ಪ್ರವಾದಿಯಾದ ಸಮುವೇಲನಿಗೂ ರಾಜನಾದ ಸೌಲನಿಗೂ ಪರಸ್ಪರ ಜಟಾಪಟಿಯುಂಟಾಯಿತು. ಸೌಲನು ದೇವರಿಗೆ ವಿಧೇಯನಾಗುವ ಬದಲು, ಜನರು ಬಯಸಿದ್ದನ್ನು ಮಾಡಿದನು.

- *ಸೌಲನ ಅವಿಧೇಯತೆ*

ನೀನು ಹೋಗಿ ಅಮಾಲೇಕ್ಯರನ್ನೂ ಅವರಲ್ಲಿರುವುದೆಲ್ಲವನ್ನೂ ಸಂಪೂರ್ಣವಾಗಿ ನಾಶಮಾಡು ಎಂದು ದೇವರು ಸಮುವೇಲನ ಮೂಲಕ ಸೌಲನಿಗೆ ಹೇಳಿದನು. ಆದರೆ ಸೌಲನು ಅದಕ್ಕೆ ಬದಲಾಗಿ ಅಮಾಲೇಕ್ಯರನ್ನು ನಾಶಮಾಡಿ, ಕೊಳ್ಳೆಯನ್ನು ತಂದನು, ರಾಜನನ್ನು ಸೆರೆಯಾಳಾಗಿ ಹಿಡಿದುಕೊಂಡು ಬಂದನು. ಸಮುವೇಲನು ಅದರ ಬಗ್ಗೆ ಅವನನ್ನು ಕೇಳಿದಾಗ, ಸೌಲನು, ನಿನ್ನ ದೇವರಿಗೆ ಯಜ್ಞವನ್ನು ಅರ್ಪಿಸುವುದಕ್ಕಾಗುವಂತೆ ಜನರು ಕೊಳ್ಳೆಯನ್ನು ತೆಗೆದುಕೊಂಡು ಬಂದರು ಎಂದು ಹೇಳಿದನು.

ಆಗ ಸೌಲನು ಸಮುವೇಲನಿಗೆ, ಏನು? ನಾನು ಯೆಹೋವನ ಮಾತನ್ನು ಕೇಳಲಿಲ್ಲವೋ? ಆತನು ಕಳುಹಿಸಿದಲ್ಲಿಗೆ ಹೋಗಿ ಅಮಾಲೇಕ್ಯರನ್ನೆಲ್ಲಾ ಸಂಹರಿಸಿ ಅವರ ಅರಸನಾದ ಅಗಾಗನನ್ನು ಹಿಡಿದು ತಂದೆನು. ಆದರೆ ಜನರು ಸಂಪೂರ್ಣವಾಗಿ ಸಂಹರಿಸಬೇಕಾದ ಕೊಳ್ಳೆಯಲ್ಲಿ ಉತ್ತಮವಾದ ಕುರಿದನಗಳನ್ನು ನಿನ್ನ ದೇವರಾದ ಯೆಹೋವನಿಗೆ ಗಿಲ್ಗಾಲಿನಲ್ಲಿ ಯಜ್ಞಾರ್ಪಣೆಮಾಡುವದಕ್ಕಾಗಿ ಉಳಿಸಿ ತಂದರು ಎಂದು ಉತ್ತರಕೊಟ್ಟನು (1 ಸಮುವೇಲ 15:20,21).

ಅದಕ್ಕೆ ಸಮುವೇಲನು ಉತ್ತರಿಸಿದ್ದೇನಂದರೆ, ಯಜ್ಞವನ್ನರ್ಪಿಸುವದಕ್ಕಿಂತ ಮಾತು ಕೇಳುವದು ಉತ್ತಮವಾಗಿದೆ; ಟಗರುಗಳ ಕೊಬ್ಬಿಗಿಂತ ವಿಧೇಯತ್ವವು ವಿಶೇಷವಾಗಿದೆ

ಸೌಲನು ಸಮುವೇಲನಿಗೆ, ನಾನು ಯೆಹೋವನ ಮತ್ತು ನಿನ್ನ ಆಜ್ಞೆಗಳನ್ನು ಮೀರಿ ಪಾಪಮಾಡಿದ್ದೇನೆ; ಜನರಿಗೆ ಹೆದರಿ ಅವರ ಮಾತನ್ನು ಕೇಳಿದೆನು (1 ಸಮುವೇಲ 15: 22b,24).

ಅವಿಧೇಯತೆಯನ್ನು ತೋರಿದ್ದಕ್ಕಾಗಿ ಸೌಲನನ್ನು ವಿರೋಧಿಸಿದಾಗ, ಅವನು ತಾನು ಮಾಡಿದ ಕೃತ್ಯಗಳನ್ನು ಬೇರೆಯವರ ಮೇಲೆ ಹೊರಿಸಿದನು, ಮತ್ತು ತಾನು ಅದನ್ನು ಒಳ್ಳೆಯ ಉದ್ದೇಶದಿಂದ ಮಾಡಿದ್ದು ಎಂಬಂತೆ ಬಿಂಬಿಸಲು ಪ್ರಯತ್ನಿಸಿದನು - "ನಾವು ಯಜ್ಞವನ್ನು ಅರ್ಪಿಸುವುದಕ್ಕಾಗಿ ಅವುಗಳನ್ನು ಉಳಿಸಿ ತಂದೆವು" ಎಂದು ಹೇಳಿ, ಕೊನೆಗೆ, ಅವನು ತನ್ನ ದೇವರನ್ನೇ ತಿರಸ್ಕರಿಸಿದನು. 21 ನೇ ವಾಕ್ಯದಲ್ಲಿ "ನಿನ್ನ ದೇವರು" ಎಂಬ ಅವನ ಮಾತುಗಳನ್ನು ಗಮನಿಸಿರಿ.

ಅವನು ತನ್ನ ಅವಿಧೇಯತೆಯನ್ನು ಮುಂದುವರೆಸಿದ್ದರಿಂದ ಅವನ ಸ್ಥಾನದಲ್ಲಿ ದಾವೀದನನ್ನು ರಾಜನಾಗಿ ಅಭಿಷೇಕಿಸಲಾಯಿತು. ಮತ್ತು ಸೌಲನು ಸತ್ತುಹೋದನು.

- *ಇಸ್ರಾಯೇಲ್ ಜನರ ಅವಿಧೇಯತೆ*

ಹತ್ತು ಮಂದಿ ಗೂಢಚಾರರು ಅಶುಭ ವಾರ್ತೆಯನ್ನು ತೆಗೆದುಕೊಂಡು ತಿರಿಗಿ ಬಂದಾಗ, ಇಸ್ರಾಯೇಲ್ ಜನರು ದೇವರ ಶಕ್ತಿಯಲ್ಲಿ ನಂಬಿಕೆ ಇಡಲು ತಿರಸ್ಕರಿಸಿದರು. ಐಗುಪ್ತ ದೇಶದ ಮೇಲೆ ಬಂದ ಬಾಧೆಗಳಲ್ಲಿ, ಕೆಂಪು ಸಮುದ್ರವನ್ನು ಇಬ್ಭಾಗಿಸಿದ್ದರಲ್ಲಿ ಮತ್ತು ಹಗಲಿನಲ್ಲಿ ನೆರಳನ್ನು, ರಾತ್ರಿಯಲ್ಲಿ ಬೆಳಕನ್ನು, ಕುಡಿಯುವುದಕ್ಕೆ ನೀರನ್ನು, ಊಟಕ್ಕೆ ಆಹಾರವನ್ನು ಅದ್ಭುತಕರವಾಗಿ ಒದಗಿಸಿ ಕೊಟ್ಟಿದ್ದರಲ್ಲಿ ದೇವರ ಶಕ್ತಿಯನ್ನು ಅವರು ಅನುಭವಿಸಿದ್ದರು. ಅವರ ಬಟ್ಟೆಗಳೂ ಹರಿದುಹೋಗಲಿಲ್ಲ. ಆದರೆ ಅವರು ದೇವರಿಗೆ ವಿರುದ್ಧವಾಗಿಯೂ ಮೋಶೆಗೆ ವಿರುದ್ಧವಾಗಿಯೂ ದೂಷಿಸಲು ಪ್ರಾರಂಭಿಸಿದರು. ಅವರು ಅಜ್ಞಾನದಿಂದ ಹಾಗೆ ಬೇಡಿಕೊಳ್ಳಲಿಲ್ಲ. ಆದರೆ "ದೇಶವನ್ನು ಸ್ವಾಧೀನಪಡಿಸಿಕೊಳ್ಳಿರಿ" ಎಂದು ದೇವರು ಹೇಳಿದ್ದು ಅವರಿಗೆ ತಿಳಿದಿತ್ತು. ಆತನು ಅವರಿಗೋಸ್ಕರ ಮಾಡಿದ್ದ ಮಹತ್ಕಾರ್ಯಗಳು ಅವರಿಗೆ ತಿಳಿದಿತ್ತು, ಆದರೂ ಅವರು ಅದನ್ನು ನಿರಾಕರಿಸಿದರು.

ಇಬ್ರಿಯ ಪತ್ರಿಕೆಯಲ್ಲಿ ನಾವು ಹೀಗೆ ಓದುತ್ತೇವೆ,

ಮೊದಲು ಶುಭವರ್ತಮಾನವನ್ನು ಕೇಳಿದವರು ಅವಿಧೇಯರಾದ ಕಾರಣ ಅದರಲ್ಲಿ ಸೇರದೆ ಹೋದದ್ದರಿಂದಲೂ (ಇಬ್ರಿಯ 4:6b).

ದೇವರು ನಡೆಸುವ ಪ್ರಕಾರ ನಡೆಯಲು ಅವರ ಉದ್ದೇಶಪೂರ್ವಕವಾಗಿ ತಿರಸ್ಕರಿಸಿದ್ದರಿಂದ, ಅವರೆಲ್ಲರೂ ಅರಣ್ಯದಲ್ಲಿ ಸತ್ತುಹೋದರು.

- *ಪರಿಹಾರ*

ನಾವು ನಮ್ಮ ಜೀವನದ ಒಂದು ವಿಷಯದಲ್ಲಿ ದೇವರಿಗೆ ಅವಿಧೇಯರಾಗಿ, ಬೇರೆ ವಿಷಯಗಳಲ್ಲಿ ನಂಬಿಕೆಯಿಂದ ಜೀವಿಸಲು ಸಾಧ್ಯವಿಲ್ಲ. ನಾವು ಅವಿಧೇಯತೆಯನ್ನು ಸಮರ್ಥಿಸಿಕೊಳ್ಳಬಾರದು. ನಾವು ಅದನ್ನು ಬೇರೆಯವರ ಮೇಲೆ ಹೊರಿಸಬಾರದು. ಅವಿಧೇಯತೆಗೆ ಇರುವ ಏಕೈಕ ಪರಿಹಾರವೇನಂದರೆ ನಾವು ನಮ್ಮ ಪಾಪಗಳನ್ನು ಒಪ್ಪಿಕೊಳ್ಳಬೇಕು ಆಗ ದೇವರು ನಮ್ಮನ್ನು ಕ್ಷಮಿಸುತ್ತಾನೆ (1 ಯೋಹಾನ 1:9).

ಇಸ್ರಾಯೇಲ್ ಜನರ ಹೊಸ ತಲೆಮಾರಿನವರಂತೆ ನಾವು ತೀರ್ಮಾನ ತೆಗೆದುಕೊಂಡು ಹೀಗೆ ಹೇಳೋಣ,

"ನಮ್ಮ ದೇವರಾದ ಯೆಹೋವನನ್ನೇ ಸೇವಿಸುತ್ತಾ, ಆತನ ಮಾತನ್ನು ಕೇಳುವೆವು ಅಂದರು" (ಯೆಹೋಶುವ 24:24b).

**ಸಂದೇಹ ಮತ್ತು ಅಪನಂಬಿಕೆ**

ಸಂದೇಹವೂ ಅಪನಂಬಿಕೆಯೂ ಒಂದೇ ರೀತಿಯಾಗಿವೆ ಅವು ನಮ್ಮ ನಂಬಿಕೆಗೆ ಬಲಿಷ್ಠವಾದ ಎರಡು ಶತ್ರುಗಳಾಗಿವೆ.

ಸಂದೇಹವೆಂದರೆ ಯಾವುದಾದರೂ ಒಂದು ವಿಷಯದ ಕುರಿತು ನಿರ್ಧರಿಸಲಾಗದಿರುವ ಸಂದಿಗ್ದತೆ ಅಥವಾ ಸಂಶಯ ಎಂದು ವಿವರಿಸಲಾಗಿದೆ; ನಂಬದೇ ಇರುವುದಕ್ಕೆ ಒಲವು ತೋರುವುದು; ಆಗುವುದಿಲ್ಲವೆಂದು ಪರಿಗಣಿಸುವುದು: ನಿಶ್ಚಯ ಇಲ್ಲದಿರುವಿಕೆ, ಅದು ಪರಿಹಾರವನ್ನು ಕಾಣದಂತೆ ಮಾಡುತ್ತದೆ. ಸಂಶಯ ಎಂದರೆ ಭಯ, ಆತಂಕ ಅಥವಾ ಸಂಶಯಾಸ್ಪದವಾಗಿರುವುದು.

ಅಪನಂಬಿಕೆ ಎಂದರೆ ನಂಬುವುದರಲ್ಲಿ ವಿಫಲರಾಗುವುದು, ಅಥವಾ ನಂಬಿಕೆಯಲ್ಲಿ ಕೊರತೆಯುಳ್ಳವರಾಗಿರುವುದು.

- *ದೇವರ ವಾಕ್ಯದ ಕುರಿತಾದ ಅಜ್ಞಾನ*

ದೇವರ ವಾಕ್ಯವು ಒಂದು ವಿಷಯದ ಕುರಿತು ಏನು ಹೇಳುತ್ತದೆ ಎಂಬುದರ ಬಗ್ಗೆ ಅಜ್ಞಾನವುಳ್ಳವರಾಗಿರುವುದು ಅಪನಂಬಿಕೆ

ಉಂಟಾಗುವುದಕ್ಕಿರುವ ಸಾಮಾನ್ಯ ಕಾರಣವಾಗಿದೆ. ನಾವು ಗೌರವಿಸುವಂಥ ವ್ಯಕ್ತಿಗಳಿಂದ ಕೇಳಿದ ತಪ್ಪಾದ ಬೋಧನೆಯಿಂದ ಅದು ಉಂಟಾಗಿರಬಹುದು.

ಹೋಶೇಯನು ಹೀಗೆ ಬರೆದಿದ್ದಾನೆ,

ನನ್ನ ಜನರು ಜ್ಞಾನಹೀನರಾಗಿ ಹಾಳಾಗಿದ್ದಾರೆ (ಹೋಶೇಯ 4:6a).

ಅಪೊಸ್ತಲನಾದ ಯೋಹಾನನು "ಮತ್ತೊಬ್ಬ ಶಿಷ್ಯನ" ಕುರಿತು ಬರೆದಿರುವ ವಿಷಯವನ್ನು ನೋಡುವಾಗ, ತೆರೆದ ಸಮಾಧಿಯ ಬಳಿಗೆ ಬಂದು ಅವನು "ನೋಡಿ ನಂಬಿದನು" ಎಂದು ನಮಗೆ ತಿಳಿಸಿದ್ದಾನೆ.

ಆಗ ಸಮಾಧಿಯ ಬಳಿಗೆ ಮೊದಲು ಬಂದಿದ್ದ ಆ ಮತ್ತೊಬ್ಬ ಶಿಷ್ಯನು ಸಹ ಒಳಕ್ಕೆ ಹೋಗಿ ನೋಡಿ ನಂಬಿದನು. ಆತನು ಸತ್ತ ಮೇಲೆ ಜೀವದಿಂದೆದ್ದು ಬರಬೇಕೆಂಬದಾಗಿ ಶಾಸ್ತ್ರದಲ್ಲಿ ಬರೆದಿರುವ ಮಾತು ಅವರಿಗೆ ಇನ್ನೂ ತಿಳಿದಿರಲಿಲ್ಲ (ಯೋಹಾನ 20:8,9).

ಅವನಿಗೆ ದೇವರ ವಾಕ್ಯವನ್ನು ತಿಳಿಯದ ಕಾರಣ ನಂಬುವುದಕ್ಕಿಂತ ಮೊದಲು ಅವನು ಅದನ್ನು ಕಣ್ಣಾರೆ ನೋಡಬೇಕಾಗಿತ್ತು. ಆದ್ದರಿಂದ ನಾವು ನಂಬಬೇಕಾದರೆ, ನಮಗೆ ದೇವರ ವಾಕ್ಯವು ತಿಳಿದಿರಬೇಕಾದುದು ಮುಖ್ಯವಾಗಿದೆ.

- *ನಮ್ಮ ಪಂಚೇದ್ರಿಯಗಳನ್ನು ಅನುಸರಿಸುವುದು*

ಅದೇ ಅಧ್ಯಾಯದ ಮುಂದಿನ ಭಾಗದಲ್ಲಿ, ಬೇರೆ ಶಿಷ್ಯರು ಕೂಡಿ ಬಂದಿದ್ದ ಸ್ಥಳಕ್ಕೆ ತೋಮನು ಬಂದನು.

ಆದದರಿಂದ ಉಳಿದ ಶಿಷ್ಯರು ನಾವು ಸ್ವಾಮಿಯನ್ನು ನೋಡಿದ್ದೇವೆ ಎಂದು ಅವನಿಗೆ ಹೇಳಿದರು. ಅದಕ್ಕೆ ಅವನು ನಾನು ಆತನ ಕೈಗಳಲ್ಲಿ ಮೊಳೆಗಳಿಂದಾದ ಗಾಯವನ್ನು ನೋಡಿ ಆ ಮೊಳೆಯ ಗಾಯದಲ್ಲಿ ನನ್ನ ಬೆರಳನ್ನು ಇಟ್ಟು ಆತನ ಪಕ್ಕೆಯಲ್ಲಿ ನನ್ನ ಕೈಯನ್ನು ಹಾಕಿದರೆ ಹೊರತು ನಿಮ್ಮ ಮಾತನ್ನು ನಂಬುವದೇ ಇಲ್ಲ ಅಂದನು (ಯೋಹಾನ 20:25).

ಯೇಸು ಅಲ್ಲಿಗೆ ಬಂದಾಗ ಆತನು ತೋಮನೊಂದಿಗೆ ಮಾತನಾಡಿದನು.

ಆ ಮೇಲೆ ತೋಮನಿಗೆ, ನಿನ್ನ ಬೆರಳನ್ನು ಈ ಕಡೆ ಚಾಚಿ ನನ್ನ ಕೈಗಳನ್ನು ಮುಟ್ಟಿ ನೋಡು. ನಿನ್ನ ಕೈ ಚಾಚಿ ನನ್ನ ಪಕ್ಕೆಯಲ್ಲಿ ಹಾಕು. ನಂಬದವನಾಗಿರಬೇಡ ನಂಬುವವನಾಗು ಎಂದು ಹೇಳಿದನು.

ತೋಮನು ಆತನಿಗೆ, ನನ್ನ ಸ್ವಾಮಿ ನನ್ನ ದೇವರು. ಎಂದು ಹೇಳಿದನು.

ಯೇಸು ಆತನಿಗೆ, ನೀನು ನನ್ನನ್ನು ನೋಡಿದ್ದರಿಂದ ನಂಬಿದ್ದೀ. ನೋಡದೆ ನಂಬಿದವರು ಧನ್ಯರು ಎಂದು ಹೇಳಿದನು. (ಯೋಹಾನ 20:27-29).

ಯೇಸು ಇಂದು ಸಹ ನಮಗೆ ಅದನ್ನೇ ಹೇಳುತ್ತಿದ್ದಾನೆ. "ನಂಬದವನಾಗಿರಬೇಡ ನಂಬುವವನಾಗು. ನೋಡದೆ ನಂಬಿದವರು ಧನ್ಯರು.”

ತೋಮನು, "ನಾನು ನೋಡದ ಹೊರತು ... ನಾನು ನಂಬುವುದಿಲ್ಲ" ಎಂದು ಹೇಳಿದ್ದನು. ನಮ್ಮ ಪಂಚೇಂದ್ರಿಯದಿಂದ ಉಂಟಾಗುವ ತಿಳಿವಳಿಕೆಯನ್ನು ಆತುಕೊಳ್ಳುವುದು ಪರಿಣಾಮವಾಗಿ ಅಪನಂಬಿಕೆ ಉಂಟಾಗುತ್ತದೆ. ದೇವರ ವಾಕ್ಯವನ್ನು ತಿಳಿದುಕೊಳ್ಳುವ ಬದಲು ನಾವು ಏನನ್ನು ನೋಡುತ್ತೇವೋ ಅದು ಅಪನಂಬಿಕೆಗೆ ನಡೆಸುತ್ತದೆ. ದೇವರ ವಾಕ್ಯವನ್ನು ತಿಳಿದುಕೊಳ್ಳುವುದರ ಮೂಲಕ ಮಾತ್ರವೇ ನಂಬಿಕೆಯು ಬರುತ್ತದೆ.

- *ಹೃದಯದ ಕಾಠಿಣ್ಯತೆ*

ಯೇಸು ತನ್ನ ಶಿಷ್ಯರನ್ನು ಅವರ ಅಪನಂಬಿಕೆಗಾಗಿಯೂ ಹೃದಯದ ಕಾಠಿಣ್ಯತೆಗಾಗಿಯೂ ಗದರಿಸಿದನು.

ಆದರೆ ಯೇಸು ಅವರಿಗೆ ಪ್ರವಾದಿಯು ಬೇರೆ ಎಲ್ಲಿದ್ದರೂ ಅವನಿಗೆ ಮರ್ಯಾದೆ ಉಂಟು. ಆದರೆ ಸ್ವದೇಶದಲ್ಲಿಯೂ ಸ್ವಂತ ಮನೆಯಲ್ಲಿಯೂ ಮಾತ್ರ ಮರ್ಯಾದೆ ಇಲ್ಲ ಅಂದನು. ಅವರು ಆತನನ್ನು ನಂಬದೇ ಹೋದದರಿಂದ ಆತನು ಅಲ್ಲಿ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲ (ಮತ್ತಾಯ 13:57,58).

ಪೇತ್ರನು ನೀರಿನ ಮೇಲೆ ನಡೆದು ಯೇಸುವಿನ ಬಳಿ ಬರುತ್ತಿದ್ದಾಗ ಅವನು ಯೇಸುವಿನ ಮೇಲಿನಿಂದ ತನ್ನ ದೃಷ್ಟಿಯನ್ನು ಬೇರೆಡೆಗೆ ತಿರಿಗಿಸಿದನು. ಅವನು ತನ್ನ ಸುತ್ತಮುತ್ತಲಿನ ಪರಿಸ್ಥಿತಿಗಳನ್ನು ನೋಡಿ ಭಯಪಟ್ಟು ಮುಳುಗಲು ಪ್ರಾರಂಭಿಸಿದನು. ಅವನು ಮುಳುಗುತ್ತಿರುವಾಗ ಯೇಸು ಅವನ ಕೈ ಹಿಡಿದು ಮೇಲೆತ್ತಿದನು.

ಆ ಕ್ಷಣವೇ ಯೇಸು ಕೈಚಾಚಿ ಅವನನ್ನು ಹಿಡಿದು ಅಲ್ಪ ವಿಶ್ವಾಸಿಯೇ ಯಾಕೆ ಸಂದೇಹ ಪಟ್ಟೆ ಎಂದು ಹೇಳಿದನು (ಮತ್ತಾಯ 14:31).

ನಾವು ನಮ್ಮ ದೃಷ್ಟಿಯನ್ನು ಯೇಸುವಿನ ಕಡೆಯಿಂದ ತಿರಿಗಿಸಿ, ನಮ್ಮ ಶಾರೀರಿಕ ಕಣ್ಣುಗಳಿಂದ ನಾವು ನೋಡುವಂಥ ಸ್ವಾಭಾವಿಕ ಪರಿಸ್ಥಿತಿಗಳತ್ತ ದೃಷ್ಟಿಸುವಾಗ ಸಂದೇಹವು ಬರುತ್ತದೆ.

ಯೇಸು, "ನಂಬು ಸಂದೇಹಪಡಬೇಡ" ಎಂದು ಹೇಳಿದನು.

ಬೆಳಿಗ್ಗೆ ಆತನು ಪಟ್ಟಣಕ್ಕೆ ತಿರಿಗಿ ಹೋಗುತ್ತಿರುವಾಗ ಹಸಿದನು. ದಾರಿಯಲ್ಲಿ ಒಂದು ಅಂಜೂರದ ಮರವನ್ನು ಕಂಡು ಅದರ ಹತ್ತಿರಕ್ಕೆ ಹೋಗಿ ಅದರಲ್ಲಿ ಬರೀ ಎಲೆಗಳನ್ನೇ ಹೊರತು ಮತ್ತೇನೂ ಕಾಣದೆ ಅದಕ್ಕೆ ಇನ್ನು ಮೇಲೆ ನಿನ್ನಲ್ಲಿ ಫಲವು ಎಂದೆಂದಿಗೂ ಆಗದೆ ಹೋಗಲಿ ಎಂದು ಹೇಳಿದನು.

ಆ ಕ್ಷಣವೇ ಆ ಅಂಜೂರದ ಮರವು ಒಣಗಿ ಹೋಯಿತು. ಶಿಷ್ಯರು ಅದನ್ನು ನೋಡಿ ಬೆರಗಾಗಿ – ಈ ಅಂಜೂರದ ಮರವು ಒಂದು ಕ್ಷಣದಲ್ಲೇ ಒಣಗಿಹೋಯಿತಲ್ಲಾ ಅದು ಹೇಗೆ? ಅಂದರು.

ಅದಕ್ಕೆ ಯೇಸು ನಿಮಗೆ ಸತ್ಯವಾಗಿ ಹೇಳುತ್ತೆನೆ ನೀವು ಸಂಶಯ ಪಡದೆ ನಂಬಿದರೆ ನಾನು ಅಂಜೂರ ಮರಕ್ಕೆ ಮಾಡಿದಂಥದನ್ನು ನೀವು ಮಾಡುವಿರಿ. ಇದು ಮಾತ್ರವಲ್ಲದೆ ಈ ಬೆಟ್ಟಕ್ಕೆ ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿದರೆ ಅದೂ ಆಗುವದು. ನೀವು ನಂಬಿಕೊಂಡು ಪ್ರಾರ್ಥನೆಯಲ್ಲಿ ಏನೇನು ಬೇಡಿಕೊಳ್ಳುವಿರೋ ಅದನ್ನೆಲ್ಲಾ ಹೊಂದುವಿರಿ (ಮತ್ತಾಯ 21:18-22).

ಯೇಸು ಮಾರ್ಕನ ಸುವಾರ್ತೆಯಲ್ಲಿಯೂ ಸಹ ನಮ್ಮ ಹೃದಯಗಳಲ್ಲಿ ಸಂದೇಹ ಬರಬಾರದು ಎಂಬುದನ್ನು ಒತ್ತಿ ಹೇಳಿದ್ದಾನೆ.

ನಿಮಗೆ ಸತ್ಯವಾಗಿ ಹೇಳುತ್ತೇನೆ. ಯಾವನಾದರೂ ಈ ಬೆಟ್ಟಕ್ಕೆ ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿ ತನ್ನ ಮನಸ್ಸಿನಲ್ಲಿ ಸಂಶಯಪಡದೆ ತಾನು ಹೇಳಿದ್ದು ಆಗುವದೆಂದು ನಂಬಿದರೆ ಅವನು ಹೇಳಿದಂತೆಯೇ ಆಗುವದು (ಮಾರ್ಕ 11:23).

## ಬದಲಿ ವಿಷಯವನ್ನು ಸ್ವೀಕಾರ ಮಾಡಿಕೊಳ್ಳುವುದು

ಖೋಟಾ ನೋಟನ್ನು ಮಾಡುವ ವ್ಯಕ್ತಿಯು ತನ್ನ ನೋಟು ಆದಷ್ಟು ನಿಜವಾದ ನೋಟಿನ ಹಾಗೆ ಕಾಣುವಂತೆ ಮಾಡಲು ಪ್ರಯತ್ನಿಸುತ್ತಾನೆ. ನಿಜವಾದ ನಂಬಿಕೆಗೆ ಬದಲಾಗಿ ಬದಲಿ ವಿಷಯಗಳನ್ನು ಸ್ವೀಕಾರ ಮಾಡಿಕೊಳ್ಳುವಂತೆ ಸೈತಾನನು ನಮ್ಮನ್ನು ಮೋಸಗೊಳಿಸುವುದರಲ್ಲಿ ತುಂಬಾ ಯಶಸ್ವಿಯಾಗಿದ್ದಾನೆ.

➢ *ಭರವಸೆ*

ಇಬ್ರಿಯ ಪುಸ್ತಕದ ಲೇಖಕನು ಹೀಗೆ ಬರೆದಿದ್ದಾನೆ,

ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳಿದುಕೊಳ್ಳವದೂ ಆಗಿದೆ (11:1).

ಭರವಸೆಯ ಕುರಿತು ನಾವು ಈಗಾಗಲೇ ಸ್ವಲ್ಪ ವಿವರವಾಗಿ ನೋಡಿಕೊಂಡಿದ್ದೇವೆ, ಆದರೆ ಇಲ್ಲಿ ಅದನ್ನು ನಂಬಿಕೆಯ ಶತ್ರುವಾಗಿ ಪರಿಗಣಿಸಬೇಕು. ನಮ್ಮ ಉತ್ತರಗಳನ್ನು ಪಡೆದುಕೊಳ್ಳುವುದಕ್ಕಾಗಿ ನಾವು ನಮ್ಮ ಭರವಸೆಯನ್ನು ನಂಬಿಕೆಯಾಗಿ ಪರಿವರ್ತಿಸಬೇಕು. ಭವಿಷ್ಯದಲ್ಲಿ ಯಾವುದಾದರೂ ಒಂದು ಸಮಯದಲ್ಲಿ ಉತ್ತರ ಪಡೆದುಕೊಳ್ಳುವುದಕ್ಕಾಗಿ ನಮ್ಮ ಭರವಸೆಯನ್ನು ನಂಬಿಕೆಯಾಗಿ ಪರಿವರ್ತಿಸಬೇಕು, ಈಗ ಅದು ಸಂಭವಿಸುವುದಕ್ಕಾಗಿ ನಂಬಿಕೆಯಾಗಿ ಪರಿವರ್ತಿಸಬೇಕು.

**ಯೇಸು ಹೀಗೆ ಹೇಳಿದ್ದಾನೆ,**

ಆದಕಾರಣ ನೀವು ಪ್ರಾರ್ಥನೆ ಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ. ಅದು ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ (ಮಾರ್ಕ 11:24).

ಆತನು ನಿರೀಕ್ಷಿಸಿ ಭಾವಿಸಿರಿ ಎಂದು ಹೇಳಲಿಲ್ಲ ಆದರೆ ನೀವು ಅವುಗಳನ್ನು ಹೊಂದಿದ್ದೀರಿ ಎಂದು ನಂಬಿರಿ ಎಂದು ಹೇಳಿದನು.

➢ *ಮಾನಸಿಕ ಒಪ್ಪಂದ*

ಮನಸ್ಸು ಒಂದು ಅದ್ಭುತಕರವಾದ ಸಾಧನವಾಗಿದೆ, ಆದರೂ ಕೂಡ ಕೆಲವೊಮ್ಮೆ ನಂಬಿಕೆ ಉಳ್ಳವರಾಗಿರಲು ಅದು ಅಡ್ಡಿಯಾಗಬಹುದು. ಸ್ವಾಭಾವಿಕ ಮನಸ್ಸಿಗೆ ಆತ್ಮಿಕ ಮಂಡಲದಲ್ಲಿರುವ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಆಗುವುದಿಲ್ಲ. ದೇವರ ವಾಕ್ಯವನ್ನು ಅರ್ಥಮಾಡಿಕೊಳ್ಳಲು ಮನಸ್ಸು ಶ್ರಮಿಸಬಹುದು, ಆದರೆ ಅದಕ್ಕಾಗಿ ಮನಸ್ಸು ಆತ್ಮಕ್ಕೆ ಅಧೀನವಾಗಿರಬೇಕು.

ಸ್ವಾಭಾವಿಕ ಮನಸ್ಸಿಗೆ ದೇವರ ಮರ್ಮಗಳನ್ನು ಗ್ರಹಿಸಿಕೊಳ್ಳಲು ಆಗುವುದಿಲ್ಲ.

ಪ್ರಾಕೃತ ಮನುಷ್ಯನು ದೇವರಾತ್ಮ ವಿಷಯಗಳನ್ನು ಬೇಡವೆನ್ನುತ್ತಾನೆ. ಅವು ಅವನಿಗೆ ಹುಚ್ಚು ಮಾತಾಗಿ ತೋರುತ್ತವೆ. ಅವು

ಆತ್ಮವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು (1 ಕೊರಿಂಥ 2:14).

ನಾವು ನಂಬುವಂಥ ವಿಷಯಗಳಲ್ಲಿ ಎರಡು ವಿಧಗಳಿವೆ. ಒಂದು ಸ್ವಾಭಾವಿಕವಾದ, ಮಾನವೀಯ ವಾಸ್ತವಾಂಶಗಳು, ಮತ್ತೊಂದು ದೇವರ ವಾಕ್ಯದಲ್ಲಿ ಪ್ರಕಟವಾಗಿರುವ ಸತ್ಯ. ಪ್ರಕಟವಾಗಿರುವ ಸತ್ಯ, ಆತ್ಮಿಕವಾದ ಸತ್ಯ ಇದೆ, ಅಥವಾ ನಮ್ಮ ಸ್ವಾಭಾವಿಕ ಪಂಚೇದ್ರಿಯಗಳಿಂದ ನಾವು ಗ್ರಹಿಸುವ ಭೌತಿಕ ಸಂಗತಿಗಳಿವೆ.

ಮಾನಸಿಕ ಒಪ್ಪಂದವು ನಮ್ಮ ಮನಸ್ಸಿನ ಮೂಲಕ ನಂಬಿಕೆಯನ್ನು ಹೊಂದಲು ಪ್ರಯತ್ನಿಸುತ್ತದೆ. ಅದು ಆಗದ ಕಾರ್ಯ. ನಂಬಿಕೆಯು ನಮ್ಮ ಆತ್ಮದ ಮೂಲಕ ಬರಬೇಕು. ನೂತನವಾಗದಿರುವ ಮನಸ್ಸುಗಳು ಆತ್ಮನಿಗೆ ಸಂಬಂಧಪಟ್ಟ ವಿಷಯಗಳಿಗೆ ವಿರುದ್ಧವಾಗಿ ಹೋರಾಡುತ್ತವೆ. ನಮ್ಮ ಮನಸ್ಸನ್ನು ದೇವರ ವಾಕ್ಯದ ಪ್ರಕಟಣೆಯ ಮೂಲಕ ನೂತನಪಡಿಸಿಕೊಳ್ಳಬೇಕು.

ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರದದ್ದು ಅಂದರೆ ಉತ್ತಮವಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ (ರೋಮಾಪುರ 12:2).

- *ನಂಬಿಕೆ ಅಥವಾ ಊಹೆ*

ದೇವರ ವಾಕ್ಯವು ನಮಗೆ ವಾಗ್ದಾನ ಮಾಡುವಂಥದ್ದನ್ನು ನಂಬುವ ಸಂಪೂರ್ಣವಾದ ಹಕ್ಕು ನಮಗಿದೆ. ಆದರೆ ನಾವು ಅದನ್ನು ಮೀರಿ ಹೋದಾಗ, ನಾವು ಊಹೆ ಮಾಡುತ್ತಾ ಕಾರ್ಯಮಾಡುತ್ತೇವೆ.

ವೆಬ್‌ಸ್ಟರ್ ನಿಘಂಟು, "ಊಹೆ" ಎಂಬ ಪದಕ್ಕೆ, "ಸತ್ಯವೆಂದು ಎಣಿಸುವುದು ಅಥವಾ ಭಾವಿಸುವುದು, ಪರಿಶೀಲಿಸದೆ ಅಥವಾ ಯಾವುದೇ ಆಧಾರವಿಲ್ಲದೆ ನಂಬಿಕೆಯೆಂದು ಮಾನ್ಯ ಮಾಡುವುದು, ಸಂಭವನೀಯತೆ ಎಂಬ ಬಲದ ಮೇಲೆ ಆಧಾರಗೊಳ್ಳುವುದು, ಹಗುರವಾಗಿ ಪರಿಗಣಿಸುವುದು, ಊಹಿಸುವುದು, ಕಲ್ಪಿಸುವುದು, ಭಾವಿಸುವುದು" ಎಂದು ಅರ್ಥ ವಿವರಣೆಯನ್ನು ಕೊಡುತ್ತದೆ.

ದೇವರು ನಿಮ್ಮೊಂದಿಗೆ ಮಾತನಾಡಬಹುದು. ಆತನು ನಿಮಗೆ ಒಂದು ವಾಕ್ಯವನ್ನು ಕೊಡಬಹುದು, ಆ ವಾಕ್ಯದ ಅಥವಾ ದರ್ಶನದ ನೆರವೇರಿಕೆಗಾಗಿ ನೀವು ನಂಬಬೇಕೆಂದು ನಿಮಗೆ ಸವಾಲನ್ನು ಹಾಕಲ್ಪಡುತ್ತದೆ. ಅದು ಊಹೆಯಲ್ಲ.

ಆದಾಗ್ಯೂ, ನಾವು ಪಡೆದುಕೊಳ್ಳುವ ಪ್ರತಿಯೊಂದು ವಾಕ್ಯವನ್ನು ಅಥವಾ ದರ್ಶನವನ್ನು ನಾವು ಎಚ್ಚರಿಕೆಯಿಂದ ವಿವೇಚಿಸಬೇಕು. ಅದು ನೂರು ಪ್ರತಿಶತದಷ್ಟು ದೇವರ ವಾಕ್ಯದೊಂದಿಗೆ ಹೊಂದಿಕೆಯಾಗುತ್ತದೆಯೇ? ನಮ್ಮ ಉದ್ದೇಶ ಏನು? ಅದು ತಾನಾಗಿಯೇ ನೆರವೇರುತ್ತದೆಯೇ? ಅದು ದೇಹದ ವೈಯಕ್ತಿಕ ಆಸೆಯನ್ನು ಈಡೇರಿಸುತ್ತದೆಯೇ? ಇವೆಲ್ಲವು ಎಚ್ಚರಿಕೆಯ ಘಂಟೆಗಳಾಗಿವೆ

ರೋಮಾಪುರ 12:3 ವಾಕ್ಯ ಭಾಗವನ್ನು ಮತ್ತೊಮ್ಮೆ ನೋಡಿಕೊಳ್ಳೋಣ.

ದೇವರು ನನಗೆ ಕೃಪೆಮಾಡಿದ ಸೇವೆಯನ್ನು ನಡಿಸಿ ನಿಮ್ಮಲ್ಲಿ ಒಬ್ಬೊಬ್ಬನಿಗೆ ಹೇಳುವದೇನಂದರೆ ಯಾರು ತನ್ನ ಯೋಗ್ಯತೆ ಮೀರಿ ತನ್ನನ್ನು ಭಾವಿಸಿಕೊಳ್ಳದೆ ದೇವರು ಒಬ್ಬೊಬ್ಬನಿಗೆ ಎಂಥೆಂಥ ವಿಶ್ವಾಸ ಬಲವನ್ನು ಕೊಟ್ಟನೋ ಅದಕ್ಕೆ ತಕ್ಕ ಹಾಗೆ ನ್ಯಾಯವಾದ ಅಭಿಪ್ರಾಯದಿಂದ ತನ್ನನ್ನು ಭಾವಿಸಿಕೊಳ್ಳಬೇಕು.

## ನಮ್ಮ ವೈಯುಕ್ತಿಕ ಶತ್ರುಗಳನ್ನು ಸೋಲಿಸುವುದು

ನಮ್ಮ ನಂಬಿಕೆಗೆ ವಿರುದ್ಧವಾಗಿರುವ ಶತ್ರುಗಳನ್ನು ಹೇಗೆ ಎದುರಿಸಬೇಕು ಎಂಬುದರ ಕುರಿತು ಯೇಸು ಕಲಿಸಿಕೊಟ್ಟ ಎರಡು ಮುಖ್ಯ ವಿಷಯಗಳಿವೆ.

### ಉಪವಾಸ

ದೇವರ ನಡೆಸುವಿಕೆಗೆ ಅನುಗುಣವಾಗಿ ಉಪವಾಸ ಮಾಡುವಾಗ, ನಮ್ಮ ಸ್ವಾಭಾವಿಕ ತಿಳಿವಳಿಕೆಯು ನಮ್ಮನ್ನು ನಡೆಸುವಂಥ ಕಾರ್ಯವನ್ನು ನಿರಾಕರಿಸಿ, ನಮ್ಮ ಆತ್ಮಿಕ ಇಂದ್ರಿಯಗಳ ಮಂಡಲಕ್ಕೆ ಹೆಚ್ಚೆಚ್ಚು ಸರಾಗವಾಗಿ ಸಾಗುವ ಸಮಯವಾಗಿ ಮಾರ್ಪಡುತ್ತದೆ.

### ಪ್ರಾರ್ಥನೆ

ವಾಕ್ಯವನ್ನು ಓದುತ್ತಾ ಧ್ಯಾನಿಸುತ್ತಾ ಮಾಡುವ ಪ್ರಾರ್ಥನೆಯು, ನಾವು ದೇವರ ಸ್ವರವನ್ನು ಉತ್ತಮವಾಗಿ ಕೇಳಿಸಿಕೊಳ್ಳುವ ಸಮಯವಾಗಿರುತ್ತದೆ

ಮೂರ್ಛೆರೋಗದಿಂದ ಬಳಲುತ್ತಿದ್ದ ಹುಡುಗನಲ್ಲಿದ್ದ ದೆವ್ವವನ್ನು ಬಿಡಿಸುವುದಕ್ಕೆ ಏಕೆ ನಮ್ಮಿಂದ ಆಗಲಿಲ್ಲ ಎಂದು ಶಿಷ್ಯರು ಯೇಸುವಿನ ಬಳಿಯಲ್ಲಿ ಕೇಳಿದಾಗ, ಅವರ ಅಪನಂಬಿಕೆಯಿಂದಾಗಿ ಅದು ಆಗಲಿಲ್ಲ ಎಂದು ಯೇಸು ಹೇಳಿದನು.

ಆದ್ದರಿಂದ ಯೇಸು ಅವರಿಗೆ,

"ನಿಮ್ಮ ಅಪನಂಬಿಕೆಯಿಂದಲೇ ಆಗಲಿಲ್ಲ..." (ಮತ್ತಾಯ 17:20a)

ಮುಂದಿನ ವಾಕ್ಯದಲ್ಲಿ, ಆತನು ಪ್ರಾರ್ಥನೆ (ದೇವರೊಂದಿಗಿನ ಸಂಭಾಷಣೆ) ಮತ್ತು ಉಪವಾಸವು ಹೇಗೆ ನಮ್ಮ ಜೀವನದಲ್ಲಿರುವ ಅಪನಂಬಿಕೆಯನ್ನು ಎದುರಿಸುವ ಕೀಲಿಕೈಗಳಾಗಿವೆ ಎಂಬುದರ ಮಹತ್ವದ ಕುರಿತು ಒತ್ತಿ ಹೇಳಿದನು.

"ಈ ರೀತಿಯ ದೆವ್ವಗಳು ಪ್ರಾರ್ಥನೆಯಿಂದಲೇ ಹೊರತು ಬೇರೆ ಯಾವ ರೀತಿಯಿಂದಲೂ ಇವುಗಳು ಬಿಟ್ಟು ಹೋಗುವುದಿಲ್ಲವೆಂದು ಅವರಿಗೆ ಹೇಳಿದನು" (ವಚನ 21).

ಇಸ್ರಾಯೇಲ್ ಜನರಂತೆ, "ವಾಗ್ದಾನ ದೇಶ" ವನ್ನು ಮತ್ತು ದೇವರು ನಮ್ಮ ಜೀವನಕ್ಕಾಗಿ ಇಟ್ಟಿರುವ ಶುಭಕರವಾದ ಭವಿಷ್ಯವನ್ನೂ ಆಶೀರ್ವಾದಗಳನ್ನೂ ಕಳೆದುಕೊಳ್ಳಲು ನಾವು ಬಯಸಬಾರದು.

ಇಬ್ರಿಯ ಪುಸ್ತಕದ ಲೇಖಕನು ಪವಿತ್ರಾತ್ಮನ ಮೂಲಕ ಮತ್ತೊಮ್ಮೆ ಹೀಗೆ ಹೇಳಿದ್ದಾನೆ,

ಸಹೋದರರೇ ನೋಡಿಕೊಳ್ಳಿರಿ, ಜೀವಸ್ವರೂಪನಾದ ದೇವರನ್ನು ಬಿಟ್ಟುಹೋಗುವ ಅಪನಂಬಿಕೆಯುಳ್ಳ ಕೆಟ್ಟ ಹೃದಯವು ನಿಮ್ಮೊಳಗೆ ಯಾವನಲ್ಲಿಯೂ ಇರಬಾರದು. ಅವರು ಸೇರಲಾರದೇ ಹೋದದ್ದು ಅಪನಂಬಿಕೆಯಿಂದಲೇ ಎಂದು ತಿಳಿದುಕೊಳ್ಳುತ್ತೇವೆ (ಇಬ್ರಿಯ 3:12,19).

## ನಂಬಿಕೆಯ ಪ್ರಗತಿ

ಪ್ರತಿಯೊಬ್ಬ ವ್ಯಕ್ತಿಗೂ ಓಡುವುದಕ್ಕೆ ಆಗುತ್ತದೆ, ಆದರೆ ಅವರು ಮ್ಯಾರಥಾನ್ ಓಟದಲ್ಲಿ ಓಡಬೇಕಾದರೆ ಮೊದಲು ಅವರು ಸರಿಯಾಗಿ ಓಡುವ ರೀತಿಯನ್ನು ಕಲಿತುಕೊಳ್ಳಬೇಕಾಗುತ್ತದೆ. ಅವರು ಸರಿಯಾಗಿ ಉಸಿರಾಡಲು ಕಲಿತುಕೊಳ್ಳಬೇಕಾಗುತ್ತದೆ. ಅವರು ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಅನೇಕ ದಿವಸಗಳು ಕಳೆಯಬೇಕಾಗುತ್ತದೆ. ಅವರು ತಮ್ಮ ದೇಹಗಳ ಬಲವರ್ಧನೆಗಾಗಿಯೂ ಮ್ಯಾರಥಾನ್ ಓಟಕ್ಕಾಗಿಯೂ ಸಿದ್ಧರಾಗುವುದಕ್ಕಾಗಿ ಪ್ರತಿದಿನವೂ ಗಂಟೆಗಟ್ಟಳೆ ಓಡಬೇಕಾಗುತ್ತದೆ.

ನಮ್ಮ ನಂಬಿಕೆಯ ಸ್ಥಿತಿಯ ಮಟ್ಟವು ಎಷ್ಟರ ಮಟ್ಟಿಗೆ ಇದೆ ಎಂಬುದು ದೇವರಿಗೆ ತಿಳಿದಿದೆ. ನಾವು ನಮ್ಮ ಸುತ್ತಮುತ್ತವಿರುವ ನೆರೆಹೊರೆಯವರ ಬಳಿಗೆ ಅಥವಾ ಕುಟುಂಬದವರ ಬಳಿಗೆ ಹೋಗಿ

ಸುವಾರ್ತೆಯ ಸಾರುವುದರಲ್ಲಿ ವಿಧೇಯರಾಗದ ಹೊರತು, ನಮ್ಮ ಮನೆಗಳನ್ನು ಬಿಟ್ಟು ವಿದೇಶಕ್ಕೆ ಹೋಗುವಂತೆ ಆತನು ನಮಗೆ ಹೇಳುವುದಿಲ್ಲ.

- *ಯೆರೂಸಲೇಮ್ - ಯೂದಾಯ - ಸಮಾರ್ಯ*

ಯೇಸು ಹೇಳಿರುವ ಮಾತು ಆಸಕ್ತಿಕರವಾಗಿದೆ

ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು (ಅ.ಕೃ. 1:8).

ಈ ವಾಕ್ಯಭಾಗದಲ್ಲಿ ಪ್ರಗತಿಯ ಕಾರ್ಯವನ್ನು ಕಾಣುತ್ತೇವೆ.

**ಯೆರೂಸಲೇಮ್** ನಮ್ಮ ಮನೆಯನ್ನು ಪ್ರತಿನಿಧಿಸುತ್ತದೆ.

**ಯೂದಾಯ** ನಾವು ಪ್ರಭಾವ ಬೀರಲಾಗುವ ಕ್ಷೇತ್ರಗಳು - ನಮ್ಮ ಶಾಲೆ, ನಮ್ಮ ಕೆಲಸ, ನಮ್ಮ ನೆರೆಹೊರೆ.

**ಸಮಾರ್ಯ** ಪಟ್ಟಣದ ಕುರಿತು ಆಸಕ್ತಿಕರವಾದ ವಿಷಯವಿದೆ, ಯೆಹೂದ್ಯ ಜನರಿಗೂ ಸಮಾರ್ಯದ ಜನರಿಗೂ ಪರಸ್ಪರ ದ್ವೇಷವಿತ್ತು. ಸಮಾರ್ಯದವರು ಮಿಶ್ರ ಜನಾಂಗದವರಾಗಿದ್ದರು, ಯಹೂದ್ಯರು ತಾವು ಅವರಿಗಿಂತ ಶ್ರೇಷ್ಠರೆಂದು ಭಾವಿಸುತ್ತಿದ್ದರು. ಸಮಾರ್ಯಕ್ಕೆ ಹೋಗುವುದು ತಗ್ಗಿಸಿಕೊಳ್ಳುವ ಅನುಭವವಾಗಿತ್ತು. ಆದಾಗ್ಯೂ, ಅವರು ಅಲ್ಲಿ ಸೇವೆ ಮಾಡಿದಾಗ ಅದು ಇಡೀ ಲೋಕಕ್ಕೆ ಹೋಗುವಂಥ ಬಾಗಿಲು ತೆರೆದುಕೊಡುತ್ತದೆ.

ನಾವು ನಂಬಿಕೆಯ ವಿಷಯದಲ್ಲಿ ಯಾವ ಮಟ್ಟದಲ್ಲಿ ಇದ್ದೇವೋ ಅಲ್ಲಿಂದಲೇ ನಾವು ಪ್ರಾರಂಭಿಸಬೇಕು. ದೇವರ ಮಾತನ್ನು ಮತ್ತೇ ಕೇಳಿಸಿಕೊಂಡು ಆತನು ಹೇಳಿದ ಹಾಗೆ ಮಾಡಬೇಕು.

ನಮ್ಮ ಜೀವನದ ಮೇಲೆ ಪ್ರಭಾವ ಬೀರುವವರ ಕುರಿತು ಜಾಗರೂಕರಾಗಿರಬೇಕು ಎಂಬ ವಿಷಯದ ಮಹತ್ವವನ್ನು ದಾವೀದನು ನಮಗೆ ತಿಳಿಸಿದ್ದಾನೆ.

- *ಕೀರ್ತನೆಗಳು 1:1-3*

ಯಾವನು ದುಷ್ಟರ ಆಲೋಚನೆಯಂತೆ ನಡೆಯದೆ ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ ಧರ್ಮನಿಂದಕರೊಡನೆ ಕೂತುಕೊಳ್ಳದೆ

ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು. ಅವನು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು. ಅಂಥ ಮರವು ತಕ್ಕ ಕಾಲದಲ್ಲಿ ಫಲಕೊಡುತ್ತದಲ್ಲಾ ಅದರ ಎಲೆ ಬಾಡುವದೇ ಇಲ್ಲ. ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವದು (ಕೀರ್ತನೆಗಳು 1:1-3).

ಈ ವಾಕ್ಯಭಾಗದಲ್ಲಿರುವ ಪ್ರಗತಿಯ ಕಾರ್ಯವನ್ನು ಗಮನಿಸಿರಿ. ಮೊದಲು ಒಬ್ಬ ವ್ಯಕ್ತಿಯು ದುಷ್ಟರ ಜೊತೆ ನಡೆಯುತ್ತಾನೆ, ನಂತರ ಅವನು ಅವರೊಂದಿಗೆ ನಿಂತುಕೊಳ್ಳುತ್ತಾನೆ, ಅಂತಿಮವಾಗಿ ಅವನು ಅವರೊಂದಿಗೆ ಕುಳಿತುಬಿಡುತ್ತಾನೆ.

ನಂಬಿಕೆಯಿಂದ ನಡೆಯುವುದು ನಮಗೂ ಮತ್ತು ಸ್ವಾಭಾವಿಕ ಮಂಡಲದಲ್ಲಿ ನಡೆಯುವ ಜನರಿಗೂ ನಡುವೆ ಸಹಜವಾಗಿ ಬೇರ್ಪಡಿಸುವಿಕೆಯನ್ನು ಉಂಟುಮಾಡುತ್ತದೆ. ಆದರೂ ಅವರೊಂದಿಗೆ ನಾವು ಸಂಪರ್ಕದಲ್ಲಿರುತ್ತೇವೆ. ನಾವು ಅವರ ಕುರಿತು ಕಾಳಜಿ ವಹಿಸುತ್ತೇವೆ ಮತ್ತು ಅವರಿಗೆ ಸಹಾಯ ಮಾಡುತ್ತೇವೆ. ಆದರೆ ನಾವು ಅವರ ತತ್ವಗಳನ್ನು ಒಪ್ಪಿಕೊಳ್ಳುವುದಿಲ್ಲ ಮತ್ತು ಅವರ ಜೀವನ ಶೈಲಿಯನ್ನು ಅನುಸರಿಸುವುದಿಲ್ಲ. ಅದಕ್ಕೆ ಬದಲಾಗಿ, ನಮ್ಮ ಜೀವನವು ನಂಬಿಕೆಯ ಮತ್ತು ವಿಧೇಯತೆಯ ಜೀವನವಾಗಿರುತ್ತದೆ.

**ಪರಾಮರ್ಶೆಗಾಗಿರುವ ಪ್ರಶ್ನೆಗಳು**

1. ನಿಮ್ಮ ನಂಬಿಕೆಗೆ ವಿರುದ್ಧವಾಗಿದ್ದ ಮೂರು "ಶತ್ರುಗಳ" ಕುರಿತು ಮತ್ತು ನೀವು ಹೇಗೆ ಪರಿಹಾರ ಕಂಡುಕೊಂಡಿರಿ ಎಂಬುದರ ಕುರಿತು ಬರೆಯಿರಿ.

## ಪಾಠ ಎಂಟು

# ಬಾ, ನೀರಿನ ಮೇಲೆ ನಡೆ

### ಪೀಠಿಕೆ

ಅಗ್ಲ ಭಾಷೆಯಲ್ಲಿ ಶಕ್ತಿಯುತವಾದ ಒಂದು ಗೀತೆ ಇದೆ, *ಬಾ ನನ್ನೊಂದಿಗೆ ನೀರಿನ ಮೇಲೆ ನಡೆ.* ಪೇತ್ರನು ನೀರಿನ ಮೇಲೆ ನಡೆದನು. ಸಂದೇಹವು ತನ್ನೊಳಗೆ ಬರುವುದಕ್ಕೆ ಅವನು ಅನುವು ಮಾಡಿಕೊಟ್ಟನು. ಆದ್ದರಿಂದ ಅವನು ಸೋತುಹೋದನು, ಆದರೆ ಆಗ ಅವನು "ಕರ್ತನೇ, ನನ್ನನ್ನು ಕಾಪಾಡು" ಎಂದು ಕೂಗಿದನು. ಕೂಡಲೇ, ಯೇಸು ತನ್ನ ಕೈಚಾಚಿ ಅವನನ್ನು ಕಾಪಾಡಿದನು. ಪೇತ್ರನು ನೀರಿನ ಮೇಲೆ ನಡೆಯುತ್ತಿದ್ದನು. ನಾನು ಈಗ ಊಹಿಸಿ ಹೇಳುವಂಥದ್ದನ್ನು ಸತ್ಯವೇದಲ್ಲಿ ಹೇಳಿಲ್ಲ, ಪೇತ್ರನೂ ಯೇಸುವೂ ಆ ದೋಣಿಯ ಸುತ್ತಲೂ ನಡೆಯುತ್ತಿರುವುದನ್ನು ಊಹಿಸಿಕೊಂಡು ನೋಡಲು ನಾನು ಬಯಸುತ್ತೇನೆ. ಪೇತ್ರನು ತಾನು ನೀರಿನ ಮೇಲೆ ನಡೆಯಬಲ್ಲೆನು ಎಂದು ಅರಿತುಕೊಂಡಾಗ, ಅವನಿಗೆ ಅದನ್ನು ನಿಲ್ಲಿಸಲು ಮನಸ್ಸಿರಲಿಲ್ಲ ಎಂದು ನಾನು ನೆನಸುತ್ತೇನೆ.

ದೇವರು ತುಂಬಾ ನಂಬಿಗಸ್ತನು! ನಾವು ನಂಬಿಕೆಯಿಂದ ಕಾರ್ಯಮಾಡಲು ಸಿದ್ಧರಾಗಿ ಬರುವಾಗ, ಆತನು ನಮ್ಮೊಂದಿಗೆ ಕೆಲಸ ಮಾಡುತ್ತಾನೆ. ಮಾರ್ಕನು ಹೀಗೆ ಬರೆದಿದ್ದಾನೆ,

ಯೇಸು ಸ್ವಾಮಿಯು ಅವರ ಕೂಡ ಮಾತಾಡಿ ಮೇಲೆ ಆಕಾಶಕ್ಕೆ ಒಯ್ಯಲ್ಪಟ್ಟು ದೇವರ ಬಲಗಡೆಯಲ್ಲಿ ಆಸನಾರೂಢನಾದನು. ಇತ್ತಲಾಗಿ ಅವರು ಹೊರಟುಹೋಗಿ ಎಲ್ಲೆಲ್ಲಿಯೂ ಸುವಾರ್ತೆಯನ್ನು ಸಾರಿದರು. ಮತ್ತು ಕರ್ತನು ಅವರ ಕೂಡ ಕೆಲಸ ಮಾಡುತ್ತಾ, ಸೂಚಕಕಾರ್ಯಗಳಿಂದ ಸುವಾರ್ತೆಯ ವಾಕ್ಯವನ್ನು ಬಲಪಡಿಸುತ್ತಾ ಇದ್ದನು (ಮಾರ್ಕ 16:19,20).

ಅಪೊಸ್ತಲನಾದ ಪೌಲನು ಹೀಗೆ ಬರೆದಿದ್ದಾನೆ,

ನಮ್ಮ ಕರ್ತವಾದ ಯೇಸು ಕ್ರಿಸ್ತನ ದೇವರೂ ಪ್ರಭಾವಸ್ವರೂಪನಾದ ತಂದೆಯೂ ಆಗಿರುವಾತನು ತನ್ನ ವಿಷಯವಾಗಿ ತಿಳುವಳಿಕೆಯನ್ನು ಕೊಟ್ಟು ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥಗಳನ್ನು ತಿಳುಕೊಳ್ಳುವ ಜ್ಞಾನವುಳ್ಳ ಆತ್ಮವನ್ನು ನಿಮಗೆ ದಯಪಾಲಿಸಬೇಕೆಂದು ಪ್ರಾರ್ಥಿಸುತ್ತೇನೆ. ಆತನು ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ ಆತನಿಂದ ಕರಿಸಿಕೊಂಡವರು ನಿರೀಕ್ಷಿಸುವ ಪದವಿ ಎಂಥದೆಂಬದನ್ನೂ

ದೇವಜನರೆಂಬ ಆತನ ಸ್ವಾಸ್ಥ್ಯದ ಮಹಿಮಾತಿಶಯವು ಎಂಥದೆಂಬದನ್ನೂ ನಂಬುವವರಾದ ನಮ್ಮಲ್ಲಿ. ಆತನು ಸಾಧಿಸುವ ಪರಾಕ್ರಮವು ಎಷ್ಟು ಅತಿಶಯವಾದದ್ದೆಂಬದನ್ನೂ ನೀವು ತಿಳುಕೊಳ್ಳುವಂತೆ ಅನುಗ್ರಹಿಸಲಿ... (ಎಫೆಸ 1:17-19).

ನಾವೆಲ್ಲರೂ ನಮ್ಮ ನಂಬಿಕೆಯನ್ನು ತೆರೆದು ಹರಿ ಬಿಡುವ, ಅದ್ಭುತಕರವಾಗಿ ನೀರಿನ ಮೇಲೆ ಹೆಜ್ಜೆಯಿಡುವ ಮತ್ತು ನಮ್ಮ ಸುತ್ತಲಿನ ಲೋಕಕ್ಕೆ ದೇವರ ಶ್ರೇಷ್ಠತೆಯನ್ನು ತೋರಿಸುವ ಸಮಯ ಇದಾಗಿದೆ.

**ನೀರಿನ ಮೇಲೆ ನಡೆಯುವುದು**

ಇದು ಆದ ಕೂಡಲೆ ಆತನು ತನ್ನ ಶಿಷ್ಯರಿಗೆ ನಾನು ಈ ಜನರ ಗುಂಪುಗಳನ್ನು ಕಳುಹಿಸಿಬಿಡುವಷ್ಟರೊಳಗೆ ನೀವು ದೋಣಿಯನ್ನು ಹತ್ತಿ ಮುಂದಾಗಿ ಆಚೆ ದಡಕ್ಕೆ ಹೋಗಿರಿ ಎಂದು ಬಲವಂತ ಮಾಡಿದನು. ಆತನು ಜನರ ಗುಂಪುಗಳನ್ನು ಕಳುಹಿಸಿಬಿಟ್ಟ ಮೇಲೆ ಪ್ರಾರ್ಥನೆ ಮಾಡುವದಕ್ಕಾಗಿ ಏಕಾಂತವಾಗಿ ಬೆಟ್ಟವನ್ನು ಹತ್ತಿದನು. ಮತ್ತು ಹೊತ್ತು ಮುಳುಗಿದ ಮೇಲೆ ಒಬ್ಬನೇ ಅಲ್ಲಿ ಇದ್ದನು.

ಅಷ್ಟರಲ್ಲಿ ದೋಣಿಯು ಭೂಮಿಗೆ ಬಹು ದೂರ ಹೋಗಿತ್ತು. ಮತ್ತು ಎದುರು ಗಾಳಿ ಬಿಸುತ್ತಿದ್ದದರಿಂದ ತೆರೆಗಳ ಬಡಿತಕ್ಕೆ ಸಿಕ್ಕಿ ಒದ್ದಾಡುತ್ತಿತ್ತು.

ರಾತ್ರಿ ನಾಲ್ಕನೆಯ ಜಾವದಲ್ಲಿ ಯೇಸು ಸಮುದ್ರದ ಮೇಲೆ ನಡೆದು ಅವರ ಕಡೆಗೆ ಬಂದನು. ಸಮುದ್ರದ ಮೇಲೆ ನಡೆಯುವ ಆತನನ್ನು ಶಿಷ್ಯರು ನೋಡಿ ಭೂತವೆಂದು ತತ್ತರಿಸಿ ಭಯದಿಂದ ಕೂಗಿದರು.

ಕೂಡಲೆ ಯೇಸು ಮಾತಾಡಿ ಅವರಿಗೆ – ಧೈರ್ಯವಾಗಿರಿ ನಾನು ಅಂಜಬೇಡಿರಿ ಎಂದು ಹೇಳಿದನು.

**ಯೇಸು ಬಾ ಅಂದನು**

ಅದಕ್ಕೆ ಪೇತ್ರನು ಸ್ವಾಮೀ ನೀನೇಯಾದರೆ ನನಗೆ ನೀರಿನ ಮೇಲೆ ನಡೆದು ನಿನ್ನ ಬಳಿಗೆ ಬರುವದಕ್ಕೆ ಅಪ್ಪಣೆ ಕೊಡು ಅನ್ನಲು,

ಆತನು ಬಾ ಅಂದನು. ಆಗ ಪೇತ್ರನು ಯೇಸುವಿನ ಬಳಿಗೆ ಹೋಗುವದಕ್ಕೆ ದೋಣಿಯಿಂದ ಇಳಿದು ನೀರಿನ ಮೇಲೆ ನಡೆದನು.

ಆದರೆ ಗಾಳಿಯನ್ನು ನೋಡಿ ಭಯಪಟ್ಟು ಮುಳುಗುತ್ತಾ - ಸ್ವಾಮೀ ನನ್ನನ್ನು ಕಾಪಾಡು ಎಂದು ಕೂಗಿಕೊಂಡನು.

ಆ ಕ್ಷಣವೇ ಯೇಸು ಕೈಚಾಚಿ ಅವನನ್ನು ಹಿಡಿದು ಅಲ್ಪ ವಿಶ್ವಾಸಿಯೇ ಯಾಕೆ ಸಂದೇಹ ಪಟ್ಟೆ ಎಂದು ಹೇಳಿದನು.

ತರುವಾಯ ಅವರು ದೋಣಿಯನ್ನು ಹತ್ತಿದ ಮೇಲೆ ಗಾಳಿ ನಿಂತು ಹೊಯಿತು. ಆಗ ದೋಣಿಯಲ್ಲಿದ್ದವರು ನಿಜವಾಗಿ ನೀನು ದೇವಕುಮಾರನು ಎಂದು ಹೇಳಿ ಆತನಿಗೆ ನಮಸ್ಕರಿಸಿದರು. (ಮತ್ತಾಯ 14:22-33).

ಇದು ನಂಬಿಕೆಯ ಕುರಿತಾಗಿರುವ ಅದ್ಭುತಕರವಾದ ಉದಾಹರಣೆ. ಪೇತ್ರನು ತನ್ನ ನಂಬಿಕೆಯನ್ನು ಕಾರ್ಯರೂಪಕ್ಕೆ ತಂದನು. ಯೇಸು, "ಬಾ" ಅನ್ನುವುದನ್ನು ಅವನು ಕೇಳಿಸಿಕೊಂಡು, ಆ ದೋಣಿಯಿಂದ ಇಳಿದು ಯೇಸುವಿನ ಕಡೆಗೆ ಹೊರಟನು. ಅವನು ನೀರಿನ ಮೇಲೆ ನಡೆಯುತ್ತಿದ್ದನು.

ಆಮೇಲೆ ಏನಾಯಿತು? ಅವನು ತನ್ನ ದೃಷ್ಟಿಯನ್ನು ಯೇಸುವಿನ ಕಡೆಯಿಂದ ಬೇರೆಡೆಗೆ ತಿರುಗಿಸಿದನು. ಅವನು ಅಲೆಗಳನ್ನು ಕಂಡನು, ಬಿರುಗಾಳಿಯನ್ನು ಬಡಿತವನ್ನು ಅನುಭವಿಸಿದನು, ಅವನು ಅಸಾಧಾರಣವಾದ ಮಂಡಲದದಿಂದ ಸಾಧಾರಣವಾದ ಮಂಡಲತ್ತ ಮರಳಿದನು. ಅವನು ಮುಳುಗ ತೊಡಗಿದನು, ಆದರೆ ಅವನು ಸರಿಯಾದ ಕೆಲಸವೊಂದನ್ನು ಮಾಡಿದನು, ಅದೇನಂದರೆ "ಯೆಸುವೇ, ನನ್ನನ್ನು ಕಾಪಾಡು" ಎಂದು ಅವನು ಕೂಗಿದನು.

ಯೇಸು ಅವನ ಕೈ ಹಿಡಿದು ಕಾಪಾಡಿ ಅವನಿಗೆ, " ಅಲ್ಪವಿಶ್ವಾಸಿಯೇ, ನೀನು ಯಾಕೆ ಸಂದೇಹ ಪಟ್ಟೆ?" ಎಂದು ಕೇಳಿದನು. "ಸಂದೇಹ" ಎಂಬ ಪದಕ್ಕೆ ಗ್ರೀಕ್ ಭಾಷೆಯಲ್ಲಿ *ಡಿಸ್ತಾಜೊ* ಎಂಬ ಪದವನ್ನು ಬಳಸಿದ್ದಾರೆ, ಆ ಪದಕ್ಕೆ ಎರಡು ಕಡೆಯಲ್ಲಿ ನಿಲ್ಲುವುದು ಎಂದರ್ಥವಿದೆ. ಪೇತ್ರನ ಆತ್ಮವು, "ನೀನು ನೀರಿನ ಮೇಲೆ ನಡೆಯಬಲ್ಲೆ!" ಎಂದು ಹೇಳುತ್ತಿತ್ತು, ಆದರೆ ಮನಸ್ಸು, "ನೀನು ಮುಳುಗುತ್ತೀಯ!" ಎಂದು ಹೇಳುತ್ತಿತ್ತು.

ಪೇತ್ರನಲ್ಲಿ ಚಂಚಲದ ಆತ್ಮವಿತ್ತು. ಅವನು ಎರಡು ಮನಸ್ಸಿನವನಾಗಿದ್ದನು. ಯೇಸು ಅವನಿಗೆ, "ನಿನಗೇಕೆ ಸಂದೇಹ ಪಟ್ಟೆ?" ಎಂದು ಗದರಿದನು. ಪೇತ್ರನು ಸಂದೇಹ ಪಡಬೇಕಾಗಿರಲಿಲ್ಲ. ಅವನಿಗೆ ಆರಿಸಿಕೊಳ್ಳುವ ಅವಕಾಶವಿತ್ತು.

ಈ ಕಥೆಯು ನಮಗೆ ಎಷ್ಟು ಅದ್ಭುತಕರವಾದ ಉದಾಹರಣೆಯಾಗಿದೆ. ನಮ್ಮನ್ನು ನಾವು ಪೇತ್ರನೊಂದಿಗೆ ಗುರುತಿಸಿಕೊಳ್ಳಬಹುದು. ಅವನು ಪರಿಪೂರ್ಣನಾದ ವ್ಯಕ್ತಿಯಾಗಿರಲಿಲ್ಲ. ಪೇತ್ರನಂತೆ ನಾವು ಸಹ

ಬಲವಾದ ನಂಬಿಕೆಯ ಸಮಯದಲ್ಲಿ "ದೋಣಿಯಿಂದ ಇಳಿದು ಹೊರಕ್ಕೆ ಹೋಗಲು" ಶಕ್ತರಾಗಿರಬಹುದು, ಆದರೆ ನಮ್ಮ ನಂಬಿಕೆಯಲ್ಲಿ ನಾವು ಅಚಲರಾಗಿರಬೇಕಾದುದು ತುಂಬಾ ಅಗತ್ಯ, ಪರಿಸ್ಥಿತಿಗಳು ಏನೇ ಆಗಿದ್ದರೂ ಯೇಸು ಹೇಳಿದ್ದನ್ನು ಮುಂದುವರಿಸಿಕೊಂಡು ಹೋಗಲು ನಾವು ಹಾಗೆ ಮಾಡಬೇಕು.

ಸೋತುಹೋಗುವೆನು ಎಂಬ ಭಯದಿಂದ ಲಕ್ವ ಹೊಡೆದವರವಂತೆ ಆಗದಿರುವುದಕ್ಕಿರುವ ಒಂದು ಉದಾಹರಣೆಯು ಕೂಡ ಇದಾಗಿದೆ.

## ಧೈರ್ಯವಾಗಿರುವುದು, ದೇವರ ರೀತಿಯ ನಂಬಿಕೆಯಾಗಿದೆ

ಅನೇಕ ಕ್ರೈಸ್ತರು ಉಗುರು ಬೆಚ್ಚಗಿರುವ ಆತ್ಮಿಕ ಸ್ಥಿತಿಯಲ್ಲಿದ್ದಾರೆ. ಅವರು ನಂಬಿಕೆಯ ಕೊರತೆಯಿಂದಾಗಿ ತಾವು ಜೀವನದಲ್ಲಿ ಸೋಲಿಗೆ ಶರಣಾಗಿ, "ಏನಾಗುತ್ತದೋ ಆಗಲಿ" ಎನ್ನುತ್ತಾ ಜೀವನದ ಶ್ರಮೆಸಂಕಷ್ಟಗಳಲ್ಲಿ ನೊಂದುಬೆಂದು ಜೀವಿಸುತ್ತಿದ್ದಾರೆ.

ನಾವು ಆತನೊಂದಿಗೆ ಆಳುವುದಕ್ಕಾಗಿಯೂ ದೊರೆತನ ಮಾಡವುದಕ್ಕಾಗಿಯೂ ಸೃಷ್ಟಿಸಲ್ಪಟ್ಟಿದ್ದೇವೆ ಎಂಬುದನ್ನೂ ಭೂಮಿಯ ಮೇಲೆಯೂ ಅದರಲ್ಲಿರುವ ಸಮಸ್ತ ಸಂಗತಿಗಳ ಮೇಲೆಯೂ ಅಧಿಕಾರ ಕೊಡಲಾಗಿದೆ ಎಂಬುದನ್ನೂ ಅವರು ಅರ್ಥಮಾಡಿಕೊಂಡಿಲ್ಲ. ಸಾಸಿವೆ ಕಾಳಿನಷ್ಟು ನಂಬಿಕೆ ನಮಗೆ ಇದ್ದರೆ ಬೆಟ್ಟಗಳು ಕೂಡ ನಾವು ಹೇಳಿದ ಹಾಗೆ ಕೇಳುತ್ತವೆ ಎಂದು ಯೇಸು ಹೇಳಿದ್ದಾನೆ.

ತಪ್ಪಾದ ಬೋಧನೆಯ ನಿಮಿತ್ತವಾಗಿಯೂ, ಅವರ ಜೀವನದಲ್ಲಿಯೂ ಸಭೆಗಳಲ್ಲಿಯೂ ಒಳ್ಳೆಯದರ ಕೆಟ್ಟದ್ದರ ಮಿಶ್ರಣವಾಗಿರುವ ಕಲಬೆರಕೆಗೆ ಅವಕಾಶ ಮಾಡಿಕೊಟ್ಟಿರುವುದರ ನಿಮಿತ್ತವಾಗಿಯೂ, ಲವೊದಿಕೀಯ ಸಭೆಯ ಆತ್ಮವು ಈಗಿನ ಕಾಲದಲ್ಲಿ ಸಭೆಯನ್ನು ಅತಿಕ್ರಮಿಸಿಕೊಂಡಿದೆ.

**ಪ್ರಕಟಣೆಯ ಗ್ರಂಥದಲ್ಲಿ ನಾವು ಹೀಗೆ ಓದುತ್ತೇವೆ,**

ಲವೊದಿಕೀಯದಲ್ಲಿರುವ ಸಭೆಯ ದೂತನಿಗೆ ಬರೆ. ಆಮೆನ್ ಎಂಬಾತನು ಅಂದರೆ ನಂಬತಕ್ಕ ಸತ್ಯ ಸಾಕ್ಷಿಯೂ ದೇವರ ಸೃಷ್ಟಿಗೆ ಮೂಲನೂ ಆಗಿರುವಾತನು ಹೇಳುವದೇನಂದರೆ ನಿನ್ನ ಕೃತ್ಯಗಳನ್ನು ಬಲ್ಲೆನು. ನೀನು ತಣ್ಣಗೂ ಅಲ್ಲ ಬೆಚ್ಚಗೂ ಅಲ್ಲ ನೀನು ತಣ್ಣಗಾಗಲಿ ಬೆಚ್ಚಗಾಗಲಿ ಇದ್ದರೆ ಒಳ್ಳೇದಾಗಿತ್ತು. ನೀನು ಬೆಚ್ಚಗೂ ಇಲ್ಲದೆ ತಣ್ಣಗೂ ಇಲ್ಲದೆ ಉಗುರು ಬೆಚ್ಚಗಿರುವದರಿಂದ ನಿನ್ನನ್ನು ನನ್ನ ಬಾಯೊಳಗಿಂದ ಕಾರುವೆನು (ಪ್ರಕಟನೆ 3:14-16).

ಅನೇಕರು  ಸರಿಯಾಗಿ ಸಭೆಗೆ ಬರುತ್ತಾರೆ, ಆದರೆ ದೇವರು ತಮ್ಮ ಜೀವನದಲ್ಲಿ ಕಾರ್ಯಮಾಡಬೇಕೆಂದು ಅವರು ನಿರೀಕ್ಷಿಸುವುದಿಲ್ಲ. ಅವರು ತಮ್ಮ ಸ್ವಾಭಾವಿಕ ದೋಣಿಗಳಿಂದ ಹೊರಬಂದು ಅಸಾಧಾರಣವಾದ ರೀತಿಯಲ್ಲಿ ನೀರಿನ ಮೇಲೆ ನಡೆಯುವುದಿಲ್ಲ.

ನಾವು ನಮ್ಮ ನಂಬಿಕೆಯಲ್ಲಿ ಕೆಚ್ಚೆದೆಯುಳ್ಳವರಾಗಿ ಮುನ್ನುಗ್ಗಲು ಕಲಿತುಕೊಳ್ಳಬೇಕು.

**ದೇವರು-ರೀತಿಯ ನಂಬಿಕೆ ಬೆಟ್ಟಗಳನ್ನು ನೀಗಿಸುತ್ತದೆ**

ಯೇಸು ತನ್ನ ಶಿಷ್ಯರಿಗೆ ದೇವರ ರೀತಿಯ ನಂಬಿಕೆಯುಳ್ಳವರಾಗಿರಿ ಎಂದು ಕಲಿಸಿದನು, ಮತ್ತು ಇಂದು ನೀವು ಮತ್ತು ನಾನು ಹಾಗೆಯೇ ಕಾರ್ಯಮಾಡಬೇಕೆಂದು ಆತನು ಬಯಸುತ್ತಾನೆ.

ಯೇಸುವಿನ ಜೀವನದಲ್ಲಿ ನಡೆದ ಒಂದು ಘಟನೆಯ ಕುರಿತು ಮಾರ್ಕನ ಸುವಾರ್ತೆಯಲ್ಲಿ ನಾವು ಓದುತ್ತೇವೆ. ಆತನು ಹಣ್ಣುಗಳನ್ನು ಹುಡುಕುತ್ತಾ ಅಂಜೂರದ ಮರದ ಬಳಿಗೆ ಬಂದನು ಆದರೆ ಅದರಲ್ಲಿ ಅವನಿಗೆ ಏನೂ ಸಿಗಲಿಲ್ಲ. ಆಗ ಆತನು ಹೇಳಿದ್ದೇನೆಂದರೆ,

ಆಗ ಯೇಸು ಆ ಮರಕ್ಕೆ, ಇನ್ನು ಮೇಲೆ ಒಬ್ಬರೂ ನಿನ್ನಲ್ಲಿ ಹಣ್ಣನ್ನು ಎಂದೆಂದಿಗೂ ತಿನ್ನದ ಹಾಗಾಗಲಿ ಎಂದು ಹೇಳಿದನು. ಆತನ ಶಿಷ್ಯರು ಅದನ್ನು ಕೇಳಿಸಿಕೊಂಡರು (ಮಾರ್ಕ 11:14).

ಮಾರ್ಕನು ಮುಂದುವರಿಸಿ ಹೀಗೆ ಹೇಳುತ್ತಾನೆ,

ಬೆಳಿಗ್ಗೆ ಅವರು ಬರುತ್ತಿರುವಾಗ ಆ ಅಂಜೂರದ ಮರವು ಬುಡದಿಂದಲೂ ಒಣಗಿಹೋಗಿರುವದನ್ನು ಕಂಡರು. ಆಗ ಪೇತ್ರನು ಹಿಂದಿನ ದಿನದ ಸಂಗತಿಯನ್ನು ನೆನಸಿಕೊಂಡು ಆತನಿಗೆ – ಗುರುವೇ ಇಗೋ ನೀನು ಶಾಪ ಕೊಟ್ಟ ಅಂಜೂರದ ಮರವು ಒಣಗಿಹೋಗಿದೆ ಎಂದು ಹೇಳಿದ್ದಕ್ಕೆ,

ಯೇಸು ಹೇಳಿದ್ದೇನಂದರೆ ನಿಮಗೆ ದೇವರಲ್ಲಿ ನಂಬಿಕೆಯಿರಲಿ. ನಿಮಗೆ ಸತ್ಯವಾಗಿ ಹೇಳುತ್ತೇನೆ. ಯಾವನಾದರೂ ಈ ಬೆಟ್ಟಕ್ಕೆ ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿ ತನ್ನ ಮನಸ್ಸಿನಲ್ಲಿ ಸಂಶಯಪಡದೆ ತಾನು ಹೇಳಿದ್ದು ಆಗುವದೆಂದು ನಂಬಿದರೆ ಅವನು ಹೇಳಿದಂತೆಯೇ ಆಗುವದು. ಆದಕಾರಣ ನೀವು ಪ್ರಾರ್ಥನೆ ಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ. ಅದು ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ (ಮಾರ್ಕ 11:20-24).

ಈ ಉದಾಹರಣೆಯ ಮೂಲಕ ದೇವರ ರೀತಿಯ ನಂಬಿಕೆ ಉಳ್ಳವರಾಗಿವುದು ಎಂಬುದರ ಕುರಿತು ನಾವು ಅನೇಕ ವಿಷಯಗಳನ್ನು ತಿಳಿದುಕೊಳ್ಳಬಹುದು.

* ಯೇಸು ನಿರ್ದಿಷ್ಟವಾಗಿ ಹೇಳಿದನು - "ಇನ್ನು ಮೇಲೆ ಒಬ್ಬರೂ ನಿನ್ನಲ್ಲಿ ಹಣ್ಣನ್ನು ಎಂದೆಂದಿಗೂ ತಿನ್ನದ ಹಾಗಾಗಲಿ."
* ಆತನು ತನ್ನ ನಂಬಿಕೆಯನ್ನು ಜೋರಾಗಿ ಹೇಳಿದನು - ಶಿಷ್ಯರು ಆತನ ಮಾತನ್ನು ಕೇಳಿಸಿಕೊಂಡರು.
* ಆ ಸಂಜೆ ಅವರು ಮರದ ಬಳಿಗೆ ತಿರಿಗಿ ಬಂದಾಗ, ಅದು ಹಾಗೆಯೇ ಕಾಣುತ್ತಿತ್ತು. ಏಕೆಂದರೆ ಯಾರೂ ಅದರ ಬಗ್ಗೆ ಏನೂ ಹೇಳಲಿಲ್ಲ ಹಾಗಾಗಿ ಅದು ಹಾಗೆಯೇ ಇತ್ತು ನಾವು ತಿಳಿದುಕೊಳ್ಳಬಹುದು, ಆದರೆ ಅದಕ್ಕೆ ಏನಾಗಲಿದೆ ಎಂಬುದರ ಬಗ್ಗೆ ಯೇಸು ಸಂದೇಹಪಡಲಿಲ್ಲ.
* ಆತನು ಆ ಮರಕ್ಕೆ ಹೇಳಿ ಇಪ್ಪತ್ನಾಲ್ಕು ತಾಸುಗಳಾದ ನಂತರ, ಅದು ಒಣಗಿಹೋಯಿತು. ಆತನು ಹೇಳಿದ ಸಮಯದಲ್ಲಿ ಬೇರುಗಳಲ್ಲಿ ಒಣಗಿ ಹೋಗುವ ಕಾರ್ಯವು ಆರಂಭವಾಗಿತ್ತು. ಅದು ಹೊರಗೆ ತೋರಲು ಸ್ವಲ್ಪ ಸಮಯ ತೆಗೆದುಕೊಂಡಿತು.

ಆತನು ಮಾಡಿದ್ದರ ಕುರಿತು ಶಿಷ್ಯರು ಆಶ್ಚರ್ಯಪಡುತ್ತಿದ್ದಾಗ, ಯೇಸು ಅಂಜೂರದ ಮರದ ಕುರಿತು ಏನನ್ನೂ ಹೇಳಲಿಲ್ಲ. ಅದಕ್ಕೆ ಬದಲಾಗಿ, ಆತನು ಅವರಿಗೆ ನಂಬಿಕೆಯ ಕುರಿತು ಕಲಿಸಿದನು. ದೇವರಲ್ಲಿ ನಂಬಿಕೆಯುಳ್ಳವರಾಗಿರಿ, ಅದನ್ನು ಹೊಂದಿಕೊಳ್ಳಿರಿ ಮತ್ತು ಅದ್ಭುತಗಳನ್ನು ಮಾಡಿರಿ ಎಂದು ಅವರನ್ನು ಪ್ರೋತ್ಸಾಹಿಸಿದನು.

ಅವರು ಆಶ್ಚರ್ಯಚಕಿತರಾಗಿ ಸುಮ್ಮನೆ ಹಿಂದೆ ನಿಂತುಕೊಳ್ಳಬೇಕೆಂದು ಯೇಸು ಬಯಸಲಿಲ್ಲ ಎಂಬುದನ್ನು ಗಮನಿಸಿರಿ; ಅವರು ತನ್ನೊಂದಿಗೆ ಸೇರಿ ಅದ್ಭುತ ಕಾರ್ಯವನ್ನು ಮಾಡಬೇಕೆಂದು ಆತನು ಬಯಸಿದನು.

## ದೇವರ-ರೀತಿಯ ನಂಬಿಕೆಯ ಕುರಿತಾಗಿರುವ ಉದಾಹರಣೆಗಳು

### ದಾವೀದ ಮತ್ತು ಗೊಲ್ಯಾತ

ಹಳೆ ಒಡಂಬಡಿಕೆಯು ದೇವರ ರೀತಿಯ ನಂಬಿಕೆಯಲ್ಲಿ ಕಾರ್ಯಮಾಡಿದಂಥ ವ್ಯಕ್ತಿಗಳ ಉದಾಹರಣೆಗಳಿಂದ ತುಂಬಿದೆ. ದಾವೀದನು ಕುರಿಗಳನ್ನು ಕಾಯುವುದನ್ನು ಬಿಟ್ಟು ಬಂದಾಗ, ಇಡೀ ಇಸ್ರಾಯೇಲ್ ಸೈನ್ಯವನ್ನು ಒಬ್ಬ ವ್ಯಕ್ತಿ ಎದುರಿಸಿ ನಿಲ್ಲಿಸಿದ್ದರ ಕುರಿತು

ಏನು ಅನ್ನುತ್ತೀರಿ? ಖಂಡಿತವಾಗಿಯೂ, ಆ ಮನುಷ್ಯನು ದೈತ್ಯಕಾರಿಯಾಗಿದ್ದನು, ಸ್ವಾಭಾವಿಕವಾಗಿ ಅವನು ತುಂಬಾ ಭಯಂಕರನಾಗಿದ್ದನು, ಆದರೆ ದಾವೀದನು ನಂಬಿಕೆಯಿಂದ ತುಂಬಿ ಆಡಿದ ಮಾತುಗಳನ್ನು ಆಲಿಸಿರಿ.

- *ದಾವೀದನು ನಂಬಿಕೆಯಿಂದ ಮಾತನಾಡಿದನು*

ಅವನು ಗೊಲ್ಯಾತನ ಆರ್ಭಟವನ್ನು ಕೇಳಿಸಿಕೊಂಡಾಗ ಮತ್ತು ಅದು ಇಸ್ರಾಯೇಲ್ ಸೈನ್ಯವನ್ನು ಹೇಗೆ ಬೆಚ್ಚಿಬಿಳಿಸಿತು ಎಂಬುದನ್ನು ನೋಡಿದಾಗ, ಅವನು ಏನೆಂದು ಹೇಳಿದನು?

"ಜೀವಸ್ವರೂಪನಾದ ದೇವರ ಸೈನ್ಯವನ್ನು ಹೀಯಾಳಿಸುವದಕ್ಕೆ ಸುನ್ನತಿಯಿಲ್ಲದ ಈ ಫಿಲಿಷ್ಟಿಯನು ಎಷ್ಟರವನು?" (1 ಸಮುವೇಲ 17:26b).

- *ಅವನ ಸಹೋದರರು ಅವನಿಗೆ ವಿರುದ್ಧವಾಗಿದ್ದರು*

ಶತ್ರುವು ಬೆದರಿಕೆಯನ್ನು ಹಾಕುತ್ತಿದ್ದನು, ಆದರೆ ದಾವೀದನು ಸ್ವಾಭಾವಿಕವಾದ ರೀತಿಯಲ್ಲಿ ಅದಕ್ಕೆ ಉತ್ತರಿಸಲು ನಿರಾಕರಿಸಿದನು. ಅವನು ಭಯಪಡಲಿಲ್ಲ. ಆಗ ದಾವೀದನ ಸಹೋದರರು ಅವನಿಗೆ ವಿರುದ್ಧವಾಗಿ ತಿರುಗಿಬಿದ್ದರು. ಅವರು ತಾವು ದಾವೀದನಿಗಿಂತಲೂ ಚೆನ್ನಾಗಿ ಆ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಿದ್ದೇವೆ ಎಂದು ವಾದಿಸಿದರು, ಅದಲ್ಲದೆ, ಅವರು ಭಯಪಡುತ್ತಿದ್ದ ಜನರ ಗುಂಪಿನ ಸೇರಿದವರಾಗಿದ್ದರಿಂದ, ಭಯಪಡದಿರುವ ಅವನನ್ನು ಕಂಡು ಸಿಟ್ಟಾದರು. ಅವರು ಅವನ ನಂಬಿಕೆಯನ್ನು ಕಂಡು ಸಿಟ್ಟಾದರು.

ದಾವೀದನು ಜನರ ಸಂಗಡ ಹೀಗೆ ಮಾತಾಡುತ್ತಿರುವದನ್ನು ಅವನ ಹಿರಿ ಅಣ್ಣನಾದ ಎಲೀಯಾಬನು ಕೇಳಿ ಕೋಪಗೊಂಡು - ನೀನು ಇಲ್ಲಿಗೆ ಬಂದದ್ದೇಕೆ? ಅಡವಿಯಲ್ಲಿರುವ ನಾಲ್ಕಾರು ಕುರಿಗಳನ್ನು ಯಾರಿಗೊಪ್ಪಿಸಿ ಬಂದಿ. ನಿನ್ನ ಸೊಕ್ಕು ತುಂಟತನವು ನನಗೆ ಗೊತ್ತಿದೆ. ನೀನು ಯುದ್ದವನ್ನು ನೋಡುವದಕ್ಕೆ ಬಂದಿದ್ದೀ ಎಂದು ಅವನನ್ನು ಗಧರಿಸಲು, (1 ಸಮುವೇಲ 17:28).

ದಾವೀದನು ನಂಬಿಕೆಯಿಂದ ಮಾತನಾಡುತ್ತಿದ್ದನು, ಆದರೆ ಅವನ ಸಹೋದರರು ಅವನನ್ನು ತಪ್ಪಾಗಿ ಅರ್ಥಮಾಡಿಕೊಂಡು ಅವನು ಸೊಕ್ಕಿನಿಂದಲೂ ತುಂಟುತನದಿಂದಲೂ ಮಾತನಾಡುತ್ತಿದ್ದಾನೆ ಎಂದು ಗದರಿಸಿದರು. ಅವನ ಕುಟುಂಬ ಅವನಿಗೆ ವಿರುದ್ಧವಾಗಿತ್ತು, ಆದರೆ ದಾವೀದನು ಅಲ್ಲಿ ಸುಮ್ಮನೇ ನಿಲ್ಲಲಿಲ್ಲ.

- *ರಾಜನಾದ ಸೌಲನು ಅವನಿಗೆ ವಿರುದ್ಧವಾಗಿದ್ದನು*

ಅವನನ್ನು ರಾಜನಾದ ಸೌಲನ ಮುಂದೆ ಕರೆದುಕೊಂಡು ಬಂದರು ಮತ್ತು ಅವನು ಸೌಲನಿಗೆ ಹೀಗೆ ಹೇಳಿದನು,

ದಾವೀದನು ಸೌಲನಿಗೆ - ಆ ಫಿಲಿಷ್ಟಿಯನ ನಿಮಿತ್ತವಾಗಿ ಯಾವನೂ ಎದೆಗೆಡಬಾರದು ನಿನ್ನ ಸೇವಕನಾದ ನಾನು ಹೋಗಿ ಅವನೊಡನೆ ಯುದ್ಧಮಾಡುವೆನು ಅನ್ನಲು,

ಸೌಲನು ಅವನಿಗೆ ಅವನೊಡನೆ ಕಾದಾಡಲಾರೆ ನೀನು ಇನ್ನೂ ಹುಡುಗನು ಅವನಾದರೋ ಚಿಕ್ಕಂದಿನಿಂದಲೇ ಯುದ್ಧವೀರನು ಎಂದು ಹೇಳಿದನು. (1 ಸಮುವೇಲ 17:32,33).

ಸೌಲನು ದಾವೀದನಿಗೆ ನೀನು ಇನ್ನೂ ತುಂಬಾ ಚಿಕ್ಕ ಹುಡುಗ, ಯುದ್ಧದಲ್ಲಿ ಪಳಗಿದ ಅನುಭವ ನಿನಗಿಲ್ಲ ಎಂದು ಹೇಳಿದನು.

- *ಅವನು ನಂಬಿಕೆಯಲ್ಲಿ ದೃಢವಾಗಿ ನಿಂತನು*

ದಾವೀದನ ನಂಬಿಕೆಯು ತುಂಬಾ ಬಲಿಷ್ಠವಾಗಿತ್ತು, ತನ್ನನ್ನು ಗೊಲ್ಯಾತನಿಗೆ ವಿರುದ್ಧ ಹೋಗಲು ಬಿಡುವಂತೆ ರಾಜನನ್ನು ಅವನು ಮನವೊಲಿಸಿದನು. ಅವನು ಸೋತುಹೋದರೆ, ಇಡೀ ಇಸ್ರಾಯೇಲ್ ದೇಶವೇ ಸೋತು ದಾಸತ್ವಕ್ಕೆ ಹೋದಂತೆ. ಆದರೆ ದಾವೀದನು ನಂಬಿಕೆಯಲ್ಲಿ ದೃಢವಾಗಿದ್ದನು, ಇಸ್ರಾಯೇಲ್ಯರ ಮತ್ತು ಫಿಲಿಷ್ಟಿಯರ ಮುಂದೆ ತನ್ನ ನಂಬಿಕೆಯ ಗಟ್ಟಿಯಾಗಿ ಕೂಗಿ ಹೇಳಿದನು, ದಾವೀದನು ಹೇಳಿದಂತೆಯೇ ಗೊಲ್ಯಾತನು ಕೊಲ್ಲಲ್ಪಟ್ಟನು.

ಆಗ ದಾವೀದನು ಅವನಿಗೆ, ನೀನು ಈಟಿ ಕತ್ತಿ ಬರ್ಜಿಗಳೊಡನೆ ನನ್ನ ಬಳಿಗೆ ಬರುತ್ತೀ, ನಾನಾದರೋ ನೀನು ಹೀಯ್ಯಾಳಿಸಿದಂಥ ಸೇನಾಧೀಶ್ವರನೂ ಇಸ್ರಾಯೇಲ್ಯರ ಯುದ್ಧ ಭಟರ ದೇವರೂ ಆಗಿರುವ ಯೆಹೋವನ ನಾಮದೊಡನೆ ನಿನ್ನ ಬಳಿಗೆ ಬರುತ್ತೇನೆ

ಆತನು ಈ ಹೊತ್ತು ನಿನ್ನನ್ನು ನನ್ನ ಕೈಗೆ ಒಪ್ಪಿಸಿಕೊಡುವನು. ನಾನು ನಿನ್ನನ್ನು ಕೊಂದು ನಿನ್ನ ತಲೆಯನ್ನು ಕಡಿದು ಹಾಕಿ ಫಿಲಿಷ್ಟಿಯ ಸೈನ್ಯದ ಶವಗಳನ್ನು ಮೃಗಪಕ್ಷಿಗಳಿಗೆ ಹಂಚಿಕೊಡುವೆನು. ಇದರಿಂದ ಇಸ್ರಾಯೇಲ್ಯರೊಳಗೆ ದೇವರು ಇರುತ್ತಾನೆಂಬದು ಭೂಲೋಕದವರಿಗೆಲ್ಲಾ ತಿಳಿದುಬರುವದು.

ಯೆಹೋವನು ಈಟಿಕತ್ತಿಗಳಿಲ್ಲದೇ ರಕ್ಷಿಸಬಲ್ಲನೆಂಬದು ಇಲ್ಲಿ ಕೂಡಿರುವವರಿಗೆಲ್ಲಾ ತಿಳಿದುಬರುವದು. ಯಾಕಂದರೆ ಯುದ್ಧ ಫಲವು

ಯೆಹೋವನ ಕೈಯಲ್ಲಿದೆ. ಆತನು ನಿಮ್ಮನ್ನು ನಮ್ಮ ಕೈಗೆ ಒಪ್ಪಿಸಿಕೊಡುವನು ಅಂದನು (1 ಸಮುವೇಲ 17:45-47).

ಈ ಘಟನೆಯಿಂದ ನಾವು ಏನನ್ನು ಕಲಿತುಕೊಳ್ಳಬಹುದು?

* ದೇವರ ರೀತಿಯ ನಂಬಿಕೆಯನ್ನು ತಡೆಯುವುದಕ್ಕೆ ಆಗುವುದಿಲ್ಲ.
* ಕುಟುಂಬದವರಿಗೂ ಸ್ನೇಹಿತರಿಗೂ ಅರ್ಥವಾಗುವುದಿಲ್ಲ.
* ನಾಯಕರಿಗೆ ಅರ್ಥವಾಗುವುದಿಲ್ಲ.

ಆದರೆ ದಾವೀದನು ದೇವರನ್ನು ತಿಳಿದುಕೊಂಡಿದ್ದನು. ಅವನು ಕುರಿಗಳನ್ನು ಮೇಯಿಸುತ್ತಿದ್ದಾಗ ಸಿಂಹ ಕರಡಿಗಳಿಂದ ಅವುಗಳನ್ನು ಕಾಪಾಡುತ್ತಿದ್ದಾಗ ಅವನು ತನ್ನ ನಂಬಿಕೆಯನ್ನು ಬೆಳೆಸಿಕೊಂಡಿದ್ದನು. ದಾವೀದನು ದೇವರು ಸಿದ್ಧಪಡಿಸಿದ ವ್ಯಕ್ತಿಯಾಗಿದ್ದನು. ಅವನು ದೇವರ ರೀತಿಯ ನಂಬಿಕೆಯಲ್ಲಿ ನಡೆದನು, ಆದ್ದರಿಂದ ಫಿಲಿಷ್ಟಿಯರು ಸೋತುಹೋದರು.

ಗೊಲ್ಯಾತನು ಸೋತುಹೋದನು, ಆದರೆ ಫಿಲಿಷ್ಟಿಯರ ಕುರಿತಾಗಿ ನಾವು ಕೊನೆಯ ಬಾರಿ ಕೇಳುತ್ತಿಲ್ಲ. ಏಕೆಂದರೆ ಅವರು ಮತ್ತೆ ಮತ್ತೆ ತಮ್ಮ ಶಕ್ತಿಯನ್ನು ಪಡೆದುಕೊಂಡು ದೇವ ಜನರಿಗೆ ವಿರುದ್ಧವಾಗಿ ಯುದ್ಧಕ್ಕೆ ಬಂದರು.

**ಬಾಳ್ ಪೆರಾಚೀಮಿನಲ್ಲಿ ದಾವೀದನು**

ಅನೇಕ ವರ್ಷಗಳ ನಂತರ, ದಾವೀದನನ್ನು ಮೂರನೇ ಬಾರಿಗೆ ರಾಜನಾಗಿ ಅಭಿಷೇಕ ಮಾಡಿದಾಗ, ಅವನು ಇಸ್ರಾಯೇಲರೆಲ್ಲರಿಗೆ ರಾಜನಾದನು ಎಂಬ ಸುದ್ದಿಯನ್ನು ಫಿಲಿಷ್ಟಿಯರು ಕೇಳಿಸಿಕೊಂಡು ಅವನಿಗೆ ವಿರುದ್ಧವಾಗಿ ಯುದ್ಧಕ್ಕೆ ಬಂದರು. ಇಸ್ರಾಯೇಲ್ ದೇಶಕ್ಕೆ ವಿರುದ್ಧವಾಗಿಯಲ್ಲ ದಾವೀದನಿಗೆ ವಿರುದ್ಧವಾಗಿ ಯುದ್ಧಕ್ಕೆ ಬಂದರು. ಅವರಿಗೆ ಅವನಮ ಅಭಿಷೇಕ, ಶಕ್ತಿಯ ಬಗ್ಗೆ ತಿಳಿದಿತ್ತು. ಅವನನ್ನು ನಾಶಮಾಡಲು ಹೊರಟು ಬಂದರು.

2 ಸಮುವೇಲನ ಪುಸ್ತಕದಲ್ಲಿ ನಾವು ಹೀಗೆ ಓದುತ್ತೇವೆ,

ಇಸ್ರಾಯೇಲ್ಯರು ದಾವೀದನನ್ನು ಅಭಿಷೇಕಿಸಿ ತಮ್ಮ ಅರಸನನ್ನು ಮಾಡಿಕೊಂಡರೆಂಬ ವರ್ತಮಾನವು ಫಿಲಿಷ್ಟಿಯರಿಗೆ ಮುಟ್ಟಿದಾಗ ಅವರು ಅವನನ್ನು ಹಿಡಿಯುವದಕ್ಕೆ ಹೊರಟರು. ದಾವೀದನು ಇದನ್ನು ಕೇಳಿ ದುರ್ಗಕ್ಕೆ ಹೋದನು.

ಫಿಲಿಷ್ಟಿಯರು ದೇಶದೊಳಗೆ ನುಗ್ಗಿ ರೆಫಾಯಿಮ ತಗ್ಗಿಗೆ ಬಂದು ಪಾಳೆಯಮಾಡಿಕೊಂಡಿದ್ದಾರೆಂದು ತಿಳಿದು

ದಾವೀದನಿಗೆ ಏನು ಮಾಡಬೇಕೆಂದು ಗೊತ್ತಿತ್ತು, ಅವನು ಕರ್ತನನ್ನು ವಿಚಾರಿಸಿದನು. ಯುದ್ಧಕ್ಕೆ ಹೋಗುವುದು ಅವನ ಬಯಕೆಯಾಗಿತ್ತು, ಆದರೆ ಕರ್ತನಿಂದ ಅದರ ಬಗ್ಗೆ ಕೇಳಿಸಿಕೊಳ್ಳದ ತನಕ ಅವನು ಯುದ್ಧಕ್ಕೆ ಹೋಗಲಿಲ್ಲ.

ದಾವೀದನು ಯೆಹೋವನನ್ನು ನಾನು ಫಿಲಿಷ್ಟಿಯರಿಗೆ ವಿರೋಧವಾಗಿ ಹೋಗಬಹುದೋ? ಅವರನ್ನು ನನ್ನ ಕೈಗೆ ಒಪ್ಪಿಸಿಕೊಡುವಿಯೋ ಎಂದು ಕೇಳಲು

ಆತನು ಹೋಗು ನಾನು ಹೇಗೂ ಅವರನ್ನು ನಿನ್ನ ಕೈಗೆ ಒಪ್ಪಿಸಿಕೊಡುವೆನು ಎಂದು ಉತ್ತರಕೊಟ್ಟದ್ದರಿಂದ,

ಅವನು ಹೋಗಿ ಅವರನ್ನು ಸೋಲಿಸಿ ಯೆಹೋವನು ಕಟ್ಟೆ ಒಡೆದ ಪ್ರವಾಹದಂತೆ ನನ್ನ ಶತ್ರುಗಳ ಮೇಲೆ ಬಿದ್ದು ಅವರನ್ನು ನನ್ನ ಕಣ್ಣ ಮುಂದೆಯೇ ನಾಶಮಾಡಿದ್ದಾನೆಂದು ಹೇಳಿ ಆ ಯುದ್ದ ಸ್ಥಳಕ್ಕೆ ಬಾಳಪೆರಾಚೀಮೆಯೆಂದು ಹೆಸರಿಟ್ಟನು (2 ಸಮುವೇಲ 5:17-20).

ಬಾಳ್ ಪೆರಾಚೀಮ್ ಎಂದರೆ "ಆತನು ಬಿಡುಗಡೆಯ ಕರ್ತನು!" ದಾವೀದನು ವೀರಯೋಧನಾಗಿದ್ದನು, ದೇವರ ಬಿಡುಗಡೆಯನ್ನು ಕೊಡುವಾತನು ಎಂದು ಅವನು ತಿಳಿದುಕೊಂಡಿದ್ದನು. ಅವನಿಗೆ ಬಲವಾದ, ಹುರುಪಿನಿಂದ ಕೂಡಿದ ನಂಬಿಕೆಯಿತ್ತು ಮತ್ತು ಅವನು ತಮ್ಮ ಶತ್ರುಗಳ ವಿರುದ್ಧ ಯುದ್ಧ ಮಾಡಲು ಭಯಪಡಲಿಲ್ಲ.

ಎಲ್ಲಾ ಕಡೆಗಳಿಂದಲೂ ಶತ್ರುಗಳು ನಮ್ಮ ವಿರುದ್ಧವಾಗಿ ಬರುತ್ತಿರಬಹುದು. ಅವು ಬಡತನ, ಖಿನ್ನತೆ ಮತ್ತು ನಿರಾಶೆಯ ಆತ್ಮಗಳು ಆಗಿರಬಹುದು, ನಮ್ಮ ಮನಸ್ಸಿಗೆ ವಿರುದ್ಧವಾಗಿ ಹೋರಾಡುವ ಸಂದೇಹ, ಅಪನಂಬಿಕೆ, ರೋಗದ ಮತ್ತು ನೋವಿನ ಆತ್ಮಗಳು ಆಗಿರಬಹುದು, ಇವುಗಳೇ ನಮ್ಮ ಜೀವನದಲ್ಲಿರುವ ಫಿಲಿಷ್ಟಿಯರಾಗಿದ್ದಾರೆ.

ನಾವು ಹುರುಪುಳ್ಳವರಾಗಿರಬೇಕಾದ ಸಮಯ ಇದಾಗಿದೆ. ನಮ್ಮ ಜೀವನದಲ್ಲಿ ಬಿಡುಗಡೆಯನ್ನು ಕೊಡುವಂಥ ದೇವರಾಗಿದ್ದಾನೆಂದು ನಾವು ಒಪ್ಪಿಕೊಳ್ಳುವ ಸಮಯ ಇದಾಗಿದೆ!

**ಕಾಲೇಬನು ಮತ್ತು ಯೆಹೋಶುವನು**

ಕಾಲೇಬನೂ ಯೆಹೋಶುವನೂ ವಾಗ್ದಾನ ದೇಶವನ್ನು ಸುತ್ತಿ ಹೊಂಚಿ ನೋಡಲು ಕಳುಹಿಸಲ್ಪಟ್ಟಿದ್ದ ಇಬ್ಬರು ಗೂಢಚಾರರಾಗಿದ್ದರು, ಮತ್ತು ಅವರು ತಮ್ಮ ನಂಬಿಕೆಯಲ್ಲಿ ಉತ್ಸಾಹಿಗಳಾಗಿದ್ದರು.

ಇತರ ಗೂಢಚಾರರು ಶತ್ರುವಿನ ಆಕಾರದ ಕುರಿತು ಭಯದಿಂದ ಮಾತನಾಡಲು ಪ್ರಾರಂಭಿಸಿದಾಗ, ಕಾಲೇಬ ಯೆಹೋಶುವರು ಅವರಿಗೆ ವಿರುದ್ಧವಾಗಿಯೂ ಮತ್ತು ಜನರ ಇಚ್ಛೆಗೆ ವಿರುದ್ಧವಾಗಿಯೂ ನಿಂತು ಮಾತನಾಡಿದರು. ಅವರ ಬಲವಾದ, ನಂಬಿಕೆಯಿಂದ ಕೂಡಿದ ಮಾತುಗಳು ಏನಾಗಿದ್ದವು?

"ನಾವು ಸಂಚರಿಸಿ ನೋಡಿದ ದೇಶವು ಅತ್ಯುತ್ತಮವಾದದ್ದು; ಅದು ಹಾಲೂ ಜೇನೂ ಹರಿಯುವ ದೇಶ; ಯೆಹೋವನು ನಮ್ಮನ್ನು ಮೆಚ್ಚಿಕೊಂಡರೆ ಅದರಲ್ಲಿ ನಮ್ಮನ್ನು ಸೇರಿಸಿ ಅದನ್ನು ನಮ್ಮ ಸ್ವಾಧೀನಕ್ಕೆ ಕೊಡುವನು; ಹೀಗಿರುವದರಿಂದ ಯೆಹೋವನಿಗೆ ತಿರುಗಿಬೀಳಬೇಡಿರಿ. ಅದಲ್ಲದೆ ಆ ದೇಶದ ಜನರಿಗೆ ದಿಗಿಲುಪಡಬೇಡಿರಿ; ನಾವು ಅವರನ್ನು ನುಂಗಿ ಪುಷ್ಟಿಯಾಗುವೆವು. ಅವರಿಗೆ ನೆರಳಾಗಿದ್ದ ದೇವರು ಅವರನ್ನು ಕೈಬಿಟ್ಟನು; ನಮ್ಮ ಕಡೆ ಯೆಹೋವನು ಇದ್ದಾನೆ; ಅವರಿಗೆ ಭಯಪಡಬೇಡಿರಿ ಅಂದರು" (ಅರಣ್ಯಕಾಂಡ 14:7b-9).

ಆ ದಿನದಂದು ಕರ್ತನ ಮುಂದೆ ಸಾವಿರಾರು ಜನರು ನಿಂತಿದ್ದರು ಮತ್ತು ಅವರು ಆತನಿಗೆ ವಿಧೇಯರಾಗಲು ನಿರಾಕರಿಸಿದರು. ಮುಂದಿನ ನಲವತ್ತು ವರ್ಷಗಳಲ್ಲಿ, ವಯಸ್ಕರಾಗಿದ್ದ ಪ್ರತಿಯೊಬ್ಬರೂ ಅರಣ್ಯದಲ್ಲಿ ಸತ್ತುಹೋದರು. ಆದರೆ ಯೆಹೋಶುವನೂ ಕಾಲೇಬನೂ ತಮ್ಮ ಮಾತುಗಳು ನೆರವೇರುವುದನ್ನು ನೋಡುವುದಕ್ಕಾಗಿ ಬದುಕುಳಿದರು.

**ಶದ್ರಕ್, ಮೇಶಕ್ ಮತ್ತು ಅಬೇದ್-ನೆಗೊ**

ಶದ್ರಕ್, ಮೇಶಕ್ ಮತ್ತು ಅಬೇದ್-ನೆಗೊ ಎಂಬುವರ ಕುರಿತು ನೋಡಿಕೊಳ್ಳೋಣ. ಅವರು ಪರದೇಶದಲ್ಲಿ ಸೆರೆಯಾಳಾಗಿದ್ದರು, ಆದರೂ ಅವರು ಉನ್ನತ ಸ್ಥಾನಕ್ಕೇರಿದರು. ನೆಬೂಕದ್ನೆಚ್ಚರನನ್ನು ಆರಾಧಿಸಬೇಕೆಂಬ ಆಜ್ಞೆಯು ಬಂದಾಗ, ಅವರು ಅದನ್ನು ತಿರಸ್ಕರಿಸಿದರು.

ಅವರನ್ನು ರಾಜನ ಮುಂದೆ ಕರೆತಂದು, ಉರಿಯುವ ಕುಲುಮೆಗೆ ಹಾಕುವೆವು ಎಂದು ಬೆದರಿಸಿ ಮತ್ತೇ ಆಜ್ಞಾಪಿಸಿದರು. ಆದರೆ ಅವರು ಏನೆಂದು ಹೇಳಿದರು?

ಇದನ್ನು ಕೇಳಿ ಶದ್ರಕ್ ಮೇಶಕ್ ಅಬೇದ್ ನೆಗೋ ಎಂಬವರು ರಾಜನಿಗೆ ನೆಬೂಕದ್ನೆಚ್ಚರನೇ, ಈ ವಿಷಯದಲ್ಲಿ ನಾವು ನಿನಗೆ ಏನೂ ಹೇಳಬೇಕಾಗಿಲ್ಲ. ಅರಸೇ, ನಾವು ಸೇವಿಸುವ ದೇವರಿಗೆ ಚಿತ್ತವಿದ್ದರೆ ಆತನು ಧಗಧಗನೆ ಉರಿಯುವ ಆವಿಗೆಯೊಳಗಿಂದ ನಮ್ಮನ್ನು ಬಿಡಿಸಬಲ್ಲನು; ಹೇಗೂ ನಿನ್ನ ಕೈಯಿಂದ ನಮ್ಮನ್ನು ಬಿಡಿಸಬಲ್ಲನು; ಹೇಗೂ ನಿನ್ನ ಕೈಯಿಂದ ನಮ್ಮನ್ನು ಬಿಡಿಸುವನು. ಚಿತ್ತವಿಲ್ಲದಿದ್ದರೂ ರಾಜನೇ, ಇದು ನಿನಗೆ ತಿಳಿದಿರಲಿ, ನಾವು ನಿನ್ನ ದೇವರುಗಳನ್ನು ಸೇವಿಸುವದಿಲ್ಲ, ನೀನು ನಿಲ್ಲಿಸಿದ ಬಂಗಾರದ ಪ್ರತಿಮೆಯನ್ನು ಪೂಜಿಸುವದಿಲ್ಲ ಎಂದುತ್ತರಕೊಟ್ಟರು.

ಅದರೊಳಕ್ಕೆ ಅವರನ್ನು ಹಾಕಿದ ಸೈನಿಕರು ಆ ಕುಲುಮೆಯ ಶಾಖದಿಂದ ಕೂಡಲೇ ಸತ್ತುಹೋದರು.

ಆಗ ರಾಜನಾದ ನೆಬೂಕದ್ನೆಚ್ಚರನು ಬೆಚ್ಚಿಬಿದ್ದು ತಟ್ಟನೆದ್ದು ತನ್ನ ಮಂತ್ರಿಗಳನ್ನು, ಕಟ್ಟಿದ ಮೂವರನ್ನು ನಾವು ಬೆಂಕಿಯೊಳಗೆ ಹಾಕಿಸಲಿಲ್ಲವೋ ಎಂದು ಕೇಳಲು, ಅವರು ರಾಜನಿಗೆ ಅರಸೇ, ಹೌದು, ಸತ್ಯ ಎಂದುತ್ತರಕೊಟ್ಟರು.

ಅದಕ್ಕೆ ಅವನು ಇಗೋ, ಕಟ್ಟಿಲ್ಲದ ನಾಲ್ವರನ್ನು ನೋಡುತ್ತೇನೆ, ಬೆಂಕಿಯಲ್ಲಿ ತಿರುಗಾಡುತ್ತಿದ್ದಾರೆ, ಅವರಿಗೆ ಯಾವ ಹಾನಿಯೂ ಇಲ್ಲ; ನಾಲ್ಕನೆಯವನ ರೂಪವು ದೇವಕುಮಾರನ ರೂಪದಂತಿದೆ ಎಂದು ಹೇಳಿ,

ಧಗಧಗನೆ ಉರಿಯುವ ಆವಿಗೆಯ ಬಾಯಿಯ ಬಳಿಗೆ ಹೋಗಿ, ಪರಾತ್ಪರ ದೇವರ ಸೇವಕರಾದ ಶದ್ರಕ್ ಮೇಶಕ್ ಅಬೇದ್ನೆಗೋ ಎಂಬವರೇ ಬನ್ನಿ, ಹೊರಗೆ ಬನ್ನಿ ಎಂದು ಕೂಗಲು ಶದ್ರಕ್ ಮೇಶಕ್ ಅಬೇದ್ನೆಗೋ ಎಂಬವರು ಬೆಂಕಿಯೊಳಗಿಂದ ಹೊರಟು ಬಂದರು.

ಆಗ ನೆಬೂಕದ್ನೆಚ್ಚರನು – ಶದ್ರಕ್ ಮೇಶಕ್ ಅಬೇದ್ನೆಗೋ ಎಂಬವರ ದೇವರಿಗೆ ಸ್ತೋತ್ರವಾಗಲಿ! ಆತನು ತನ್ನ ದೂತನನ್ನು ಕಳುಹಿಸಿ ತನ್ನಲ್ಲಿ ಭರವಸವಿಟ್ಟು ರಾಜಾಜ್ಞೆಯನ್ನು ಜಯಿಸಿ ತನ್ನನ್ನೇ ಹೊರತು ಇನ್ನಾವ ದೇವರನ್ನೂ ಸೇವಿಸಿ ಪೂಜಿಸಬಾರದೆಂದು ಸ್ವದೇಹಗಳನ್ನು ಮರಣಕ್ಕೆ ಒಪ್ಪಿಸಿದ ತನ್ನ ಸೇವಕರನ್ನು ಉದ್ಧರಿಸಿದ್ದಾನಲ್ಲಾ (ದಾನಿಯೇಲ 3:16-18,24-26,28)

ಶದ್ರಕ್, ಮೇಶಕ್, ಅಬೇದ್-ನೆಗೊ ಎಂಬವರಿಗೆ ತುಂಬಾ ಬಲವಾದ ನಂಬಿಕೆಯಿತ್ತು, ಅದಕ್ಕಾಗಿ ಅವರು ಸಾಯಲು ಕೂಡ ಸಿದ್ಧರಾಗಿದ್ದರು. ಆದರೂ, ಉರಿಯುತ್ತಿರುವ ಕುಲುಮೆಯಿಂದ ತಾವು ಬಿಡಿಸಲ್ಪಡುತ್ತೇವೆ ಎಂದು ಅವರು ನಂಬಿದ್ದರು ಆದ್ದರಿಂದ ಅದು ಹಾಗೆಯೇ ಆಯಿತು.

**ಬೇಡಿಕೊಳ್ಳಿರಿ - ಹುಡುಕಿರಿ - ತಟ್ಟಿರಿ**

ವಿಶ್ವಾಸಿಗಳು ಬಲವಾದ, ತೀಕ್ಷ್ಣವಾದ, ಸ್ಥಿರವಾದ ನಂಬಿಕೆಯನ್ನು ಬೆಳೆಸಿಕೊಳ್ಳಬೇಕು. ಯೇಸು ಅದರ ಬಗ್ಗೆ ಏನೆಂದು ಬೋಧಿಸಿದ್ದನು?

ನಾನು ಬೆಲ್ಜೆಬೂಲನ ಬಲದಿಂದ ದೆವ್ವಗಳನ್ನು ಬಿಡಿಸುವದಾದರೆ ನಿಮ್ಮವರು ನಿಮ್ಮವರು ಯಾರ ಬಲದಿಂದ ಬಿಡಿಸುತ್ತಾರೆ? ಆದ್ದರಿಂದ ಅವರೇ ನಿಮಗೆ ನ್ಯಾಯತೀರಿಸುವವರಾಗುವರು. ನಾನು ದೇವರ ಬಲದಿಂದಲೇ ದೆವ್ವಗಳನ್ನು ಬಿಡಿಸುವದಾದರೆ ದೇವರ ರಾಜ್ಯವು ನಿಮ್ಮ ಹತ್ತರಕ್ಕೆ ಬಂತಲ್ಲಾ (ಲೂಕ 11:9,10).

ಬೇಡಿಕೊಳ್ಳುವುದು ಮೊದಲ ಹೆಜ್ಜೆಯಾಗಿದೆ ಎಂಬುದನ್ನು ಗಮನಿಸಿರಿ. ದೇವರ ಸಂಕಲ್ಪವನ್ನು ನಿಸ್ಸಂದೇಹವಾಗಿ ನಾವು ತಿಳಿದುಕೊಂಡ ಮೇಲೆ, ಅದರ ಪ್ರಕಾರ ಹೇಗೆ ಕಾರ್ಯಮಾಡಬೇಕು ಎಂಬುದರ ಕುರಿತು ಆತನು ತಿಳಿಸಿರುವ ಸೂಚನೆಗಳನ್ನು ಅರಿತುಕೊಂಡ ಮೇಲೆ, ನಮಗೆ ಉತ್ತರ ಸಿಗುವವರೆಗೂ ನಾವು ನಂಬಿಕೆಯಿಂದ ತಟ್ಟುತ್ತಲೇ ಇರಬೇಕು.

"ಏನಾಗುತ್ತದೆಯೋ, ಆಗಲಿ" ಎಂದು ನಾವು ಹೇಳುವುದಿಲ್ಲ. ಅದಕ್ಕೆ ಬದಲಾಗಿ, ನಾವು ತೀಕ್ಷ್ಣವಾಗಿ ನಂಬುತ್ತೇವೆ ಆಗ ಅದು ನಮ್ಮ ಜೀವನವನ್ನೂ ನಮ್ಮ ಸುತ್ತಮುತ್ತಲಿನ ಜಗತ್ತನ್ನೂ ಬದಲಾಯಿಸುತ್ತದೆ.

**ನಮ್ಮ ನಂಬಿಕೆಯನ್ನು ತೆರೆದು ಬಿಡುವುದು**

---

ನಮ ನಂಬಿಕೆಯನ್ನು ತೆರೆದು ಬಿಡಲು ಮೂರು ಹೆಜ್ಜೆಗಳಿವೆ.

* ದೇವರ ವಾಕ್ಯವನ್ನು ಕೇಳಿ ಅದನ್ನು ನಂಬುವುದು ಮೊದಲ ಹೆಜ್ಜೆ.
* ಆ ನಂಬಿಕೆಯನ್ನು ನಮ್ಮ ಬಾಯಿಂದ ಅರಿಕೆಮಾಡುವುದು ಎರಡನೆಯ ಹೆಜ್ಜೆ.
* ಆ ನಂಬಿಕೆಯನ್ನು ಕಾರ್ಯರೂಪಕ್ಕೆ ತರುವುದು ಮೂರನೆಯ ಹೆಜ್ಜೆ.

ನಮ್ಮ ಆತ್ಮಗಳಲ್ಲಿ ವಾಕ್ಯವನ್ನು ಕೇಳುವ ಮೂಲಕ ನಂಬಿಕೆ ಬರುತ್ತದೆ

**ಲೋಗೊಸ್ ಮತ್ತು ರೇಮಾ**

ಪೌಲನು ರೋಮಾಪುರ ಪತ್ರಿಕೆಯಲ್ಲಿ ಹೀಗೆ ಬರೆದಿದ್ದಾನೆ,

ಆದಕಾರಣ ಸಾರಿದ ಸುವಾರ್ತೆಯು ನಂಬಿಕೆಗೆ ಆಧಾರ. ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ (ರೋಮಾಪುರ 10:17).

ದೇವರ ವಾಕ್ಯವು ನಮ್ಮ ಆತ್ಮಗಳಲ್ಲಿ ನಂಬಿಕೆಯನ್ನು ಉಂಟುಮಾಡುತ್ತದೆ. ದೇವರ ವಾಕ್ಯವನ್ನು ಕೇಳುತ್ತಾ ಕೇಳುತ್ತಾ ನಮ್ಮ ಆತ್ಮಗಳಲ್ಲಿ ನಂಬಿಕೆಯು ವೃದ್ಧಿಯಾಗುತ್ತದೆ.

"ವಾಕ್ಯ" ಎಂದು ಭಾಷಾಂತರ ಮಾಡಲಾಗಿರುವ ಪದಕ್ಕೆ ಎರಡು ಗ್ರೀಕ್ ಪದಗಳಿವೆ.

ಡಬ್ಲ್ಯು.ಇ. ವೈನ್ ರವರು ಎಕ್ಸ್‌ಪೋಸಿಟರಿ ಡಿಕ್ಷನರಿ ಆಫ್ ನ್ಯೂ ಟೇಸ್ಟ್‌ಮೆಂಟ್ ವರ್ಡ್ಸ್ ಎಂಬ ನಿಘಂಟಿನಲ್ಲಿ ಲೋಗೊಸ್ ಎಂದರೆ "ಪ್ರಕಟವಾಗಿರುವ ದೇವರ ಚಿತ್ತ" ಎಂದು ಹೇಳಿದ್ದಾರೆ. ಅದು ದೇವರ ಚಿತ್ತವನ್ನು ಪ್ರಕಟಪಡಿಸುವ ಸಂಯೋಜಿತವಾದ ಆತನ ಮಾತಾಗಿದೆ. ಈ ವ್ಯಾಖ್ಯೆಯ ಪ್ರಕಾರ ನಾವು ದೇವರ ಚಿತ್ತವನ್ನು ಪ್ರಕಟಪಡಿಸುವ ಸತ್ಯವೇದವನ್ನು ದೇವರ ಲೋಗೊಸ್ ಎಂದು ಕರೆಯಬಹುದು. ಲೋಗೊಸ್ ಎಂಬುದು ಹುದುವಾದ ಪದವಾಗಿದೆ.

ಯೋಹಾನ 1:1 ರಲ್ಲಿ ನಾವು ಹೀಗೆ ಓದುತ್ತೇವೆ,

ಆದಿಯಲ್ಲಿ ವಾಕ್ಯವಿತ್ತು ಆ ವಾಕ್ಯವು ದೇವರ ಬಳಿಯಲ್ಲಿತ್ತು. ಆ ವಾಕ್ಯವು ದೇವರಾಗಿತ್ತು.

ಗ್ರೀಕ್ ಪದವನ್ನು ಬಳಸಿಕೊಂಡು ನಾವು ಈ ವಾಕ್ಯವನ್ನು ಓದುವುದಾದರೆ ಅದು ಹೀಗಿರುತ್ತದೆ, "ಆದಿಯಲ್ಲಿ ಲೋಗೊಸ್ ಇತ್ತು ಆ ಲೋಗೊಸ್ ದೇವರ ಬಳಿಯಲ್ಲಿತ್ತು. ಆ ಲೋಗೊಸ್ ದೇವರಾಗಿತ್ತು."

ಯೇಸು ವಾಕ್ಯವಾಗಿದ್ದಾನೆ. ಆತನು ಪ್ರಕಟವಾಗಿರುವ ದೇವರ ಚಿತ್ತವಾಗಿದ್ದಾನೆ.

ಡಬ್ಲ್ಯು.ಇ. ವೈನ್ ರವರು ರೇಮಾ ಎಂಬ ಗ್ರೀಕ್ ಪದವನ್ನು ಹೀಗೆ ವಿವರಿಸಿದ್ದಾರೆ. ರೇಮಾ "ಮಾತಿನಲ್ಲಿ ಅಥವಾ ಬರವಣಿಗೆಯಲ್ಲಿ ನುಡಿಯಲ್ಪಟ್ಟಿರುವುದನ್ನು ಅಥವಾ ಹೇಳಲ್ಪಟ್ಟಿರುವುದನ್ನು ಸೂಚಿಸುತ್ತದೆ."

ಎಫೆಸ 6:17 ನೇ ವಚನವು ರೇಮಾ ಎಂಬ ಪದವನ್ನು ಬಳಸಿರುವುದರ ಕುರಿತಾದ ಮತ್ತೊಂದು ಉದಾಹರಣೆಯಾಗಿದೆ.

ಇದಲ್ಲದೆ ರಕ್ಷಣೆಯೆಂಬ ಶಿರಸ್ತ್ರಾಣವನ್ನು ಇಟ್ಟುಕೊಂಡು ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ (ರೇಮಾ) ಕತ್ತಿಯನ್ನು ಹಿಡಿಯಿರಿ.

ಬರೆಯಲ್ಪಟ್ಟಿರುವ ದೇವರ ವಾಕ್ಯವನ್ನು ಪವಿತ್ರಾತ್ಮನು ತೆಗೆದುಕೊಂಡು ಅದನ್ನು ನಮಗೆ ವೈಯಕ್ತಿಕವಾಗಿ ಪ್ರಕಟಪಡಿಸುವಾಗ, ಅದು ನಮಗೆ *ರೇಮಾ* ಆಗಿ ಮಾರ್ಪಡುತ್ತದೆ. ಎಫೆಸ 6:17 ರಲ್ಲಿರುವ *ರೇಮಾ* ಎಂಬುದು ದೇವರು ನಮಗೆ ಪ್ರಕಟಪಡಿಸಿದ ಒಂದು ನಿರ್ದಿಷ್ಟವಾದ ವಾಕ್ಯವಾಗಿರುತ್ತದೆ.

## ನಂಬಿಕೆಯ ವರ

ಟಿಪ್ಪಣಿ: ನಂಬಿಕೆಯ ವರದ ಕುರಿತು ನಾವು ವಿವರವಾಗಿ ಈ ಅಧ್ಯಯನದಲ್ಲಿ ವಿವರಿಸಿಲ್ಲ ಏಕೆಂದರೆ ನಾವು ಅದನ್ನು *ಪವಿತ್ರಾತ್ಮನ ವರಗಳ ಮೂಲಕ ಅಸಾಧಾರಣವಾಗಿ ಜೀವಿಸುವುದು* ಎಂಬ ಕೈಪಿಡಿಯಲ್ಲಿ ಸವಿವರವಾಗಿ ವಿವರಿಸಿದ್ದೇವೆ.

ನಂಬಿಕೆಯ ವರವು ಒಂದು ನಿರ್ದಿಷ್ಟವಾದ ಸಮಯಕ್ಕಾಗಿಯೂ ಉದ್ದೇಶಕ್ಕಾಗಿಯೂ ಇರುವಂಥ ಅಸಾಧಾರಣವಾದ ನಂಬಿಕೆಯಾಗಿದೆ. ಅದು ಒಂದು ನಿರ್ದಿಷ್ಟವಾದ ಕಾರ್ಯವನ್ನು ಮಾಡಿ ಮುಗಿಸುವುದಕ್ಕಿರುವ ಶಕ್ತಿಯ ವರವಾಗಿದೆ.

ಒಂದು ಕೆಲಸವನ್ನು ಹೇಗೆ ಮಾಡಬೇಕೆಂದು ತಿಳಿಸುವ ಜ್ಞಾನವಾಕ್ಯವು ಕೊಡಲ್ಪಟ್ಟಾಗ, ದೇವರು ಹೇಳಿದ ರೀತಿಯಲ್ಲಿ ಆ ಕಾರ್ಯವನ್ನು ಧೈರ್ಯದಿಂದ ಮಾಡಿ ಮುಗಿಸಲು ನಂಬಿಕೆಯ ವರವು ನಡೆಸುತ್ತದೆ.

ನಂಬಿಕೆಯ ವರವು ನಮ್ಮ ಜೀವನದ ಸಹಜ ಭಾಗವಾಗಿರಬೇಕು. ಮೊದಲು ನಾವು ದೇವರಿಂದ ಸೂಚನೆಗಳನ್ನು ಹೊಂದಿಕೊಳ್ಳುತ್ತೇವೆ; ಕೊಡಲ್ಪಡುವಂಥ ಈ ಸೂಚನೆಗಳನ್ನು ಮಾಡಿ ಮುಗಿಸುವ ನಂಬಿಕೆಯನ್ನು ಕೊಡಲ್ಪಡುತ್ತದೆ; ಆಗ ನಾವು ಅದಕ್ಕೆ ವಿಧೇಯರಾಗುತ್ತವೆ.

ವೈಯಕ್ತಿಕವಾಗಿ ನಮ್ಮ ಆತ್ಮಗಳಿಗೆ ಅತಿ ಬೇಗನೇ ಬರುವ ದೇವರ ವಾಕ್ಯವು ನಿಜವಾದ ನಂಬಿಕೆಯನ್ನು ಉಂಟುಮಾಡುತ್ತದೆ. ಆಗ ನಾವು ಮತ್ತೇ ನಂಬುವುದಕ್ಕೆ ಕಷ್ಟಪಡುವುದಿಲ್ಲ. ದೇವರು ನಮ್ಮ ಆತ್ಮಗಳಲ್ಲಿ ವಾಗ್ದಾನವನ್ನು ಕೊಟ್ಟಿದ್ದಾನೆ ಎಂದು ನಮಗೆ ತಿಳಿದಿದೆ, ದೇವರ ಪ್ರಾಮಾಣಿಕತೆಯು ಅದಕ್ಕೆ ಸಂಪೂರ್ಣವಾಗಿ ಬೆಂಬಲವಾಗಿ ನಿಂತಿರುತ್ತದೆ.

ನಾವು, ಅಬ್ರಹಾಮನಂತೆ ಆಗುತ್ತೇವೆ

ದೇವರನ್ನು ಘನಪಡಿಸುವವನಾಗಿ ಆತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ಸಮರ್ಥನೆಂದು ಪೂರಾ ಭರವಸವಿಟ್ಟು ದೃಢ ನಂಬಿಕೆಯುಳ್ಳವನಾದನು (ರೋಮಾಪುರ 4:21).

ನಾವು ಯೆರೆಮೀಯನೊಂದಿಗೆ ಸೇರಿ ಧೈರ್ಯದಿಂದ ಹೀಗೆ ಹೇಳಬಹುದು:

"ಎಲೈ, ಕರ್ತನಾದ ಯೆಹೋವನೇ ! ಆಹಾ, ನೀನು ಭುಜವನ್ನೆತ್ತಿ ನಿನ್ನ ಮಹಾ ಶಕ್ತಿಯಿಂದ ಭೂಮ್ಯಾಕಾಶಗಳನ್ನು ಸೃಷ್ಟಿಸಿದ್ದೀ; ಯಾವ ಕಾರ್ಯವೂ ನಿನಗೆ ಅಸಾಧ್ಯವಲ್ಲ" (ಯೆರೆಮೀಯ 32:17).

ದೇವರ ವಾಕ್ಯವು ನಮ್ಮ ಜೀವನದಲ್ಲಿ ನೆರವೇರುತ್ತದೆ ಎಂದು ನಮಗೆ ನಿಸ್ಸಂದೇಹವಾಗಿ ಗೊತ್ತಿದೆ.

ಯೆಶಾಯನು ಹೀಗೆ ಬರೆದಿದ್ದಾನೆ,

ಯೆಹೋವನು ಹೀಗನ್ನುತ್ತಾನೆ, ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ. ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆ.

ಮಳೆಯೂ ಹಿಮವೂ ಆಕಾಶದಿಂದ ಬಿದ್ದು ಭೂಮಿಯನ್ನು ತೋಯಿಸಿ ಹಸರುಗೊಳಿಸಿ ಫಲಿಸುವಂತೆ ಮಾಡಿ ಬಿತ್ತುವವನಿಗೆ ಬೀಜವನ್ನು, ಉಣ್ಣುವವನಿಗೆ ಆಹಾರವನ್ನು ಒದಗಿಸಿದ ಹೊರತು ಹೇಗೆ ಆಕಾಶಕ್ಕೆ ಸುಮ್ಮನೆ ಹಿಂದಿರುಗುವದಿಲ್ಲವೋ ಹಾಗೆಯೇ ನನ್ನ ಬಾಯಿಂದ ಹೊರಟ ಮಾತು ನನ್ನ ಇಷ್ಟಾರ್ಥವನ್ನು ನೆರವೇರಿಸಿ ನಾನು ಉದ್ದೇಶಿಸಿದ್ದನ್ನು ಕೈಗೂಡಿಸಿದ ಹೊರತು ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವದಿಲ್ಲ (ಯೆಶಾಯ 55: 8-11).

ಯೇಸು ಅವರನ್ನು ದೃಷ್ಟಿಸಿ ನೋಡಿ, ಇದು ಮನುಷ್ಯರಿಗೆ ಅಸಾಧ್ಯ. ದೇವರಿಗೆ ಅಸಾಧ್ಯವಲ್ಲ, ದೇವರಿಗೆ ಎಲ್ಲವೂ ಸಾಧ್ಯವೆ ಅಂದನು (ಮಾರ್ಕ 10:27).

**ಪರಾಮರ್ಶೆಗಾಗಿರುವ ಪ್ರಶ್ನೆಗಳು**

1. ಸತ್ಯವೇದದಲ್ಲಿ ದೇವರ ರೀತಿಯ ನಂಬಿಕೆಯುಳ್ಳಂಥ ಎರಡು ಉದಾಹರಣೆಗಳ ಕುರಿತು ಬರೆಯಿರಿ.

2. ನಮ್ಮ ಆತ್ಮಗಳಲ್ಲಿ ನಂಬಿಕೆ ಹೇಗೆ ಉಂಟಾಗುತ್ತದೆ?

## ತರಬೇತಿಯ ಸಂಪೂರ್ಣ ಸರಣಿಮಾಲೆ

### ಸತ್ಯವೇದದ ತರಬೇತಿ ಕೇಂದ್ರಗಳಿಗೆ ~ ಸತ್ಯವೇದದ ಅಧ್ಯಯನ ಶಾಲೆಗಳಿಗೆ ~
### ~ ಭಾನುವಾರ ಶಾಲೆಗಳಿಗೆ ~ ಅಧ್ಯಯನ ಗುಂಪುಗಳಿಗೆ ~ ಮತ್ತು ವೈಯಕ್ತಿಕ ಅಧ್ಯಯನಕ್ಕೆ ಅತ್ಯುತ್ತಮವಾಗಿದೆ

ಹೋಶೇಯನ ಪುಸ್ತಕದಲ್ಲಿ, ನನ್ನ ಜನರು ಜ್ಞಾನಹೀನರಾಗಿ ಹಾಳಾಗಿದ್ದಾರೆ (4:6) ಎಂದು ನಾವು ಓದಿದ್ದೇವೆ. ದೇವರು ನಮಗಾಗಿ ಒದಗಿಸಿರುವಂಥದ್ದನ್ನು ನಾವು ತಿಳಿದುಕೊಳ್ಳದ್ದರಿಂದ ನಾವು ಬಹಳಷ್ಟನ್ನು ಕಳೆದುಕೊಂಡಿದ್ದೇವೆ. ನಮಗೆ ತಿಳಿಯದ ವಿಷಯಗಳಲ್ಲಿ ನಮಗೆ ನಂಬಿಕೆಯಿಡಲು ಆಗುವುದಿಲ್ಲ! ನಾವು ದೇವರ ರಾಜ್ಯದಲ್ಲಿ ಆರೋಗ್ಯದಲ್ಲಿ ಮತ್ತು ಅಧಿಕಾರದಲ್ಲಿ ಬದುಕಲು ಆಗುವಂತೆ ಈ ತರಬೇತಿಯ ಸರಣಿಮಾಲೆಯನ್ನು ಅಭಿವೃದ್ಧಿಪಡಿಸಲಾಗಿದೆ!

ನಾವು ಶಕ್ತಿಯುತರಾದ, ಅದ್ಭುತ-ಕೆಲಸ ಮಾಡುವವರಾದ ವಿಶ್ವಾಸಿಗಳ ಸಭೆಯೆಂಬ ದೇಹವಾಗಿರಬೇಕು. ಈ ಶಕ್ತಿಯುತ, ಮೂಲಭೂತ, ಪ್ರಾಯೋಗಿಕವಾದ ಜೀವನವನ್ನು ಬದಲಾಯಿಸುವ ಸರಣಿಮಾಲೆಯ ಉದ್ದೇಶವೇನಂದರೆ - *ನಾವೆಲ್ಲರೂ ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವತನಕ, ದೇವಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವದಕ್ಕೋಸ್ಕವೂ ಆತನು ಇವರನ್ನು ಅನುಗ್ರಹಿಸಿದನು...* (ಎಫೆ. 4:12,13) ಪ್ರತಿಯೊಬ್ಬ ವಿಶ್ವಾಸಿಯು ಯೇಸುವಿನ ಕಾರ್ಯಗಳನ್ನು ಮಾಡುತ್ತಿದ್ದಾನೆ.

ಈ ವಿಷಯಗಳನ್ನು ಈ ಕ್ರಮದಲ್ಲಿ ಕಲಿಯಲು ನಾವು ಸಲಹೆ ನೀಡುತ್ತೇವೆ.

***ನೂತನ ಸೃಷ್ಟಿಯ ಸ್ವರೂಪ -*** ನೀವು ಕ್ರಿಸ್ತನಲ್ಲಿ ಯಾರೆಂದು ತಿಳಿದುಕೊಳ್ಳುವುದು

ನಾವು ಯಾರಾಗಿರಬೇಕೆಂದು ಸೃಷ್ಟಿಸಲ್ಪಟ್ಟಿದ್ದೇವೆ ಎಂಬುದನ್ನು ಕಂಡುಕೊಳ್ಳುವುದು! ಇದರ ಅರ್ಥವೇನಂದರೆ "ಹೊಸದಾಗಿ ಹುಟ್ಟುವುದು." ನೀತಿಯ ಕುರಿತಾದ ಪ್ರಕಟಣೆಯು ಕ್ರಿಸ್ತನ ಸಾರೂಪ್ಯಕ್ಕೆ ಅನುಗುಣರಾಗದಂತೆ ವಿಶ್ವಾಸಿಗಳನ್ನು ಸೋಲಿಸುವ ತಪ್ಪಿತಸ್ಥ ಮನೋಭಾವನೆ, ದಂಡನಾತೀರ್ಪು, ಕೀಳರಿಮೆ ಮತ್ತು ಅಸಾಮರ್ಥ್ಯದ ಆಲೋಚನೆಗಳಿಂದ ಬಿಡುಗಡೆ ಮಾಡುತ್ತದೆ.

***ವಿಶ್ವಾಸಿಗಳ ಅಧಿಕಾರ -*** ಸೋಲುವುದನ್ನು ನಿಲ್ಲಿಸುವುದು ಮತ್ತು ಜಯಿಸಲು ಪ್ರಾರಂಭಿಸುವುದು ಹೇಗೆ

"ಅವರು ದೊರೆತನ ಮಾಡಲಿ" ಎಂದು ಹೇಳಿದಾಗ ದೇವರು ಮಾನವಕುಲಕ್ಕಾಗಿರುವ ತನ್ನ ಶಾಶ್ವತ ಉದ್ದೇಶವನ್ನು ಪ್ರಕಟಪಡಿಸಿದನು. ನೀವು ಹೊಸ ಧೈರ್ಯದಲ್ಲಿ ನಡೆಯುವಿರಿ. ನಿಮ್ಮ ದೈನಂದಿನ ಜೀವನದಲ್ಲಿ ಮತ್ತು ಸೇವೆಯಲ್ಲಿ ಸೈತಾನನ ಮತ್ತು ದುರಾತ್ಮನ ಶಕ್ತಿಗಳ ಮೇಲೆ ನೀವು ಜಯ ಹೊಂದುವಿರಿ.

***ಅತಿಮಾನುಷ ಜೀವನ -*** ಪವಿತ್ರಾತ್ಮನ ವರಗಳ ಮೂಲಕ

ಪವಿತ್ರಾತ್ಮನೊಂದಿಗೆ ಹೊಸದಾದ, ನಿಕಟವಾದ ಸಂಬಂಧವನ್ನು ಬೆಸೆಯುವುದು. ಪವಿತ್ರಾತ್ಮನ ಒಂಬತ್ತು ವರಗಳಲ್ಲಿ ಹೇಗೆ ಕಾರ್ಯಮಾಡಬೇಕು ಎಂಬುದನ್ನು ಕಂಡುಕೊಳ್ಳಲು ನಿಮಗೆ ಸಹಾಯ ಮಾಡುತ್ತದೆ. ನೀವು ಅತಿಮಾನುಷವಾದ ಹೊಸ ಜೀವನ ನಡೆಸಲು ಪ್ರವೇಶಿಸುವಾಗ ಈ ವರಗಳನ್ನು ತವಕದಿಂದ ಬಯಸಿರಿ, ಪಡೆದುಕೊಳ್ಳಿರಿ ಮತ್ತು ಪ್ರಜ್ವಲಿಸುವಂತೆ ಮಾಡಿರಿ.

***ನಂಬಿಕೆ -*** *ಅಸಾಧಾರಣವಾಗಿ ಜೀವಿಸುವುದು*

ನೀವು ನಂಬಿಕೆಯ ಮಂಡಲಗಳಿಗೆ ಹೇಗೆ ಹೋಗಬಹುದು ಎಂಬುದನ್ನು ಕಲಿತುಕೊಳ್ಳಿರಿ. ನೀವು ದೇವರಿಗಾಗಿ ಹೇಗೆ ವೀರಕೃತ್ಯಗಳನ್ನು ಮಾಡಬಹುದು. ವಿಶ್ವಾಸಿಗಳು ತಮ್ಮ ನಂಬಿಕೆಯನ್ನು ಹರಿಬಿಡಲು, ಅಸಾಧಾರಣವಾದ ಮಂಡಲಗಳಿಗೆ ಕಾಲಿಡಲು, ದೇವರ ಶ್ರೇಷ್ಠತೆಯನ್ನು ಪ್ರಪಂಚದಾದ್ಯಂತ ತೋರಿಸಲು ಇದು ಸಕಾಲವಾಗಿದೆ!

***ಗುಣಪಡಿಸುವಿಕೆಗೆ ದೇವರ ಒದಗಿಸುವಿಕೆ -*** ದೇವರ ಗುಣಪಡಿಸುವ ಶಕ್ತಿಯನ್ನು ಹೊಂದಿಕೊಳ್ಳುವುದು ಮತ್ತು ಸೇವೆಮಾಡುವುದು

ಪರಿಣಾಮಕಾರಿಯಾದ ರೀತಿಯಲ್ಲಿ ಗುಣಪಡಿಸುವಿಕೆಯನ್ನು ಹೊಂದಿಕೊಳ್ಳುವುದಕ್ಕೆ ಅಥವಾ ಸೇವೆಮಾಡುವುದಕ್ಕೆ ನಂಬಿಕೆಯನ್ನು ಬಿಡುಗಡೆಗೊಳಿಸಲು ವಾಕ್ಯದ ದೃಢವಾದ ಅಸ್ತಿವಾರವನ್ನು ಹಾಕುವುದು. ಇದು ಯೇಸುವಿನ ಮತ್ತು ಅಪೊಸ್ತಲರ ಸೇವೆಯನ್ನು ಇಂದಿನ ಗುಣಪಡಿಸುವಿಕೆಯ ಸೇವೆಗೆ ಮಾದರಿಯನ್ನಾಗಿ ಪ್ರಸ್ತುತಪಡಿಸುತ್ತದೆ.

***ಸ್ತುತಿ ಮತ್ತು ಆರಾಧನೆ -*** ದೇವರ ಆರಾಧಕರಾಗುವುದು

ಸ್ತುತಿ ಮತ್ತು ಆರಾಧನೆಯ ಕುರಿತಾಗಿರುವ ದೇವರ ಶಾಶ್ವತ ಉದ್ದೇಶವನ್ನು ಪ್ರಕಟಪಡಿಸುತ್ತದೆ. ರೋಮಾಂಚನಗೊಳಿಸುವ ಅಪಾರವಾದ ಸ್ತುತಿಯ ಕುರಿತಾಗಿರುವ ಸತ್ಯವೇದದ ಅಭಿವ್ಯಕ್ತಿಗಳಲ್ಲಿ ವಿಶ್ವಾಸಿಗಳು ಸಾಗುವಂತೆ ಅವರನ್ನು ಕೊಂಡೊಯ್ಯುತ್ತದೆ. ನಿಕಟವಾದ ಆರಾಧನೆಯಲ್ಲಿ ದೇವರ ಅಗಾಧವಾದ ಪ್ರಸನ್ನತೆಗೆ ಹೇಗೆ ಪ್ರವೇಶಿಸಬೇಕು ಎಂಬುದನ್ನು ಬೋಧಿಸುತ್ತದೆ.

***ಮಹಿಮೆ -*** ದೇವರ ಪ್ರಸನ್ನತೆ

ನಾವು ವಾಸಿಸುತ್ತಿರುವ ದಿನವು ಎಷ್ಟು ಅದ್ಭುತಕರವಾದ ದಿನವಾಗಿದೆ! ನಾವು ದೇವರ ಮಹಿಮೆಯನ್ನು ಅನುಭವಿಸಬಹುದು. ಆತನು ನಮ್ಮ ಸುತ್ತಲೂ ಪ್ರಕಟವಾಗುತ್ತಿದ್ದಾನೆ. ಈ ಮಹಿಮೆ ಎಂಥದ್ದು ಮತ್ತು ನೀವು ಅದನ್ನು ಹೇಗೆ ಅನುಭವಿಸಬಹುದು ಎಂಬುದನ್ನು ಕಲಿತುಕೊಳ್ಳುವಿರಿ.

***ಅದ್ಭುತಕರವಾದ ಸುವಾರ್ತಾಸೇವೆ –*** ಲೋಕಕ್ಕೆ ಸುವಾರ್ತೆಯನ್ನು ತಲುಪಿಸುವ ದೇವರ ಯೋಜನೆ

ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿರುವವರಂತೆ, ನಾವು ಸಹ ನಮ್ಮ ಜೀವನದಲ್ಲಿ ಸೂಚಕಕಾರ್ಯಗಳು, ಮಹತ್ತುಗಳು ಮತ್ತು ಗುಣಪಡಿಸುವ ಅದ್ಭುತಗಳನ್ನು ಅನುಭವಿಸಬಹುದು. ಅದ್ಭುತಕರವಾದ ಸುವಾರ್ತಾಸೇವೆಯು ನಮ್ಮ ಮೂಲಕ ನಡೆಯುವಂತೆ ಅನುಮತಿಸುವ ಮೂಲಕ ನಾವು ಸಹ ಅಂತ್ಯಕಾಲದ ಕೊಯ್ಲಿನಲ್ಲಿ ಭಾಗಿಗಳಾಗಬಹುದು!

***ಪ್ರಾರ್ಥನೆ -*** ಸ್ವರ್ಗವನ್ನು ಭೂಮಿಗೆ ತರುವುದು

ಪರಲೋಕದಲ್ಲಿ ದೇವರ ಚಿತ್ತ ನೆರವೇರುವ ಪ್ರಕಾರ ಭೂಮಿಯಲ್ಲಿಯೂ ನೆರವೇರುವಂತೆ ನೀವು ಹೇಗೆ ಮಾಡಬಹುದು ಎಂಬುದನ್ನು ಕಂಡುಕೊಳ್ಳುವಿರಿ. ಮಧ್ಯಸ್ಥಿಕೆಯ ಪ್ರಾರ್ಥನೆ, ವಾಕ್ಯವನ್ನು ಹಿಡಿದು ಪ್ರಾರ್ಥಿಸುವುದರ, ನಂಬಿಕೆಯ ಮತ್ತು ಒಪ್ಪಂದದ ಪ್ರಾರ್ಥನೆಗಳನ್ನು ಮಾಡುವುದರ ಮೂಲಕ, ನಿಮ್ಮ ಜೀವನವನ್ನು ಮತ್ತು ಲೋಕವನ್ನು ಸಹ ನೀವು ಬದಲಾಯಿಸಬಹುದು.

***ಸಭೆಯ ವಿಜಯೋತ್ಸವ –*** ಅಪೊಸ್ತಲರ ಕೃತ್ಯಗಳ ಪುಸ್ತಕದಾದ್ಯಂತ

ಯೇಸು, "ನಾನು ನನ್ನ ಸಭೆಯನ್ನು ಕಟ್ಟುವೆನು ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು" ಎಂದು ಹೇಳಿದನು. ಈ ಅಧ್ಯಯನದಲ್ಲಿ, ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ಆದಿ ಸಭೆಯು ಹೇಗೆ ಕಾರ್ಯಪ್ರವೃತ್ತಿಯುಳ್ಳದ್ದು

ಮತ್ತು ಇಂದಿನ ಆತನ ಸಭೆಗೆ ಸೂಚಕಕಾರ್ಯಗಳು ಮತ್ತು ಅದ್ಭುತಗಳು ಪುನಃಸ್ಥಾಪಿಸಲ್ಪಡುವುದಕ್ಕೆ ಹೇಗೆ ಮಾದರಿಯಾಗಿದೆ ಎಂಬುದನ್ನು ನೀವು ನೋಡುತ್ತೀರಿ.

***ಸೇವೆಯ ವರಗಳು -*** ಅಪೊಸ್ತಲರು, ಪ್ರವಾದಿಗಳು, ಸುವಾರ್ತಿಕರು, ಸಭಾಪಾಲಕರು, ಬೋಧಕರು

ಯೇಸು ಮನುಷ್ಯರಿಗೆ ದಾನಗಳನ್ನು/ವರಗಳನ್ನು ಕೊಟ್ಟನು. ದೇವರ ಜನರನ್ನು ಸೇವಾ ಕಾರ್ಯಗಳಿಗಾಗಿ ಸಿದ್ಧಪಡಿಸಲು ಸಭೆಯಲ್ಲಿ ಈ ವರಗಳು ಹೇಗೆ ಒಟ್ಟಾಗಿ ಕಾರ್ಯನಿರ್ವಹಿಸಬೇಕು ಎಂಬುದನ್ನು ಕಂಡುಕೊಳ್ಳುವಿರಿ. ನಿಮ್ಮ ಜೀವನದಲ್ಲಿರುವ ದೇವರ ಕರೆಯನ್ನು ಅರ್ಥಮಾಡಿಕೊಳ್ಳುವಿರಿ!

***ಜೀವನದ ಮಾದರಿಗಳು -*** ಹಳೆಯ ಒಡಂಬಡಿಕೆಯಿಂದ

ಈ ವಿಷಯಾಧಾರಿತ ಅಧ್ಯಯನದಲ್ಲಿ ದೇವರ ಅಮೂಲ್ಯವಾದ ಮೂಲಭೂತ ಸತ್ಯಗಳು ಜೀವಕಳೆ ಉಳ್ಳವುಗಳಾಗಿ ಬರುತ್ತದೆ. ಬರಲಿಕ್ಕಿರುವ ಮೆಸ್ಸೀಯನ ಕುರಿತಾದ ಪ್ರವಾದನೆಗಳು, ಹಳೆಯ ಒಡಂಬಡಿಕೆಯ ಹಬ್ಬಗಳು, ಯಜ್ಞಗಳು ಮತ್ತು ಅದ್ಭುತಗಳು ಇವೆಲ್ಲವೂ ದೇವರ ಶಾಶ್ವತ ಯೋಜನೆಯನ್ನು ಪ್ರಕಟಪಡಿಸುತ್ತವೆ.

**ಎ.ಎಲ್. ಮತ್ತು ಜಾಯ್ಸ್ ಗಿಲ್ ರವರ ಪುಸ್ತಕಗಳು**

**ಆಧಿಪತ್ಯಕ್ಕೆ ನಿಯಾಮಕ ಮಾಡಲಾಗಿದೆ**
**ಇಗೋ! ಯೇಸುವಿನ ಹೆಸರಿನಲ್ಲಿ**
**ವಂಚನೆಯ ಮೇಲೆ ಜಯ!**

**ಅಧ್ಯಯನದ ಮಾರ್ಗದರ್ಶಿ**
**ಮಹಿಮೆಯೊಳಕ್ಕೆ ಹೋಗಲು ಭೇದನ**
**ಅನ್ಯಾಯದಿಂದ ಮುಕ್ತರಾಗಿ**

**ಎಲ್ಲಾ ಕೈಪಿಡಿಗಳು, ಪುಸ್ತಕಗಳು ಮತ್ತು ಅಧ್ಯಯನ ಮಾರ್ಗದರ್ಶಿಗಳು**
**www.gillministries.com ನಲ್ಲಿ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳುವುದಕ್ಕಾಗಿ ಲಭ್ಯವಿದೆ**